ಒಬ್ಬ ಭಿಕ್ಷುಕ ಹೇಳುವ ಮಾತಿದು. ಎಲೈ ರಾಜೇಂದ್ರ, ನಾನು (ಭಿಕ್ಷುಕ) ಮತ್ತು ನೀನು (ರಾಜ) ಇಬ್ಬರೂ ಲೋಕನಾಥರೇ. ಆದರೆ ನಾನು ಬಹುವ್ರೀಹಿಯಂತೆ **लोकः नाथः यस्य सः (भिक्षुकः)** ನೀನು ಷಷ್ಠೀತತ್ಪುರುಷದಂತೆ **लोकस्य नाथः (राजा)** . ಹೀಗೆ ವಿಭಜಿಸಿ ಬೇರೆ ಬೇರೆ ಅರ್ಥ ಪಡೆಯಬಹುದು.

ಅದೇ ರೀತಿಯಲ್ಲಿ **पार्वतीपरमेश्वरौ** ಇಲ್ಲಿ **पार्वती च परमेश्वरः च** ಮಾಡಿ ಶಿವ ಪಾರ್ವತಿಯರು ಎಂದು ಅರ್ಥ ಪಡೆಯುತ್ತೇವೆ. ಹಾಗೆಯೇ **पार्वतीप/रमेश्वरः** ಶಂಕರ ವಿಷ್ಣು ಎಂದು ವಿಗ್ರಹಿಸಿ ಶಂಕರ ಮತ್ತು ವಿಷ್ಣು ಎಂದು ಅರ್ಥ ಪಡೆಯಬಹುದು. ಶಬ್ದಗಳನ್ನು ವಿಭಜಿಸುವ ಮೂಲಕ ಅರ್ಥ ವ್ಯತ್ಯಾಸ ಪಡೆಯಬಹುದಾಗಿದೆ.

केशवं पतितं दृष्ट्वा पाण्डवाः हर्षनिर्भराः ।
रुदन्ति कौरवाः सर्वे हा हा केशव केशव ॥

ಒಂದರ್ಥ: ಕೇಶವನು ಬಿದ್ದದ್ದನ್ನು ನೋಡಿ ಪಾಂಡವರು ಸಂತೋಷಗೊಂಡರು. ಕೌರವರು ಹಾ ಹಾ ಕೇಶವ ಕೇಶವ ಎಂದು ಅಳುತ್ತಿದ್ದರು. ಇನ್ನೊಂದರ್ಥ: **के** –ನೀರಿನಲ್ಲಿ **शव** –ಹೆಣ, **पाण्डवः** –ಮೀನು **कौ कौ–रवः** –ಕಾ–ಕಾ ಎನ್ನುವ ಕಾಗೆ. ನೀರಿನಲ್ಲಿ ಶವವು ಬಿದ್ದದ್ದನ್ನು ನೋಡಿ ಮೀನುಗಳು ಸಂತೋಷಗೊಂಡವು. ಕಾಗೆಗಳು ಅಯ್ಯೋ ನೀರಿನಲ್ಲಿ ಹೆಣ ಬಿದ್ದಿದೆ ಎಂದು ಅಳುತ್ತಿದ್ದವು.

शङ्करं पतितं दृष्ट्वा पार्वती हर्षनिर्भरा ।
रुरुदुः पन्नगाः सर्वे हा हा शङ्कर शङ्कर ॥

ಶಂಕರನು ಬಿದ್ದದ್ದನ್ನು ಕಂಡು ಪಾರ್ವತಿ ಆನಂದಗೊಂಡಳು. ಸರ್ಪಗಳೆಲ್ಲಾ ಹಾ ಹಾ ಶಂಕರ ಎಂದು ಗೋಳಿಟ್ಟವು.

शङ्करः ಶಿವ, ಚಂದನ, ವೃಕ್ಷ. **पार्वती** ಪಾರ್ವತಿ,

ಪರ್ವತವಾಸಿಗಳಾದ ಬೇಡರ ಸ್ತ್ರೀ.

ಚಂದನ ವೃಕ್ಷವು ಬಿದ್ದದ್ದನ್ನು ಕಂಡು ಬೇಡರ ಸ್ತ್ರೀಯು ಸಂತೋಷಗೊಂಡಳು. ಚಂದನವೃಕ್ಷವನ್ನು ಸುತ್ತಿರುವ ಸರ್ಪಗಳೆಲ್ಲಾ ನೋವಿನಿಂದ ಅಯ್ಯೋ ಚಂದನ ವೃಕ್ಷವೇ ಎಂದು ದುಃಖಿಸಿದವು.

का पाण्डुपत्नी गृहभूषणं किम् ।
को रामशत्रुः किमगस्त्यजन्म ।
कः सूर्यपुत्रः विपरीतपृच्छः ।
कुन्तीसुतो रावणकुम्भकर्णाः ॥

ಪಾಂಡುವಿನ ಪತ್ನಿ ಯಾರು? ಮನೆಗೆ ಭೂಷಣ ಯಾವುದು? ರಾಮನ ಶತ್ರು ಯಾರು? ಅಗಸ್ತ್ಯ ಜನ್ಮ ಹೇಗೆ? ವಿಚಿತ್ರ ಪೃಚ್ಛಕನಿಗೆ ಉತ್ತರ? ಕುಂತಿಸುತನು ರಾವಣ ಕುಂಭಕರ್ಣ ಇದು ಅಪದ್ಧವೆನಿಸುತ್ತದೆ.

ವಿವರಣೆ: ಪಾಂಡುಪತ್ನೀ ಕುಂತಿ, ಮನೆಗೆ ಭೂಷಣ ಮಗನು. ರಾಮನ ಶತ್ರುವು ರಾವಣನು. ಅಗಸ್ತ್ಯರು ಕುಂಭಸಂಭವರು. ಸೂರ್ಯನ ಮಗ ಕರ್ಣ.

ಇಂತಹ ನೂರಾರು ಪ್ರಹೇಲಿಕೆಗಳು ಸಂಸ್ಕೃತ ಭಾಷೆಯಲ್ಲಿದ್ದು ಅವುಗಳು ಅನ್ವೇಷಿಸಿ ರಸಾಸ್ವಾದವನ್ನು ಅನುಭವಿಸುವುದು ಸಹೃದಯಿ ಪಾಲಿಗೆ ಸ್ವರ್ಗ ತುಲ್ಯವೇ ಸರಿ.

ರಾಮಾಯಣ

–ವಿನುತಾ ಶಾಸ್ತ್ರಿ
I B.Com. 'B1'

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಂ ।
ಆರುಹ್ಯ ಕವಿತಾ–ಶಾಖಾಂ ವಂದೇ ವಾಲ್ಮೀಕಿ ಕೋಕಿಲಮ್ ॥
–ಸುಭಾಷಿತ.

"ಕಾವ್ಯವೃಕ್ಷದ ಕೊಂಬೆಯನ್ನೇರಿ 'ರಾಮಾ ರಾಮಾ' ಎಂದು ಇಂಪಾಗಿ ಹಾಡುವ ವಾಲ್ಮೀಕಿ ಕೋಗಿಲೆಗೆ ಇದೋ ಸಾಷ್ಟಾಂಗ ನಮನಃ."

ಸಾವಿರಾರು ವರ್ಷಗಳಿಂದ ಗಂಗಾನದಿಯಂತೆ ಕೋಟಿ–ಕೋಟಿ ಜನರ ಜೀವನ ಪಾವನಗೊಳಿಸಿದ ಮೇರುಕೃತಿ ರಾಮಾಯಣ. ಹಿಮಾಲಯವು ಹಲವಾರು ನದಿಗಳಿಗೆ ಉಗಮಸ್ಥಾನವಾಗಿದೆ. ಅಂತೆಯೇ ರಾಮಾಯಣ ಮುಂದಿನ ಸಾವಿರಾರು ಕೃತಿಗಳಿಗೆ ಸ್ಫೂರ್ತಿಯ ಚಿಲುಮೆ. "ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ" ಎಂಬ ಕುಮಾರ ವ್ಯಾಸರ ಮಾತು ಗಮನಾರ್ಹ. ಹೋಲಿಕೆಯಲ್ಲಿ ಮಹಾಭಾರತವೊಂದೇ ಇದಕ್ಕೆ ಸರಿಸಾಟಿ. 'ಜಗದ್ಭವ್ಯ ರಾಮಾಯಣಂ ನಿತ್ಯ ಪಾರಾಯಣಂ' ಎಂಬುದು ಪ್ರತೀತಿ.

ವಾಲ್ಮೀಕಿ ಮುನಿ ವಿರಚಿತ ಆದಿಕಾವ್ಯವನ್ನು ಆಧರಿಸಿ ಈ ವರೆಗೆ ತುಂಬಾ ರಾಮಾಯಣ ಹೊರ ಬಂದಿದೆ. ಸಂಸ್ಕೃತ ಭಾಷೆಯಲ್ಲಂತೂ ಈ ಕಾವ್ಯದ ಆಧಾರಿತವಾಗಿ ಹುಟ್ಟಿರುವ ದಿವ್ಯ ಪ್ರಬಂಧಗಳು, ಚಂಪುಗಳು, ಸ್ತೋತ್ರಗಳು, ಕೀರ್ತನೆಗಳು ಮೊದಲಾದ ನಾನಾ ಬಗೆಯ ಕಾವ್ಯಕೃತಿಗೆ ಕೊನೆ ಇಲ್ಲ. ಭಾಸ, ಕಾಳಿದಾಸ ಮುಂತಾದ ಕವಿಗಳೂ ಸೇರಿದಂತೆ ನೂರಾರು ಕವಿಗಳು ಸಂಸ್ಕೃತದಲ್ಲಿ ರಾಮಾಯಣವನ್ನು ವಿಧವಿಧವಾಗಿ ಬಣ್ಣಿಸಿದ್ದಾರೆ.

ಒಮ್ಮೆ ವಾಲ್ಮೀಕಿ ಮುನಿಗಳ ಆಶ್ರಮಕ್ಕೆ ನಾರದರು ಬಂದಿದ್ದರು. ಆಗ ವಾಲ್ಮೀಕಿ ಮಹರ್ಷಿಗಳು ಅವರ ಬಳಿ ಲೋಕದಲ್ಲಿ ಸಕಲ ಸದ್ಗುಣಗಳುಳ್ಳ ಆದರ್ಶ ಪುರುಷನಾರು? ಎಂದು ಕೇಳಿದಾಗ ಶ್ರೀರಾಮನ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುತ್ತಾರೆ.

ಒಮ್ಮೆ ಮಧ್ಯಾಹ್ನ ವಾಲ್ಮೀಕಿ ಮಹರ್ಷಿಗಳು ನದಿಗೆ ಹೋದಾಗ ಸಂಗಾತಿಯೊಂದಿಗೆ ಇರುವ ಕ್ರೌಂಚ ಮಿಥುನವನ್ನು ಕಾಣುತ್ತಾರೆ. ಆಗ ಅಲ್ಲಿಯೇ ಇದ್ದ ಒಬ್ಬ ಬೇಡನು ಗಂಡು ಕ್ರೌಂಚವನ್ನು ಹೊಡೆದುರುಳಿಸುತ್ತಾನೆ. ಹೆಣ್ಣು ಕ್ರೌಂಚದ

ಕರುಣಾಜನಕ ಕೂಗನ್ನು ಕೇಳಿ ಮಹರ್ಷಿಗಳಿಗೆ ಶೋಕ ಉಕ್ಕಿ ಶಾಪ ಹೊರಹೊಮ್ಮಿತು.

ಮಾನಿಷಾದ ಪ್ರತಿಷ್ಠಾಂ ತ್ವಂ ಅಗಮಃ ಶಾಶ್ವತೀಃ ಸಮಾಃ ।
ಯತ್ ಕ್ರೌಂಚಮಿಥುನಾದೇಕಂ ಅವಧೀಃ ಕಾಮಮೋಹಿತಮ್ ॥

"ಎಲೈ ನಿಷಾದನೇ! ಕಾಮಮೋಹಸ್ಥಿತವಾಗಿದ್ದ ಕ್ರೌಂಚಯುಗಲಗಳಲ್ಲಿ ಒಂದನ್ನು ಕೊಂದ ನೀನು ಬಹುಕಾಲ ಬಾಳಬೇಡ" ಎಂದು ಶಾಪಿಸಿದರು.

ಶಾಪರೂಪವಾದ ಈ ಶೋಕವೇ ಶ್ಲೋಕವಾಗಿ ಪರಿಣಮಿಸಿ ರಾಮಾಯಣಕ್ಕೆ ನಾಂದಿಯಾಯಿತು. ಇಪ್ಪತ್ತನಾಲ್ಕು ಶ್ಲೋಕ ಹಾಗೂ ಏಳು ಕಾಂಡದಿಂದ ಕೂಡಿರುವ ವಾಲ್ಮೀಕಿ ವಿರಚಿತ ರಾಮಾಯಣವು ಮನೋರಂಜನೆ ಹಾಗೂ ಜೀವೋತ್ಕರ್ಷವನ್ನುಂಟು ಮಾಡುತ್ತದೆ. ರಾಮನ ಅವತಾರವಾದರೂ ಮಾನವ ಬೋಧನೆಗಾಗಿ ಆದ ಅವತಾರ. ಮಾನವನು ಆತ್ಮಸಂಯಮದಿಂದ, ಆತ್ಮಶಿಕ್ಷಣದಿಂದ ಲೋಕ ಜೀವನದ ಕಷ್ಟ ಪರಂಪರೆಯಿಂದ ಪಾರಾಗಿ ಪರಮ ಪದಕ್ಕೆ ಏರಬಹುದು ಎಂಬುದಕ್ಕೆ ರಾಯಾಯಣವೇ ನಿದರ್ಶನ. ಈ ಕಾವ್ಯದಲ್ಲಿ ಭಕ್ತಿ ಬೋಧನೆ, ಸನ್ಮಾರ್ಗ ಪ್ರವರ್ತನೆ, ರಾಜನೀತಿ, ಧರ್ಮ, ಕುಲಾಚಾರ, ನಡೆನುಡಿ, ನೀತಿ ಮಾರ್ಗ ಬೋಧನೆ ಹೀಗೆ ಹಲವಾರು ಸದವಿಚಾರಗಳು ಅಡಗಿವೆ. ಇದನ್ನು ಪದೇ ಪದೇ ಓದುವುದರಿಂದ ಎಂತಹ ದುಷ್ಟನನ್ನೂ ಪರಿವರ್ತಿಸಬಹುದಾದ ಕೌಶಲ ಇದಕ್ಕೆ ಇದೆ.

ಶ್ರೀಮದ್ರಾಮಾಯಣವು ಬಾಲಕಾಂಡದಿಂದ ಆರಂಭವಾಗಿ ಏಳು ಕಾಂಡಗಳಲ್ಲಿ ಪೂರ್ಣಗೊಳ್ಳುತ್ತದೆ. ಇಂದಿಗೂ ಶರನ್ನವರಾತ್ರಿಯು ಪಾಡ್ಯದಿಂದ ಆರಂಭಿಸಿ, ವಿಜಯದಶಮಿಯವರೆಗೆ ರಾಮಾಯಣ ಪಾರಾಯಣ ವಾಡಿಕೆಯಲ್ಲಿದೆ.

ವಾಲ್ಮೀಕಿಯ ಕಲಾಕುಂಚದಲ್ಲಿ ಆದರ್ಶಪುತ್ರ ರಾಮ, ಸೀತೆ, ಸಹೋದರ ಲಕ್ಷ್ಮಣ, ಮಿತ್ರ ಸುಗ್ರೀವ, ಭಕ್ತ ಹನುಮಂತ, ಶಬರಿಯ ಭಕ್ತಿ, ಇಂದ್ರಜಿತನ ಪರಾಕ್ರಮ, ಭರತನ ಭ್ರಾತೃವಾತ್ಸಲ್ಯ ಹೀಗೆ ಒಂದೊಂದು ಪಾತ್ರವೂ ಜೀವಂತವಾಗಿ ಆದರ್ಶಮಯವಾಗಿ ಮೂಡಿಬಂದಿದೆ. ಆದ್ದರಿಂದಲೇ ಮಹಾತ್ಮಗಾಂಧಿಯವರಿಗೆ ರಾಮರಾಜ್ಯವೆಂಬುದು ಆದರ್ಶ ರಾಜ್ಯವಾಯಿತು. ಹೀಗೆ, ಉತ್ತಮ ಆದರ್ಶ, ಉಜ್ಜ್ವಲ ಧರ್ಮ, ಸುಂದರ ಜೀವನ ನಿರೂಪಣೆಯ ಮೂಲಕ ಪ್ರಪಂಚವನ್ನೇ ಆಕರ್ಷಿಸಿದ ಮೇರುಕೃತಿ ರಾಮಾಯಣ.

ವಾಲ್ಮೀಕಿಗಿರಿಸಂಭೂತಾ ರಾಮಸಾಗರಗಾಮಿನೀ ।
ಪುನಾತು ಭುವನಂ ಪುಣ್ಯಾ ರಾಮಾಯಣಮಹಾನದೀ ॥

"ವಾಲ್ಮೀಕಿಯೆಂಬ ಪರ್ವತದಲ್ಲಿ ಆವಿರ್ಭವಿಸಿ, ರಾಮಸಾಗರವಾಗಿ ಹರಿದ ಪುಣ್ಯತಮವಾದ ರಾಮಾಯಣ ಎಂಬ ಮಹಾನದಿಯು ಅಂದಿನಿಂದ ಇಂದಿನವರೆಗೂ ಭುವನವನ್ನು ಪಾವನಗೊಳಿಸುತ್ತಾ ಜಗದ್ಭವ್ಯ ರಾಮಾಯಣವಾಗಿ ಮೆರೆದಿದೆ."

ದೇವಭಾಷಾ ಸಂಸ್ಕೃತ

–ನಿಧಿಶ್ರೀ
I B.Sc. 'A'

ಪ್ರಾಚೀನ ಭಾಷೆಗಳ ಸಾಲಿನಲ್ಲಿ ಸಂಸ್ಕೃತವೂ ಒಂದು. ಅದರ ಉಗಮ ಭಾರತದಲ್ಲಿಯೇ ಆಯಿತೆಂದು ನಂಬಲಾಗಿದೆ. ಹಿಂದೂ ಧರ್ಮೀಯರ ಅತ್ಯಂತ ಪ್ರಾಚೀನ, ಪ್ರಾಥಮಿಕ ಭಾಷೆ ಸಂಸ್ಕೃತ. ಭಾರತೀಯರ ಧರ್ಮ, ಶಾಸ್ತ್ರ, ಪುರಾಣ, ಉಪನಿಷತ್‌ಗಳು, ವೇದಗಳು, ಮಹಾಭಾರತ, ರಾಮಾಯಣ ಭಗವದ್ಗೀತೆಯಂತಹ ಮಹಾಕಾವ್ಯಗಳು ರಚನೆಯಾದದ್ದು ಸಂಸ್ಕೃತದಲ್ಲಿಯೇ. ಆದ್ದರಿಂದ ಇದನ್ನು ದೇವಭಾಷೆಯೆಂದೂ ಕರೆಯಲಾಗುತ್ತದೆ. ಭಾರತೀಯ ಭಾಷೆಗಳಾದ ಹಿಂದಿ, ಗುಜರಾತಿ, ಬೆಂಗಾಲಿ ಭಾಷೆಗಳ ಮೂಲ ಸಂಸ್ಕೃತ. ಅಲ್ಲದೆ ಇತರ ಭಾರತೀಯ ಪ್ರಾದೇಶಿಕ ಭಾಷೆಗಳ ಮೇಲೂ ಸಹ ಸಂಸ್ಕೃತದ ಪ್ರಭಾವವನ್ನು ನೋಡಬಹುದು. ಇತ್ತೀಚಿನ ದಿನಗಳಲ್ಲಿ ಪ್ರಪಂಚದಾದ್ಯಂತ ಬಹಳ ಬೇಡಿಕೆ ಇರುವ ಭಾಷೆ ಇದಾಗಿದೆ. ಈ ಭಾಷೆಯು ಸುಮಾರು 3500 ವರ್ಷಗಳಷ್ಟು ಇತಿಹಾಸವಿರುವ ಭಾಷೆಯೆಂದು ಊಹಿಸಲಾಗಿದೆ. ಒಟ್ಟಿನಲ್ಲಿ ಒಂದು ಶಾಸ್ತ್ರೀಯ ಭಾಷೆ ಸಂಸ್ಕೃತ.

ಸಂಸ್ಕೃತ ವ್ಯಾಕರಣವು ಸ್ಪಷ್ಟವಾದದ್ದು. ಇದರ ವರ್ಣಮಾಲೆ

ವೈಜ್ಞಾನಿಕವಾಗಿ ರಚನೆಗೊಂಡಿದೆ. ಈ ಭಾಷೆಯ ವರ್ಣಮಾಲೆಯಲ್ಲಿನ ಸ್ವರ, ವ್ಯಂಜನಗಳು, ಧ್ವನಿರಚನೆ ವೈಜ್ಞಾನಿಕವಾಗಿ ರಚಿತಗೊಂಡಿದೆ. ಇಂಗ್ಲೀಷಿನ 5ರಿಂದ 6ಪದಗಳ ಅಭಿವ್ಯಕ್ತಿಗೆ ಸಮಾನವಾಗಿದೆ. ಹೆಚ್ಚಿನ ಭಾಷಣಕಾರರು, ಬರಹಗಾರರು, ಚಿಂತಕರು ತಮ್ಮ ಮಾತು ಮತ್ತು ಬರವಣಿಗೆಯನ್ನು ಅಭಿವ್ಯಕ್ತಪಡಿಸುವಾಗ ಹೆಚ್ಚಿನ ಸಂಸ್ಕೃತ ಶ್ಲೋಕ, ಸೂಕ್ತಿ, ನುಡಿಮುತ್ತುಗಳು ಹಾಗೂ ಚಿಂತನೆಗಳಿಂದ ಪ್ರಾರಂಭಿಸುವುದನ್ನು ಕಾಣುತ್ತೇವೆ. ಸಂಸ್ಕೃತದಲ್ಲಿರುವ ಸುಭಾಷಿತಗಳು ತುಂಬಾ ಅರ್ಥಗರ್ಭಿತವಾಗಿರುತ್ತವೆ. ಉದಾ:

पिबन्ति नद्यः स्वयमेव नाम्भः स्वयं न खादन्ति
फलानि वृक्षाः ।
नादन्ति स्वयं खलु वाश्विवाहाः परोपकाराय सतां
विभूतयः॥

ಅರ್ಥ: ನದಿಗಳು ತಮ್ಮ ನೀರನ್ನು ತಾವೇ ಕುಡಿಯುವುದಿಲ್ಲ. ಹಣ್ಣಿನ ಮರಗಳು ತಮ್ಮ ಹಣ್ಣನ್ನು ತಾವೇ ತಿನ್ನುವುದಿಲ್ಲ. ಮೋಡಗಳು ತಾವೇ ನೀರುಹಾಕಿದ ಗಿಡಮರಗಳನ್ನು ಸೇವಿಸುವುದಿಲ್ಲ. ಸತ್ಪುರುಷರ ಸಂಪತ್ತುಗಳು ಬೇರೊಬ್ಬರ ಉಪಕಾರಕ್ಕಾಗಿಯೇ ಇರುತ್ತವೆ.

ಸಂಸ್ಕೃತದ ಪ್ರಭಾವ ಭಾರತೀಯ ಭಾಷೆಗಳ ಮೇಲಷ್ಟೆ ಅಲ್ಲ ಹಲವಾರು ವಿದೇಶಿ ಭಾಷೆಗಳ ಮೇಲೂ ಉಂಟಾಗಿದೆ. ಲ್ಯಾಟಿನ್ ಭಾಷೆಯ ಉಗಮ ಸಂಸ್ಕೃತದಿಂದಲೇ ಆಗಿದೆ ಎಂದು ಹೇಳಲಾಗುತ್ತದೆ. ಗ್ರೀಕ್ ಭಾಷೆಯೂ ಸಹ ಸಂಸ್ಕೃತದ ಸಂಬಂಧ ಹೊಂದಿದೆ.

ಆದರೆ ದುರಂತದ ವಿಷಯವೇನೆಂದರೆ ನಮ್ಮ ದೇಶದಲ್ಲಿ ಕೇವಲ 1% ಜನರು ಮಾತ್ರ ಸಂಸ್ಕೃತವನ್ನು ಆಡುಭಾಷೆಯಾಗಿ ಬಳಸುತ್ತಿದ್ದಾರೆ. ಇದು ವ್ಯಾವಹಾರಿಕ ಮತ್ತು ಆಡುಭಾಷೆಗಿಂತ ಹೆಚ್ಚಾಗಿ ಗ್ರಾಂಥಿಕ ಭಾಷೆಯಾಗಿ ಸಮೃದ್ಧಿ ಹೊಂದಿರುವುದನ್ನು ಕಾಣುತ್ತೇವೆ. ಪ್ರಸ್ತುತ ಸಂದರ್ಭದಲ್ಲಿ ಸಂಸ್ಕೃತ ಭಾಷೆಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಅಪಾರ ಬೇಡಿಕೆಯಿದೆ. ಜರ್ಮನಿಯ 14 ವಿಶ್ವವಿದ್ಯಾಲಯಗಳು ಸಂಸ್ಕೃತವನ್ನೊಂದು ಅಭ್ಯಾಸದ ವಿಷಯವಾಗಿ ಪರಿಚಯಿಸಿದೆ. ಉತ್ತರಖಂಡದಲ್ಲಿ ಸಂಸ್ಕೃತವನ್ನು ಅಧಿಕೃತ ರಾಜ್ಯಭಾಷೆಯನ್ನಾಗಿ ಘೋಷಿಸಲಾಗಿದೆ. ಇದರ ಹಿಂದಿನ ಉದ್ದೇಶ ಕಲಿಕೆಯಲ್ಲಿ ವೇದಗಳ ತಂತ್ರಗಳನ್ನು ಪ್ರೋತ್ಸಾಹಿಸುವುದು. ನಾಸಾದ ವಿಜ್ಞಾನಿಗಳ ಅಭಿಪ್ರಾಯದಂತೆ ಸಂಸ್ಕೃತ ಕಂಪ್ಯೂಟರ್ ಸ್ನೇಹಿ ಭಾಷೆ. ಅಮೇರಿಕವು ಸಂಸ್ಕೃತದ ತಳಹದಿಯಲ್ಲಿ 6 ಮತ್ತು 7ನೆಯ ಪೀಳಿಗೆಗಳ ಕಂಪ್ಯೂಟರ್ ಸೃಷ್ಟಿಸುತ್ತಿರುವುದು ಗಮನಾರ್ಹ ಅಂಶ.

ಸ್ಪಷ್ಟ ಉಚ್ಚಾರಣೆ, ಏಕಾಗ್ರತೆಯ ಸುಧಾರಣೆ, ಗಣಿತ ಮತ್ತು ವಿಜ್ಞಾನ ಕಲಿಕೆಗೆ ಸಂಸ್ಕೃತ ಭಾಷೆ ಸಹಕಾರಿಯಾಗಿದೆ. ಸಂಸ್ಕೃತದ ಶಬ್ದ ಭಂಡಾರ ಅಗಾಧ ಸಮಾನಾರ್ಥಕ ಪದಗಳ ಖಜಾನೆಯೆಂದೇ ಹೇಳಬಹುದು. ಸಂಸ್ಕೃತವು ತುಂಬಾ ಸರಳವಾದ ಭಾಷೆ. ಇದನ್ನು ಕಲಿಯುವುದು ತುಂಬಾ ಸುಲಭ. ಆದ್ದರಿಂದ ನಾವೆಲ್ಲರೂ ಸಂಸ್ಕೃತವನ್ನು ಕಲಿಯೋಣ. ಇದನ್ನು ದೇವಭಾಷೆ ಅಂತನೂ ಕರೆಯುತ್ತಾರೆ. ನಾವೆಲ್ಲರೂ ಸೇರಿ ಸಂಸ್ಕೃತ ಭಾಷೆಯನ್ನು ಮುಂದಿನ ಪೀಳಿಗೆಗೂ ಉಳಿಸೋಣ.

द्वाविमौ पुरुषौ लोके न भूतौ न भविष्यतः ।
प्रार्थितं यश्च कुरुते यश्च नार्थयते परम् ॥

ಈ ಇಬ್ಬರು ಲೋಕದಲ್ಲಿ ಎಂದಿಗೂ ಇಲ್ಲ. ಇನ್ನು ಮುಂದೆಯೂ ಇರುವುದಿಲ್ಲ – ನಾವು ಅಪೇಕ್ಷೆಪಟ್ಟದ್ದನ್ನು ಯಾರು ಕೊಡುತ್ತಾನೋ ಅವನೊಬ್ಬ, ಯಾರು ಇನ್ನೊಬ್ಬರಲ್ಲಿ ಬೇಡುವುದೇ ಇಲ್ಲವೋ ಅವನು ಮತ್ತೊಬ್ಬ.

ಗುರು ಮಹಿಮೆ

ಮನೋಜ್ ಎಂ. ಪ್ರಭು
II B.Com. 'B2'

अज्ञानतिमिरान्धस्य ज्ञानाञ्जनशलाकया ।
चक्षुरुन्मिलितं येन तस्मै श्रीगुरवे नमः ॥

ಅಜ್ಞಾನವೆಂಬ ಕಣ್ಣಿನ ಕಾಯಿಲೆಯನ್ನು ಜ್ಞಾನವೆಂಬ ಅಂಜನದ ಕಡ್ಡಿಯಿಂದ ಗುಣಪಡಿಸಿ, ಕಣ್ಣು ತೆರೆಯುವಂತೆ ಮಾಡಿ, ಶಿಷ್ಯನ ಕೀರ್ತಿ ಜಗದಗಲವಾಗಿ ಹರಡುವಂತೆ ಮಾಡಿದ ಸದ್ಗುರುವಿಗೆ ನನ್ನ ನಮನಗಳು.

ದೇವರಿಗಿಂತ ಗುರು ದೊಡ್ಡವನು, ಗುರುಗಿಂತ ಗುರುಕೃಪೆ ದೊಡ್ಡದು. ಭಗವಂತನ ಪ್ರತಿಬಿಂಬವೇ ಗುರು. ಭಗವಂತನೇ ಗುರು–ರೂಪದಲ್ಲಿ ಬಂದು ಬೆಳಕನ್ನು ತೋರಿಸುತ್ತಾನೆ. ಭಗವಂತನೇ ಅತ್ಯದ್ಭುತ ರೀತಿಯಲ್ಲಿ ಶಿಷ್ಯ ಹಾಗೂ ಗುರುವನ್ನು ಒಂದುಗೂಡಿಸುವ ಘಟನೆಗಳು ಹಲವಾರು ಮಹಾತ್ಮರ ಚರಿತ್ರೆಯಲ್ಲಿ ಬಂದಿವೆ. ಸಂತ ಏಕನಾಥರಿಗೆ 'ದೇವಗಿರಿಯಲ್ಲಿರುವ ಜನಾರ್ದನ ಪಂತರಲ್ಲಿ ಹೋಗು' ಎಂಬ ಅಶರೀರವಾಣಿಯಿಂದ ಗುರುವನ್ನು ಕಂಡುಕೊಳ್ಳಲು ಮಾರ್ಗದರ್ಶನ ಸಿಕ್ಕಿತು. ಸಂತನಾಮರಿಗೆ 'ಮಲ್ಲಿಕಾರ್ಜುನ ಬೆಟ್ಟದ ಸಾಧುವಿನಿಂದ ಮಂತ್ರೋಪದೇಶ' ಪಡೆಯಲು ಶ್ರೀಕೃಷ್ಣ ಕನಸಿನಲ್ಲಿ ಸೂಚಿಸಿದನಂತೆ.

ಈ ಘಟನೆಗಳನ್ನೆಲ್ಲಾ ಸ್ಮರಿಸಿಕೊಂಡಾಗ ಗುರುಕೃಪೆಯಿಂದ ಸಾಧಿಸಲಾರದ್ದು ಯಾವುದೂ ಇಲ್ಲ ಎಂಬುದರ ಅರಿವಾಗುತ್ತದೆ. ಗುರುವಾದವನು ಯಾರ ಪ್ರಾರಬ್ಧವನ್ನೇ ಆಗಲಿ ತೆಗೆದುಕೊಂಡು ಅದನ್ನು ಸುಲಭವಾಗಿ ಸಹಿಸಿಕೊಳ್ಳಬಲ್ಲ. ಸಂತ ರಾಮದಾಸಜೀಯವರು ತನ್ನ ಶಿಷ್ಯನ ತೊನ್ನಿನ ರೋಗವನ್ನು ತಾನು ತೆಗೆದುಕೊಂಡು ಅವನ ರೋಗ ಗುಣಪಡಿಸಿದರು. ಶ್ರೀರಾಮಕೃಷ್ಣರು ಕಾಯಿಲೆಯಿಂದ ಬಳಲುವಾಗ 'ಈ ಹಾಳಾದ ಕಾಯಿಲೆ ಆ ಗಿರೀಶನದು' ಎಂಬುದಾಗಿ ಹೇಳುತ್ತಿದ್ದರು. ಗಿರೀಶ ಅವರ ಅನೇಕ ಆಪ್ತ ಶಿಷ್ಯರಲ್ಲಿ ಒಬ್ಬ ಎಂಬುದು ಸ್ಮರಣೀಯ.

ನಮ್ಮ ಅಂತರಂಗದಲ್ಲಿಯೇ ಗುರುವಿದ್ದಾಗಲೂ ಕೂಡ ಆ ಅರಿವನ್ನು ಮೂಡಿಸಲು ಬಾಹ್ಯದಲ್ಲಿ ನಮಗೊಬ್ಬ ಗುರುವಿನ ಮಾರ್ಗದರ್ಶನ ಬೇಕೇಬೇಕು. ಅವತಾರಿಗಳಾದ ಶ್ರೀರಾಮ, ಶ್ರೀಕೃಷ್ಣರಿಗೂ ಕೂಡ ವಿಶ್ವಾಮಿತ್ರ, ಸಾಂದೀಪನಿಗಳಂಥ ಗುರುಗಳಿದ್ದರು. ಗುರುಕೃಪೆ ಎಲ್ಲರ ಮೇಲೂ ಧಾರಾಕಾರವಾಗಿ ವರ್ಷಿಸುತ್ತದೆ. ಆದರೆ ನಮಗೆ ಅದರ ಮಹತ್ವದ ಅರಿವು ಇರುವುದಿಲ್ಲ. ಸಂತ ಕಬೀರದಾಸರು ಗುರುಶಿಷ್ಯರ ಸಂಬಂಧವನ್ನು ಹೀಗೆ ವಿವರಿಸಿದ್ದಾರೆ. 'ಮೀನು ನೀರಿನೊಳಗಿದ್ದರೂ ಸಹ ಬಾಯಾರಿಕೆಯನ್ನು ಅನುಭವಿಸುತ್ತದೆ. ಅದು ನೀರವಾಗಿ ಈಜಾಡುತ್ತಿರುವಾಗ ಅದಕ್ಕೆ ನೀರನ್ನು ಕುಡಿಯಲು ಸಾಧ್ಯ.' ಹಾಗೆಯೇ, ನಾವು ಗುರುವಿಗೆ ವಿನಯ–ವಿಧೇಯರಾಗಿದ್ದು, ಎಲ್ಲವೂ ಭಗವಂತನೇ, ಗುರುವೂ ಭಗವಂತನೇ ಎಂಬ ಭಾವನೆ ಯಾವಾಗ ಮೂಡುವುದೋ ಆಗ ನಮಗೆ ಗುರುಕೃಪೆಯ ಅನುಭವವಾಗುವುದು. ಇದನ್ನೇ ದಾಸವಾಣಿ: 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಮಾತಿನಲ್ಲಿ ಹೇಳಿದೆ.

ಸರ್ವಜ್ಞ ಮಹಾಕವಿ "ತಂದೆ ಪೇಳುವನು ಬಲುಬುದ್ಧಿ, ಗುರುವಿನಿಂದ ಬಂಧನವು ಬಯಲು ಸರ್ವಜ್ಞ" ಎಂಬ ವಾಣಿಯಲ್ಲಿ ಗುರುವನ್ನು ಆಶ್ರಯಿಸಿದವನು, ಭವಬಂಧನದಿಂದ ಮುಕ್ತನಾಗುತ್ತಾನೆ. 'ತಂದೆಗಿಂತ ಗುರುವಿನ ಸ್ಥಾನ ದೊಡ್ಡದು' ಎಂಬುದಾಗಿ ಗುರುಮಹಿಮೆಯನ್ನು ಸಾರಿದ್ದಾರೆ.

ಕೇವಲ ಕಾವಿಬಟ್ಟೆ ತೊಟ್ಟು, ಗಡ್ಡಬಿಟ್ಟು, ಗುಡ್ಡದ ಮೇಲೆ ನೆಲೆಸುವವರೆಲ್ಲ ಗುರುವಲ್ಲ. ನಮ್ಮ ಅನುಮಾನಗಳನ್ನು ಪರಿಹರಿಸುವ ನಮ್ಮ ಜೀವನದ ಎಲ್ಲ ಮುಖಗಳಲ್ಲಿ ಪ್ರಗತಿಯತ್ತ ಹೆಜ್ಜೆ ಹಾಕಲು ಸನ್ಮಾರ್ಗವನ್ನು ತೋರುವ, ನಮ್ಮ ಮನಸ್ಸಿಗೆ ಶಾಂತಿ ನೀಡುವ, ಕಾಮ–ಕ್ರೋಧ–ಲೋಭ–ಮೋಹ–ಮದ–ಮಾತ್ಸರ್ಯಗಳಿಂದ ಸದಾ ದೂರವಿರುವ ಸರಳ ಸಚ್ಚರಿತ್ರ ಸಂಪನ್ನನೇ ಗುರು. ಇಂತಹ ಗುರುವಿನ ಪೂರ್ಣಾನುಗ್ರಹಕ್ಕೆ

ಪಾತ್ರರಾಗಲು ಶ್ರದ್ಧೆ, ನಂಬಿಕೆ ಮತ್ತು ವಿಶ್ವಾಸ ಅತಿ ಮುಖ್ಯ. "ಶ್ರದ್ಧಾಂ ಕಾಮಸ್ಯ ಮಾತರಮ್" ಎಂಬ ವೇದೋಕ್ತಿಯಂತೆ 'ಶ್ರದ್ಧೆಯೇ ನಮ್ಮ ಇಚ್ಛೆಯನ್ನು ಈಡೇರಿಸುವ ಜನನಿ.' ಇದನ್ನೇ ರಾಮಕೃಷ್ಣ ಪರಮಹಂಸರು "ಗುರುಕೃಪೆಯ ಅರ್ಹತೆಯನ್ನು ಪಡೆಯಲು ಶಿಷ್ಯನ ಹೃದಯ ವೈಶಾಲ್ಯವೂ ಬಹು ಮುಖ್ಯ" ಎಂದು ಹೇಳಿದ್ದಾರೆ. ಗುರು ಸೇವೆ ಮಾಡುವಾಗ ಗೊಣಗಾಡದೆ ಸರಳ ಮನಸ್ಸಿನಿಂದ ಪ್ರೀತಿಯಿಂದ ಸೇವೆ ಮಾಡಬೇಕು. ಗುರುಸೇವೆ ಕೆಲವೊಮ್ಮೆ ನಮಗೆ ಆಯಾಸವೆನಿಸಬಹುದು. ಆದರೆ ಗುರುಸೇವೆಗಾಗಿ ಎಷ್ಟೆಷ್ಟು ಶ್ರಮವಹಿಸುತ್ತೇವೆಯೋ ಅಷ್ಟಷ್ಟೂ ಗುರುಶಕ್ತಿ ನಮ್ಮತ್ತ ಹರಿದು ಬರುತ್ತದೆ. ಹೆಸರು. ಕೀರ್ತಿ, ಐಶ್ವರ್ಯ ಯಾವುದರ ಅಪೇಕ್ಷೆಯೂ ಇಲ್ಲದೇ ನಿಸ್ವಾರ್ಥ ಭಕ್ತಿಯಿಂದ ಗುರುಸೇವೆ ಮಾಡಿ ಸಂಪೂರ್ಣ ಶರಣಾದವನಿಗೆ ಗುರುಕೃಪೆ ಖಂಡಿತವಾಗಿ ಆಗುತ್ತದೆ.

ಇದನ್ನೇ ಸರ್ವಜ್ಞನು "ಸರವೇ ಸುರಲತೆಯಕ್ಕು ಗೊರವಗಿರಿಪತಿಯಕ್ಕು; ಹರಕೊಟ್ಟ ಗರಿಯೂ ಗಿರಿಯಕ್ಕು; ಗುರುವಿನ ಕರುಣೆಯುಳ್ಳವನಿಗೆ" ಎನ್ನುತ್ತಾನೆ. 'ಜಂತೂನಾಂ ನರಜನ್ಮ ದುರ್ಲಭಂ' ಎಂಬಂತೆ ಸಕಲ ಜೀವ–ಜಂತುಗಳಲ್ಲಿ ಶ್ರೇಷ್ಠವಾದ ಮನುಷ್ಯ ಜನ್ಮಕ್ಕೆ ಬಂದ ವ್ಯಕ್ತಿ, ದೇವ, ಗುರು–ಸೇವೆಗಳ ಮೂಲಕ ತನ್ನ ಜನ್ಮ ಸಾರ್ಥಕಪಡಿಸಿಕೊಂಡು ಉತ್ತಮ ಮಾರ್ಗದಲ್ಲಿ ನಡೆದಾಗ ನರ–ಹರನಾಗಲು ಸಾಧ್ಯ.

वेदाः

–निर्मल
I B.Com. 'B1' (Voc)

ವೇದವು ಜ್ಞಾನದ್ದೇ ಸ್ವರೂಪವಾದುದರಿಂದ ಇದರ ಅನಂತತೆ ಎಲ್ಲಾ ರೀತಿಯ ಜ್ಞಾನವನ್ನು ಒಳಗೊಳ್ಳಲೊಲ್ಲದು. 'ಮನುಷ್ಯನಿಂದ ಉತ್ಪನ್ನವಾದುದಲ್ಲ' ಎಂಬುದರ ಅರ್ಥ ಸಾಧಕರ ದೃಷ್ಟಿಗೆ ಗೋಚರವಾದುದು ಎಂದು. ಸಾಮಾನ್ಯವಾಗಿ ಗದ್ಯ, ಪದ್ಯ, ಗೇಯತ್ವಾದಿ ಗುಣಗಳಿಂದ ಕೂಡಿದ ಒಂದು ನಿರ್ದಿಷ್ಟ ಸಾಹಿತ್ಯರಾಶಿಯನ್ನು ಇಂದು ವೇದವೆಂದು ಕರೆಯಲ್ಪಡುತ್ತಿದ್ದು, ಆ ಸಾಹಿತ್ಯರಾಶಿಗೆ ವೇದ ಶಬ್ದದ ಪೂರ್ಣಾರ್ಥವನ್ನು ಆರೋಪಿಸಲಾಗುತ್ತದೆ. ಆದುದರಿಂದ ವೇದ ಎಂಬುದರ ಅರ್ಥ ಅನಂತ ಜ್ಞಾನರಾಶಿ ಮತ್ತು ವೇದದ ವ್ಯಾಪ್ತಿಗೆ ಹೊರತಾದ ಜ್ಞಾನಾಂಶವೇ ಇಲ್ಲ. ಅತಿಲೌಕಿಕ ಅತ್ಯಾಧುನಿಕ ಎಂದು ಮುಂತಾಗಿ ನಾವು ಹೆಸರಿಸುವ ಜ್ಞಾನಾಂಶಗಳು ವಿಶಾಲಾರ್ಥದಲ್ಲಿ ವೈದಿಕವೇ. ವೇದವು ಹೇಗೆ ಅನಂತವೆಂದು ಹೇಳಲಾಗುತ್ತದೆಯೋ ಹಾಗೆಯೇ ವೇದಾರ್ಥವು ಅನಂತವೆಂಬುದು ಅಪೌರುಷೇಯತ್ವದ ಸಾರವಾಗಿದೆ.

1. ಋಗ್ವೇದ: ಋಗ್ವೇದ ಸಂಹಿತೆ ವೇದವಾಙ್ಮಯದಲ್ಲೆಲ್ಲ ಪ್ರಾಚೀನತಮವಾದುದು. ಅದರಲ್ಲಿ 1,028 ಸೂಕ್ತಗಳಿವೆ. ಇದನ್ನು 10 'ಮಂಡಲ'ಗಳಲ್ಲಿ ಅಳವಡಿಸಲಾಗಿದೆ. ಒಂದೊಂದು ಸೂಕ್ತದಲ್ಲಿಯೂ 3ರಿಂದ 58 ಋಕ್ಕುಗಳಿರುತ್ತವೆ. ಒಟ್ಟು ಋಗ್ವೇದದಲ್ಲಿರುವ ಋಕ್ಕುಗಳ ಸಂಖ್ಯೆ 10,462; ಸರಾಸರಿ ಒಂದು ಸೂಕ್ತಕ್ಕೆ ಹತ್ತೆನ್ನಬಹುದು. ಋಗ್ವೇದವನ್ನೆಲ್ಲ 'ಅಷ್ಟಕ', 'ಅಧ್ಯಾಯ', 'ವರ್ಗ'ವೆಂದು ವಿಭಾಗಿಸಲಾಗಿದೆ. ಕಾತ್ಯಾಯನರು ತಮ್ಮ 'ಸರ್ವಾನುಕ್ರಮಣಿ'ಯಲ್ಲಿ –

"यस्य वाक्यं स ऋषिः, या तेनोच्यते सा देवता,
यदक्षरपरिमाणं तच्छन्दः ।
अथैप्सवः ऋषयः देवताः छंदोभिः उपाघावन् ॥"

ಎಂದು ಸ್ಪಷ್ಟಪಡಿಸಿದ್ದಾರೆ. ಸಂಸ್ಕೃತ ಸಾಹಿತ್ಯದ ಮೂಲಸ್ರೋತವನ್ನು ಅನ್ವೇಷಿಸುವವರಿಗೆ ಋಗ್ವೇದಸಂಹಿತೆಯ ಅಧ್ಯಯನ ಅತ್ಯಂತ ಆಕರ್ಷಕವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ. ರಾಮಾಯಣ ಮಹಾಭಾರತಗಳ ಛಂದೋಬಂಧಗಳ ವಿಕಸಿತರೂಪವನ್ನು ಅರಿಯಲು ಋಗ್ವೇದದ ಛಂದಸ್ಸುಗಳು ಅತ್ಯಂತ ಹೆಚ್ಚಿನ ಸಹಾಯವನ್ನೊದಗಿಸುತ್ತವೆ. ಹಾಗೆಯೇ ಆರ್ಷಪ್ರಯೋಗಿಗಳ ಸೂಕ್ಷ್ಮವನ್ನರಿಯಬೇಕಾದರೂ ಋಗ್ವೇದದ ಶಬ್ದಪ್ರಯೋಗಗಳ

ಪರಿಜ್ಞಾನ ಅಗತ್ಯವಾಗುತ್ತದೆ. ಉಷಸ್ಸೂಕ್ತಾದಿಗಳಲ್ಲಿ ಕಾವ್ಯಾಲಂಕಾರಗಳ ಚಮತ್ಕಾರವನ್ನೂ ಗುರುತಿಸಲು ಶಕ್ಯವಾಗುತ್ತದೆ.

2. ಯಜುರ್ವೇದ: ಕೇವಲ ಯಜ್ಞದೃಷ್ಟಿಯಿಂದ ಅಧ್ವರ್ಯುವಿನ ಉಪಯೋಗಕ್ಕಾಗಿರುವ ನಿಯಮಗಳ ಸಂಗ್ರಹವೇ ಯಜುರ್ವೇದಸಂಹಿತೆಯೆನಿಸುತ್ತದೆ. ಛಂದೋರೂಪವಾದ ಮಂತ್ರಕ್ಕೆ 'ಋಕ್' ಎಂಬ ಹೆಸರು ಹೇಗೋ ಹಾಗೆಯೇ ಗದ್ಯರೂಪವಾದ ವಚನಕ್ಕೆ 'ಯಜುಸ್' ಅಥವಾ 'ಬ್ರಾಹ್ಮಣ' ಎಂಬ ಸಂಜ್ಞೆಯಿದೆ. 'ಅನಿಯತಾಕ್ಷರಾವಸಾನೋ ಯಜುಃ', 'गद्यात्मको यजुः' ಎಂಬ ವಿವರಣೆಗಳು ಇದನ್ನೇ ಸೂಚಿಸುತ್ತವೆ. ಮುಂದೆ ಗೃಹ್ಯ ಮತ್ತು ಶ್ರೌತಸೂತ್ರಗಳು ವಿವರವಾಗಿ ಹೇಳುವ ಕರ್ಮಗಳ ಮೂಲರೂಪಗಳು ಅತಿಪ್ರಾಚೀನವಾದ ಯಜುರ್ವೇದದಲ್ಲೇ ಕಾಣಸಿಗುತ್ತವೆ. ಉಪನಯನಾದಿ ಗೃಹ್ಯಸಂಸ್ಕಾರಗಳನ್ನೂ, ಶ್ರಾದ್ಧಾದಿ ಅಪರಕರ್ಮಗಳನ್ನೂ ಆಚರಿಸಲು ಒಬ್ಬ ಪುರೋಹಿತನ ನೆರವು ಸಾಕು. ಆದರೆ ಸೋಮಯಾಗಗಳನ್ನೂ, ರಾಜಸೂಯಾದಿ ಮಹಾಯಜ್ಞಗಳನ್ನೂ ನಡೆಸಲು ಅನೇಕ ಪುರೋಹಿತರ ಅಗತ್ಯ ಬೀಳುತ್ತದೆ; ಇವೇ ಶ್ರೌತಕರ್ಮಗಳು. ಈ ಎರಡು ಬಗೆಯ ಕರ್ಮಾಚರಣೆಗೂ ಮುಖ್ಯವಾದ ಗದ್ಯಪದ್ಯಾತ್ಮಕ ಮಂತ್ರಗಳ ಮೊದಲ ಸಂಕಲನವೇ ಯಜುರ್ವೇದವೆಂದು ತಿಳಿಯಬಹುದಾಗಿದೆ. ಯಜ್ಞದ ಮುಖ್ಯ ನಾಲ್ವರು ಪುರೋಹಿತರಲ್ಲಿ ಹೋತೃವಿಗೆ ಋಗ್ವೇದ ಸಂಬಂಧಿಸುವಂತೆ, ಯಜುರ್ವೇದ ಅಧ್ವರ್ಯುವಿಗೂ, ಸಾಮವೇದ ಉದ್ಗಾತೃವಿಗೂ ಸಂಬಂಧಿಸುತ್ತವೆ. ಕರ್ಮಾಚರಣೆಗೆ ಅಗ್ರಪ್ರಾಶಸ್ತ್ಯವನ್ನಿತ್ತ ಭಾರತೀಯರು ಯಜುರ್ವೇದವನ್ನು ಹೆಚ್ಚಾಗಿ ಅಧ್ಯಯನ ಮಾಡುವ ಪರಂಪರೆಯನ್ನು ಉಳಿಸಿಕೊಂಡು ಬಂದಿರುವುದು ಸಹಜವಾಗಿದೆ. ಆದ್ದರಿಂದಲೇ ಇದರಲ್ಲಿ ಶಾಖೆಗಳು ಬಹಳವಿವೆ. ಮೊದಲಿಗೆ ನೂರೊಂದು ಶಾಖೆಗಳಿದ್ದವೆಂದು ಪತಂಜಲಿ ಹೇಳಿದ್ದಾನೆ (ಮಹಾಭಾಷ್ಯ–ಪ್ರಸ್ತಾವನೆಯಲ್ಲಿ). ಆದರೆ ಈಗ ಆರೇ ಉಪಲಬ್ಧವಿದೆ: (1) ಕಾಠಕಸಂಹಿತೆ (2)ಕಪಿಷ್ಠಲಕಠಸಂಹಿತೆ (3)ಮೈತ್ರಾಯಣೀಸಂಹಿತೆ (4) ತೈತ್ತರೀಯಸಂಹಿತೆ (5) ವಾಜಸನೇಯ ಸಂಹಿತೆಯ ಕಾಣ್ವಶಾಖೆ (6) ವಾಜಸನೇಯಿ ಸಂಹಿತೆಯು ಮಾಧ್ಯಂದಿನಶಾಖೆ. ಇದರಲ್ಲಿ ಮೊದಲ ನಾಲ್ಕಕ್ಕೆ 'ಕೃಷ್ಣಯಜುರ್ವೇದ'ವೆಂದೂ, ಕೊನೆಯ ಎರಡಕ್ಕೆ 'ಶುಕ್ಲಯಜುರ್ವೇದ'ವೆಂದೂ ಹೇಳುವರು. ಮೊದಲನೆಯದರಲ್ಲಿ ಗದ್ಯಪದ್ಯಗಳೆರಡೂ ಸಂಮಿಶ್ರವಾಗಿರುವುದರಿಂದ 'ಕೃಷ್ಣ'ವೆಂದೂ, ಗದ್ಯಮಿಶ್ರಣವಿಲ್ಲದ್ದರಿಂದ 'ಶುಕ್ಲ'ವೆಂದೂ ಹೆಸರುಗಳು ಬಂದಿರಬಹುದು.

"प्रत्यक्षेणानुमित्या वा यस्सूपायोन बुध्यते ।
एनम् विन्दति वेदेन तस्माद्वेदस्य वेदता ॥"

ಈ ವೇದಾಧಿಕಾರ ಉಪನಯನಸಂಸ್ಕಾರವಾದವರಿಗೆ ಮಾತ್ರವೆಂದ ಪರಂಪರೆಯ ಕಾರಣ, ಸ್ತ್ರೀಶೂದ್ರಾದಿಗಳಿಗೆ ಉಪದೇಶಿಸುವ ಪರಿಪಾಠವಿಲ್ಲ. ವೇದ ನಿತ್ಯವಾದುದರಿಂದ ಅದು ಸ್ವಯಂಪ್ರಮಾಣ. "ಸ್ವಾಧ್ಯಾಯೋಧ್ಯೇತವ್ಯಃ" ಎಂಬ ವಿಧಿವಾಕ್ಯಕ್ಕೆ ಅರ್ಥಜ್ಞಾನಪುರಸ್ಸರವಾಗಿ ಅಧ್ಯಯನ ಮಾಡಬೇಕೆಂದೇ ತಾತ್ಪರ್ಯ ಯಜುರ್ವೇದಸಂಹಿತೆಗಳಲ್ಲಿ ಸ್ವರಾಂಕನಪದ್ಧತಿಯೂ ಋಗ್ವೇದಕ್ಕಿಂತ ಭಿನ್ನವಾಗಿದೆ; ಉಚ್ಚಾರಣೆಯಲ್ಲಿಯೂ ಭೇದವಿದೆ. ನಿತ್ಯನೈಮಿತ್ತಿಕ, ಕಾಮ್ಯ ಮತ್ತು ನಿಷಿದ್ಧ ಕರ್ಮಗಳ ಪರಿಜ್ಞಾನಕ್ಕೆ ವೇದವೊಂದೇ ಆಶ್ರಯ.

ವಾಜಸನೇಯಿ ಸಂಹಿತೆಯಲ್ಲಿಯೂ ವಿಷಯಗಳು ಇವೇ ಆಗಿವೆ. ಆದರೆ ಇಲ್ಲಿ ಗದ್ಯವಿಲ್ಲ. ಕೇವಲ ಮಂತ್ರಭಾಗವೂ ಕೃಷ್ಣಯಜುರ್ವೇದಕ್ಕಿಂತ ಕಡಿಮೆಯಿದೆ. ಒಟ್ಟು ಅಧ್ಯಾಯಸಂಖ್ಯೆ 40. ಕಡೆಯ 15 ಅಧ್ಯಾಯಗಳು ಪಶ್ಚಾತ್ಕಾಲೀನ ಪ್ರಕ್ಷೇಪಗಳೆಂದು ಹೇಳುವುದುಂಟು.

ಸಾಹಿತ್ಯದೃಷ್ಟಿಯಿಂದ ಓದುವವರಿಗೆ ಕೃಷ್ಣಯಜುರ್ವೇದ ಕುತೂಹಲಕಾರಿಯಾಗಿರುವುದು. ಏಕೆಂದರೆ ಅದೇ ಭಾರತೀಯ ಗದ್ಯದ ಪ್ರಥಮ ಪ್ರಕಟನೆಯಾಗಿದೆ.

3. ಸಾಮವೇದ: ಸಾಮವೇದಶಾಖೆಗಳು ಒಂದು ಸಹಸ್ರವೆಂದು. 'ಚರಣವ್ಯೂಹ'ದಲ್ಲಿ ಉಕ್ತವಾಗಿದ್ದರೂ ಪೂರ್ಣವಾಗಿ ಉಪಲಬ್ಧವಿರುವುದು ಕೆಲವೇ: ರಾಣಾಯಣೀಯ. ಕೌಥುಮ ಮತ್ತು ಜೈಮಿನೀಯ ಎಂಬುವು ಪ್ರಚಾರದಲ್ಲಿರುವ ಮೂರು ಸಾಮಶಾಖೆಗಳು. ಸಾಮವೇದಸಂಹಿತೆಯಲ್ಲಿ ಎರಡು ಭಾಗಗಳಿವೆ: (1) ಪೂರ್ವ ಆರ್ಚಿಕ (2)ಉತ್ತರಾರ್ಚಿಕ. ಇವೆರಡರಲ್ಲೂ ಹೆಚ್ಚಾಗಿ ಋಗ್ವೇದೀಯ ಮಂತ್ರಗಳನ್ನೇ ಗಾನೋಪಯೋಗಿದೃಷ್ಟಿಯಿಂದ ಬೇರೆ ಸ್ವರಕ್ರಮಾನುಗುಣವಾಗಿ ಉದ್ಧರಿಸಿರುವುದನ್ನು ನೋಡುತ್ತೇವೆ. ಅದೂ ಋಗ್ವೇದದ ಎಂಟೂ, ಒಂಬತ್ತನೆ ಜಗತೀ–ಪಂಕ್ತೀ ಛಂದಸ್ಸುಗಳ ಮಿಶ್ರಣವಾದ 'ಪ್ರಗಾಥ' ಛಂದಸ್ಸುಗಳಲ್ಲಿವೆ. ಋಕು ಗಾನಕ್ಕೆ ಯೋನಿಯೆಂದು ಭಾವಿಸಲಾಗಿತ್ತು. ಸಾಮವೆಂದರೆ ಗಾನವೇ. ಆರ್ಚಿಕವೆಂದರೆ 585 ಯೋನಿಗಳ ಸಂಗ್ರಹ; ಉತ್ತರಾರ್ಚಿಕದಲ್ಲಿ ಅಗ್ನಿ, ಇಂದ್ರ, ಸೋಮ ಈ ಮುಖ್ಯ ದೇವತಾಕ್ರಮಾನುಸಾರ ಗಾನ ಕ್ರಮವನ್ನು ಸೂಚಿಸುವ ಋಕ್ಸಂಗ್ರಹವಿದೆ. ಯಜ್ಞದಲ್ಲಿ ಉದ್ಗಾತೃವಿನ ಹಾಡುಗಾರಿಕೆಯ ಕೈಪಿಡಿಗಳಾಗಿವೆ. ಇವು ಯೋನಿಗಳ ಅಕ್ಷರಗಳನ್ನು ರಾಗಾನುಸಾರ ಎಳೆಯುವುದು. ಪುನರಾವೃತ್ತಿ ಮಾಡುವುದು. 'ಹೋಯೀ', 'ಹೋಈ', 'ಸುವಾ' ಇತ್ಯಾದಿ ಪ್ರಕ್ಷೇಪಗಳನ್ನು ಅಥವಾ ಸ್ತೋಭಗಳನ್ನು ಸೇರಿಸುವುದು. ಸುಪ್ತಸ್ವರಗಳನ್ನು ಬೇರೆ ಬೇರೆಯಾಗಿ ಗುರುತಿಸುವುದು–ಇವು ಸಾಮವೇದದ ಗಾನಪ್ರಕಾರದಲ್ಲಿ ಅಂತರ್ಗತವಾಗಿದೆ. 'ಬೃಹತ್', 'ರಥಂತರ' ಮುಂತಾದ ಸಾಮಗಾನಪ್ರಭೇದಗಳು ಋಗ್ವೇದದಷ್ಟೇ ಪ್ರಾಚೀನವಾದವು. ಸಾಮಗಾನದಲ್ಲಿ ಅದ್ಭುತಶಕ್ತಿಯಿದೆ ಎಂದು ನಂಬಲಾಗುತ್ತದೆ. ಇಲ್ಲಿಯ ಮಂತ್ರಗಳಲ್ಲಿಯೂ ಸ್ತೋತ್ರಗಳಂತೆ ಅಭಿಚಾರಕರ್ಮಪರ ಋಕ್ಕುಗಳನ್ನೂ ಕಾಣಬಹುದು. 'ಭಾರತೀಯ ಸಂಗೀತದ ಮೂಲಸ್ತೋತ್ರ ಸಾಮವೇದದಲ್ಲಿದೆ ಎಂಬುದು ಅದರ ವೈಶಿಷ್ಟ್ಯ.

ಸಾಮಗಾನಗಳಲ್ಲಿ ಮುಖ್ಯವಾಗಿ ನಾಲ್ಕುಭಾಗಗಳನ್ನು ಮಾಡಿದ್ದಾರೆ: (1) ಗ್ರಾಮಗೇಯ ಗಾನ ಅಥವಾ ವೇಯಗಾನ, (2) ಅರಣ್ಯಕಗಾನ, (3) ಊಹಗಾನ ಮತ್ತು (4) ಊಪಗಾನ. ಮೊದಲ ಎರಡು ಪ್ರಕೃತಿಗಾನಗಳಾದರೆ ಕಡೆಯ ಎರಡು ವಿಕೃತಿಗಳು.

4. ಅಥರ್ವವೇದಸಂಹಿತೆ: ಅಥರ್ವವೇದದಲ್ಲಿ ಹೆಚ್ಚಾಗಿ ಅಭಿಚಾರ, ಮೋಹನ ಮುಂತಾದ ಮಂತ್ರಗಳಿರುವುದರಿಂದ ಅದನ್ನು ಜನತೆಯ ವೇದವೆನ್ನಬಹುದು. 'ಅಥರ್ವನ್' ಶಬ್ದ ಪುರೋಹಿತ ಎಂಬರ್ಥದಲ್ಲಿ ಇರಾನಿನ ಅವೆಸ್ತಾದಲ್ಲಿಯೂ ಕಾಣಬರುತ್ತದೆ. ಅಗ್ನಿಪೂಜಕ ಮಂತ್ರವಾದಿಗಳೇ ಅಥರ್ವಾಂಗೀರಸರಾಗಿದ್ದಿರಬೇಕು. ಇಲ್ಲಿಯೂ ಋಗ್ವೇದದ್ದೇ ಭಾಷೆ ಮತ್ತು ಛಂದಸ್ಸು. ಆದರೆ ಅಥರ್ವಣ ಮಂತ್ರಗಳಲ್ಲಿ ರೋಗಪರಿಹಾರಕ್ಕಾಗಿರುವ ಮಂತ್ರಗಳು ಸೇರುತ್ತವೆ; ಆಂಗೀರಸಮಂತ್ರಗಳಲ್ಲಿ ಶತ್ರುಗಳ ಹಾಗೂ ದುಷ್ಟರ, ಪ್ರೇತ ಪಿಶಾಚಾದಿಗಳ ಉಚ್ಚಾಟನೆಗೆ ಹಾಗೂ ನಾಶಕ್ಕೆ ಬಳಸುವ ಮಂತ್ರಗಳಿರುತ್ತವೆ. ಅವೆರಡನ್ನೂ ಕೂಡಿಸಿ ಅಥರ್ವಾಂಗೀರಸವೆಂದೂ ಇದನ್ನು ಕರೆಯುವುದುಂಟು. ಅಥರ್ವವೇದವೆಂಬುದು ಅಥರ್ವಾಂಗೀರಸವೇದವೆಂಬುದರ ಸಂಕ್ಷಿಪ್ತರೂಪ. ಇದರಲ್ಲಿ 760 ಸೂಕ್ತಗಳೂ, ಸುಮಾರು 6000 ಋಕ್ಕುಗಳೂ ಇವೆ. ಇವುಗಳಲ್ಲಿ ಏಳನೆಯ ಒಂದರಷ್ಟು ಸೂಕ್ತಗಳು ಋಗ್ವೇದದಿಂದ ತೆಗೆದುಕೊಂಡವೇ ಆಗಿವೆ. ಇದರಲ್ಲಿ ಒಟ್ಟು 20 ಕಾಂಡಗಳು, 48 ಪ್ರಪಾಠಗಳು. ಅದರಲ್ಲಿ ಎರಡು ಶಾಖೆಗಳು ಉಪಲಬ್ಧವಿದೆ (1) ಶೌನಕ ಮತ್ತು (2) ಪೈಪ್ಪಲಾದ.

खलः सत्क्रियमाणोऽपि ददाति कलहं सताम् ।
दुग्धधौतोऽपि किं याति वायसः कलहंसताम् ॥

ದುಷ್ಟ ವ್ಯಕ್ತಿಯನ್ನು ಆದರಿಸುತ್ತಿದ್ದರೂ ಆತ
ಸಜ್ಜನನೊಂದಿಗೆ ಜಗಳವನ್ನೇ ಮಾಡುತ್ತಾನೆ. ಹಾನಿಂದ
ತೊಳೆದರೂ ಕೂಡಾ ಕಾಗೆಯು ಬಿಳಿಯಾದ
ಹಂಸವಾಗಲು ಸಾಧ್ಯವೇ?

ಸಂಸ್ಕೃತದಲ್ಲಿ ಗಣಿತಶಾಸ್ತ್ರ

–ಪವಿತ್ರಾ ನರಸಿಂಹ ಭಟ್
I B.Sc. 'A'

ಪ್ರಾಚೀನ ಕಾಲದಲ್ಲಿ ಸಂಸ್ಕೃತವು ವೈಜ್ಞಾನಿಕ ಚಿಂತನೆಗಳ ಪರಿಣಾಮಕಾರಿಯಾದ ಮಾಧ್ಯಮವಾಗಿತ್ತು. ಭಾರತದಲ್ಲಿ ಗಣಿತಶಾಸ್ತ್ರಕ್ಕೆ ದೀರ್ಘವಾದ ಹಾಗೂ ಶ್ರೇಷ್ಠಹಂತದ ಇತಿಹಾಸವಿದೆ. ಸಾಮಾನ್ಯವಾಗಿ ಇವುಗಳು ಸಂಕ್ಷಿಪ್ತ ಗದ್ಯ ಹಾಗೂ ಪ್ರಾಸಯುಕ್ತ ಪದ್ಯಗಳನ್ನೊಳಗೊಂಡ ಸಂಸ್ಕೃತ ಶ್ಲೋಕಗಳಲ್ಲಿ ಕಂಡುಬರುತ್ತದೆ. ಈ ಕೆಳಗೆ ಕೆಲವು ಉದಾಹರಣೆಗಳನ್ನು ನೀಡಲಾಗಿದೆ.

1. ಪೈಥಾಗೊರಸ್‌ನ ಪ್ರಮೇಯವು ಎಲ್ಲ ಶುಲ್ಬ ಸೂತ್ರಗಳಲ್ಲಿ ವಿವರಿಸಲ್ಪಟ್ಟಿದೆ. ಬೌದ್ಧಾಯನನು (ಕ್ರಿ.ಪೂ. 600–500) ನೀಡಿರುವ ನಿರೂಪಣೆ ಹೀಗಿದೆ:

दीर्घचतुरस्रस्याक्ष्णयारज्जुः पार्श्वमानी तिर्यङ्मानी च ।
यत्प्रथग्भूते कुरूतस्तुद्ढभयम् करोति ॥

ಒಂದು ಚತುರ್ಭುಜಾಕೃತಿಯ ಕರ್ಣರೇಖೆಯು ಎರಡು ಭುಜಗಳಿಂದ ತಾನೇ ಎರಡು ಭಾಗಗಳನ್ನು ಸೃಷ್ಟಿಸುತ್ತದೆ.

2. ವೃತ್ತದ ಜ್ಯಾಮಿತಿಯನ್ನು ವಿವರಿಸುವಾಗ ಮೊದಲನೆಯ ಆರ್ಯಭಟನು (ಕ್ರಿ.ಶ. 5ನೆಯ ಶತಮಾನ) ಪೈ ಮೌಲ್ಯವನ್ನು ಈ ಶ್ಲೋಕದಲ್ಲಿ ಕೊಟ್ಟಿದ್ದಾನೆ. ಅದು ನಾಲ್ಕು ದಶಮಾಂಶದವರೆಗೆ ಸರಿಯಾಗುವುದು ಗಮನಾರ್ಹ.

चतुरधिकम् शतमष्टगुणम् द्विषष्टिस्तया सहस्राणाम् ।
अयुतद्वयविष्कम्भस्यासन्नो वृत्तपरिणाहः ॥

2000 ಅಡಿಗಳ ವ್ಯಾಸವನ್ನುಳ್ಳ ವೃತ್ತದ ಸುತ್ತಳತೆಯು ಸುಮಾರಾಗಿ ನೂರಕ್ಕೆ ನಾಲ್ಕನ್ನು ಸೇರಿಸಿ, ಎಂಟರಿಂದ ಗುಣಿಸಿ, 62,000 ಸೇರಿಸಿದರೆ ಆಗುವಷ್ಟು ಆಗುತ್ತದೆ. ಇದರಿಂದ ಪೈ ಸುತ್ತಳತೆ/ವ್ಯಾಸ

= 62.000/20.000

= 3.14259265358979324

3. ಕರಣಿಗಳು: ಕಾತ್ಯಾಯನ ಪ್ರಕಾರ (ಕ್ರಿ.ಪೂ. 400–300)

करणीम् ततीयेन वर्धयेत्तच्च ।
स्वचतुर्थनात्मचतुस्त्रिंशोनेन सविशेषः । इति विशेषः ॥

ಒಂದು ಮೊತ್ತವನ್ನು ಅದರ ಮೂರನೆಯ ಒಂದು ಭಾಗದಿಂದ ಹೆಚ್ಚಿಸಿರಿ; ಈ ಮೂರನೆಯಯದರ ನಾಲ್ಕನೆಯ ಒಂದು ಭಾಗವನ್ನು ಸೇರಿಸಿ; ಆ ನಾಲ್ಕನೆಯ ಭಾಗದ ಮೂವತ್ತನಾಲ್ಕನೆಯ ಒಂದು ಭಾಗವನ್ನು ಕಳೆಯಿರಿ. ಈ ಹೆಚ್ಚಿದ ಮೊತ್ತದ ಹೆಸರೇ ಸವಿಶೇಷ.

4. ಭಾರತದಲ್ಲಿ ಗಣಿತಶಾಸ್ತ್ರದ ನಿಯಮಗಳು ಪ್ರಮಾಣವಿಲ್ಲದವುಗಳಾಗಿದ್ದವು ಎಂಬ ತಪ್ಪು ಕಲ್ಪನೆ ಉಂಟಾಗಬಹುದು. ಗಣಿತಶಾಸ್ತ್ರದ ಅನೇಕ ಗ್ರಂಥಗಳಲ್ಲಿ ಪ್ರಮೇಯಗಳನ್ನು ನೀಡಿರುವುದಲ್ಲದೆ, ಅವುಗಳನ್ನು ಯಾವರೀತಿ ಸಾಧಿಸಿದರೂ ಎನ್ನುವುದನ್ನೂ ಪ್ರಸ್ತುತಪಡಿಸಲಾಗಿದೆ. ಉದಾಹರಣೆಗೆ ಬ್ರಹ್ಮಗುಪ್ತನ ತಿಮ್ಮ (ಭಾವನಾ). ಇದರಲ್ಲಿ ಎರಡನೆಯ ಹಂತದಲ್ಲಿ (ವರ್ಗ ಪ್ರಕೃತಿ) ಅನಿರ್ದಿಷ್ಟ ಸಮೀಕರಣವಿರುವುದು ಕಾಣಬರುತ್ತದೆ. ಇದು $Nx^2 \pm k = y^2$. ಇದರಲ್ಲಿ ಕೊಎಫೀಶಿಯೆಂಟ್ N ಎಂಬುದು ಗುಣಕ ಪ್ರಕೃತಿ, x ಅಂದರೆ ಕನಿಷ್ಠ ಪದ ಹ್ರಸ್ವ ಮೂಲ ಅಥವಾ ಆದ್ಯ ಮೂಲ; y=ಜ್ಯೇಷ್ಠ ಪದ, ಜ್ಯೇಷ್ಠ ಮೂಲ ಅಥವಾ ಅನ್ಯ ಮೂಲ; k=ಕ್ಷೇಪ, ಪ್ರಕ್ಷೇಪ ಅಥವಾ (ಪಕ್ಷೇಪಕ) ಇದನ್ನು ಹೀಗೆ ಹೇಳಿದೆ.

मूलं द्विधेष्टवर्गात् गुणको गुणादिष्टयुतविहीनच्च ।
आद्यवधो गुणकगुणः सहान्त्यघातेन कृतमस्त्यम् ॥

लालयेत्पञ्च वर्षाणि दशवर्षाणि ताडयेत् ।
प्राप्ते तु षोडशे वर्षे पुत्रं मित्रवदाचरेत् ॥

ಮಗನನ್ನು ಐದು ವರ್ಷಗಳ ತನಕ ಮುದ್ದಿಸಬೇಕು.
ಆಮೇಲೆ ಹತ್ತು ವರ್ಷಗಳ ತನಕ ಹೊಡೆಯಬೇಕು.
ಹದಿನಾರನೆ ವರ್ಷ ತುಂಬಿದಾಗ ಅವನನ್ನು
ಗೆಳೆಯನಂತೆ ನೋಡಬೇಕು.

ಸಮುದ್ರ ಮಂಥನ

–ಪೂರ್ಣಿಮಾ ಎಲ್. ಭಟ್
I B.Com.

ಸಮುದ್ರ ಮಂಥನಂ–ಮಂಥನಂ ಎಂದರೆ ಸಂಸ್ಕೃತದಲ್ಲಿ ಮಂಥನ ಅಥವಾ ಕಡಿಯುವುದು ಎಂದರ್ಥ. ಸಾಗರ ಮಂಥನ–ಸಾಗರ ಸಮುದ್ರಕ್ಕೆ ಇನ್ನೊಂದು ಹೆಸರು.

ಒಮ್ಮೆ ದೂರ್ವಾಸ ಮುನಿ ಇಂದ್ರನನ್ನು ಕಾಣಲು ಅಮರಾವತಿಯ ಕಡೆಗೆ ಹೊರಟಾಗ, ಎದುರಿಗೆ ಬಂದ ಇಂದ್ರ ಮುನಿಯನ್ನು ಕಂಡೂ ಕಾಣದಂತೆ ಇದ್ದುದನ್ನು ಗಮನಿಸಿ ಸಿಟ್ಟಿಗೆದ್ದ ಮುನಿ ಆತನ ಸಕಲ ಐಶ್ವರ್ಯವೂ ನಾಶವಾಗಲೆಂದು ಶಾಪಕೊಟ್ಟ. ಇಂಥಹಾ ಸಮಯವನ್ನೇ ಕಾಯುತ್ತಿದ್ದ ದೈತ್ಯರು ಇಂದ್ರಲೋಕವನ್ನು ನಾಶಗೊಳಿಸಿ ದೇವತೆಗಳಿಗೆಲ್ಲ ತೊಂದರೆ ಕೊಡಲು ಪ್ರಾರಂಭಿಸಿದರು. ಇದರಿಂದ ನೊಂದ ದೇವತೆಗಳು ವಿಷ್ಣುವನ್ನು ಮೊರೆ ಹೊಕ್ಕರು. ಈಗ ವಿಷ್ಣುವು ದೇವತೆಗಳನ್ನೆಲ್ಲ ಸಮಾಧಾನ ಪಡಿಸಿ ರಾಕ್ಷಸರೊಂದಿಗೆ ಸಮುದ್ರ ಮಂಥನ ಮಾಡಿದಲ್ಲಿ ಎಲ್ಲಾ ಒಳಿತಾಗುವುದೆಂದು ಹೇಳುತ್ತಾನೆ. ಅದರಂತೆ ದೇವತೆಗಳು ಉಪಾಯದಿಂದ ದೈತ್ಯರನ್ನು ಒಲಿಸಿಕೊಂಡು ಪಾಲ್ಗಡಲನ್ನು ಕಡಿದು ಅಮೃತವನ್ನು ಪಡೆದು ಇಬ್ಬರೂ ಸುಖವಾಗಿ ಬಾಳುವ ಯೋಜನೆಯನ್ನು ಹಾಕಿದರು. ಸ್ವಭಾವದಿಂದ ಅಲ್ಪತೃಪ್ತರಾದ ದಾನವರು ದೇವತೆಗಳ ಮಾತನ್ನು ನಂಬಿ ಮಂದರ ಪರ್ವತವನ್ನು ಕಡಗೋಲಾಗಿಯೂ, ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿಕೊಂಡು ಅಮೃತಕ್ಕಾಗಿ ಸಮುದ್ರವನ್ನು ಮಥಿಸಲು ಪ್ರಾರಂಭಿಸಿದರು. ಕುಸಿಯುತ್ತಿದ್ದ ಪರ್ವತವನ್ನು ಕೂರ್ಮಾವತಾರದಿಂದ ವಿಷ್ಣುವು ತನ್ನ ಬೆನ್ನ ಮೇಲೆ ಹೊತ್ತವನಾಗಿ ಮಂಥನ ಸುಸೂತ್ರವಾಗಿ ನಡೆಯಿತು. ಕಡೆತ ಮುಂದುವರಿಯುತ್ತಿದ್ದಂತೆ ಕಾಮಧೇನು, ಉಷ್ಚೈಃಶ್ರವಸ್ಸು, ಐರಾವತ, ಕೌಸ್ತುಭಮಣಿ, ಚಂದ್ರ, ಲಕ್ಷ್ಮೀ, ಅಪ್ಸರಾ ಸ್ತ್ರೀಯರು, ಪಾರಿಜಾತ ವೃಕ್ಷ, ಸುರ, ಶಂಖ, ಹರಿಧನುಸ್ಸು, ಮೊದಲಾದ ರತ್ನಗಳು ಹೊರಕಿದವು. ಅಮೃತವು ದೊರಕುವುದಕ್ಕೂ ಮೊದಲು ಘೋರವಾದ ಹಾಲಾಹಲ ವಿಷವು ಹೊರಬಂದಿತು. ಅದರಿಂದ ಭಯಭೀತರಾಗ ದೇವ–ದಾನವರು ವಿಷ್ಣುವಿನ ಮೊರೆ ಹೊಕ್ಕರು. ವಿಷ್ಣು ಶಿವನನ್ನು ಪ್ರಾರ್ಥಿಸುವಂತೆ ಹೇಳಿದನು. ಶಿವನು ಆ ವಿಷವನ್ನು ಕುಡಿದು ವಿಷಕಂಠನಾದನು. ಅನಂತರ ಮಂಥನವನ್ನು ಮುಂದುವರಿಸಿದಾಗ ಧನ್ವಂತರಿಯು ಅಮೃತವನ್ನು ಹಿಡಿದು ತಂದನು. ಧನ್ವಂತರಿಯ ಕೈಲಿದ್ದ ಅಮೃತಕಲಶವನ್ನು ದಾನವರು ಅಪಹರಿಸಿದರು. ಆದರೆ ವಿಷ್ಣುವು ಮೋಹಿನಿ ರೂಪದಿಂದ ಅಮೃತವನ್ನು ಪಡೆದು ದೇವತೆಗಳಿಗೆ ಬಡಿಸಿದಳು. ಅಂದಿನಿಂದ ದೇವತೆಗಳು ಅಮೃತವನ್ನು ಪಡೆದರು.

अर्था गृहे निवर्तन्ते श्मशाने चैव बान्धवाः ।
सुकृतं दुष्कृतं चापि गच्छन्तमनुगच्छति ॥

ಸತ್ತ ಮೇಲೆ ಸಂಪತ್ತುಗಳು ಮನೆಯಲ್ಲಿಯೇ ಕೈ ಬಿಟ್ಟು ಹೊರಟುಹೋದರೆ, ಬಾಂಧವರು ಸ್ಮಶಾನದಲ್ಲಿ ಕೈಬಿಟ್ಟು ಹೊರಟು ಹೋಗುತ್ತಾರೆ. ಕೇವಲ ಆತ ಮಾಡಿದ ಸತ್ಕಾರ್ಯ ಮತ್ತು ದುಷ್ಕಾರ್ಯ ಮಾತ್ರ ಅರ್ಥಾತ್ ಅವುಗಳ ಫಲವಾದ ಪಾಪ– ಪುಣ್ಯ ಮಾತ್ರ ಅವನನ್ನು ಹಿಂಬಾಲಿಸುತ್ತವೆ.

वेदाङ्गानि

–निर्मला
I B.Com. 'B1' (Voc)

ವೇದಾಂಗಗಳು: ವೇದಗಳು ಅಪೌರುಷೇಯವಾದರೆ ವೇದಾಧ್ಯಯನಕ್ಕೆ ಉಪಕಾರಗಳಾದ ಋಷಿಗಳಿಂದಲೇ ರಚಿತವಾಗಿರುತ್ತವೆ. ಇವೆಲ್ಲ ಸಾಮಾನ್ಯವಾಗಿ "ಸೂತ್ರ" ಶೈಲಿಯಲ್ಲಿರುತ್ತವೆ. अल्पाक्षरमसंन्दिग्धं सारवद्विश्वतोमुखम् । अस्तोभमनवद्यं च सूत्रं सूत्रविदो विदुः ।

ಎಂಬುದು ಸೂತ್ರಲಕ್ಷಣ. शिक्षा व्याकरणं छन्दः निरुक्तं ज्योतिषं तथा । कल्पश्चेति षडङ्गानि ॥ ಎಂದಂತೆ ಈ ಆರೂ ವೇದಾಂಗಗಳೆನಿಸುತ್ತವೆ. ಇವಕ್ಕೆಲ್ಲ ವೇದಸಾಹಿತ್ಯದ ಸಂಬಂಧ ನೇರವಾಗಿಯೇ ಇರುತ್ತದೆ. ಬ್ರಾಹ್ಮಣ ಗ್ರಂಥಗಳಲ್ಲಿ ಅಂಕುರರೂಪದಿಂದ ಕಾಣುವ ಉಚ್ಚಾರಣೆ, ನಿರುಕ್ತಿ, ವ್ಯಾಕರಣ, ಛಂದಸ್ಸು, ಜ್ಯೋತಿಷ್ಯ ಈ ಕುರಿತ ವಿಚಾರಗಳೇ ವ್ಯವಸ್ಥಿತ ರೀತಿಯಲ್ಲಿ ಸ್ವತಂತ್ರ ವೇದಾಂಗಗಳಾಗಿ ಉತ್ತರಕಾರದಲ್ಲಿ ಜನನಿಯಂತೆ ತೋರುತ್ತದೆ.

1. ಶಿಕ್ಷಾ: ವೇದದ ಗುರಿಯು ಸತ್ಯಸಾಕ್ಷತ್ಕಾರವಾಗಿದ್ದು ಶಿಕ್ಷಾ ಎಂಬುದು ಅದಕ್ಕೊಂದು ಮಾರ್ಗವಾಗಿರಬಹುದಾದ್ದರಿಂದ ಉಚ್ಚಾರಣೆಗೆ ಸಂಬಂಧಿಸಿದ ಈ ಶಾಸ್ತ್ರವು ವೇದಾಂಗವಾಗಿ ಪರಿಗಣಿತವಾಯಿತು. ಉದಾತ್ತಾನುದಾತ್ತ ಸ್ವರಿತಗಳಿಂದ ವೇದದಲ್ಲಿ ಅರ್ಥವ್ಯತ್ಯಾಸವಾಗುವುದು ಪ್ರಸಿದ್ಧವಾಗಿಯೇ ಇದೆ. ಮಹಾಭಾಷ್ಯವೇ ಮೊದಲಾದ ಗ್ರಂಥಗಳಲ್ಲಿ ಇಂದ್ರಶತ್ರು ಎಂಬುವನ ವೃತ್ತಾಂತದಲ್ಲಿ ಸ್ವರವು ಹೇಗೆ ಅರ್ಥಸಂಬಂಧಿಯಾಗಿ ಉದ್ದೇಶಕ್ಕೆ ವಿರುದ್ಧವಾದ ಪರಿಣಾಮಕ್ಕೆ ಕಾರಣವಾಯಿತು ಎಂಬ ಒಂದು ಕಥೆಯನ್ನು ಉದ್ಧರಿಸಿರುವುದು ಈ ಅಂಶಕ್ಕೆ ಪುಷ್ಟಿಯನ್ನು ಕೊಡುವಂತಹುದು. ವೇದಪಾಠವು ಉಚ್ಚಾರಣ ಶುದ್ಧಿಯನ್ನೂ, ಸ್ವರಶುದ್ಧಿಯನ್ನೂ ಅಪೇಕ್ಷಿಸುತ್ತದೆ. मन्त्रो हीनः स्वरतो वर्णतो वा मिथ्याप्रयुक्तो न तमर्थमाह स वाग्वज्रो यजमानं हिनस्ति ಎಂಬಂತೆ ಅಶುದ್ಧಿಯಿಂದ ಪಾಪವೂ ಕ್ಲೇಶವೂ ಉಂಟಾಗಬಹುದೆಂಬ ಭೀತಿಯು ಕಾರಣ ಶುದ್ಧವರ್ಣೋಚ್ಚಾರಣೆ ಹಾಗೂ ಸ್ವರಪ್ರಕ್ರಿಯೆಯನ್ನು ಕಲಿಸುವ ಸೂತ್ರಗ್ರಂಥಗಳು ಹುಟ್ಟಿದವು. ಮೊದಮೊದಲು ಒದೊಂದು ವೇದ ಶಾಖೆಯಲ್ಲಿಯೂ ಈ ಬಗೆಗೆ ಕೃತಿರಚನೆಯ ಪ್ರಯತ್ನಗಳು ನಡೆದುದರ ಫಲವಾಗಿ "ಪ್ರಾತಿಶಾಖ್ಯ" ಗ್ರಂಥಗಳು ಬಂದವು. ಈಗ ಋಗ್ವೇದಕ್ಕೆ ಶೌನಕನ ಶ್ಲೋಕಬದ್ಧ ಪ್ರಾತಿಶಾಖ್ಯ ಒಂದು; 'ತೈತ್ತಿರೀಯ ಪ್ರಾತಿಶಾಖ್ಯಸೂತ್ರ'; ಕಾತ್ಯಾಯನನು ಬರೆದನೆನ್ನುವ 'ವಾಜಸನೀಯ ಪ್ರಾತಿಶಾಖ್ಯಸೂತ್ರ'; ಶೌನಕನದೆನ್ನಲಾಗುವ 'ಅಥರ್ವವೇದಪ್ರಾತಿಶಾಖ್ಯಸೂತ್ರ'ಗಳನ್ನು ವಿವರಿಸುತ್ತದೆ; ಸಾಮದ ಉತ್ತರಗಾನದ ಬಗೆಗೆ 'ಪುಷ್ಪಸೂತ್ರ'ವು ತಿಳಿವಳಿಕೆ ಕೊಡುತ್ತದೆ. ವೈದಿಕ ಧ್ವನಿಶಾಸ್ತ್ರದಲ್ಲಿ ಉಚ್ಚಾರ, ಸವರ, ಸಂಧಿರೂಪಗಳು ಇತ್ಯಾದಿಗಳನ್ನು ಇವೆಲ್ಲ ನಿರೂಪಿಸುತ್ತವೆ. ಭಾಷಾಶಾಸ್ತ್ರದ ಆದ್ಯ ರಚನೆಗಳೇ ಇವೆನ್ನಬಹುದು. ಸಂಹಿತಾಪಾಠಾದಿಗಳು ಅಚ್ಚಳಿಯದಂತೆ ಇಂದಿಗೂ ಉಳಿಯಲು ಇವುಗಳಿಂದ ಹೆಚ್ಚಿನ ಸಹಾಯವಾಗಿದೆ. ಇವಕ್ಕಿಂತ ಸ್ವಲ್ಪ ಮುಂದಿನ ಕಾಲದ ರಚನೆಗಳೇ "ಶಿಕ್ಷಾ" ಎಂಬ ಹೆಸರಿನವು. ಭರದ್ವಾಜ, ವ್ಯಾಸ, ವಸಿಷ್ಠ, ಯಾಜ್ಞವಲ್ಕ್ಯ ಮುಂತಾದವರ ರಚನೆಗಳೆನ್ನುವ

ಶಿಕ್ಷಾಗ್ರಂಥಗಳು ಉಪಲಬ್ಧವಿವೆ. ಅವುಗಳಲ್ಲೆಲ್ಲ ತೈತ್ತಿರೀಯಾ ಪ್ರಾತಿಶಾಖ್ಯಕ್ಕೆ ಸಂಬಂಧಿಸಿರುವ 'ವ್ಯಾಸಶಿಕ್ಷಾ' ಗ್ರಂಥವೇ ಪ್ರಾಚೀನವಾದುದು. 'ಪಾಣಿನೀಯ ಶಿಕ್ಷಾ'ದಲ್ಲಿ ಪ್ರಾಚೀನ ವಿಷಯಸಂಗ್ರಹವಿರಬಹುದಾದರೂ ಅದರ ರಚನೆ ಅರ್ವಾಚೀನವೆನಿಸುತ್ತದೆ.

2. ಕಲ್ಪ: ಬ್ರಾಹ್ಮಣ–ಅರಣ್ಯಕಗಳಿಗೆ ನೇರವಾಗಿ ಸಂಬಂಧಿಸುವ ಕಲ್ಪಸೂತ್ರಗಳು ಸೂತ್ರಕೃತಿಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದವು. ಅವುಗಳ ವಿಷಯಾನುಸಾರ ಅವನ್ನು ಶ್ರೌತಸೂತ್ರ ಮತ್ತು ಗೃಹ್ಯಸೂತ್ರಗಳೆಂದು ವಿಂಗಡಿಸಲಾಗಿದೆ. ಮೊದಲನೆಯದು ಬ್ರಾಹ್ಮಣೋಕ್ಷ ಮತ್ತು ಅನೇಕ ಪುರೋಹಿತರ ಅಗತ್ಯವಿರುವ ಯಜ್ಞವಿಧಿಗಳನ್ನು ಕುರಿತಿದ್ದರೆ, ಎರಡನೆಯವು ಗೃಹ್ಯಯಜ್ಞಗಳನ್ನೂ, ಕರ್ಮಗಳನ್ನೂ ಪ್ರತಿಪಾದಿಸುತ್ತವೆ. ಮೊದಲನೆಯವು 'ಶ್ರೌತ' ಸೂತ್ರಗಳಾದರೆ, ಎರಡನೆಯವನ್ನು 'ಸ್ಮಾರ್ತ'ಸೂತ್ರಗಳೆನ್ನುವುದೂ ಉಂಟು. ಶ್ರೌತಸೂತ್ರಗಳಲ್ಲಿ ಮೂರು ಅಗ್ನಿಗಳ ಆಧಾನ. ದರ್ಶಪೂರ್ಣಮಾಸಯಾಗಗಳು, ಪಶುಯಜ್ಞಗಳು, ಸೋಮಯಾಗ ಮತ್ತು ಅದರ ವಿಕೃತಿಗಳು ಪ್ರತಿಪಾದ್ಯ ವಿಷಯಗಳು. ಧರ್ಮದ ಇತಿಹಾಸವನ್ನರಿಯಲು ಮತ್ತು ಯಜ್ಞದ ಸ್ವರೂಪವನ್ನರಿಯಲು ಶ್ರೌತಸೂತ್ರಗಳು ಅವಶ್ಯವಾಗುತ್ತವೆ. ವೇದಶಾಖೆಗಳಲ್ಲಿ ಭೋಧಾಯನ ಮತ್ತು ಆಪಸ್ತಂಭ ಯಜುಶ್ಶಾಖೆಗಳಿಗೆ ಮಾತ್ರ ಈ ನಾಲ್ಕು ವರ್ಗದ ಕಲ್ಪಸೂತ್ರಗಳಿವೆ. ಇದಕ್ಕೆ ತುಂಬಾ ಸಮೀಪವರ್ತಿಯಾಗಿವೆ ಭಾರದ್ವಾಜ ಮತ್ತು ಹಿರಣ್ಯಕೇಶಿಗಳ ಸೂತ್ರಗಳು. ಮಾನವಶಾಖೆಯ ಸೂತ್ರಗಳೂ, ಕಾಠಗೃಹ ಸೂತ್ರವೂ ಮೈತ್ರಾಯಿಣೀ ಸಂಹಿತೆಗೆ ಸೇರಿದವು. ಶುಕ್ಲಯಜುರ್ವೇದಕ್ಕೆ ಸೇರಿದಂತೆ ಕಾತ್ಯಾಯನ ಶ್ರೌತ ಹಾಗೂ ಶುಲ್ಬಸೂತ್ರಗಳೂ; ಸಾಮವೇದಕ್ಕೆ ಸೇರಿದಂತೆ ಲಾಟ್ಯಾಯನ, ದ್ರಾಹ್ಯಾಯಣ ಮತ್ತು ಜೈಮಿನೀಯ ಶ್ರೌರಾದಿ ಸೂತ್ರಗಳೂ, ಗೋಭಿಲ ಮತ್ತು ಖಾದಿರರ ಗೃಹ್ಯಸೂತ್ರಗಳೂ; ಅಥರ್ವವೇದಕ್ಕೆ ಸೇರಿದಂತೆ ವೈತಾನ ಶ್ರೌತಸೂತ್ರ ಮತ್ತು ಕೌಶಿಕಸೂತ್ರಗಳೂ ದೊರೆಯುತ್ತವೆ. ವೈತಾನಸೂತ್ರವು ಬಹಳ ಅರ್ವಾಚೀನವೆನ್ನುತ್ತಾರೆ. ಮಾನವ, ಶೌನಕ, ಪೈಪ್ಪಲಾದ, ಕಾತ್ಯಾಯನ, ಗೌತಮರ ಶ್ರಾದ್ಧಕಲ್ಪಗಳೂ, ಭೋಧಾಯನ, ಹಿರಣ್ಯಕೇಶಿ, ಗೌತಮರ ಪಿತೃಮೇಧ ಸೂತ್ರಗಳೂ ದೊರೆಯುತ್ತವೆ. ವೇದೋತ್ತರ ಹಾಗೂ ಸೂಕ್ತೋತ್ತರ ಕಾಲೀನ ಅನುಬಂಧ ಗ್ರಂಥಗಳನ್ನು 'ಪರಿಶಿಷ್ಟ'ಗಳೆನ್ನುವರು. ಇವುಗಳಲ್ಲಿ 'ಗೃಹ್ಯಸಂಗ್ರಹ–ಪರಿಶಿಷ್ಟ' ಮತ್ತು ಗೋಭಿಲ ಗೃಹ್ಯಸೂತ್ರಕ್ಕೆ ಅನುಬಂಧವಾದ 'ಕರ್ಮಪ್ರದೀಪ' ಗಮನಾರ್ಹ. ಹಾಗೆಯೇ ಅಥರ್ವವೇದ ಪರಿಶಿಷ್ಟಗಳೂ ಮಂತ್ರಕರ್ಮಾದಿಗಳ ಬಗೆಗೆ ಬೆಳಕು ಬೀರುವುದರಿಂದ ಗಮನಾರ್ಹವಿದೆ. 'ಪ್ರಾಯಶ್ಚಿತ್ತ ಸೂತ್ರ'ವೆಂಬುದು ಒಂದು ಪ್ರಾಚೀನ 'ಪರಿಶಿಷ್ಟ'ವಾಗಿದೆ.

3. ವ್ಯಾಕರಣ: ಈ ವೇದಾಂಗವನ್ನು ಪ್ರತಿನಿಧಿಸಲು ನಮಗೆ ದೊರೆತಿರುವ ಒಂದೇ ಗ್ರಂಥವೆಂದರೆ ಪಾಣಿನಿಯ ಅಷ್ಟಾಧ್ಯಾಯೀ. ಇದು ಪ್ರಾಚೀನಸೂತ್ರಕಾಲಕ್ಕಿಂತ ಸ್ವಲ್ಪ ಈಚಿನದು. ಪಾಣಿನಿಯ ಮುಖ್ಯಪ್ರತಿಪಾದನೆ ಲೌಕಿಕ ಸಂಸ್ಕೃತ ಭಾಷೆಯಾದ್ದರಿಂದ ಅಲ್ಲಿ ಆರ್ಷವೇದಭಾಷೆಯ ಪ್ರತಿಪಾದನೆ ಆಂಶಿಕವಾಗಿ ಮಾತ್ರ ಬಂದಿದೆ. ಇದಕ್ಕಿಂತ ಪ್ರಾಚೀನವಾದ ವ್ಯಾಕರಣಗ್ರಂಥಗಳು ಈಗ ಉಪಲಬ್ಧವಿಲ್ಲ. ಆದರೆ ಕ್ರಿಯಾಪದಗಳಿಂದ ನಾಮಪದಗಳನ್ನು ನಿಷ್ಪಾದಿಸುವ ; ಉಣಾದಿಸೂತ್ರ'ಗಳೂ ಸ್ವರವಿವೇಚನೆಯನ್ನು ಒಳಗೊಳ್ಳುವ 'ಫಿಟ್'ಸೂತ್ರಗಳೂ ಪಾಣಿನಿಪೂರ್ವದ ವ್ಯಾಕರಣಗಳ

ವಿಷಯವನ್ನು ಪ್ರತಿನಿಧಿಸುತ್ತವೆ. 'ಉಣಾದಿಸೂತ್ರ'ಗಳಲ್ಲಿ ನಿಷ್ಪಾದಿಸಿರುವ ಹೆಚ್ಚಿನವು ವೈದಿಕವಾಗಿದೆ. ಆದ್ದರಿಂದ ಮೊದಲ ಕೇವಲ ವೈದಿಕ ಶಬ್ದಗಳ ವಿವರಣೆಗೆಂದೇ ಉಣಾದಿಸೂತ್ರಗಳನ್ನು ರಚಿಸಲಾಯಿತೆಂದೂ ಕಡೆಕಡೆಗೆ ಲೌಕಿಕ ಭಾಷಾಶಬ್ದಗಳನ್ನೂ ಒಳಗೊಳ್ಳುವಂತೆ ಅವನ್ನು ವಿಸ್ತರಿಸಲಾಯಿತು.

4. ನಿರುಕ್ತ: ಈ ವೇದಾಂಗದಲ್ಲಿ ನಮಗೆ ಸಿಕ್ಕಿರುವ ಒಂದೇ ಗ್ರಂಥ ಯಸ್ಕನ ನಿರುಕ್ತ ಸಂಹಿತೆಗಳ ರಚನಾಕಾಲಾನಂತರ ಅರ್ಥಜ್ಞಾನ ಕಷ್ಟತರವೆನಿಸಿದಾಗ ಕಠಿನ ವೇದಶಬ್ದಗಳ ಪಟ್ಟಿಗಳನ್ನು ಮಾಡಿಕೊಂಡಂತೆ ಕಾಣುತ್ತದೆ. ಇವಕ್ಕೆ ;ನಿಘಂಟು'ಗಳೆಂದು ಹೆಸರು. ಈ ನಿಘಂಟುಗಳ ವಿವರಣೆಯೇ ಯಾಸ್ಕನ ನಿರುಕ್ತವಾಗಿದೆ; ನಿಘಂಟುಗಳು ಯಾಸ್ಕನಿಗೆ ಪೂರ್ವದವರ ಕೃತಿಗಳು: ಇಂತಹ ವಿವರಣೆಗಳೂ ಕೆಲವು ಯಾಸ್ಕನಿಗಿಂತ ಮೊದಲೂ ಇದ್ದಿರಬಹುದು ಆದರೆ ಅವು ಸಿಕ್ಕಿಲ್ಲ.

वर्णागमो वर्णविपर्ययश्च द्वौ चापरौ वर्णविकारनाशौ ।
धातोस्तदर्थातिशयेन योगः यदुच्यते पञ्चविधं निरुक्तम् ॥

ಎಂಬಂತೆ ಶಬ್ದವ್ಯುತ್ಪತ್ತಿಯನ್ನಾಧರಿಸಿ ಶಬ್ದರೂಪಗಳನ್ನು ವಿವರಿಸಿ ಅರ್ಥ ಹೇಳುವುದನ್ನಿಲ್ಲಿ ನೋಡಬಹುದು. ನಿರುಕ್ತದಲ್ಲಿ ನೈಘಂಟುಕ–ನೈಗಮ ಮತ್ತು ದೈವತ ಎಂಬ ಮೂರು ಕಾಂಡಗಳಿವೆ. **तदिदं विद्यास्थानं व्याकरणस्य कात्स्न्र्यम् ।** ಎಂಬಂತೆ ಇದು ವ್ಯಾಕರಣಾಂಶವನ್ನೂ ಒಳಗೊಳ್ಳುತ್ತದೆ. ನಾಮಗಳೆಲ್ಲ ಧಾತುಜನ್ಯಗಳೆಂದು ಯಾಸ್ಕನ ಸಿದ್ಧಾಂತ. ಔದುಂಬರಾಯಣ, ಔಪಮನ್ಯವ, ವಾರ್ಷ್ಯಾಯಣಿ, ಗಾರ್ಗ್ಯ, ಶಾಕಪುಣಿ, ಗಾಲವ ಮುಂತಾದ ಪ್ರಾಚೀನಾಚಾರ್ಯರನ್ನು ಯಾಸ್ಕನು ಉಲ್ಲೇಖಿಸಿದ್ದಾನೆ. ನಿರುಕ್ತಕ್ಕೆ ದುರ್ಗ ಮತ್ತು ಸ್ಕಂದಸ್ವಾಮಿಗಳ ಭಾಷ್ಯವಿದೆ. ಯಾಸ್ಕನು ಪಾಣಿನಿಗಿಂತ ಪ್ರಾಚೀನವಾದುದೆಂದು ವಿದ್ವಾಂಸರು ಭಾವಿಸಿದ್ದಾರೆ.

5. ಛಂದಸ್ಸು: ಈ ವೇದಾಂಗದಲ್ಲಿ ಪಾಣಿನಿಯ ವ್ಯಾಕರಣದ ಪ್ರಯೋಗವು ಛಂದಸ್ಸಿನಲ್ಲಿ ಹೆಚ್ಚಾಗಿ ಬರುತ್ತದೆ ಆದರೂ ನಿಯಮಿತವಲ್ಲ (**बहुलं छन्दसि**) ಎಂಬಂತಹ ಹೇಳಿಕೆಗಳು ಇವೆ. ಈ ಪದವನ್ನು ಬೇರೆ ಬೇರೆ ರೀತಿಗಳಲ್ಲಿ ನಿಷ್ಪಾದನೆ ಮಾಡಲಾಗುತ್ತಿದೆಯಾದರೂ ಮುಚ್ಚುವುದು (ಆಚ್ಛಾದನ) ಎಂಬ ಅರ್ಥವುಳ್ಳ ಧಾತು. ಇದಕ್ಕೆ ಮೂಲವಿದ್ದಂತೆ ಕಾಣುತ್ತದೆ. ವ್ಯಾಕರಣವು ಭಾಷೆಯ ವಿಶ್ಲೇಷಕ ತತ್ವವಾದರೆ ಛಂದಸ್ಸು ಸಂಯೋಜಕ ತತ್ವವಾಗುತ್ತದೆ. ಉದಾಹರಣೆಗೆ ಒಂದು ಪದವನ್ನು ವ್ಯಾಕರಣದ ಪರಿಭಾಷೆಯಲ್ಲಿ ಹೇಳುವುದೆಂದರೆ ಅದರ ಪ್ರಕೃತಿ–ಪ್ರತ್ಯಯಗಳಂತಹ ಅಂಶಗಳನ್ನು ಬಿಡಿಸಿಹೇಳುವುದು. ಆದುದರಿಂದಲೇ ತಾಥ್ವಿಕವಾಗಿ ಛಂದಸ್ಸೆಂಬುದು ಬರಿಯ ಪದ್ಯಕಾವ್ಯಗಳಿಗೆ ಸೇರಿದುದಲ್ಲ. ಭಾಷೆಯಲ್ಲಿಯ ಪ್ರತಿ ಶಬ್ದಕ್ಕೂ ಮಾತ್ರಾರೂಪದ ಒಂದು ಅಳತೆ ಇರುವುದರಿಂದ ಮತ್ತು ಅದೇ ಅದರ ಛಂದಸ್ಸಾಗಿರುವುದರಿಂದ ಪ್ರತಿ ಶಬ್ದವೂ ಛಂದೋಬದ್ಧವೇ ಆಗಿರುತ್ತದೆ. ಇದನ್ನೇ ಭರತಮುನಿಯು ನಾಟ್ಯಶಾಸ್ತ್ರದಲ್ಲಿ **छन्दो नो न शब्दोस्ति नच्छन्दः शब्दवर्तितम्** ಎಲ್ಲ **अमन्त्रमक्षरं नास्ति** ಎಂಬ ವ್ಯಾಪಕ ಹೇಳಿಕೆಯನ್ನು ಜ್ಞಾಪಿಸುತ್ತಿದ್ದು 'ಛಂದಸ್ಸು', 'ಮಂತ್ರತ್ವ' ಇಂತಹವು ಭಾಷೆಗೇ ವ್ಯಾಪಕವೆಂಬುದನ್ನೂ ಅವುಗಳನ್ನೂ ವಿಶಿಷ್ಟಾರ್ಥದಲ್ಲಿ ಮಾತ್ರ ಭಾಷೆಯ ಅಂಶಗಳಿಗೆ ಅನ್ವಯಿಸಲಾಗುತ್ತದೆ ಎಂಬ ನಿಲುವನ್ನು ಸಮರ್ಥಿಸುತ್ತದೆ.

6. ಜ್ಯೋತಿಷ: ಯಜ್ಞಗಳ ಅನುಷ್ಠಾನಕ್ಕೆ ಉಚಿತ ಕಾಲನಿರ್ಣಯ ಮಾಡುವ ಅಗತ್ಯ ಮೊದಲಿನಿಂದಲೂ ಕಂಡುಬಂದಿರಬೇಕು. ಅದರ ಫಲವಾಗಿ ಖಗೋಲಶಾಸ್ತ್ರೀಯ ವೀಕ್ಷಣೆಗಳನ್ನು ಋಷಿಗಳು ಕೈಗೊಳ್ಳಬೇಕಾಯಿತು. ಇವುಗಳ ಒಂದು ವೈಜ್ಞಾನಿಕ ಸಂಗ್ರಹವೇ ಲಗಧನು ಬರೆದನೆನ್ನಲಾಗಿರುವ 'ಜ್ಯೋತಿಷ ವೇದಾಂಗ'ವಾಗಿದೆ. ಇದರ ಯಜುರ್ವೇದ ಪಾಠದಲ್ಲಿ 43 ಶ್ಲೋಕಗಳೂ, ಋಗ್ವೇದ ಪಾಠದಲ್ಲಿ 36 ಶ್ಲೋಕಗಳೂ ಇವೆ. ಈ ಜ್ಯೋತಿಷವು ಇಷುವ ಸಂಪಾತಗಳಲ್ಲಿ ಸೂರ್ಯಚಂದ್ರರ ಸ್ಥಿತಿಗಳನ್ನೂ, 27 ನಕ್ಷತ್ರರಾಶಿಗಳಿಗೆ ಸಂಬಂಧಿಸಿದಂತೆ ಪೂರ್ಣಿಮೆ, ಅಮವಾಸ್ಯೆಗಳ ಲೆಕ್ಕಾಚಾರವನ್ನು ತಿಳಿಸುತ್ತದೆ. ಅಥರ್ವವೇದಕ್ಕೆ ಸೇರಿದ ಒಂದು 'ಆತ್ಮಜ್ಯೋತಿಷ'ವೆಂಬ ಗ್ರಂಥವೂ ಸಿಕ್ಕಿದೆ. ಆದರೆ ಇದು ಫಲಜ್ಯೋತಿಷವನ್ನೂ ಸ್ವಲ್ಪ ಒಳಗೊಳ್ಳುವ ಉತ್ತರಕಾಲೀನ ಕೃತಿ. ವೇದಾಂಗಜ್ಯೋತಿಷದ ಕಾಲಟಿಳಕ. ಮೊದಲಾದ ಭಾರತೀಯ ವಿದ್ವಾಂಸರ ಪ್ರಕಾರ ಕ್ರಿ.ಪೂ. 1200; ಆದರೆ ಪಾಶ್ಚಾತ್ಯರು ಇದು ಇಷ್ಟು ಪ್ರಾಚೀನವಿರಲಾರದೆನ್ನುತ್ತಾರೆ. ವೇದಾಂಗಗಳಲ್ಲೆಲ್ಲ ಜ್ಯೋತಿಷವೇ ಮುಕುಟಪ್ರಾಯವೆಂದು ಇದರಲ್ಲಿ ಹೇಳಲಾಗಿದೆ.

यथा शिखा मयूराणां नागानां मणयो यथा ।
तद्वद्वेदाङ्गशास्त्राणां गणितं मूर्ध्नि संस्थितम् ॥

MANTRA

–सिद्धार्थ हेर्ले
II B.Com. 'B1'

A Mantra is a sacred utterance, a numious sound, a syllable, a word or group of words in Sanskrit believed by practitioners to have psychological and spiritual powers. Mantra meditation helps to induce an altered state of consciousness. A mantra has a structure and literal meaning.

The earliest mantras were composed in Vedic Sanskrit by Hindus in India and are atleast 3000 years old. the se, structure, function, importance anfd types of mantras vary according to the cultural background.

Mantras come in many forms including ऋच् (ric) (verses from RigVeda) and सामन् (saman) (musical chants from the Samaveda). They are typically melodic, mathematically structured meters, believed to be resonant with numerous qualities. At its simplest, the word ओम् (Om) serves as a mantra. In mere sophisticated forms, mantras are melodic phrases with spiritual interpretations such as a human longing for truth, reality, light, immortality, peace, love. knowledge and action. Mantas are musically uplifting and spiritually meaningful.

The origin of Mantras:

The word Mantra consists of the chant 'man to think and its suffix-tra, designating tools as instruments. hence a literal translation would be 'instrument of thought.'

Scholars consider mantras to be older than 1000 BC. By the middle Vedic period, 1000 BC to 500 BC mantras in Hinduism had developed into a blend of art and science.

Mantras in the 21st Century:

Chanting mantras in the 21st century has become a religious as well as scientific way to achieve peace of mind and to achieve the state of individual significance. The science has proven that these mantras are way more useful in our daily lives that what we think it is. These days mantras are chanted by most of the people everyday. The have become the essential past of the modern livelihood. Som ef the comon and powerful mantras are:

1. ओम् (Om), means 'sound of the universe.' It is the first original vibration representing the birth, death and rebirth process.

'Om' is said to vibrate at 432 hertz, which is the natural pitch of music of the universe. Thus, chanting 'Om' brings people into harmonic resonance with the universe.

2. ओम् नमः शिवाय (Om Namah Shivaya) which translates to 'I hail to Shiva, the Supreme diety of transformation who represents the most true, highest self.'

3. लोकाः समस्ताः सुखिनो भवन्तु (Lokah samastah sukhino bhavantu) which means, 'May all beings everywhere be happy and free and may the thoughts, words and actions of my life contribute in some way to that happiness and freedom.

4. Shanti Mantra-

ओम् सहनाववतु
ओम् सह नौ भुनक्तु
सह वीर्यं करवावहै
तेजस्विनावधीतमस्तु मा विद्विषावहै ॥
ओम् शान्तिः शान्तिः शान्तिः ॥
Om Sahanavavatu
Saha nav bhunktu
Saha viryam karavavahai.
Tejasvi Naavadhimastu maa vidvishavahai ||

Translation: May the Lord protect and bless us. May He nourish us, give us strength to rok together for the good of humanity. May our learning be brilliant and puposeful. May we never turn against one-another.

5. ओम् गं गणपतये नमः (Om Gam Ganapataye Namah) which means, 'I bow to the elaphant faced diety who is capable of removing all obstacles. I pray for blessings and pretection.

संस्कृत सुभाषितानि

–बालकृष्ण भट्ट
II B.Com. 'B2'

अग्निशेषमृणशेषं शत्रुशेषं तथैव च ।
पुनः पुनः प्रवर्धेत तस्माच्छेषं न कारयेत् ॥1॥

If a fire, loan or and enemy continues to exist even to small extent it will grow again and again, So, do not let any of these to continue to exist even to a small extent.

नाभिषेको न संस्कारः सिंहस्य क्रियते मृगैः ।
विक्रमार्जितराज्यस्य स्वयमेव मृगेन्द्रता ॥2॥

Animals do not coronake a lion by sprinkling holy water on him and conducting certain rituals. He assumes Kingship through his own prowess.

अष्टादशपुराणानां सारं न्यासेन कीर्तितम् ।
परोपकारः पुण्याय पापाय परपीडनम् ॥3॥

In all the eight Puranas, Shri Vyasa Maharshi has told only two gospels.: Doing favour to others is 'punya' and troubling others is 'paapa.'

भाषासु मुख्या मधुरा दिव्या गीर्वाणभारती ।
तस्यां हि काव्यम् मधुरं तस्मादपि सुभाषितम् ॥4॥

Amongst languages, language of God, (Girvanabhasha-Sanskrit) is sweet, in which poetry is beautiful and still in that Subhashita.

सम्पूर्णकुम्भो न करोति शब्दं अर्धोघटो घोषमुपैति नूनम् ।
विद्वान् कुलीनो न करोति गर्वं गुणैर्विहीना बहु जल्पयन्ति ॥5॥

A full fledged water container will not create much noise as compared to the half filled one. Similarly, Vidwaans always remain clam and will not have any pride as opposed to the people who know very less but alwasy keep talking. (When containers jirk the water inside will also move and create some noise.)

सह नाववतु सहनौ भुनक्तु ।
सह वीर्यं करवावहै ।

तेजस्विनावधीतमस्तु मा विद्विषावहै ।
ओम् शान्तिः शान्तिः शान्तिः ॥6॥

Om, May that Brahman protect us both (teacher and disciple); May that Brahman nourish us both may we work in harmony with great vigour; may our study be illuminating and fruitful. May we not hate each other. Om, peace, peace, peace.

मृगाः मृगैः सङ्गमुपव्रजन्ति गावश्च गोभिस्तुरङ्गास्तुरगैः ।
मूर्खाश्च मूर्खैः सुधियः सुधीभिः समानशीलव्यसनेषु संख्यम् ॥7॥

Deer be with deer, cown be with cows, horses be with horses, fools be with fools and wise people go with wise people. Friendship develops among those who have similar character and hobbies.

धर्मं यो बाधते धर्मो न स धर्मैः कुधर्मकः ।
अविरोधात्तु यो धर्मः स धर्मः सत्यविक्रमः ॥8॥

Subhashitkar is addressing satyavrkam in this subhashita. Dharma which violates other's dharma, is not true dharma. It is kudharma.

Dharma which is not against other's interest is true dharma. Dharma here is duties of a person.

चन्दनं शीतलं लोके चन्दनादपि चन्द्रमाः ।
चन्द्रचन्दनयोर्मध्ये शीतला साधुसङ्गतः ॥9॥

Sandalwood is pleasant (cool), moon (or moon light) is more pleasant than sandal but the company of a good person (sadhu) is pleasant than both moon and sandal. Literal meaning of the wird shitala is cool. In this context cool means something which is pleasant.

अधमाः धनमिच्छन्ति धनं मानं च मध्यमाः ।
उत्तमाः मानमिच्छन्ति मानो हि महताम् धनम् ॥10॥

An inferior person's desire is money. An average person will desire money and respect. A great person desires respect. Respect is supirior to money.

चाणक्य नीतिः

–बिन्दु आर्. यू.
I B.Com. 'A'

पीठिका – Do not wake up the king, the serpent, the tiger, the pig, the child, the other's dog and a fool. Allow them to sleep.

मुक्तिमिच्छसि चेतात विषयान् विषवत् त्यज ।
क्षमाऽऽर्जवं दया शौचं सत्यं पीयूषवद् भज ॥

If you wish for dileverance, give up bad habits and bad addictions considering this poison. Partake of the nectar of forgiveness, tolerance, patience, peity and truth.

परस्परस्य मर्मणि ये भाषन्ते नराधमाः ।
त एवं विलयं यान्ति वल्मीकोदरसर्पवत् ॥

Those who reveal the secrets of others and use foul language get destroyed like a snake trapped in a mothhill perishes.

गन्धः सुवर्णे फलमिक्षुदण्डे
नाऽकरि पुष्पं खलु चन्दनस्य ।
विद्वान् धनाढ्यश्च नृपश्चिरायुः
धातुः पुरा कोऽपि न बुद्धिदोऽभूत् ॥

Brahma the creator, did not bestow fragrance to gold, sweet fruit to sugarcane plant and flowers to sandalwood tree. Neither did he grant riches to a scholar nor long lige to the bing. It appears the creator had no wise advisor.

सर्वौषधीनाममृतं प्रधानम् सर्वेषां सौख्येष्वशनं प्रधानम् ।
सर्वेन्द्रियाणां नयनं प्रधानं सर्वेषु मात्रेषु शिरः प्रधानम् ॥

Nectar is the king of all medicines. Food is the most satisfying of all means of pleasure. Eye is the queen of all sensory organs. Head is the most supirior of all parts of the body.

दूतो न सञ्चरति खे न चलेच्च वार्ता
पूर्वं न जल्पमिदं च सङ्गमोऽस्ति
व्योम्नि स्थितं रविशशिग्रहणं प्रशस्तं
जानाति यो द्विजवरः स कथं न विद्वान् ॥

It is not possible to send a spy to the skies. No one can send any message to earthlings from the

skies. So, why should'nt the Brahmins who correctly predict the timings of eclipse of the sun or moon every year be considered scholars?

विद्यार्थी सेवकः पान्थः क्षुधाऽर्तो भयकातरः ।
भाण्डारी प्रतिहारी च सप्त सुप्तान् प्रबोधयेत् ॥

Students, servants, travellers, starving people and guards should be woken up, if found sleeping on duty.

अहिं नृपं च शार्दूलं किटिं च बालकं तथा ।
परश्वानं च मूर्खं च सप्त सुप्तान् न बोधयेत् ॥

Dont ever wake up a sleeping serpent, king, tiger, pig, child, other's dog and a fool. Leave them asleep.

यस्मिन् रुष्टे भयं नास्ति तुष्टे नैव धनागमः ।
निग्रहोऽनिग्रहो नास्ति स रुष्टः किं करिष्यति ॥

One whose anger inspires no awe, whose pleasure results in no gain and whose authority can pass no punishment or grant any reward are of no consequence.

निर्विषेणाऽपि सर्पेण कर्तव्या महती फणा ।
विषमस्तु न चाप्यस्तु घटाटोपो भयङ्करः ॥

Even a poisonless snake must raise its hood to frigntenaway the enemy because the enemy does not know about the absence of poison in it.

प्रातद्यूतप्रसङ्गेन मध्याह्ने स्त्रीप्रसङ्गतः ।
रात्रौ चौर्यप्रसङ्गेन कालो गच्छत्यधीमताम् ॥

The wise men spend their time in reading the stories of gamblers in morning, the drama of women during the day and adventures of theives at night.

स्वहस्तग्रथिता माला स्वहस्तघृष्टचन्दनम् ।
स्वहस्तलिखितं स्तोत्रं शक्रस्यापि श्रियं हरेत् ॥

Offering God a self-made garland, applying self-made sandalwood paste and singing self-written prayer gives one the riches of heaven as arewards from God.

इक्षुदण्डास्तिलाः क्षुद्राः कान्ता हेम च मेदिनी ।
चन्दनं दधि ताम्बूलं मर्दनं गुणवर्धनम् ॥

Cane, oil-seed, a fool, a lonely person, a woman, gold, land, sandalwood, curd and beetle-nut-these are the things which become better and better as one gives them more and more rub-down and shake-downs.

दरिद्रता धीरतया विराजते कुवस्त्रता शुभ्रतया विराजते ।
कदन्नता चोष्णतया विराजते कुरूपता शीलतया विराजते ॥

When in poverty, patience makes poverty bearable. Even an ordinary piece of cloth looks good if kept clean. If food is not rich and tasty, eating if fresh and hot makes it tolerable. Similarly, a good character makes up for the lack of physical beauty.

प्रभूतवयसः पुंसो धियः पाकः प्रवर्तते ।
जीर्णस्य चन्दनतरोरामोद उपजायते ॥

ವಯಸ್ಸಾಗುತ್ತಾ ಹೋದಂತೆ ವ್ಯಕ್ತಿಯ ಬುದ್ಧಿಯು ಪಕ್ವವಾಗುತ್ತದೆ.
ತುಂಬಾ ಬೆಳೆದಿರುವ ಗಂಧದ ಮರದಲ್ಲಿ ಪರಿಮಳ ಹೆಚ್ಚು ಉಂಟಾಗುತ್ತದೆ.

चाणक्य सूत्रम्

–मयूरी
I B.Com. 'A'

॥ राज्यमूलमिन्द्रियजयः ॥

The basis of a kingdom is to control one's senses.

॥ इन्द्रियजयस्य मूलं विनयः ॥

Politeness or humanity gives rise to the winning over of one's senses.

॥ विनयस्य मूलं वृद्धोपसेवा ॥

The basis of politeness is to serve the learned and the elderly people.

॥ श्रेष्ठतमां मन्त्रगुप्तिमाहुः ॥

The policy of keeping conversation a secret is the best of all policies.

॥ हेतुतः शत्रुः मित्रे भविष्यतः ॥

There is always some reason behind making a friend or a foe.

॥ अग्नि दाहादपि विशिष्टं वाक्यपारूष्यम् ॥

Improper talk is more injurious than fire which burns everything.

॥ सिद्धस्यैव कार्यस्य प्रकाशनं कर्तव्यम् ॥

Always let others know about the completion of a piece of work only when it is finished.

॥ अप्रयत्नात् कार्यविपत्तिर्भवति ॥

The work gets spoilt in the absence of pre-requisite efforts needed to achieve a target.

॥ कार्यविपत्तौ दोषान् वर्णयन्ति बालिशाः ॥

Foolish people after failing to achieve success either repent on their follies or blame one another to establish their innocence.

॥ दैवप्रमाणानां कार्यसिद्धिः ॥

He who has a negative mindset before beginning a piece of work. never completes his task. He who thinks that his work will not complete never starts his work.

॥ स्वामिनः शीलं ज्ञात्वा कार्यार्थी कार्यं साधयति ॥

The dependents after knowing the nature of thier master, work accordingly.

॥ आत्मानमेव नाशयति अनात्मवतां कोपः ॥

He who is not pure at heart, is indiscreet in nature and harms himself by getting angry, his sheer anger leads to his downfall, sooner or later.

॥ व्यसनार्तो विस्मरत्यप्रवेशेन ॥

He who gets entangled in evil habits loses his concentration and deviates from his duty.

॥ दानं धर्मः ॥

Donating something to the one who needs it most is man's topmost duty.

॥ अवसानेनागतमैश्वर्यमवमन्यते साधुः ॥

Good people never accept wealth obtained through evil methods.

॥ कादम्बिनी – पुस्तकपरिचयः ॥

गौरी वि. एस्.
अन्तिमा विज्ञानपदवी ।

अहमत्र एकस्य संस्कृतभाषापुस्तकस्य परिचयं भवतां कारयितुं इच्छामि । अस्यः कृतेः नाम **कादम्बिनी** इति । अस्यः रचयिता **डा. एन्. लक्ष्मीनारायण भट्टः** । इदानीं अयं उडुपिनगरे संस्कृतविद्यालयस्य प्राचार्यः सन् उद्योगं करोति । संस्कृतसाहित्ये व्याकरणे च अयं महान् पण्डितः अस्ति । न केवलं शास्त्रविद्वान्, किन्तु स्वयं काव्यनिर्माणे च समर्थः ।

अत्र अस्मिन् कादम्बिनीनामके पुस्तके अष्ट लघुकाव्यानि सन्ति । रचितानां पद्यानां अर्थग्रहणाय रसास्वादनाय सुकरं भवेत् इति अभिप्रायेण कविना व्याख्यानमपि रचितमस्ति । अस्य व्याख्यानस्य नाम मुक्तावली इति । तथा व्याकरणस्य विश्लेषणं, छन्दोवृत्तादीनां विवरणं, पदप्रयोगवैशिष्ट्यं च निरूपितमस्ति । अनेन क्रमेण काव्यानां पठनं सुलभं भवति । अस्तु, ग्रन्थं प्रविशाम ।

प्रथमं काव्यं – **धूर्तचेष्टितम्** । अत्र एकः काकः मांसखण्डं स्वमुखे गृह्णन् वृक्षे उपविष्टः । कपटी शृगालः मांसस्य अपहरणाय उपायं करोति । नानाविधैः काकस्य प्रशंसां करोति । 'भवान् कोकिल इव मधुरकण्ठः । अतः प्रदर्शय ते गायनकौशलम्' इति प्रेरयति । मूर्खः काकः शृगालवचनानि सत्यं मत्त्वा गातुं आरभते । तदा मुखे गृहीतः मांसः अधः पतति । तदादाय शृगालः पलायते । स्वार्थपराः सदा वञ्चयन्ति इति अस्य पद्यस्य नीतिः ।

द्वितीयं काव्यं **चाणक्यविरागः** । अत्र मौर्यचन्द्रगुप्तस्य गुरुः तथा अमात्यस्य आचार्यचाणक्यस्य जीवनस्य प्रसङ्गः निरूपितः । वेदशास्त्रेषु महान् पण्डितः अयं सदा दरिद्रजीवने आसक्तः । सुखभोगेषु सदा निरासक्तिः । कविः वदति– '**सम्पत्तौ च विपत्तौ च निर्विकारो विचारवान् । पद्मपत्रं यथा नीरे निर्लेपो भोगवस्तुषु ।**' एकदा कश्चन चोरः महामन्त्रिणः गृहे बहुधनं आभरणानि च भवेयुः इति चिन्तयति । रात्रौ सर्वधनस्य अपहरणाय चाणक्यगृहं प्रविशति । तत्र आश्चर्यं किंचित् पश्यति सः । एकत्र कम्बलानां राशिः । अनतिदूरे भूमौ शयितः चाणक्यः । सः असहनीयेन शैत्येन कम्पमानः आसीत् । किन्तु एकमपि कम्बलं सः न स्वीकृतवान् । कारणं जिज्ञासुः चोरः चाणक्यं अपृच्छत् । चाणक्यः अवदत्– 'एते कम्बलाः नवाः, प्रजानां उपयोगाय चन्द्रगुप्तेन प्रेषिताः । यदि अहं अस्य उपयोगं करोमि चेत् तदा तत् चौर्यं भवति' इति । ततः चोरः लज्जान्वितः चाणक्यस्य पादयोः पतित्वा क्षामां याचते । ततः परं चौर्यं त्यक्त्वा श्रमेण जीवति । एवं सन्मार्गस्य दर्शनं कारयति एषा कथा ।

तृतीयं **शिशुचन्द्रीयं** इति काव्यम् । अत्र चन्द्रं दृष्ट्वा मुग्धस्य शिशोः प्रश्नः, ततः मातुः उत्तरं निरूपितम् । **मर्कटोपदेशः** नाम्नि चतुर्थे काव्ये वानरराजस्य तथा कपिबालकस्य सम्भाषणम् अस्ति । नराणां वानराणां च समानतां व्यत्यासं च दर्शयति कपिराजः । सः वदति –' **पुरा समस्ताः कपयो नराश्च सम्भूय जीवन्ति वने सुखेन** ।' उदाहरणरूपेण रामहनुमतोः सख्यं उल्लिखति । एवं हास्यमयवचनैः इयं कविता मनः रञ्जयति ।

मशकाष्टकम् नाम पञ्चमे काव्ये मशकानां महिमा वर्णिता अस्ति । मशकाः रात्रौ नरस्य शयनावसरे

कर्णान्तिकं आगत्य गायन्ति । यदि सः निद्रायां मग्नः, तदा तं सन्दश्य जाग्रतं कृत्वा सङ्गीतं श्रावयन्ति । किन्तु विवेकहीना नराः चपेटां दत्त्वा तान् मारयन्ति । भ्रमराः गुञ्जन्ति, शुका भाषन्ते, पिका कूजन्ति, तत् सर्वं क्षुधा जनितं रोदनम् । यदि गानस्य रहस्यं जानीयात् तदा मशकस्य एव शब्दनं शृणुयात् । कश्मले जले तेषां जन्म, पेयं मनुष्यरक्तं, रोगानां प्रसारणं इत्यादिविषयान् हास्यमयेन क्रमेण कविः वर्णयति ।

पान्थपरिदेवनम् इति षष्ठकाव्ये प्रवासे वर्तमानस्य पत्नी–पुत्र–बन्धुविरहितस्य नरस्य मनोवेदनम् वर्णितमस्ति । तथा पत्न्या सह पुनर्मिलनस्य स्वप्नं, तदन्ते खड्गपाणिना केनापि दुष्टेन आक्रमणं इत्यादि रोचकतया निरूपितमस्ति ।

कादम्बिनी इति सप्तमं काव्यम् । अत्र कादम्बिनी नाम मेघमाला । त्रयोविंशतिश्लोकेषु मेघस्य स्वरूपं, प्रयोजनं इत्यादि मनोहरतया कथिताः । समग्रं काव्यं मालिनीवृत्ते रचितमस्ति । मेघाः श्वेताः श्यामाश्च भवन्ति । तस्मात् कविना–**'सितमसितमिति इदं धारयन्ती स्वरूपं हरिहरसदृशी त्वं कालभेदेन भासि'** इत्युक्तम् । मेघदर्शने लोके दृश्यमानाः विशेषाः एवं लेखिताः– कृषिकजनसमूहः चेष्टते स्वक्रियायाम्; हरितसस्या भूतधात्री नवा इव लसति; नीलकण्ठः उच्चैः रौति नृत्यति च । जलपूर्णः मेघः वर्षणानन्तरं पुनः लघु भवति । अतः कविः तं मा चिन्तय इति सान्त्वयति । **सरसि सरिति सिन्धौ पर्वतादौ च देशे स्वधनवितरणात् त्वम् जायसे तूललघ्वी** । तदर्थं मा दुःखमनुभव । यतः ते जन्म प्रशस्यम् । सुकृतिना जनितम् अणुत्वं गौरवलाभे कारणम् इति । एवं कविः मेघानां प्रशंसापूर्वकं कृतज्ञताम् अर्पयति ।

तन्त्रकौशलं नाम अष्टमे काव्ये मानसिंहो नाम्नः महाराजस्य राज्यभारकौशलम् उपवर्णितम् । कविः शंसति–**'नासीत् तदा चोरभयम्; न देवकोपः; न च हिंस्रपीडाः, विश्वं सुखमात्रमग्नमासीत्** ।' किन्तु करालो नाम दुष्टः मित्रवत् नटनं कृत्वा कपटमाचरति । मन्त्रप्रयोगेन राजानं शुकस्य देहे प्रवेश्य, स्वयं राज्ञः देहम् आविश्य राजा इव विजृंभते । सिंहासनं, अधिकारं, राज्ञीमपि स्ववशं कर्तुं यतते । किन्तु मन्त्रिणाम् उपायेन मानसिंहः स्वदेहं प्राप्नोति । भीतः करालः देशं त्यजति । एवं रोचकं कथानकं पद्यरूपेण अत्र दत्तमस्ति ।

केचन पण्डितम्मन्याः संस्कृतं मृतप्रायमिति वदन्ति; व्यवहारे निष्प्रयोजकम् इति च तिरस्कुर्वन्ति । एषा जीवन्ती भाषा व्यवहारे अधुना अपि वर्तते । काव्यनाटकादीनि, शास्त्रव्याख्यानानि, प्रवचनानि आधुनिककालेऽपि प्रवर्तमानानि सन्ति । विदेशेषु बहुषु विद्यालयेषु अस्य अध्ययनं, पाठनं, संशोधनं च प्रचलन्ति । भाषासु मुख्या मधुरा दिव्या गीर्वाणभारती जीयात् ।

न पुत्रत्वेन पूज्यन्ते गुणैरासाद्यते पदम् ॥
रवेर्व्यापारमादत्ते प्रदीपो न पुनः शनिः ॥

ದೊಡ್ಡವ್ಯಕ್ತಿಯ ಮಗನಾದ ಮಾತ್ರಕ್ಕೆ ಮನ್ನಣೆ ಸಿಗುವುದಿಲ್ಲ. ಅವನ ಗುಣಗಳು ಯಾರಲ್ಲಿದೆಯೋ ಅವನಿಗೆ ಗೌರವ ಸಿಗುತ್ತದೆ. ಸೂರ್ಯನಲ್ಲಿರುವ ಪ್ರಕಾಶಗೊಳಿಸುವಿಕೆ ದೀಪದಲ್ಲಿದೆಯಾದುದರಿಂದ ಅದೇ ಮನ್ನಣೆಗೆ ಪಾತ್ರ ಹೊರತು ಮಗನಾದ ಮಾತ್ರಕ್ಕೆ ಶನಿಯಲ್ಲ.

KALIDASA

–धनुष्कोटि
II B.Com. 'B2'

Kalidasa was a classical Sanskrit writer, widely regarded as the greatest poet and dramatist in the Sanskrit language of India. His plays and poetry are primarily based on Vedas, The Mhabharata and The Puranas.

Kalidasa wrote three plays. Among them, Abhijnanasakuntalam is generally regarded as a masterpiece. it was among the first sanskrit works to be translated to English and has since been translated into many languages. And Kalidasa wrote two other plays, namely: Malavikagnimitram and Vikramorvashiyam.

Kalidasa is the author of two epic poems, Raghuvamsha and Kumarasambhava.

Raghuvamsa is ans epic poem about kings of Raghu dynasty.

Kumarasambhava describes the birth and adolescence of the goddess Parvati and her marriage to Lord Shiva.

Kalidasa had great influence on several Sanskrit works, on all Indian literature. He had a great impact on Rabindranath Tagore. The Meghadutam's romanticism is found in Tagore's poems on the monsoons. Sanskrit plays written by Kalidasa influenced late eighteenth and early nineteenth century European literarute. According to Dale Caregle, The Father of Modern Medicine, Sir William Osler always kept onhis desk a poem written by Kalidasa.

Scholars have speculated that Kalidasa might have lived near the Himalayas, in the vicinity of Ujjain and Kalinga. This hypothesis is based on Kalidasa's detailed description of the Himalayas in his Kumarasambhava, the display of his love for Ujjain in Meghadoota and his highly eulogistic descriptions of Kalinga enperor Hemangada in Raghuvamsha.

Lakshmi Dhar Kalla, a sanskrit scholar and a Kashmiri Pandit, wrote a book titled the birth place of Kalidasa, which tries to trace the birthplace of Kalidasa based on his writings. He concludes that Kalidssa was born in Kashmir, but moved southwards and sought patronage of local rulers to prosper. the evidence cited by him from Kalidasa's writings.

तीक्षणधारेण खड्गेन वरं जिह्वा द्विधा कृता ।
न तु मानं परित्यज्य देहि देहीति भाषितम् ॥

ಹರಿತವಾದ ಕತ್ತಿಯಿಂದ ನಾಲಿಗೆಯನ್ನು
ಸೀಳುವುದಾದರೂ ಆಗಬಹುದು. ಆದರೆ
ಅಭಿಮಾನವನ್ನು ಬಿಟ್ಟು ಇನ್ನೊಬ್ಬನಲ್ಲಿ 'ಏನನ್ನಾದರೂ
ಕೊಡಿ' ಎಂದು ಹೇಳುವುದಲ್ಲ.

ಕನ್ನಡ ವಿಭಾಗ

1. ಕವಿ ಸಮಯ

ಎತ್ತಣ ಮಾಮರ....ಎತ್ತಣ ಕೋಗಿಲೆ....

(ಆಶುಕವನ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕವಿತೆ)

ಪವಿತ್ರ
ಪ್ರಥಮ ಬಿ.ಎಸ್ಸಿ.

ನರನಾಡಿ ರಕ್ತದ ಕಣಕಣದಲ್ಲೂ ಚಿಮ್ಮುತಿದೆ ಜೀವಭಾಷೆ
ಆದರೂ ಏಕೆ ಅರ್ಥವಾಗದೆ ಹೋಯಿತು ನಮ್ಮೀ ಮೂಕಭಾಷೆ
ರನ್ನ ಪೊನ್ನ ಪಂಪ ಆಳಿದ ದರ್ಪದ ಭಾಷೆ
ಇನ್ಮುಂದೆ ಇದನ್ನು ಬೆಳೆಸುವವರೇ? ಇದು ಬರೀ ಕನಸೇ...
ಜೀವನಕ್ಕೆ ಜೀವ ತುಂಬುವ ಕನ್ನಡಾಂಬೆ
ಈಗ ಆಗಿದ್ದಾಳೆ ಪಟ್ಟಣಗಳಲ್ಲಿ ಅನ್ಯಭಾಷಿಗಳ ಕೈಗೊಂಬೆ
ಹಸುಗೂಸುಗಳ ತೊದಲು ನುಡಿಯಲ್ಲಿ
ಅಂದು ಆಲಿಸುತ್ತಿದ್ದೆ ಮುದ್ದು ಕನ್ನಡ
ಆದರೀಗ...ಬದಲಾಗುತ್ತಿದೆ ಎನ್ನಡ ಎಕ್ಕಡ
ಮೊದಲು ತಾಯ ಮಡಿಲಲ್ಲಿ ಆಡಿದ ಮಾತು
ಅದು "ಅಮ್ಮಾ"....
ಇನ್ನೆಲ್ಲಿ ಹುಡುಕಲಿ...ಕಳೆದುಕೊಂಡದ್ದನ್ನು
ವಿಜ್ರಂಭಿಸುವವರು ಇಂದು ಮರೆತವರೇ...
ತೋರಿಕೆಯ ಹುಡುಕಾಟ....ಕೇವಲ ಒಂದು ದಿನದ ಆಟ....
ಪ್ರತಿ ಮನೆಯ ಬೀದಿಗಳಲ್ಲಿ....
ನದಿ ತೊರೆಯ ಜುಳು ಜುಳು ನಾದದಲ್ಲಿ...
ಇಂಪಾದ ಹಕ್ಕಿಗಳ ಇಂಚರದಲ್ಲಿ...
ಕೇಳುವೆ ನಾ ಕಾಣುವೆ ನಾ ಪ್ರತಿದಿನ ಕನ್ನಡ
ಕನ್ನಡವನ್ನೇ ಮರೆತು ಮೂಲೆ ಗುಂಪಾಗಿಸಿದವರೇ
ಹೋರಾಟಕ್ಕಿಳಿದವರು !
"ಕೊಂಬು ಕಹಳೆ ಗುಡಿ ನುಡಿ ತೋರಣದಲ್ಲಿ
ಅದೋ ಸಾಗುತ್ತಿದೆ ಕನ್ನಡದ ತೇರು....
ಮೌನ ಭಾವಗಳ ಪಿಸುಮಾತಿನ ನಡುವೆ
ಗಲ್ಲಿಗಲ್ಲಿಯಲಿ ಹರಿಯುತ್ತಿದೆ ಕನ್ನಡದ ನೀರು

ಮನವೆಂಬ ಮರ

(ಚಿತ್ರಕವನ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕವಿತೆ)

ಆದರ್ಶ ಎ. ಪದ್ಮಶಾಲಿ
ತೃತೀಯ ಬಿ.ಕಾಂ.

ತಂಗಾಳಿ ತಂಪಿನ ಬಿರು ಸೋಗೆಗೆ
ಭೂತಾಯ ಮಣ್ಣಿನ ಬೆಚ್ಚಗಿನ ಅಪ್ಪುಗೆಗೆ,
ದಣಿವೆಂಬ ಜೀವಿಯ ಕಷ್ಟಗಳ ಬೇಗೆಗೆ
ಮರವಾಗಿ ಜನಿಸಿದೆ ನಾ ಆ ನಿನ್ನ ಸೇವೆಗೆ

ಇಂಪಾದ ಹಕ್ಕಿಯ ಗಾನಕೆ ನಾನಿತ್ತೆ ವಾಸಸ್ಥಾನವನು
ಮಕರಂದ ಹೀರಿ ಮಧುವನು ಸೂಸುವ ದುಂಬಿಗೆ
ಅರ್ಪಿಸಿದೆ ವನಸುಮವನು
ಹಸಿರೆಂಬ ಎಲೆಯ ರಸವನ್ನು ನೀಡಿ ಪೋಷಿಸಿದೆ ಪ್ರಾಣಿ
ಪ್ರಪಂಚವನು
ಬಿಸಿಲು ಚಳಿ ಗಾಳಿಯ ಅಬ್ಬರಕೆ ಯೋಧನಾಗಿ ನಾನಿಂತು
ರಕ್ಷಿಸಿದೆ ಸಕಲ ಜೀವರಾಶಿಯನು

ಬಿಸಿಲಿನ ಪ್ರಕರಕೆ ನೆರಳೆಂಬ ಚಪ್ಪರವನ್ನಿತ್ತು ಕಳೆವೆನು ನಾ
ಆ ನಿನ್ನ ಆಯಾಸ
ಹಸಿವೆಂದು ಬಂದರೆ ನಿನ್ನಾ ಉದರವ ತಣಿಸಲು ನಾ
ನೀಡುವೆ ಸವಿಯಾದ ಹಣ್ಣಿನ ರಸ,
ನನ್ನರಸಿ ಬಂದ ನಿನಗೆ ಕನಸಲ್ಲೂ ಮಾಡೆನು ನಂಬಿಕೆಯ
ಮೋಸ
ಆದರೂ ಕಾಣ ಬಯಸುವೆನು ನಿನ್ನಾ ಮನದ
ಮಂದಹಾಸ

ಕಳೆವೆನು ಸ್ವಚ್ಛಂದ ಪರಿಸರದ ಇಂಗಾಲವೆಂಬ ವಿಷಕಾರಿ
ಕಹಿಯನು
ನೀಡುವೆನು ನಿರ್ಮಲ ಆಮ್ಲಜನಕವೆಂಬ ಜೀವಜಲದ
ಸಿಹಿಯನು
ಆದರೆ ಮಾಡದಿರು ನನಗೆ ನಾಕವೆಂಬ ಅವನತಿಯ
ಕಹಿಯನು
ಬದುಕಲು ಬಿಡು ನಿನ್ನಂತೆ ಮರವೆಂಬ ಈ ಬಡಪಾಯಿ
ಜೀವಿಯನು

ನಿನ್ನ ಆ ಕರುಣೆಯಲಿ ಸಾಗಿಸುತಿಹೆನು ಇಂದು ನಾನು ಈ
ನನ್ನ ಬದುಕನು
ಎಂದಿಗೂ ಮಾಡೆನು ಅನ್ಯರ ಬದುಕಿಗೆ ದುಗುಡನು
ಸದಾ ಗೌರವಿಸುವೆನು ಲೋಕದ ಜನರ ಉಳಿವನು
ಆದರೆ ತೋರದಿರು ನನಗೆ ಅಳಿವೆಂಬ ಹಾದಿಯನು

ಉತ್ತರಿಸುವಿರಾ....

(ಚಿತ್ರಕವನ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕವಿತೆ)

ವಿಶ್ವಾಸ್
ದ್ವಿತೀಯ ಎಂ.ಕಾಂ.

ಮಿಡಿಯಲಿಲ್ಲವೇ ನಿಮ್ಮಯ ಮನ
ಉಳಿಸುವುದಿಲ್ಲವೇ ನಮ್ಮೂರ ವನ
ಕಡಿಯಲು ಸೇರಿದಿರಿ ಎಲ್ಲಾ ಜನ
ಇದಕೂ ಬೇಕೆ ನನ್ನಯ ನೆರಳು?

ರೈತನ ನೇಣಿನ ಕೊರಳಿಗೂ ನೆರಳಾದೆನಿಲ್ಲಿ
ಸತ್ತಾಗ ಉರಿಸಲು ನಮ್ಮನೇ ಕೊಲ್ಲುವರಲ್ಲಿ
ಯಾರಿಗೆ ಹೇಳಲಿ ನನ್ನ ನೋವ?
ಸಂಚು ನನ್ನ ಬುಡದಲ್ಲೇ ರೂಪಿಸುವಾಗ

ಯಾರನ್ನು ಹುಡುಕುವಿರಿ ನಾಳೆ
ಬಿಸಿಲಲ್ಲಿ ದಣಿದು ಬಂದಾಗ?
ಯಾರನ್ನು ಉರಿಸುವಿರಿ ನಾಳೆ
ನೀವೇ ಸತ್ತು ಬಿದ್ದಾಗ?

ಏನೆಂದು ಉತ್ತರಿಸುತ್ತೀರಿ ಮೃಗ ಪಕ್ಷಿಗಳಿಗೆ?
ಎಲ್ಲೆಂದು ಹುಡುಕುತ್ತೀರಿ ಹೂ ಹಣ್ಣುಗಳಿಗೆ?
ಯಾರು ಆಧರಿಸುತ್ತಾರೆ ಗಿಡಬಳ್ಳಿಗಳ?
ಹೇಗೆ ವಿವರಿಸುವಿರಿ ಮಕ್ಕಳಿಗೆ ಮರಕೋತಿಯಾಟವ?
ಹೇಳಿ ಮಹಾಜನಗಳೇ...ಹೇಳಿ.

" ಮಾತು ಕಲಿಯಬೇಕು , ಮಾತಿನ ನೀತಿ ತಿಳಿಯಬೇಕು
ಮಾತು ಬಲ್ಲ ಮಹಾಜ್ಞಾನಿಯ ಕೂಡ
ಕತ್ತಿ ಹಾಂಗ ಬೆನ್ನ ಹತ್ತಿರಬೇಕು"

– ಕಡಕೋಳ ಮಡಿವಾಳಪ್ಪ

ರಾಜಕೀಯ

ಅರ್ಪಿತಾ ಬಲ್ಲಾಳ್
ದ್ವಿತೀಯ ಬಿ.ಕಾಂ.

ದಿನಾ ನಡೆವ ರಾಜಕೀಯ ದೊಂಬರಾಟ
ಕುರ್ಚಿಗಾಗಿ ಬರೀ ಕಚ್ಚಾಟ
ಅರಿದವರಿಲ್ಲ ಜನರ ಸಂಕಟ
ಭ್ರಷ್ಟತೆಯ ಜನಜೀವನದ ಮೇಲಾಟ

ಅಧಿಕಾರಕ್ಕೆ ಬರುವ ಮೊದಲು
ಆಶ್ವಾಸನೆಗಳ ಮಹಾಪೂರ
ಬಂದ ಮೇಲೆ ಯಾರಿಗೂ ನೆನಪಿಲ್ಲ
ಕೊಟ್ಟ ವಚನಗಳ ಸಾರ

ಒಂದು ಪಕ್ಷ ಇನ್ನೊಂದರ ಮೇಲೆ
ನಡೆಸುತ್ತಿದೆ ಗೂಬೆ ಕೂರಿಸುವ ಯತ್ನ
ಯಾರೂ ಮಾಡುತ್ತಿಲ್ಲ ಜನರ
ಸಂಕಟ ಆಲಿಸುವ ಪ್ರಯತ್ನ

ಐಷಾರಾಮಿ ಕಾರು ಬಂಗಲೆ
ತನಗಿರಲಿ ತನ್ನವರಿಗಿರಲೆಂಬ ಮೋಹ
ಅಷ್ಟಾದರೂ ಸಾಕೇ ಇನ್ನಷ್ಟು ಕೋಟಿ
ಮಾಡಬೇಕೆಂದು ವ್ಯಾಮೋಹ

ತುತ್ತು ಅನ್ನಕ್ಕಾಗಿ ಪರದಾಡುತ್ತಿರುವ ಜನರು
ಜನರ ಜೀವನದ ಮೇಲೆ ಅಡುವ ಸರಕಾರ
ಯೋಜನೆಗಳು ಹಲವಾರು
ಪಾಲುಪಡೆದವರು ಯಾರ್ಯಾರೋ....

ಜನರಿಗೆ ಸಾಕಾಗಿದೆ ಈ ರಾಜಕೀಯ
ದಿನಕ್ಕೊಂದು ಹೇಳಿಕೆಗಳ ನಾಟಕೀಯ
ಜನಕೋಟಿಗೊಂಡಿದೆ ಬೇಸರ
ಎಚ್ಚೆತ್ತುಕೊಳ್ಳಲಿ ಇನ್ನಾದರೂ ಸರಕಾರ

ಶ್ರೀ ಕೃಷ್ಣ

ಆಕಾಶ್ ಎಸ್. ಕೈಕಿನಿ
ತೃತೀಯ ಬಿ.ಕಾಂ.

ನಂದ ನಂದನ ನೀನು ಶ್ರೀಕೃಷ್ಣಾ
ಸರ್ವರನ್ನು ಸಲಹುವ ಶ್ರೀ ಕೃಷ್ಣಾ...
ಕಷ್ಟದಲಿ ಬಾಳ ಬೆಳಕಾಗಿ, ಜ್ಯೋತಿಯನ್ನು ಬದುಕಲ್ಲಿ
ಬೆಳಗಿಸುವ ಶ್ರೀ ಕೃಷ್ಣಾ

ಪ್ರೀತಿ ಪಾತ್ರನಾಗಿ ಬಾಳ ಬೆಳಕಾಗಿ ಬರುವ ಶ್ರೀ ಕೃಷ್ಣ
ನಂಬಿದ ಭಕ್ತರನ್ನು ಎಂದೆಂದು ಕೈ ಬಿಡದ ಶ್ರೀ ಕೃಷ್ಣ
ಅಲಂಕಾರವನ್ನು ಮೆಚ್ಚಲು ಶ್ಯಾಮವರ್ಣದ ನನ್ನ ಪ್ರೀತಿಯ
ಕೃಷ್ಣಾ

ದೇವಕೀನಂದನ...ದೇವಕೀನಂದನ...ದೇವಕೀನಂದನ
ಅವನ ಸೌಂದರ್ಯವೇ ಎಲ್ಲರ ಮೆಚ್ಚುಗೆಗೆ ಕಾರಣ,
ವಿವಿಧ ರೀತಿಯ ಹೆಸರಿನಿಂದ ಕರೆಯಲ್ಪಡುವ ನನ್ನ ಕೃಷ್ಣಾ
ಕಣ್ಣೀರಿನ ಸ್ಥಿತಿಯಲ್ಲಿ ಪ್ರೀತಿಪಾತ್ರನಾಗಿ ಬರುವ ನನ್ನ ಕೃಷ್ಣಾ
ದುಷ್ಟರನ್ನು ಎಂದೆಂದೂ ಬಿಡದ ನಮ್ಮ ಕೃಷ್ಣಾ
ತಕ್ಕ ಬುದ್ಧಿಯನ್ನು ಕಲಿಸುವ ಶ್ರೀ ಕೃಷ್ಣಾ

ಅವನ ರೂಪುಗಳೇ ಹಲವು, ಅದನ್ನು ನೋಡಲು ಎರಡು
ಕಣ್ಣುಗಳು ಸಾಲದು
ಭಕ್ತರನ್ನು ತನ್ನ ಮಕ್ಕಳಂತೆ ಕಾಯುವ ಶ್ರೀಕೃಷ್ಣಾ
ಮೀರಾಬಾಯಿಯ ಭಕ್ತಿಗೆ ಒಲಿದ ನನ್ನ ಕೃಷ್ಣಾ

ತುಳಸಿಯಲ್ಲಿ ನೆಲೆಸುವ ನಮ್ಮ ಕೃಷ್ಣಾ
ತುಳಸಿ ಮಾಲೆಯೇ ಅವನ ಪ್ರೀತಿ,
ಮೊಸರನ್ನು ಕದ್ದು ತಿನ್ನುವ ನಮ್ಮ ಕಳ್ಳ ಕೃಷ್ಣಾ
ಕೃಷ್ಣ ಜನ್ಮಾಷ್ಟಮಿಯಂದು ಹಲವೆಡೆ
ಶೋಭಿಸುವ ಶ್ರೀ ಕೃಷ್ಣಾ
ಅವನೇ ನನ್ನ ಪ್ರೀತಿಯ ಶ್ರಿ ಕೃಷ್ಣಾ

ಭಾವನೆ

ಅರ್ಪಿತಾ ಬಲ್ಲಾಳ್
ದ್ವಿತೀಯ ಬಿ.ಕಾಂ.

ಮಾತನಾಡದ ಮೌನದ ನಡುವೆ
ಮನದಾಳದ ಮಾತಿನ ಕರೆಯೋಲೆ
ಚಿಗುರೊಡೆದಿದೆ ಮನಸಿನ ನಡುವೆ
ಭಾವನೆಯ ಸಂಕೋಲೆ
ತಿಳಿಸಿದ ಮೌನದ ಮಾತು
ಅದರಲ್ಲೂ ತಿಳಿಯುತ್ತಿತ್ತು ಸೋಲಿನ ರುಜುವಾತು
ತಿಳಿಯದೆ ಹೋಯಿತು ಮೂಕ ಮನಸ್ಸಿಗೆ
ಗೆದ್ದು ನಿಂತಿತ್ತು ಮನಸ್ಸಿನ ಕನಸ್ಸನ್ನು
ಆದರೂ ಅಳಿಯದ ಮನಸ್ಸಿನ ಭಾವನೆ
ಇದೊಂದು ವರ್ಣಿಸಲು ಅಸಾಧ್ಯ ವರ್ಣನೆ
ಚಿಕ್ಕದಾಗಿ ನಿಲ್ಲಿಸಿರುವೆ ಭಾವನೆಯ ಬಣ್ಣನೆ

ಅಪಾರ್ಥ

ಹರ್ಷಿತಾ ಶೆಟ್ಟಿ
ಪ್ರಥಮ ಬಿ.ಕಾಂ.

ನಾ ಬೆಂಕಿಯಾದೆ
ದೀಪವಾಗಿ ನಿನ್ನ ಬಾಳ ಬೆಳಗಲು
ಜ್ವಾಲೆಯಾಗಿ ನಿನ್ನ ಸುಡಲೆಂದಲ್ಲ

ನಾ ಜಲವಾದೆ
ನೀರಾಗಿ ನಿನ್ನ ದಾಹ ತೀರಿಸಲು
ನೆರೆಯಾಗಿ ನಿನ್ನ ಮುಳುಗಿಸಲೆಂದಲ್ಲ

ನಾ ಭುವಿಯಾದೆ
ನಿನ್ನ ಹೊತ್ತು ಪೋಷಿಸಲೆಂದು
ಕಂಪಿಸಿ ಬಾಯ್ತೆರೆದು ನಿನ್ನ ನುಂಗಲೆಂದಲ್ಲ

ಇಂದು ನಾ ಕಂಬನಿ ಮಿಡಿಯುತ್ತಿರುವೆ
ನನ್ನ ಪ್ರೀತಿಯ ಅರಿವು ನಿನಗಾಗಲೇ ಇಲ್ಲವೆಂದು
ನೀ ನನ್ನಿಂದ ದೂರಾದೆ ಎಂದಲ್ಲ

ನಿರೀಕ್ಷೆ

ಮನೀಷ
ದ್ವಿತೀಯ ಬಿ.ಕಾಂ.

ಪ್ರತಿದಿನ ಕೇಳುತಿದ್ದೆ
ನಾ ಆ ಹಕ್ಕಿಯ ಚಿಲಿಪಿಲಿ
ನೀಡುತ್ತಿತ್ತು ಮುದ
ಎನಗೆ ಆ ಹಕ್ಕಿಯ ಇಂಚರ
ನಾ ಏಳುತ್ತಿದ್ದೆ ಅನುದಿನ
ಆ ಚಿಲಿಪಿಲಿ ದನಿಗೆ
ಮುಸ್ಸಂಜೆಯಲ್ಲಿ ಕಾಯುತ್ತಿದ್ದೆ
ಆ ಹಕ್ಕಿಯ ದನಿಗೆ
ಹೀಗೆ ಕಳೆದಿತ್ತು ಕೆಲಕಾಲ
ಕೇಳಲಿಲ್ಲ ನನಗೆ
ಆ ಹಕ್ಕಿಯ ಚಿಲಿಪಿಲಿ
ಕಾಯುತ್ತಿದ್ದೆ ನಾ ಆ ದನಿಗೆ
ನೀರಸವೆನಿಸಿತು ಮುಸ್ಸಂಜೆ
ನೀರಸವೆನಿಸಿತು ಮುಂಜಾವು
ಯೋಚಿಸಿದೆ ಆ ಹಕ್ಕಿಯ ಕುರಿತು
ಅಣಕಿಸಿತು ನನ್ನ ನಾ ತುಂಡರಿಸಿದ ಮರ
ಮರುಗಿದೆ ನಾ ಎನ್ನ ತಪ್ಪಿಗೆ
ಪ್ರಾಯಶ್ಚಿತ್ತವಾಗಿ ನಾನೆಟ್ಟೆ ಒಂದು ಗಿಡ

ಪ್ರಕೃತಿ ಮಾತೆ

ಮನೀಷ
ದ್ವಿತೀಯ ಬಿ.ಕಾಂ.

ಹೇ ಮಾತೆ ನಿನ್ನ ಹೆಸರು ಕೇಳಲೆಷ್ಟು ಸುಂದರ
ನೀ ಆಗಿರುವೆ ನಮ್ಮ ಜೀವನದ ಆಧಾರ
ನೀನೊಂದು ದೇವರ ಸುಂದರ ಸೃಷ್ಟಿ
ಆದರೆ ನಿನ್ನ ಮೇಲೆ ಬೀಳುತ್ತಿದೆ ಕೆಟ್ಟವರ ದೃಷ್ಟಿ

ನಿನ್ನ ಒಡಲಲ್ಲಿ ಹರಿಯುತ್ತಿವೆ
ಮಲಿನಗೊಂಡ ಹಲವಾರು ನದಿ
ನಿನ್ನ ನಾಶವೇ ಮಾನವನ ವಿನಾಶದ ಹಾದಿ

ನೀಡುತ್ತಿರುವೆ ನಮಗೆ ಶುದ್ಧವಾದ ಗಾಳಿ
ಮಾನವನಿಂದ ಆಗುತ್ತಿದೆ ಅದರ ಮೇಲೆ ದಾಳಿ
ನಿನಗೆ ನೀಡಿದರೆ ತಾಯಿಯ ಸ್ಥಾನ
ಉಳಿಯುವುದು ನಮ್ಮೆಲ್ಲರ ಪ್ರಾಣ, ಮಾನ

ಸಾಧ್ಯವೋ...ಅಸಾಧ್ಯವೋ....

ರಕ್ಷಿತ್
ಪ್ರಥಮ ಬಿ.ಎ.

ಆಕಾಶಕ್ಕೊಂದು ಕಲ್ಲು ಹೊಡೆದು
ಸೂರ್ಯನನ್ನೇ ಧರೆಗಿಳಿಸಿ
ನೆಲದೊಳಗಿನೆಲ್ಲ
ಬಯಕೆಗಳ
ತೃಪ್ತಿಗೊಳಿಸಬೇಕಿದೆ

ಚಂದಿರನ
ಬೆಳದಿಂಗಳಿನಿಂದಲೇ
ಹಾಲ ಕರೆದು
ಹಸಿದ ಕಂದಮ್ಮಗಳ
ಕಾವು ಆರಿಸಬೇಕಿದೆ

ತಾರೆಗಳನ್ನೇ ಕಿತ್ತು ಕಿತ್ತು
ಮನೆಯ
ತೋರಣವ ಕಟ್ಟಿ
ಕಟ್ಟಡಗಳ ನಡುವಿನ
ಮಾವಿನ ಮರವ
ರಕ್ಷಿಸಬೇಕಿದೆ

ಸಿರಿವಂತರ ಬಯಕೆಗಳ
ಬಡವರ ಹಸಿವಿನ
ಹಿರಿ–ಹಿರಿಯರೆಲ್ಲರ
ದಾಹ ತೀರಲು
ಚಂದಿರನಿಂದ
ಗಾಳಿ ನೀರು ಎರವಲು
ಪಡೆಯಬೇಕಿದೆ.

ಭೂಮಿಯಲ್ಲಿ
ಜಾಗವೇ ಸಾಲದಾದಾಗ
ಮಂಗಳನಲ್ಲೋ
ಶುಕ್ರ, ಗುರು ಗ್ರಹಗಳಲ್ಲೋ
ಸೈಟ್ ಖರೀದಿಸಬೇಕಿದೆ.

ಹಣ...ಹಣ....ಹಣ..!

ಎನ್. ಆರ್. ನಮಿತಾ ರಾವ್
ದ್ವಿತೀಯ ಬಿ.ಕಾಂ.

ಓ ಹಣವೇ.... ನಿನಗೇಕೆ
ಜನರ ಮೇಲಿಷ್ಟು ವ್ಯಾಮೋಹ?
ನಿನ್ನಿಂದಾಗಿ ಜನರು ಪರರಿಗೆ
ಮಾಡುತ್ತಿದ್ದಾರೆ ದ್ರೋಹ....
ಚಾಲ್ತಿಯಲ್ಲಿದ್ದಾಗ ಮಾತ್ರವೇ
ನಿನಗಿದೆ ಮೌಲ್ಯ
ಒಮ್ಮೆ ಬ್ಯಾನ್ ಆದರೆ ಸಾಕು
ಕೇಳುವವರಿಲ್ಲ ನಿನ್ನ ಕೌಶಲ್ಯ
ನಿನ್ನೆ ಆಗಿದ್ದೆ ನೀನು
ಗರಿಗರಿ ಸಾವಿರ ನೋಟು
ಆದರೆ ಇಂದು ನೀನು
ಕೇವಲ ಕಾಗದದ ಚೂರು
ಇಂದು ಬೆಲೆಯಿದ್ದರೆ ನಾಳೆಯಿಲ್ಲ
ನಾಳೆಯಿದ್ದರೂ ಶಾಶ್ವತವಲ್ಲ
ಆದರೂ ಕೆಲವು ಜನರಿಗೆ
ನೀನೇ ಎಲ್ಲಾ...
ಮನುಷ್ಯನಿಗೆ ತಿಳಿಯೊಲ್ಲವೆಂದೇ ಹೇಳುತ್ತಿರುವೆ
ನೀನಾದರೂ ಎಚ್ಚರವಾಗುವೆಯಾ?
ಹೀಗೆಯೇ ಎಲ್ಲರನು ಸೆಳೆದರೆ,
ಅವರೊಂದಿಗೇ ನಾಶವಾಗುತ್ತೀಯ....
ಬೇರೆ ದೇಶದ ಸ್ಪರ್ಧಿಗಳೊಂದಿಗೇ
ನಿನ್ನ ದಿನನಿತ್ಯದ ಕಾದಾಟ
ಏಳು–ಬೀಳು ಎಷ್ಟೇ ಇದ್ದರೂ
ಮುಗಿಯುವುದಿಲ್ಲ ನಿನ್ನ ಈ ಹೋರಾಟ...
ನೀನಿಲ್ಲದಿದ್ದರೆ ಮಾನವ ಜೀವನ
ಈಗ ಕಠಿಣವೆನಿಸಬಹುದು
ಆದರೆ ಜನರ ಹುಚ್ಚು ಭ್ರಮೆಯೇನೆಂದರೆ
ಹಣವಿಲ್ಲದೆ ಬದುಕು ಅಸಾಧ್ಯ ಎಂಬುದು...
ನೀನೇನೇ ಆಗಿರು ನಿನ್ನ
ಎಷ್ಟು ದಿನ ಮೆರೆಸುವರೋ?
ಕೊನೆಗೆ ಅವರ ಕೆಲಸದ ನಂತರ
ನಿನ್ನನ್ನೇ ಮರೆಯುವರೋ?
ಈ ಕೆಟ್ಟ ಹಣದ ಮೋಹವು
ಹಚ್ಚುತ್ತಿದೆ ಭೂಮಿಗೆಲ್ಲಾ ಕಿಚ್ಚು
ಭೂಮಿಯು ಉಳಿಯಲೇಬೇಕಾದರೆ
ಜನರಲ್ಲಿ ನಾಶವಾಗಬೇಕು 'ಹಣದ ಹುಚ್ಚು'

ಮನೋಜವೆಂಬ ಸಾಮಜ

ಆದರ್ಶ ಎ ಪದ್ಮಶಾಲಿ
ತೃತೀಯ ಬಿ.ಕಾಂ.

ನಾಯಕರ ನಾಯಕ ನಿನಗೆ ನೀನೇ ಸಾಟಿ
ಮೀರಿಸಲಾಗದು ನಿನ್ನನು ಮಾತಿನಲಿ ಆ ಪುಣ್ಯಕೋಟಿ
ಬೆಳೆದಿರುವೆ ನೀ ಧೈರ್ಯವೆಂಬ ಸಪ್ತ ಸಾಗರವ ದಾಟಿ
ಧನ್ಯವಾಗಿಸಿತು ಜೀವನ ಆ ನಿನ್ನ ಭೇಟಿ ॥1॥

ನಿನ್ನ ಆಕ್ರೋಶಕ್ಕೆ ಆ ಸಿಡಿಲಿನ ಗರಿಯೇ ಅಬ್ಬರ
ನೊಂದ ಹೃದಯಕೆ ಆ ನಿನ್ನ ಹೃದಯವೇ ಹಂದರ
ಪ್ರೀತಿ, ಸ್ನೇಹ, ಕರುಣೆಯೇ ಈ ನಿನ್ನ ಜೀವನದ ಚಪ್ಪರ
ನೊಂದ ಜೀವಕೆ ಸದಾ ನೀನಾಗಿರುವ ನಗುವ ಚಂದಿರ ॥2॥

ನೀನಿದ್ದರೆ ರಾಜ್ಯಕ್ಕಿಹುದು ತುಂಬಿದ ಕಳೆ
ತೊಲಗುವುದು ಸಕಲ ಪ್ರಜೆಗಳ ಕಷ್ಟ–ಕಾರ್ಪಣ್ಯದ ಕೊಳೆ
ತುಂಟ ತಕರಾರುಗಳಿಗೆ ನೀ ತೊಡಿಸುವೆ ದಾಸ್ಯದ ಬಳೆ
ಧೈನ್ಯದ ಮೊರೆಗೆ ನೀನಾಗಿರುವೆ ತುಂಬಿದ ಹೊಳೆ ॥3॥

ಸೂರ್ಯನನ್ನೂ ಮೀರಿಸಬಲ್ಲದು ಆ ನಿನ್ನ ನೋಟ
ಮೋಸ ಅನ್ಯಾಯಗಳಿಗೆ ಹೊಡಿಸುವೆ ಮಾತೆಂಬ ಚಾಟಿಯ ಏಟ
ಸಜ್ಜನರ ರಕ್ಷಣೆಗೆ ನೀ ಸಾಗಿರುವೆ ಸಾವಿರ ಓಟ
ಸತ್ಯಧರ್ಮವೇ ಆ ನಿನ್ನ ಹೊನ್ನ ಕಲಶದ ಪೇಟ ॥4॥

ಹೋರಾಟದಲ್ಲಿ ನೀನಾಗಿರುವೆ ಆರ್ಭಟದ ಹರಿ
ನೀ ಗುರಿಯಿಟ್ಟು ಸಾಗಿದರೆ ಸೋಲುವುದು ಆ ಉಗ್ರ ಅರಿ
ನಿನ್ನ ಖಡ್ಗಿಯನ್ನು ಕಂಡು ನಾಚಿತು ಆ ಪರ್ವ ಕರಿ
ನಿನ್ನ ಹೆಸರಲ್ಲೇ ತುಂಬಿರುವುದು ಸ್ಫೂರ್ತಿಯೆಂಬ ಝರಿ ॥5॥

ಜಗದ ಏಳಿಗೆಯ ಬಯಸುವ ನೀ ಒಬ್ಬ ಚಿಂತಕ
ಧೈರ್ಯವ ಕಳೆದುಕೊಂಡ ಜೀವಕೆ ನಿನ್ನ ಬದುಕೇ ಒಂದು ಪುಸ್ತಕ
ಸರ್ವರಲಿ ಒಳಗೊಂಡು ಸರ್ವಜ್ಞತೆಯ ಗಳಿಸಿರುವುದು ಆ ನಿನ್ನ ಮಸ್ತಕ
ಸಾಧನೆಯ ಶಿಖರಾರ್ಥಿಗಳಿಗೆ ನೀನಾಗಿರುವೆ ಗುರುವೆಂಬ ಜನಕ ॥6॥

ಮೆಚ್ಚಿದೆ ನಾ ನಿನ್ನ ಆ ಧೈರ್ಯದ ಗುಣವನು
ಕೊಂಡಾಡಿದೆ ನಾ ಆ ನಿನ್ನ ನಿಷ್ಕಲ್ಮಶ ಮನಸನು
ಸ್ತುತಿಸಿದೆ ನಾ ಆ ನಿನ್ನ ಸ್ಫೂರ್ತಿಯ ಸೆಲೆಯನು
ಬಯಸಿದೆ ನಾ ನಿನ್ನ ಆ ಶಾಶ್ವತ ಸ್ನೇಹವನು ॥7॥

ನೀನಿಲ್ಲದೇ !

ಆದರ್ಶ ಎ ಪದ್ಮಶಾಲಿ
ತೃತೀಯ ಬಿ.ಕಾಂ.

ಬದುಕೆಂಬ ಹರಿವ ನದಿಯಲಿ
ಮನಸೆಂಬ ಚಂಚಲ ದೋಣಿಯಲಿ
ಸಾಗುವ ಪಯಣ ನನ್ನದು ॥1॥

ದುಃಖವೆಂಬ ಆಕ್ರೋಶದ ಮಡಿಯಲಿ
ತಾತ್ಸಾರವೆಂಬ ಆಯ ಚೌಕಟ್ಟಿನಲಿ
ಸಾಗುವ ಪಯಣ ನನ್ನದು ॥2॥

ದ್ವೇಷವೆಂಬ ಬಾಗಿಲ ಕಡಿಯಲಿ
ಹೊಲಸೆಂಬ ಮನದ ಮಡುವಲಿ
ಸಾಗುವ ಪಯಣ ನನ್ನದು ॥3॥

ಮರೆಯಬೇಕೆಂಬ ಹಠದ ಹಾದಿಯಲಿ
ನೆನಪೆಂಬ ಹೊನ್ನ ಶೂಲದಲಿ
ಸಾಗುವ ಪಯಣ ನನ್ನದು ॥4॥

ಪ್ರೀತಿಯೆಂಬ ಎರಡಕ್ಷರದ ಓಲೆಯಲಿ
ಕ್ಷಮೆಯೆಂಬ ಮುಗ್ಧಮನದ ಮಿಡಿಯಲಿ
ಸಾಗುವ ಪಯಣ ನನ್ನದು ॥5॥

ಅತ್ತ ಹೇಳಲು ಆಗದೆ, ಇತ್ತ ಬಚ್ಚಿಡಲು ಬಾರದೆ
ನೊಂದ ಮನಕೆ ಕರುಣೆಯೇ ಸಿಗದೆ
ಸಾಗುವ ಪಯಣ ನನ್ನದು ॥6॥

ಗುರಿಯಿದೆ ಕಣ್ಣಂಚಿನ ತಿರುವಲಿ
ಛಲವಿದೆ ಮನದ ಹಂದರದಲಿ
ಆದರೆ ಹೇಗೆ ಸಾಗಲಿ ನೀನಿಲ್ಲದ ಈ
ನನ್ನ ಬಾಳ ಪಯಣದಲಿ ॥7॥

"ಪ್ರತಿಷ್ಠೆ ಬದಿಗಿಟ್ಟು ಜ್ಞಾನ ಸಂಪಾದಿಸುವುದರಿಂದ ವ್ಯಕ್ತಿ ಬೆಳೆಯಲು ಸಾಧ್ಯ"
– ಶ್ರೀ ಶ್ರೀ ವಿಶ್ವಪ್ರಿಯತೀರ್ಥ ಸ್ವಾಮೀಜಿ

ನೀನೇಕೆ ಮೌನವಾದೆ

ಆದರ್ಶ ಎ ಪದ್ಮಶಾಲಿ
ತೃತೀಯ ಬಿ.ಕಾಂ.

ಮನಸೆಂಬ ಮೌನದ ಬಿರುಬಿಸಿಲಲಿ
ಮೂಡಿದ ನಿರೀಕ್ಷೆಯಂಬ ಕಿರು ಕನಸಲಿ
ಹುರುಪೆಂಬ ನಂಬಿಕೆಯ ತೋರಣದಲಿ
ಕಾಣ ಬಯಸಿತು ಮನ ನಿನ್ನಾಗಮನವ ಈ ಹೃದಯದಲಿ ॥1॥

ಮನಸ್ಸಿಗಾಯಿತು ಮಾಡಿದ ತಪ್ಪಿದ ಅರಿವು
ತಿಳಿಯ ಬಯಸಿತು ನಿನಗೆ ಆ ನನ್ನ ನೋವು
ಆದರೆ ಕೇಳಬಯಸದ ಒಲ್ಲದ ಮನಸ್ಸಿನ ನೀನು
ತೋರಿದ ಮನಕೆ ನಿರ್ಲಕ್ಷ್ಯವೆಂಬ ಬೇವು ॥2॥

ಮೋಡವು ಕರಗಿತು ಸೂರ್ಯನ ಮೋಹನ ಪ್ರಕಾಶಕೆ
ಮಳೆಯು ಸುರಿಯಿತು ಭೂಮಿಯ ಅಪ್ಪುಗೆಗೆ
ನವಿಲು ಸೋತು ನರ್ತಿಸಿತು ನಿಸರ್ಗದ ಆ ಸೊಗಕೆ
ಆದರೆ ನೀನೇಕೆ ಮೌನವಾದೆ ಈ ನನ್ನ ವಿನಮ್ರ ಮೊರೆಗೆ ॥3॥

ಕಾಯುವೆ ನಿನಗಾಗಿ

ಆದರ್ಶ ಎ ಪದ್ಮಶಾಲಿ
ತೃತೀಯ ಬಿ.ಕಾಂ.

ಮಾತಿನ ಒರತೆಗಿಂತ, ಮೊಗದ ನಗು ಶ್ರೇಷ್ಠ
ಮೊಗದ ನಗುವಿಗಿಂತ, ಮನದ ಮಾತು ಶ್ರೇಷ್ಠ
ಮನದ ಮಾತಿಗಿಂತ, ಹೃದಯದ ಮಿಡಿತ ಶ್ರೇಷ್ಠ
ಹೃದಯದ ಮಿಡಿತಕ್ಕಿಂತ, ನಿನ್ನ ನೆನಪಲಿ ಕಾಯುವ ಈ
ನನ್ನ ಪ್ರೀತಿ ಶ್ರೇಷ್ಠ ॥1॥

ಜೊತೆಗಿರುವಾಗ ತಿಳಿಯದೇ ಹೋಯಿತು ಆ ನಿನ್ನ
ವಿಶಾಲ ಪ್ರೀತಿ
ಸದಾ ನೋಯಿಸುತ್ತಿದ್ದ ನಿನ್ನ ಒಂದಲ್ಲ ಒಂದು ರೀತಿ
ಆದರೆ ಇಂದು ನೀ ನನ್ನೊಂದಿಗಿಲ್ಲದ ಈ ನನ್ನ ಸ್ಥಿತಿ
ಕಾಡುತಿದೆ ಮನವ ಪ್ರತಿಕ್ಷಣ ಸಾವಿರ ರೀತಿ ॥2॥

ನೀ ಮೂಡಿಸಿದೆ ನನ್ನಲ್ಲಿ ಆತ್ಮಸ್ಥೈರ್ಯವ
ತುಂಬಿದೆ ಮನದಲಿ ಸ್ಫೂರ್ತಿಯ ಸೆಲೆಯ
ತೀರಿಸಲಾಗದು ಆ ನಿನ್ನ ಕರುಣೆಯ ಬೆಲೆಯ
ಆದರೂ ಕಾಯುವೆ ನಿನಗಾಗಿ ಶತಶತಮಾನವ ॥3॥

ಭರತ ಮಾತೆಗೆ

ಅಮೃತಾ ಹೆಚ್. ಕೆ.
ಪ್ರಥಮ ಬಿ.ಎಸ್ಸಿ.

ಆಶ್ರಯದಾತೆ ಪವನಪುನೀತೆ
ಓ ತಾಯಿ ಭಾರತಮಾತೆ

ಅಂದು ನಿನ್ನ ಪಾದ ತೊಳೆಯುತ್ತಿದ್ದ ಸಾಗರ
ಇಂದು ನಿನ್ನ ಮಕ್ಕಳ ಅಜ್ಞಾನದಿಂದ ಕಸದ ಆಗರ
ಅವರಿಗೆ ಬಿಡದಿಹ ಹಣ ಆಡಂಬರದ ಗರ
ಇದ ತಿದ್ದಿ ನೀ ಹರಸು ಮನಸಾರೆ

ಭಾರತ ಹಸಿರು ವನಗಳ ನಾಡು
ಎಂದು ಸಾರಿತು ಕವಿಗಳ ಹಾಡು
ಖಗ–ಮೃಗಗಳು ಬಿಟ್ಟುಬರುತ್ತಿವೆ ಕಾಡು
ಅರಣ್ಯವೆಲ್ಲ ಕಡಿದು ಅವಕ್ಕಿಲ್ಲ ಬೀಡು

ಹಣಕ್ಕಾಗಿ ಅವರನ್ನವರೇ ಮಾರಲು ಸಿದ್ಧ
ಆದರೆ ದೇಶದ ಪ್ರಗತಿಯ ವಿಕ್ರಯಕ್ಕೆ ಅಬದ್ಧ
ದುರಾಸೆಯ ಈರ್ಷ್ಯೆ ಪೂರೈಸಲು ಮಾಡುವರು ದೇಶ ಛಿದ್ರ
ಇದರಿಂದ ದೇಶವಾಗಿದೆ ಅಭದ್ರ

ದುಡ್ಡಿಗಾಗಿ ಕೈಗೆ ಬಂದಿದೆ ಮಚ್ಚು
ಮಹಿಳೆ ಬಡವರ ಸ್ಥಿತಿ ಕೇಳದವರೇ ಹೆಚ್ಚು
ಅಮ್ಮ ಬಿಡಿಸು ಇವರ ಹಣದ ಹುಚ್ಚು
ಹಿಡಿಸು ಇವರಿಗೆ ದೇಶಭಕ್ತಿಯ ಕಿಚ್ಚು.

ನಮ್ಮ ದೇಶ

ಪ್ರತೀಕ್ಷಾ ಪಿ
ಪ್ರಥಮ ಬಿ.ಎಸ್ಸಿ.

ದೇಶ ಭಾರತವೆಮ್ಮದು
ತಾಯಿ ಭಾರತಿಗೆ ನಮಿಪೆವು
ನೀವು ನಾವೇಕೆನ್ನಲು
ಭಾರತೀಯರೆ ಎಲ್ಲರೂ

ವಿವಿಧ ಭಾಷೆ ಮನಗಳು
ಬಾಳನದಿ, ವನ ಗಿರಿಗಳು
ಭಾರತಿಯ ಸಂಸ್ಕೃತಿಯಿದು
ತನುವು ಎಲ್ಲೇ ಇದ್ದರೂ

ಕಲೆಯ ಅಂದವು ರಮಿಸಲು
ಗೋಧಿ ಭತ್ತ ಬೆಳೆಯಲು
ಪ್ರಕೃತಿ ಸಿರಿಯ ಪರಿಯಿದು
ಇದ ನೋಡಿ ಬವಣೆಯ
ಮರೆವರೂ

ಭಯವ ಮೀರಿದ ಯೋಧರು
ಈ ದೇಶದುಸಿರು ಚಿಣ್ಣರು
ವಿವಿಧತೆಯು ಎಷ್ಟಿದ್ದರೂ
ಈ ಧ್ವಜವ ಯಾರು
ಮರೆವರೂ?

ಕಿರುಗವನ (ಹನಿಗವನ) ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕವಿತೆಗಳು

ಪವಿತ್ರ
ಪ್ರಥಮ ಬಿ.ಎಸ್ಸಿ.

ಬದುಕು –ಬಣ್ಣ

ಬದುಕ ಬಯಕೆಯ ಅರಿತು
ಬಾಳುಹುದು ಬಿಟ್ಟು....
ಬಣ್ಣವ ಹುಡುಕಿ ಹೋದ
ಮನಕಿಂದೇಕೋ ಬರಡಾಗುವ ಭಯ....

ನನ್ನೊಲವೇ....

ನೀ ಮೌನದಲ್ಲಿರುವ ಪ್ರತಿಕ್ಷಣ
ನನ್ನೆದೆಯ ಬಡಿತದಲ್ಲೇನೋ ಏರುಪೇರು...
ನಿನಗೇಕೆ ಕೇಳಿಸದದು...
ಅಲ್ಲಿಯೂ ಮಿಡಿಯುತಿದೆ
ನಿನ್ನದೇ ಹೆಸರು...

ಸಾಧನೆಯ ಗಾಳಿಪಟ

ಜಯಾ
ಪ್ರಥಮ ಬಿ.ಎಸ್ಸಿ.

ವಿಶ್ವಭೂಪಟದಲ್ಲಿ ನಿನ್ನ ಹೆಸರು ಕಾಣಲಿ
ಅದನ್ನು ಸಾಧಿಸುವ ಹಠ ನಿನ್ನದಾಗಲಿ....
ನಿಶ್ಚಲ ಹೃದಯವೇ ನಿನಗೆ ಬಲವಾಗಲಿ
ನಿಷ್ಕಪಟ ಪರಿಶ್ರಮವೇ ನಿನ್ನ ದೈವವಾಗಲಿ....

ನಿನ್ನ ಮೇಲೆ ನಿನಗೆ ನಂಬಿಕೆ ಇರಲಿ
ಆ ನಂಬಿಕೆ ದುಷ್ಟ ಅಹಂಕಾರವಾಗದಿರಲಿ....
ನೀ ಕಂಡ ಸೋಲುಗಳೇ ನಿನಗೆ ಪಾಠವಾಗಲಿ
ನಿನ್ನ ನಾಳೆಯ ಗೆಲುವಿಗೆ ಸ್ಫೂರ್ತಿ ತುಂಬಲಿ....
ನಿನ್ನ ಕೀರ್ತಿ ಕೇಳಿ ನಿನ್ನ ತುಟಿಗಳು ನಿನ್ನದೆಗೆ

ನೀಡುವಂತೆ ನಗು ಬೀರಲಿ....
ಅನ್ಯರಿಗೆ ನೆರವಾಗುವ ಗುಣ ನಿನ್ನಲ್ಲಿರಲಿ
ಇದೇ ನಿನ್ನ ಸಾಧನೆಯ ಗಾಳಿಪಟವಾಗಲಿ....

ಮರಳು ಮನುಜ

ಮಣ್ಣಲ್ಲಿ ಮಣ್ಣಾಗುವ ಮುರುಕು ದೇಹಕ್ಕೆ
ಮೆರಗಿನ ಬಣ್ಣವ ನೀಡುವ ಮನುಜ ...
ಮನಸಿನ ಮಾತು ಮರೆತು,
ತನ್ನಯ ಮುಗ್ದತೆ ಅಳಿಸಿ...
ಮಸುಸಿನ ಮಂಜಿನ ಮರೆಯಲ್ಲಿ...
ತನ್ನನ್ನೇ ತಾನು ಮರೆಯಾಗಿಸುತ್ತಿದ್ದಾನೆ.

ಸ್ನೇಹ

ಪ್ರೀತಿಯ ಹಳ್ಳದಲ್ಲಿ
ಸಮಾಧಿಯಾದ ಹೃದಯಕ್ಕಾಗಿ...
ಕಣ್ಣೀರು ಜಿನುಗಿತ್ತು...
ಮರೆತೆಯಾ???....
ನಿನ್ನ ಪಾಲಿಗೆ ನಾನಿರಲಿಲ್ಲವೇ....
ಎಂದು ಸ್ನೇಹ ಅಳುತ್ತಿತ್ತು....

ಅರಿಯದ ಮನಸೇ ....

ಅರಿಯದ ಬದುಕಿನೊಳಗೆ
ಅಳಿಸಲಾಗದ ನೆನಪುಗಳ ಹುಡುಕಿ
ಅಲೆದಾಡುವ ಮನವೇ...
ಬಾಡಿ ಬಣ್ಣವ ತೊರೆದಿದೆ
ಬದುಕೆಂಬ ಹೂವು ....
ಬರಿದಾದ ಬದುಕಿಗೆ ಬಣ್ಣವ ತುಂಬುವ ಆಸೆಯೇಕೆ?....
ಬೇಡ ನನ್ನ ಮುದ್ದು ಮನಸೇ...
ನೀ ನನ್ನೊಳಗೆ ಬಂದು ನೆಲೆಸು...

ಸಂಧ್ಯಾ ಭಟ್
ದ್ವಿತೀಯ ಬಿ.ಎಸ್ಸಿ.

ಜೀವ

ಜೀವವಿಲ್ಲದ ಈ ಜೀವದೊಳಗೆ
ಜೀವ ತುಂಬುವ ಏಕೆ ಜೀವವೇ
ಜೀವಕ್ಕೆ ಜೀವ ಎಂದು ತಿಳಿದ
ಜೀವಿಗಳೇ ಜೀವನದಿಂದ ದೂರವಾದರೆ
ಈ ಜೀವಕ್ಕೆ ಉಳಿಯುವುದು ಬರಿ ನೋವೇ

ನೆನಪು

ಎಲ್ಲೋ ಹೋಗುತ್ತಿದೆ ಮನ
ಕಾಣದ ಕಡಲ ತೊರೆಯ ತೊರೆದು ಈ
ನೆನಪಿನಿಂದಾಚೆ
ನೆನಪುಗಳೇ ಈಗ ಜೀವವ ಕೊಲ್ಲುತ್ತಿದೆ
ಉಸಿರ ಬಿಗಿಹಿಡಿದು ನೋವನು ತಡೆ ಹಿಡಿದು

ನಾಲ್ಕು ದಿನದ ಪ್ರೀತಿ

ಸಂಧ್ಯಾ ಭಟ್
ದ್ವಿತೀಯ ಬಿ.ಎಸ್ಸಿ.

ನಾಲ್ಕು ದಿನದ ಪ್ರೀತಿ, ನನ್ನ ಬೇಡಿ ಬಂದಿತು.
ಪ್ರೀತಿಯ ಮಳೆಗರೆಯಲು ತಡಕಾಡಿದೆ
ಕೊನೆಯಲ್ಲಿ ಸಿಕ್ಕಿದ್ದು ನೋವಿನ ಘಳಿಗೆಗಳು ಮಾತ್ರ
ಮನಸೆಲ್ಲೋ ಹೋಗಿ ಕೊನೆಯಾಗುವಂತಿವೆ
ಈಗ ಬೇಕಿದೆ ಶಾಂತಿಯ ಬದುಕು
ಶುರು ಎಲ್ಲಿಂದಲೋ ಆಯಿತು
ಈಗ ಕೊನೆ ಎಲ್ಲೋ
ಅದ್ಭುತವ ಸವಿಯಲು ಹೋದೆ
ನನ್ನನ್ನೇ ನಾನು ಕಳೆದೆ...
ಅಂತರಂಗದ ಮಾತುಗಳು ಸ್ಫುಟಿಸಲೆತ್ನಿಸಿತು
ಆ ಮಾತುಗಳೇ ಈಗ ಬದಲಾಯಿತು
ಕೇವಲ ಆ ನಾಲ್ಕು ದಿನದ ಪ್ರೀತಿಯಿಂದ
ಆಕಾಶದ ತಾರೆಯಂತಿದ್ದ ನನ್ನ ಆ ಸ್ಫೂರ್ತಿ
ಕೇವಲ ಕ್ಷಣ ಮಾತ್ರಕ್ಕೆ ಬೆಳಗಿತು ಆರತಿ
ಇನ್ನೇನು ಬಯಸಲಿ ಅದರಿಂದ
ನನ್ನನ್ನೇ ನಾನು ಕಳೆದುಕೊಂಡಿರುವುದರಿಂದ
ಕೇವಲ ಆ ನಾಲ್ಕು ದಿನದ ಪ್ರೀತಿಯಿಂದ
ಉಲ್ಲಾಸದ ಜೀವನ ಹದಗೆಟ್ಟಿತೀಗ
ನೋವುಗಳ ಭಾರವು ಎದೆಯ ತುಂಬಿತೀಗ
ಎಲ್ಲಿಂದಿನ್ನು ಹುಡುಕಲಿ ಮನಕೆ ಶಾಂತಿ
ಎಲ್ಲ ಹೋಯಿತು ನನ್ನಲ್ಲಿದ್ದ ಶಕ್ತಿಯ ಕಾಂತಿ
ಕೇವಲ ಆ ನಾಲ್ಕು ದಿನದ ಪ್ರೀತಿಯಿಂದ...

ಕಾವ್ಯ

ಸಚಿನ್
ಪ್ರಥಮ ಬಿ.ಎ.

ನಾ ಗೀಚಿದ ಮೊದಲ ಪದವೇ ಕಾವ್ಯ
ಅದರಲ್ಲಿ ಕಂಡ ಪ್ರತಿಮೆಯೇ ಕಾವ್ಯ
ಎದೆಯ ಬೀದಿಯಲ್ಲಿ ಮೊದಲ ಹೆಜ್ಜೆ ಇಟ್ಟವಳೇ ಕಾವ್ಯ
ಇವಳೇ ಕಾವ್ಯ ಕಾವ್ಯ ಕಾವ್ಯ

ಶ್ರೀಗಂಧದ ಪರಿಮಳವೇ ಕಾವ್ಯ
ಚಿಗುರೊಡೆಯುವ ಸಮಯವೇ ಕಾವ್ಯ
ಹನಿಗಳ ಚಿಟಪಟ ಕಲರವವೇ ಕಾವ್ಯ
ಇವಳೇ ಕಾವ್ಯ ಕಾವ್ಯ ಕಾವ್ಯ
ಎದೆಯಲ್ಲಿ ಉದಯಿಸಿದ ಹೊಂಗಿರಣವೇ ಕಾವ್ಯ
ಹಾಲಗೆನ್ನೆಯ ಚಂದಿರನ ಬಣ್ಣವೇ ಕಾವ್ಯ
ತಂಗಾಳಿಯ ತಂಪೇ ಕಾವ್ಯ
ಇವಳೇ ಕಾವ್ಯ ಕಾವ್ಯ ಕಾವ್ಯ
ಕಡಲ ಅಲೆಗಳ ನೃತ್ಯವೇ ಕಾವ್ಯ
ಮೌನ ತೀರದ ನಿಶಬ್ಧವೇ ಕಾವ್ಯ
ಕೂಗೋ ಕಡಲ ಝೇಂಕಾರವೇ ಕಾವ್ಯ
ಇವಳೇ ಕಾವ್ಯ ಕಾವ್ಯ ಕಾವ್ಯ
ಕವಿನಾಡ ಕವನವೇ ಕಾವ್ಯ
ಕವಿಯ ವರ್ಣನೆಯ ಸಮಯವೇ ಕಾವ್ಯ
ಶಿಲ್ಪಿಯ ಮೊದಲ ಕೆತ್ತನೆಯೇ ಕಾವ್ಯ
ಇವಳೇ ಕಾವ್ಯ ಕಾವ್ಯ ಕಾವ್ಯ...

ಕಂಬನಿಯ ಮಳೆ

ಸಚಿನ್
ಪ್ರಥಮ ಬಿ.ಎ.

ಹನಿ ಹನಿಯಾಗಿ ಬಂದ ಮಳೆ
ರಬಸದಿ ಸುರಿದ ಮಳೆ
ಸೊಬಗಿನ ನಾಡಾದ ಕೊಡಗಿನ
ಬೆಡಗನ್ನು ಕೊಚ್ಚಿಕೊಂಡೊಯ್ದ ಮಳೆ
ಶಾಂತನಾಗು ನೀ ಓ ಮಳೆರಾಯ, ಶಾಂತಿ ಶಾಂತಿ
ವೃದ್ಧರೆಷ್ಟೋ, ಮಕ್ಕಳೆಷ್ಟೋ ಆ ಚಳಿಯಲೀ...
ಯುವಕರೆಷ್ಟೊ...ಯುವತಿಯರೆಡೆಗೆ ಆ ಸಿಡಿಲಬ್ಬರದಲಿ....
ಗಂಡಸರೆಷ್ಟೊ...ಹೆಂಗಸರೆಷ್ಟೊ....ಆ ಬೀಸೋ
ಗಾಳಿಯಲಿ....
ಪ್ರಾಣಿ ಪಕ್ಷಿಗಳ ಕೂಗೂ ಕೇಳುತ್ತಿದೆ ಆ ಮಳೆಯಲಿ
ಶಾಂತನಾಗು ನೀ ಓ ಮಳೆರಾಯ....ಶಾಂತಿ....ಶಾಂತಿ...
ಹಸಿರು ಕಂಪಿನ ಬೆಟ್ಟದ ಬಿಳಿಸಿದ ಆ ಮಳೆ
ಬಡವರ ತಾಣಗಳನ್ನು ನೆಲಕ್ಕುರುಳಿಸಿದ ಆ ಮಳೆ
ರೈತರ ಬೆಳೆ ಮೈದಾ ಆ ಮಳೆ..
ಅದೆಷ್ಟೊ ಜನರ ನುಂಗಿದ ಆ ಮಳೆ
ಶಾಂತನಾಗು ನೀ ಓ ಮಳೆರಾಯ ಶಾಂತಿ ಶಾಂತಿ
ಇಷ್ಟಾದೇ ನೀನಾದೇ ಕ್ರೂರಿ ಓ ಮಳೆರಾಯ
ಕೇಳದ ಹೋದೆಯಾ
ಕೊಡಗಿ ಜನರ ಕಣ್ಣೀರಿನ ಕಥೆಯಾ...
ಹನಿ–ಹನಿಯ ನಡುವಲ್ಲು ರಬಸದಿ ಸುರಿದೆಯಾ
ಓ ಮಳೆರಾಯ ಶಾಂತನಾಗು ನೀ ಶಾಂತಿ...ಶಾಂತಿ

ಕಿರುಗವನಗಳು

ಸಂಗೀತಾ
ತೃತೀಯ ಬಿ.ಕಾಂ.

ಗೋವು

ಹಾಲು ಕೊಡುತ್ತದೆ ಗೋವು
ಗೋವಿಗೆ ಕೊಡಬೇಡಿ ನೋವು
ಪೂಜಿಸಬೇಕು ನಾವು
ಬಯಸದಿರಿ ಯಾರ ಸಾವು
ಎಂದಿಗೂ ಕೆಟ್ಟವರಾಗದಿರಿ ನೀವು

ಮನಸು

ಶ್ರೀದೇವಿ ಆರ್
ತೃತೀಯ ಬಿ.ಎಸ್ಸಿ.

ಇರುವ ನಾಲ್ಕು ದಿನದಲಿ, ಹೇಳಬೇಡ ದೂರು ನೂರೆಂಟು
ಈ ತಾತ್ಕಾಲಿಕ ಬದುಕಲ್ಲಿಯೂ, ಶಾಶ್ವತ ಕೆಲ ನಂಟು
ಬಣ್ಣ ಬಣ್ಣದಲಿ ಭೇದ ! ಇದು ಬಿಳುಪು ಅದು ಕಪ್ಪು
ಯಾರ ಕೊಂದು ಬಗೆದರೂ ಬರುವ ನೆತ್ತರು ಕೆಂಪು
ಉಡುಗೆಯಿಂದಳೆಯಬೇಡ ಮನುಜನನ್ನು ಬದಲಾಗಿ
ನಂಬು ಏನೂ ತೊಡಿಸಿ ನಟಿಸದ ಶುದ್ಧ ಮನಸನು
ಎಲ್ಲಿ ಕುಂತರೂ ಅಸೂಯೆ !!
ಮನುಜನಿಗೆ ಬಯಕೆ ತಾ ಮೇಲೆ ಹೋಗಬೇಕೆಂದು
ಭಯವಿಲ್ಲವೇ? ಅವನಲ್ಲಿ, ಬಿರುಗಾಳಿಗೆ ಬಾಳುವುದು ತಾ
ಮೊದಲೆಂದು !
ವಿಧಿ ಮಾಡಲಿಲ್ಲ ಭೇದ ಭಾವ, ನೀಡಿತು ಎಲ್ಲರಿಗೂ
ಸಮಾನ ಅವಕಾಶ
ಅದನಂತು ಬೆರೆತು ಬೆಳೆಯಲು ಇರಬೇಕು, ಮನಸು
ನಿಷ್ಕಲ್ಮಶ...

ಮೇಘ

ಶ್ರಾವ್ಯ ಶೆಟ್ಟಿ
ಪ್ರಥಮ ಬಿ.ಕಾಂ. ಎ.

ಮೇಘಗಳೆ ಮಳೆಯಾಗಿ ಇಳೆಯ ತಣಿಸಿ
ನಿಮ್ಮಿಂದ ರೈತರ ಕಣ್ಣೀರ ಒರಸಿ
ಸಂತಸದಿ ಜನರೆಲ್ಲರ ನಗಿಸಿ
ರೈತರ ಮುಖದಲ್ಲಿ ಸಂತಸದ ಕಳೆ ತರಿಸಿ
ಧರೆಗಿಳಿದು ನೀವೆಮ್ಮನ್ನು ಹರಸಿ
ಬರಗಾಲದ ಬೇನೆಯನು ನೀವುಗಳು ತೊರೆಸಿ
ಜಗದ ಜನನಿಯಾಗಿ ನೀವೆಮ್ಮನ್ನು ರಕ್ಷಿಸಿ
ಮಳೆಯಿಲ್ಲದೆ ಬೆಳೆಯಿಲ್ಲ ಎಂಬ ತತ್ವ ಸಾರಿಸಿ
ಜಗಕೆ ನಿಮ್ಮ ಪ್ರಾಮುಖ್ಯತೆಯನ್ನು ತೋರಿಸಿ
ಧರೆಗಿಳಿದು ನೀವೆಮ್ಮನ್ನು ಹರಸಿ
ಕ್ಷಾಮದ ಬರಬಡೆದುದರಿಂದ
ಜನರು ನಿಮ್ಮ ಹಾದಿ ಕಾಯುತಿಹರು ಬೇಗ ಬಂದು
ಹರಸಿ
ಇಳೆಯಿಂದ ಧರೆಗಿಳಿದು ಹಸಿರಿಗೆ ಊಟ ಬಡಿಸಿ
ಬಡದೀನ ಜನರ ಕಷ್ಟಕ್ಕೆ ನೀವು ಸ್ಪಂದಿಸಿ
ಧರೆಗಿಳಿದು ನೀವೆಮ್ಮನ್ನು ಹರಸಿ

ಕಿರುಗವನಗಳು

ಸಂಗೀತಾ
ತೃತೀಯ ಬಿ.ಕಾಂ.

ಜೀವನ

ತಿರುಗುತ್ತಿರುವ ಚಕ್ರವಿದ್ದಂತೆ ಜನ
ಬದಲಾಗುತ್ತಿದೆ ಅವರ ಮನ
ಇದೇ ಜನರ ಜೀವನ
ಜೀವನ ನನಗೆ ಸಾಕು
ನೋವು ಯಾರಿಗೆ ಬೇಕು
ಇದನ್ನೆ ಬಯಸುತ್ತಿದೆ ಬದುಕು

ಸನ್ಮಾನ

ಮನಸು ಬಯಸುತ್ತದೆ ಸಂತೋಷದ ಆಗಮನ
ಸಂತೋಷದ ಸಂದರ್ಭದಲ್ಲಿ ಖಾಲಿ ಅವಮಾನ
ಇದನ್ನು ಮಾಡುವುದು ಜನರ ಅಪಮಾನ
ಅವಮಾನ ಅಪಮಾನವನ್ನು ಮೆಟ್ಟಿ ನಡೆದರೆ
ಜೀವನದಲ್ಲಿ ಸನ್ಮಾನ ಸನ್ಮಾನ

ನೀ ನನ್ನವನೇ

ರಚಿತಾ
ದ್ವಿತೀಯ ಬಿ.ಕಾಂ.

ಅಂದು ಕಳೆದುಕೊಂಡ ಆ ನಂಬಿಕೆ
ಇಂದು ಮತ್ತೆ ಜನಿಸಿದೆ ನನ್ನಲ್ಲಿ
ಅಂದು ಹೇಳಿತ್ತು ನನ್ನ ಮನಸ್ಸು
ನೀ ನನ್ನವನೇ...
ಆದರೂ ನೀ ನನ್ನವನಲ್ಲ...
ನಾ ಪ್ರಯತ್ನಿಸಿದೆ ನಿನ್ನ ಮರೆಯಲು
ಮರೆತರು ಮರೆಯಾಗಲಿಲ್ಲ
ಇಂದು ಅದೇ ಮನಸ್ಸು ಮತ್ತೆ ಹೇಳಿದೆ
ನೀ ನನ್ನವನೇ
ಕಾಯುತ್ತಿರುವೆ ನಾ ನಿನಗಾಗಿ
ಅದೆಷ್ಟು ಪ್ರೀತಿಸಲಿ ನಾನೊಬ್ಬಳೆ
ಹೇಳಲೆ ನನ್ನೀ ಪ್ರೀತಿಯನು
ಹಿಂಜರಿಯುತ್ತಿದೆ ನನ್ನೀ ಮನ
ನೀ ತಿರಸ್ಕರಿಸಿದರೆ ನನ್ನ ಪ್ರೀತಿಯನು
ಅಂದೇ ಕೊನೆ ನನ್ನೀ ಪಯಣ
ಸಾಗುವೇ ನಾ ಬಹುದೂರ
ಇಂದೆಂದು ಬಾರದ ಊರಿಗೆ...

ಕಾಲನ ಕಾಲ್ಚೆಂಡು

ರಚಿತಾ
ದ್ವಿತೀಯ ಬಿ.ಕಾಂ.

ಅದೊಂದು ಕಾಲ...
ಚಿಂತೆ ಚಿಂತನೆಗಳಿಲ್ಲದೆ ನಾನಿದ್ದೆ ಆಗ
ತೀಕ್ಷ್ಣ ಮಾತುಗಳು ಕಿವಿಗೆ ಬೀಳುತ್ತಲೇ ಇರಲಿಲ್ಲ
ನಾ ಮಾಡಿದ್ದು ನನಗೆ ಸರಿ
ಒಟ್ಟಾರೆಯಾಗಿ ಹೋದಲೆಲ್ಲ ನನ್ನದೇ ದರ್ಬಾರು...
ಕಾಲ ನನ್ನ ಕೈಯಲ್ಲಿ
ನಾ ಮಾಡಿದ ಕಾರ್ಯಗಳಿಗೆ ಕಾಲದ ಬೆಂಬಲ
ಮಳೆಗಾಲ ಕಳೆದು ಚಳಿಗಾಲ ನಂತರ ಬೇಸಿಗೆ
ಎಲ್ಲವೂ ಸರಾಗ....
ಆದರೆ ಈಗ...
ದಿನ ಬೆಳಗಾದರೆ ಚಿಂತೆ, ತಲೆ ನೋವು
ಹಿತೈಷಿಗಳ ಮಾತೂ ಕೂಡ ಕಹಿಬೇವು
ನಾ ಮಾಡುವ ಕೆಲಸ ನನಗೇ ಸರಿ ಕಾಣುತ್ತಿಲ್ಲ
ಒಟ್ಟಾರೆ ನನ್ನ ಜೀವನ ಬರ್ಬಾದ್.
ಕಾಲನ ಕಾಲ್ಚೆಂಡಾಗಿ
ಅತ್ತಿಂದಿತ್ತ ಅಡ್ಡಾಡುವ ಬದುಕು ನನ್ನದು
ನನ್ನ ನೋಡಿ ಗಹಗಹಿಸಿ ನಗುತಿವೆ ಬೇಸಿಗೆಯ
ಚಳಿಯಲ್ಲಿ ನಿಂತ
ಮರದ ಮೇಲಿರುವ ಮಳೆಹನಿ
ಒಟ್ಟೆ ನನ್ನದೀಗ ನಿಖರತೆ ಇಲ್ಲದ ಜೀವನ ಪಯಣ....

ಮೂರ್ಖ ಮನುಜ

ರಚಿತಾ
ದ್ವಿತೀಯ ಬಿ.ಕಾಂ.

ಕಿರೀಟವಿರಬೇಕಾದುದು ತಲೆಯ ಮೇಲೆ
ಪಾದದಡಿಯಲ್ಲಿರಬೇಕಾದುದು ಚಪ್ಪಲಿ
ಇದನೀ ಅರಿತು ನಡೆಯೋ ಮೂರ್ಖಮನುಜ
ಸಂಸಾರದ ಮಾತು ಮನೆಯೊಳಗಿರಬೇಕು
ಹೊರಗಡೆ ಇರಬೇಕಾದುದು ಸಮಾಜದ ಚಿಂತನೆ
ಇದನೀ ಅರಿತು ನಡೆಯೋ ಮೂರ್ಖ ಮನುಜ
ಯಾರ್ಯಾರ ಸ್ಥಾನ ಎಲ್ಲೆಲ್ಲಿ ಎಂದು ನಿರ್ಣಯಿಸುವ ಆ ದೇವ
ನಾವಾಗಿಯೇ ನಮ್ಮ ಸ್ಥಾನಮಾನಗಳ ಲೆಕ್ಕ ಹಾಕುವುದು ತಪ್ಪು
ಇದನೀ ಅರಿತು ನಡೆಯೋ ಮೂರ್ಖ ಮನುಜ
ಲೋಕದೊಳಗೊಂದು ಮಾತಿದೆ, ಶಿವಪೂಜೆಯಲ್ಲಿ
ಕರಡಿಗೇನಿದೆ ಕೆಲಸ
ಸಲ್ಲದ ಕಡೆ ಮೂಗು ತೂರಿಸಬೇಡ
ಇದನೀ ಅರಿತು ನಡೆಯೋ ಮೂರ್ಖ ಮನುಜ

"ಬಡಿದಾಡಿ ಮಾಡುವರು ಕಳ್ಳತನ
ಕಡಿಗಾಗಿ ನಡದು ಹೋಗುವ ಅರಲ್ಲಪ್ಪ ಒಂದು ದಿನ
ಮಡದಿ ಮಕ್ಕಳ ಜಂಜಾಟದಿ
ಅಡಿಗಡಿಗೆ ಭವ ಸುಡದೆ
ಜಗದೊಡೆಯನ ಬಗೆಗೆ
ಕೆಡುಕು ಮಾಡುವರಲ್ಲಾ ಅರಿತಿಲ್ಲಾ"

– ನಾಗಲಿಂಗ ಸ್ವಾಮಿ.

ಎಲ್ಲವು ನಿನಗಾಗಿ

ರಚಿತಾ
ದ್ವಿತೀಯ ಬಿ.ಕಾಂ.

ಪ್ರತಿದಿನವು ನಾ ಬೇಡುವೆನು
ಆ ಕಾಣದ ದೇವರಲಿ
ನನಗಾಗಿ ಏನನ್ನು ಅಲ್ಲ
ಎಲ್ಲವು ನಿನಗಾಗಿ
ಕಾಣದೆ ಪ್ರೀತಿಸುವೆನು ನಾ ನಿನ್ನ
ನಿನಗಾಗಿ ತೆರೆದಿದೆ ನನ್ನ ಮನ
ಕಟ್ಟಿರುವೆ ಸಾವಿರ ಕನಸುಗಳ
ನನಗಾಗಿ ಏನನ್ನು ಅಲ್ಲ
ಎಲ್ಲವು ನಿನಗಾಗಿ
ಹೊರಟು ನಿಂತಿರುವೆ
ಕಲ್ಲು ಮುಳ್ಳಿನ ಹಾದಿಯಲಿ
ಆರಿಹೋದ ಬೆಳಕನರಸುತ
ನೀ ಸಿಗುವ ನಂಬಿಕೆಯಲಿ
ನನಗಾಗಿ ಏನನ್ನು ಅಲ್ಲ
ಎಲ್ಲವು ನಿನಗಾಗಿ
ಜೀವನದ ಭರವಸೆ ಬರಿದಾದರು
ಭತ್ತಿ ಹೋಗಿಲ್ಲ ನನ್ನೆದೆಯ ಪ್ರೀತಿ
ನಲಿವಿದ್ದರು ನೋವಾದರು ನಾ ಬದುಕುವೆ
ನನಗಾಗಿ ಏನನ್ನು ಅಲ್ಲ
ಎಲ್ಲವು ನಿನಗಾಗಿ
ಕಾಣಬೇಕು ನಾ ನಿನ್ನ
ಈ ಜೀವ ಹೋಗುವ ಮುನ್ನ
ಹೇಳಬೇಕು ಅಂತರಾಳದ ಪ್ರೀತಿಯನ್ನ
ನಾ ಬದುಕಿರುವುದು
ನನಗಾಗಿ ಅಲ್ಲ
ಎಲ್ಲವು ನಿನಗಾಗಿ...

ಮಂದಾಕಿನಿ

2. ಕಥಾ ಕಾಲ

ಆಶುಕಥೆ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕಥೆ [ಪಿ.ಜಿ. ವಿಭಾಗ]

ಎಂ ಎಸ್ ಶ್ರೀಲತಾ
ಪ್ರಥಮ ಎಂ.ಎಸ್ಸಿ.

'ಅಮ್ಮಾ....ಅಮ್ಮಾ....ಎಲ್ಲಿದ್ದರೂ ಬೇಗ ಬಾ ಮಾರಾಯ್ತಿ. ಮನೆಗೆ ಅತಿಥಿಗಳು ಬಂದಿದ್ದಾರೆ. ಬೇಗ ಬಾರೇ...' ಮಂದಾಕಿನಿ ತಾಯಿಯನ್ನು ಕೂಗಿ ಕರೆಯುತ್ತಲೇ ಇದ್ದಳು. ಪ್ರತಿನಿತ್ಯ ಶಾಲೆಯಿಂದ ಬಂದೊಡನೆ ಸುಮ್ಮನೆ ಸುಸ್ತಾಗಿ 'ಅಮ್ಮಾ.....ತಿಂಡಿ ಏನಮ್ಮಾ? ಎನ್ನುವ ಮಗಳು ಇಂದೇಕೆ ಹೀಗೆ ಕೂಗುತ್ತಿದ್ದಾಳೆ ಎಂದುಕೊಂಡು ಸರಳಕ್ಕ ಓಡುತ್ತಲೇ ಹಿತ್ತಲಿನಿಂದ ಮನೆ ಒಳಗೆ ಬಂದಳು. ಬಂದ ಅತಿಥಿಗಳನ್ನು ನೋಡಿ ಸರಳಕ್ಕನೂ ನಿಶ್ಶಬ್ಧ!!!..

ಆದದ್ದು ದೊಡ್ಡ ರಾಮಾಯಣ. ಮಂದಾಕಿನಿ ಸಣ್ಣವಳಿದ್ದಾಗಲೇ ಅಪ್ಪ–ಅಮ್ಮ ಬೇರೆ ಬೇರೆಯಾಗಿದ್ದರು. ಮಂದಾಕಿನಿಗೆ ಒಬ್ಬಳು ತಂಗಿ ಇದ್ದಳು. ಸರೋಜಿನಿ ಅಂತ. ಗಂಡ–ಹೆಂಡಿರ ಜಗಳದಲ್ಲಿ ಮಂದಾಕಿನಿ ಅಮ್ಮನೊಂದಿಗೆ, ಸರೋಜಿನಿ ಅಪ್ಪನೊಂದಿಗೆ ಎಂದು ಬೇರೆ–ಬೇರೆಯಾಗಿದ್ದರು. ಹಾಗಾಗಿ ಮಂದಾಕಿನಿ ಅಪ್ಪನನ್ನು ಕಡೇ ಬಾರಿ ಕಂಡದ್ದು. ಅವಳು 4ನೇ ತರಗತಿಯಲ್ಲಿದ್ದಾಗ. ಈಗ ಅವಳು ಪ್ರೌಢಶಾಲಾ ಶಿಕ್ಷಕಿ. ಇಷ್ಟರ ನಡುವೆ ಅಪ್ಪ ಮತ್ತು ತಂಗಿಯನ್ನು ಅವಳು ಕಂಡೇ ಇರಲಿಲ್ಲ.

ಪ್ರತಿದಿನದಂತೆ ಅವತ್ತೂ ಶಾಲೆಯಿಂದ ಮನೆಗೆ ಹೊರಟಳು. ಮುಸ್ಸಂಜೆ ಹೊತ್ತು. ತಂಪಾದ ಗಾಳಿಯೊಂದಿಗೆ ಮಿನುಗುತ್ತಿದ್ದ ಹೊನ್ನ ಕಿರಣ ಓಡಾಡುವ ವಾಹನಗಳ ಧೂಳಿನಿಂದ ಮುಚ್ಚಿ ಮಬ್ಬಾಗಿ ಮಾಯವಾಗುತ್ತಿತ್ತು. ಮಂದಾಕಿನಿ ತನ್ನ ನಿತ್ಯದ ಬಸ್ಸಿಗಾಗಿ ಆ ಧೂಳಿನ ಮಧ್ಯೆಯೇ ಕಣ್ಣಾಡಿಸುತ್ತಾ ನಿಂತಿದ್ದಳು. ಅಂತೂ ಇಂತೂ ಬಸ್ಸು ಬಂತು. ಇನ್ನೇನು ಹತ್ತಬೇಕೆನ್ನುವಷ್ಟರಲ್ಲಿ ಬಸ್ಸಿನ ಹಿಂಬದಿಯ ಬಾಗಿಲಿನಿಂದ ಒಬ್ಬ ವ್ಯಕ್ತಿ ಯಾರೋ ರಭಸದಿಂದ ದೂಡಿದಂತಾಗಿ ಕೆಳಗೆ ಮುಗ್ಗರಿಸಿ ಬಿದ್ದ. ಮಾಸಿದ ಬಟ್ಟೆ, ಎಣ್ಣೆ ಕಾಣದ ಕೂದಲು, ಬಗಲಲ್ಲೊಂದು ಚೀಲ, ಎದ್ದು ನಿಲ್ಲಲಾಗದ ನಿಶ್ಶಕ್ತಿ....ಮಂದಾಕಿನಿ ನೋಡುತ್ತಲೇ ಮರಗಟ್ಟಿಹೋದಳು.

ಅವಳ ಕಣ್ಣುಗಳಣ್ಣು ಅವಳೇ ಒಮ್ಮೆ ಉಜ್ಜಿಕೊಂಡಳು. ಸಣ್ಣವಳಿದ್ದಾಗ ಸಿಹಿತಿನಿಸುಗಳನ್ನು ಕೊಡಿಸಿ ಹೆಗಲ ಮೇಲೆ ಕೂರಿಸಿಕೊಂಡು ತನ್ನ ಮಗಳೇ ರಾಣಿ ಎಂಬಂತೆ ಮೆರೆಸುತ್ತಿದ್ದ ಆನೆ ಬಂತೊಂದಾನೆ ಎಂದು ಅಂಬಾರಿ ಆಟ ಆಡಿಸುತ್ತಿದ್ದ. ಆ ನನ್ನ ಮುದ್ದು ಅಪ್ಪನೇ ಇವರೆಯಾ? ಎಂದು ಮನದೊಳಗೆ ಅಂದುಕೊಂಡಳು. ಮಂದಾಕಿನಿ. ರಕ್ತಸಂಬಂಧ ಎಷ್ಟೇ ದೂರವಿದ್ದರೂ ಗೊತ್ತಾಗುತ್ತದೆ ಎನ್ನುವುದು ಸುಳ್ಳಲ್ಲ. ಅಪ್ಪನ ಹಿಂದೆಯೇ ಸರೋಜಿನಿ ಕೂಡಾ ಇದ್ದಾಳೆ. ಮಂದಾಕಿನಿಯ ಸಂತೋಷಕ್ಕೆ ಮಿತಿಯೇ ಇಲ್ಲ. ಶಿಕ್ಷಕಿ ಎಂಬ ಪಟ್ಟದಿಂದ ಕೆಳಗಿಳಿದು ಅಪ್ಪನನ್ನು ಒಮ್ಮೆ ಜೋರಾಗಿ ತಬ್ಬಿಕೊಂಡು ಅಳಬೇಕು ಎಂದೆನಿಸಿತು ಅವಳಿಗೆ.

ಆದರೆ, ಉನ್ನತ ಹುದ್ದೆಯಲ್ಲಿದ್ದ ನನ್ನಪ್ಪ ಹೀಗೇಕೆ ನಿಶ್ಶಕ್ತರಾಗಿದ್ದಾರೆ ಎಂಬುದೇ ಅವಳಿಗೆ ಅರ್ಥವಾಗಲಿಲ್ಲ. ಮಂದಾಕಿನಿ ತಾನಾಗಿಯೇ ಅಪ್ಪ ಎಂದು ಮಾತು ಶುರು ಮಾಡಿದಳು. ವಯಸ್ಸಾದ ಕಾರಣ ಕಣ್ಣು ಮಂಜು ಮಂಜಾಗಿ ಕಾಣುತ್ತಿತ್ತು. ಕೃಷ್ಣಯ್ಯನವರಿಗೆ ಅವರ ಪೂರ್ಣ ಹೆಸರು ಬಿ.ಎಸ್. ಕೃಷ್ಣಮೂರ್ತಿ ಕರೆಯುತ್ತಿದ್ದುದು ಮಾತ್ರ ಕೃಷ್ಣಯ್ಯ ಎಂದೇ ಮುಂದಿನದ್ದು ಕೇಳಲೇ ಬೇಕಿಲ್ಲ. ಸೂರ್ಯನ ಆ ಕೇಸರಿಯ ಕಿರಣಗಳ ನಡುವೆ ಮಂದಾಕಿನಿ 'ಲಕ್ಷ್ಮಿ'ಯಂತೇ ಕಂಡಳು ಕೃಷ್ಣಯ್ಯನವರಿಗೆ. ತಡಮಾಡದೇ ಮಂದಾಕಿನಿ, ಅಪ್ಪ ಮತ್ತು ತಂಗಿಯನ್ನು ಮನೆಗೆ ಕರೆದುಕೊಂಡು ಹೋದಳು.

ಸರಳಕ್ಕನಿಗೂ ನಂಬಲಿಕ್ಕಾಗಲಿಲ್ಲ. ಹಳೆಯದ್ದನ್ನೆಲ್ಲಾ ಮರೆತು ಗಂಡನ ಕಾಲಿಗೆ ಬಿದ್ದು ಜೋರಾಗಿ ಅಳತೊಡಗಿದರು. ಮನೆಯಲ್ಲಿ ಮೌನವೇ ತುಂಬಿಕೊಂಡಿತು. ಅವರಿಬ್ಬರೂ

ಬೇರೆಯಾಗಲು ಕಾರಣ ಇಷ್ಟೆ. ಗಂಡನಿಗಿಂತ ಹೆಂಡತಿಗೇ ಸಂಬಳ ಜಾಸ್ತಿ. ಹಾಗಾಗಿ ಸರಳಕ್ಕನಿಗೆ ಕೋಡುಗಳು ತಲೆಯ ಮೇಲೆ ಎದ್ದಿತ್ತು. ತಾನು ಹೇಳಿದ್ದನ್ನು ಗಂಡ ಕೇಳಬೇಕೆಂದು. ಈಗ ತಪ್ಪಿನ ಅರಿವಾಗಿದೆ ಸರಳಕ್ಕನಿಗೆ. ಕೃಷ್ಣಯ್ಯನವರು ಬಾಡಿ ಹೋಗಿದ್ದರೂ, ಸರೋಜಿನಿ ಸುಂದರವಾಗಿದ್ದಳು. ಮಗಳನ್ನು ಅಷ್ಟೇ ಚೆನ್ನಾಗಿ ಸಾಕಿದ್ದರು ಕೃಷ್ಣಯ್ಯನವರು. ತಾಯಿ ಕರುಳು....ಸರಳಕ್ಕ ಮಗಳನ್ನು ತಬ್ಬಿಕೊಂಡು ಬಿಕ್ಕಿ–ಬಿಕ್ಕಿ ಅತ್ತಳು.

ಇಷ್ಟರ ನಡುವೆ ಮಂದಾಕಿನಿ, ಸರೋಜಿನಿ ಮೌನಿಗಳೇ ಆಗಿದ್ದರು. ಈಗ ತಪ್ಪಿನ ಅರಿವಾಗಿದ್ದರು, ಗಂಡ–ಹೆಂಡತಿ ಇಬ್ಬರೂ ಪಡೆದುಕೊಂಡಿದ್ದಕ್ಕಿಂತ ಕಳೆದುಕೊಂಡದ್ದೇ ಜಾಸ್ತಿ. ಮಂದಾಕಿನಿಗೆ ಏನು ಮಾತನಾಡಬೇಕೆಂದೇ ತೋಚಲಿಲ್ಲ. ಆದರೂ ಶಿಕ್ಷಕಿ ತಾನೇ. ಒಂದು ದೊಡ್ಡ ನಿರ್ಧಾರ ಮಾಡಿದಳು. ಆದೂ ಅಕ್ಕ–ತಂಗಿ ಇಬ್ಬರೂ ಒಟ್ಟಾಗಿ ತೆಗೆದುಕೊಂಡ ನಿರ್ಧಾರ.

ಒಣಗಿದ್ದ ಮರವೂ ಚಿಗುರುತ್ತದೆ ಎಂದರೆ ಸುಳ್ಳಲ್ಲ. ಮಂದಾಕಿನಿ–ಸರೋಜಿನಿ ಇಬ್ಬರೂ ಸೇರಿ ಎಲ್ಲರೂ ಒಂದೇ ಮನೆಯಲ್ಲಿರುವ ನಿರ್ಧಾರ ಮಾಡಿದರು. ಅಕ್ಕನಾಗಿ ತಂಗಿಯ ವಿದ್ಯಾಭ್ಯಾಸದ ಜವಾಬ್ದಾರಿ ಹೊತ್ತುಕೊಂಡಳು. ವಿಶೇಷವೆಂದರೆ ಮಂದಾಕಿನಿಗೆ ಈಗ 21 ವರ್ಷ. ಸಣ್ಣ ವಯಸ್ಸಿನಲ್ಲೇ ಸರಳಕ್ಕನಿಗೆ ಮಗುವಾಗಿದ್ದು. ಹಾಗಾಗಿ ಮಂದಾಕಿನಿ. ಸರೋಜಿನಿಯರಿಗೆ ತಮ್ಮನಾಗಿ ಶ್ರೀನಿವಾಸನ ಆಗಮನವಾಯಿತು. ಮನೆ ನಂದಗೋಕುಲವಾಯಿತು.

ನೀರಿಲ್ಲದೆ ಒಣಗಿದ್ದ ಮರ, ಚಿಗುರಿ, ಹೂಬಿಟ್ಟು, ಕಾಯಿಯಾಗಿ, ಫಲವನ್ನೂ ಕೊಟ್ಟಾಯಿತು. ಸರಳಕ್ಕನಿಗೂ, ಕೃಷ್ಣಯ್ಯನವರಿಗೂ ಶ್ರೀನಿವಾಸನನ್ನು ಆಟ ಆಡಿಸುವಾಗ, ಅವನ ಲಾಲನೆ–ಪಾಲನೆ ಮಾಡುವಾಗ, ಎಲ್ಲವೂ ಸರಿಯಿದ್ದಿದ್ದರೆ ಮಂದಾಕಿನಿ–ಸರೋಜಿನಿಯರನ್ನೂ ಖುಷಿಯಿಂದ ಬೆಳೆಸಬಹುದಿತ್ತು ಎಂದು ಅನ್ನಿಸಿತ್ತು.

ಒಟ್ಟಿನಲ್ಲಿ ಆ ಚೈತ್ರಮಾಸದ ಸಂಜೆ, ಒಂದು ಹೊಸ ಜೀವನದ ಪ್ರಾರಂಭವಾಯಿತು. ಮಂದಾಕಿನಿಯ ಜೀವನದಲ್ಲಿ ಅಂದಿನಿಂದ ಶಾಲೆಯಲ್ಲಿ ಪಾಠ ಮಾಡುವಾಗ ಒಂದು ಬಾರಿಯಾದರೂ ಅಪ್ಪ–ಅಮ್ಮನ ಕಥೆಯನ್ನು ಹೇಳಿ, ನೀವ್ಯಾರೂ ಹೀಗೆ ಮಾಡಬೇಡಿ ಎನ್ನುತ್ತಿದ್ದಳು.

ಮರಳಿಗೂಡಿಗೆ

ಸೌಜನ್ಯ ಉಪಾಧ್ಯ
ಪ್ರಥಮ ಬಿ.ಎಸ್ಸಿ.

ಒಂದು ಹಳ್ಳಿಯಲ್ಲಿ ಮಂದಾಕಿನಿಯೆಂಬ ಯುವತಿಯೊಬ್ಬಳು ವಾಸವಾಗಿದ್ದಳು. ಅವಳು ತನ್ನ ಕಾಲ ಮೇಲೆ ತಾನು ನಿಲ್ಲಬೇಕೆಂಬ ಹೆಬ್ಬಯಕೆಯಿಂದ ಒಂದು ಸಣ್ಣ ಕೆಲಸವನ್ನು ಗಿಟ್ಟಿಸಿಕೊಂಡಿದ್ದಳು. ಪ್ರತಿದಿನ ಅವಳು ಬಸ್ಸಿನಿಂದ ಪ್ರಯಾಣ ಮಾಡುತ್ತಾ, ತನ್ನ ಕೆಲಸಕ್ಕೆ ಹೋಗಿ, ತನ್ನ ಕಾರ್ಯವನ್ನು ಅಚ್ಚುಕಟ್ಟಾಗಿ ಮುಗಿಸಿ, ಸಂಜೆಯ ಹೊತ್ತಿಗೆ ಮನೆಗೆ ಬರುತ್ತಿದ್ದಳು. ಅವಳ ಮನೆಯಲ್ಲಿ ಬಡತನ ತಾಂಡವವಾಡುತ್ತಿತ್ತು. ಅವಳ ತಾಯಿ ಮಂದಾಕಿನಿಯ ಸಣ್ಣ ವಯಸ್ಸಿನಲ್ಲಿಯೇ, ತನ್ನ ಮಗಳನ್ನು ಬಿಟ್ಟು ಸ್ವರ್ಗಲೋಕಕ್ಕೆ ಹೋಗಿದ್ದಳು. ಮನೆಯಲ್ಲಿಯೋ, ಮಂದಾಕಿನಿ ಮತ್ತು ಅವಳ ತಂದೆ ಮಾತ್ರ ವಾಸಿಸುತ್ತಿದ್ದರು. ಅವಳ ತಂದೆಯು ಕುಡುಕನಾಗಿದ್ದ. ಅವನು ತನ್ನ ಮಗಳು ತಂದ ಹಣವನ್ನು ಕಿತ್ತುಕೊಂಡು ತನ್ನ ಆಸೆಯನ್ನು ನೆರವೇರುವುದಕ್ಕಾಗಿ ಮಧ್ಯದ ಅಂಗಡಿಗೆ ಹೋಗುತ್ತಿದ್ದ.

ಮನೆಯ ಎಲ್ಲಾ ಜವಾಬ್ದಾರಿಗಳು ಮಂದಾಕಿನಿಯ ಹೆಗಲ ಮೇಲೆಯೇ ಬಿದ್ದಿತ್ತು. ಅವಳು ಮನೆಕೆಲಸಗಳನ್ನೆಲ್ಲಾ ಮುಗಿಸಿ, ಬೇಗ ತಯಾರಾಗಿ ಕೆಲಸಕ್ಕೆ ಹೋಗುತ್ತಿದ್ದಳು.

ಹೀಗೆ ಒಂದು ಮುಸ್ಸಂಜೆ ಹೊತ್ತು ತಂಪಾದ ಗಾಳಿಯೊಂದಿಗೆ ಮಿನುಗುತ್ತಿದ್ದ ಹೊನ್ನ ಕಿರಣ, ಓಡಾಡುವ ವಾಹನಗಳ ದೂಳಿನಿಂದ ಮುಚ್ಚಿ ಮಬ್ಬಾಗಿ ಮಾಯವಾಗುತ್ತಿತ್ತು. ಆ ದೂಳಿನ ಮಧ್ಯೆಯೇ, ಮಂದಾಕಿನಿಯು ತನ್ನ ನಿತ್ಯದ ಬಸ್ಸಿಗಾಗಿ ಕಣ್ಣಾಡಿಸುತ್ತಾ ನಿಂತಿದ್ದಳು. ಅವಳು ಕಾದು–ಕಾದು

ಬೆಂಡಾಗಿ ಹೋದಳು. ಅವಳಿಗೆ ಶೀತ ಬೇರೆ ಆವರಿಸಿತ್ತು. ಕಡೆಗೆ ಅಂತೂ ಇಂತೂ ಬಸ್ಸು ಬಂದಿತು. ಇನ್ನೇನು ಅವಳು ಬಸ್ಸನ್ನು ಹತ್ತಬೇಕೆನ್ನುವಷ್ಟರಲ್ಲಿ ಬಸ್ಸಿನ ಹಿಂಬದಿಯ ಬಾಗಿಲಿನಿಂದ ಒಬ್ಬ ವ್ಯಕ್ತಿ ಯಾರೋ ರಭಸದಿಂದ ದೂಡಿದಂತಾಗಿ ಕೆಳಗೆ ಮುಗ್ಗರಿಸಿ ಬಿದ್ದ. ಅವನ ವೇಷ–ಭೂಷಣಗಳು ವಿಚಿತ್ರವಾಗಿದ್ದವು. ಮಾಸಿದ ಬಟ್ಟೆ, ಎಣ್ಣೆ ಕಾಣದ ಕೂದಲು, ಬಗಲಲ್ಲೊಂದ ಚೀಲ, ಎದ್ದು ನಿಲ್ಲಲಾಗದ ನಿಶ್ಶಕ್ತಿ. ಮಂದಾಕಿನಿಯು ಈ ದೃಶ್ಯವನ್ನು ನೋಡುತ್ತಲೆಯೇ ಮರಗಟ್ಟಿ ಹೋದಳು. ಆಕೆಗೆ ಆ ವ್ಯಕ್ತಿಯ ಮೇಲೆ ಕರುಣೆ ಉಕ್ಕಿ ಬಂದಿತು. ಕೂಡಲೆ ಆತನನ್ನು ಉಪಚರಿಸಿ, ಆತನ ಪರಿಚಯವನ್ನು ಮಾಡಿಕೊಂಡಳು. ಅಷ್ಟರೊಳಗೆ ಆ ಬಸ್ಸು ಅಲ್ಲಿಂದ ನಿರ್ಗಮಿಸಿ, 10 ನಿಮಿಷಗಳಾಗಿತ್ತು. ಅವಳು ಅಲ್ಲೇ ಇದ್ದ ಎತ್ತಿನಗಾಡಿಯ ಸಹಾಯದಿಂದ ಆತನನ್ನು ತನ್ನ ಮನೆಗೆ ಕರೆದುಕೊಂಡು ಹೋದಳು.

ಮನೆ ತಲುಪಿದಾಗ, ಮನೆಯಲ್ಲಿ ಮಂದಾಕಿನಿಯ ತಂದೆ ಇರಲಿಲ್ಲ. ಆತನು ಯಾವುದೋ ಮದ್ಯದ ಅಂಗಡಿಗೆ ಹೋಗಿ, ತನ್ನ ಆಸೆ–ದಾಹವನ್ನು ತೀರಿಸಿಕೊಳ್ಳುತ್ತಿದ್ದ. ಮಂದಾಕಿನಿಯು ಮನೆಗೆ ಕರೆತಂದವರನ್ನು ಉಪಚರಿಸಿ, ಅವರಿಗೆ ಗಂಜಿ–ನೀರು ಕೊಟ್ಟು ದಣಿವಾರಿಸಿಕೊಳ್ಳಲು ಸಹಾಯ ಮಾಡಿದಳು. ಆ ವ್ಯಕ್ತಿಯ ಹೆಸರು ಶಿವಪ್ಪ ಎಂಬುದಾಗಿತ್ತು. ಅವರು ಬಹಳ ಬಳಲಿದ್ದರು. ಅವರು ತನ್ನ ತಮ್ಮನನ್ನು ಹುಡುಕಿಕೊಂಡು ಆ ಊರಿಗೆ ಬಂದಿದ್ದರು;. ಅವರ ತಮ್ಮ ಚಿಕ್ಕಂದಿನಲ್ಲೇ ಒಂದು ಜಾತ್ರೆಯಲ್ಲಿ ಕಳೆದುಹೋಗಿದ್ದರು. ಶಿವಪ್ಪ ಬಹಳ ದುಃಖದಿಂದಲೇ ತಮ್ಮ ಅರ್ಥ ಆಯಸ್ಸನ್ನು ಕಳೆದಿದ್ದರು. ಅವರು ಮಂದಾಕಿನಿಗೆ ಧನ್ಯವಾದಗಳನ್ನು ತಿಳಿಸಿ, ಇನ್ನೇನು ಹೊರಡಬೇಕೆನ್ನುವಷ್ಟರಲ್ಲಿ ಮಂದಾಕಿನಿಯ ತಂದೆ ಎದುರಿಗೆ ಬಂದರು. ಅವರು ಶಿವಪ್ಪನನ್ನು ನೋಡುತ್ತಲೇ, ಯಾವುದೋ ಹಳೆಯ ಪರಿಚಯಸ್ಥರನ್ನು ಕಂಡಂತಾಯಿತು. ಶಿವಪ್ಪನಿಗೂ ಅದೇ ಅನುಭವವಾಗಿ, ಸ್ವಲ್ಪ ಹೊತ್ತಿನಲ್ಲಿಯೇ ಎದುರಿಗಿರುವವನು ಮತ್ತಾರಲ್ಲದೇ, ತನ್ನ ತಮ್ಮನೆಂದು ಗುರುತಿಸಿದನು. ಅವನ ತಮ್ಮನಿಗೂ ಸಂತೋಷ ತಡೆಯಲಾಗದೆ, ಶಿವಪ್ಪನನ್ನು ಬಾಯಿ ತುಂಬಾ, "ಅಣ್ಣಾ!" ಎಂದು ಉದ್ಗರಿಸಿ, ಅವನನ್ನು ಆಲಂಗಿಸಿದನು. ಈ ಭಾವಪೂರ್ಣ ದೃಶ್ಯವನ್ನು ನೋಡಿ ಮಂದಾಕಿನಿಯು ಕೂಡಾ ಕಣ್ತುಂಬಿಕೊಂಡಳು. ಅವಳಿಗೆ ಆ ಸಂತೋಷದ ಸಂದರ್ಭದಲ್ಲಿ ಮಾತೇ ಹೊರಡಲಿಲ್ಲ. ಅವರಿಬ್ಬರೂ ಅಣ್ಣ ತಮ್ಮಂದಿರು ಕೂಡ ಕಷ್ಟ–ಸುಖ ವಿಚಾರಿಸಿಕೊಂಡರು. ಶಿವಪ್ಪನು ಇನ್ನೂ ಮದುವೆಯಾಗದೆಯೇ ಬ್ರಹ್ಮಚಾರಿಯಾಗಿದ್ದನೆಂಬ ವಿಷಯ ತಮ್ಮನಿಗೆ ತಿಳಿಯಿತು. ಶಿವಪ್ಪ ಮಾಡುತ್ತಿದ್ದ ಕೆಲಸದಿಂದ ಅವನನ್ನು ತೆಗೆದು ಹಾಕಿದ್ದರು. ತಮ್ಮನಿಗೆ ಕೂಡಾ ಏನೂ ಕೆಲಸ ಇಲ್ಲ. ಶಿವಪ್ಪ ತನ್ನ ತಮ್ಮನಿಗೆ ಬುದ್ಧಿವಾದಗಳನ್ನು ಹೇಳಿ, ಕುಡಿಯುವ ಚಟವನ್ನು ಬಿಡಬೇಕೆಂದು ಹೇಳಿದನು. ಅಣ್ಣನ ಮಾತಿಗೆ ತಲೆದೂಗಿ, ತಮ್ಮನು ಇನ್ನೆಂದೂ ತಾನು ಕುಡಿಯುವುದಿಲ್ಲ ಎಂಬ ಪ್ರತಿಜ್ಞೆ ಮಾಡಿದನು.

ನಂತರ ಇಬ್ಬರೂ ಕೂಡ ಕೆಲಸ ಹುಡುಕುವ ಕಾರ್ಯದಲ್ಲಿ ತೊಡಗಿಕೊಂಡರು. ಮಂದಾಕಿನಿಯ ನೆರವಿನಿಂದ ಅವರಿಬ್ಬರೂ ಪಾಳು ಬಿದ್ದ ಗದ್ದೆಯಲ್ಲಿ ಬೇಸಾಯ ಮಾಡುವ ಕೆಲಸವನ್ನು ಶುರುಮಾಡಿದರು. ಅವರು ಕಷ್ಟಪಟ್ಟು ಒಳ್ಳೆಯ ಧನ–ಧಾನ್ಯಗಳನ್ನು ಪಡೆದರು. ಅದನ್ನು ಮಾರಿದ ದುಡ್ಡಿನಿಂದ ಒಳ್ಳೆಯ ಮನೆಯನ್ನು ಕೊಂಡುಕೊಂಡರು. ಅವರು ಹೊಲ–ಗದ್ದೆಗಳಿಗೆ ಸಾವಯವ ಗೊಬ್ಬರವನ್ನೇ ಹಾಕಬೇಕೆಂಬ ಉದ್ದೇಶದಿಂದ ದನ–ಕರುಗಳನ್ನು ಸಾಕತೊಡಗಿದರು.

ಹೀಗೆ ಇವರು ದುಡಿದು–ದುಡಿದು ಶ್ರೀಮಂತರಾದರು. ಇವರು ದುಡಿದ ದುಡ್ಡನ್ನು ಹಾಳುಗೆಡವುತ್ತಿರಲಿಲ್ಲ. ಅದನ್ನು ಬಡವರಿಗೆ ದಾನವಾಗಿ ಕೊಟ್ಟು ಅವರಿಗೂ ಅದನ್ನು ಸದುಪಯೋಗಪಡಿಸಿಕೊಳ್ಳಲು ಹೇಳುತ್ತಿದ್ದರು. ಯಾರೂ ಕೂಡ ಆ ಹಣವನ್ನು ಕುಡಿಯುವುದಕ್ಕಾಗಲೀ ಅಥವಾ ಬೇರೆಯ ಕೆಟ್ಟ ಕೆಲಸಕ್ಕಾಗಿ ಉಪಯೋಗಿಸುವಂತಿರಲಿಲ್ಲ. ಯಾರಾದರೂ ಹಾಗೆ ಮಾಡುವುದು ಕಂಡುಬಂದಲ್ಲಿ, ಅವರನ್ನು ಕರೆಸಿ, ಅವರಿಗೆ ಬುದ್ಧಿವಾದಗಳನ್ನು ಈ ಅಣ್ಣ–ತಮ್ಮಂದಿರು ಹೇಳುತ್ತಿದ್ದರು. ಅವರು ಇಡೀ ಹಳ್ಳಿಯ ಉದ್ಧಾರಕ್ಕಾಗಿ ದುಡಿದು ಆ ಹಳ್ಳಿಯನ್ನು ಮಾದರಿ ಹಳ್ಳಿಯನ್ನಾಗಿ ಪರಿವರ್ತಿಸಿದರು.

ಅಖಿಲಾಂಡೇಶ್ವರಿ

(ಚಿತ್ರಕಥೆ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕಥೆ)

ನಾಗರತ್ನ
ಪ್ರಥಮ ಬಿ.ಎಸ್ಸಿ.

ಅದೊಂದು ಕೋಟೆ, ಅರಸನಕೋಟೆ ಎನ್ನುವುದು ಅದರ ಹೆಸರು. ಈ ಕೋಟೆಯ ಅರಸಿಯ ಹೆಸರು ಅಖಿಲಾಂಡೇಶ್ವರಿ.

ಒಂದು ಕರಾಳರಾತ್ರಿ ಸುತ್ತಲೂ ಕತ್ತಲು ಆವರಿಸಿದೆ. ಅಂತಹ ಸಂದರ್ಭದಲ್ಲಿ ದಟ್ಟಕಾಡಿನ ಮಧ್ಯೆ ನಿಶಾಚರ ಪ್ರಾಣಿಗಳು ಓಡಾಡುವ ಸಮಯದಲ್ಲಿ ಹೆಂಗಸೊಬ್ಬಳು ಕಂಕುಳಿನಲ್ಲಿ ಮಗುವನ್ನು ಬಿಗಿಯಾಗಿ ಅಪ್ಪಿಕೊಂಡು ಒಂದೇ ಸಮನೆ ಓಡಾಡುತ್ತಿದ್ದಾಳೆ. ಆಕೆಯನ್ನು ಹಿಂಬಾಲಿಸಿಕೊಂಡು ಹತ್ತಾರು ಜನರು ಆಕೆಯನ್ನು ಹಿಡಿಯಲು ಓಡಿಬರುತ್ತಿದ್ದಾರೆ.

ಆ ಹೆಂಗಸಿನ ಮೈಯೆಲ್ಲಾ ರಕ್ತಸಿಕ್ತವಾಗಿದೆ. ದೇಹವೆಲ್ಲ ಸತತವಾದ ಓಟದಿಂದ ಬಳಲಿಹೋಗಿದೆ. ಆಕೆ ವಿಶ್ರಾಂತಿ ಪಡೆಯಲು ಹಂಬಲಿಸುತ್ತಿದ್ದಾಳೆ. ಆದರೆ ಬೆನ್ನುಬಿಡದ ಬೇತಾಳದಂತೆ ಜನರು ಅಟ್ಟಿಸಿಕೊಂಡು ಬರುತ್ತಿದ್ದಾರೆ. ಆದರೂ ಆ ಕಗ್ಗತ್ತಲಿನಲ್ಲಿ ಕಾಡ ಮಧ್ಯೆ ಯಾವುದೋ ಒಂದು ಪುಟ್ಟ ಕುಟೀರ ಕಾಣಿಸಿಕ್ಕಿತು. ತಡಮಾಡದೆ ಆ ಕುಟೀರವನ್ನು ಹೊಕ್ಕು ಕುಟೀರದೊಳಗಿದ್ದ ದೀಪವನ್ನು ಆರಿಸಿಬಿಟ್ಟಳು ಆಕೆ.

ಆ ಕುಟೀರದೊಳಗೆ ಹನುಮಂತಪ್ಪ ಎಂಬ ಒಬ್ಬ ಕುಂಬಾರ ವಾಸವಾಗಿದ್ದ. ಅನಿರೀಕ್ಷಿತವಾಗಿ ಹೆಂಗಸೊಬ್ಬಳ ಪ್ರವೇಶದಿಂದ ಬೆಚ್ಚಿಬಿದ್ದ ಹನುಮಂತಪ್ಪ "ಯಾರು ತಾಯಿ ನೀನು? ಇಲ್ಲಿಗೇಕೆ ಬಂದಿರುವೆ?" ಎಂದು ಸ್ವಲ್ಪ ಅಸಮಾಧಾನದಿಂದ ಕೇಳಿದ. ಆಕೆ ಅವನು ಕೇಳುವ ಯಾವ ಪ್ರಶ್ನೆಗೂ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ.

ಆದರೆ ಹನುಮಂತಪ್ಪ ಆ ಹೆಂಗಸಿಗೆ ಸುಧಾರಿಸಿಕೊಳ್ಳಲು ನೀರನ್ನು, ಬಟ್ಟೆಯನ್ನು ಕೊಟ್ಟು ಉಪಚರಿಸಿದನು. ಆದರೆ ಆ ಹೆಂಗಸು ಮಾತ್ರ ಒಂದೇ ಸಮನೆ ತನ್ನ ಕಂಕುಳಲಿದ್ದ ಮಗುವನ್ನು ಕಂಡು ಅಳಲಾರಂಭಿಸಿದಳು. ಈ ಹನುಮಂತಪ್ಪನಿಗೆ ಆಕೆಯ ಅಳುವಿನ ಹಿಂದಿರುವ ಕಾರಣವೇನೆಂದು ತಿಳಿಯಲಿಲ್ಲ. ಅವನೂ ಆ ಹೆಂಗಸನ್ನು ಮಾತನಾಡಿಸಲು ಪ್ರಯತ್ನಪಟ್ಟರೂ ಆಕೆ ಅಳುವುದೊಂದೇ ತನ್ನ ಕೆಲಸ ಎಂಬಂತೆ ಆಕೆಯ ಕಣ್ಣಿಂದ ಕಣ್ಣಿನ ಹೊಳೆಯೇ ಹರಿಯತೊಡಗಿತು. ಆದರೆ ಕಣ್ಣುಮುಚ್ಚಿ ರಕ್ತದಿಂದ ಅಲಂಕರಿಸಲ್ಪಟ್ಟ ಆ ಮಗುವಿನ ಮುಖವು ಸಾಕ್ಷಾತ್ ಹುಣ್ಣಿಮೆಯ ಚಂದ್ರನಂತಿತ್ತು.

ಇಷ್ಟೆಲ್ಲಾ ಆಗುವುದರೊಳಗೆ ಸೂರ್ಯನು ಆಗಸದತ್ತ ಮುಖಮಾಡಿದ್ದ. ಹನುಮಂತು ತನ್ನೆಲ್ಲಾ ನಿತ್ಯದ ಕೆಲಸವನ್ನು ಪೂರೈಸಿ ಆ ಹೆಂಗಸನ್ನು ಮತ್ತವಳ ಮಗುವನ್ನು ಕುಟೀರದೊಳಗೆ ಬಿಟ್ಟು ತನ್ನ ಕೆಲಸಕ್ಕೆ ನಡೆದ. ಕಾಡಿನ ತುಂಬ ಆ ಹೆಂಗಸಿಗಾಗಿ ಶೋಧ ನಡೆಸುತ್ತಿದ್ದ. ಸಿಕ್ಕ ಸಿಕ್ಕವರೆಲ್ಲ ಹನುಮಂತಪ್ಪನಲ್ಲಿ "ಏನಪ್ಪಾ ಈ ದಾರಿಯಲ್ಲೇನಾದರೂ ಒಬ್ಬಳು ಹೆಂಗಸು ಮಗುವೊಂದನ್ನು ಹಿಡಿದುಕೊಂಡು ಬಂದಳೇ? ಎಂದು ಕೇಳತೊಡಗಿದರು. ಆದರೆ ಹನುಮಂತಪ್ಪ ಏನು ತಿಳಿಯದ ಮೂಕಪ್ರಾಣಿಯಂತೆ ನಟಿಸಿದ.

ಆದರೆ ಆಕೆ ಯಾರೆಂದು ತಿಳಿಯಬೇಕೆಂದು ಕುತೂಹಲದಿಂದ ಹನುಮಂತಪ್ಪ ಒಬ್ಬ ಮನುಷ್ಯನನ್ನು ಕರೆದು "ಹ್ವಾಯ್ ಹೆಂಗ್ಸ್, ಹೆಂಗ್ಸ್ ಅಂತೀಯಲ್ಲಾ, ಯಾರ್ ಅವಳ್?, ಅವ್ನ್ ಎಂತಕೆ ನೀವು ಕಣ್ಣಿಗ್ ದುರ್‌ಬಿನ್ ಹೈಕ್ಕಂಡ್ ಹುಡ್ಕ್ತಿತ್ತಿದ್ರಿ?" ಎಂದು ಕೇಳಿದ.

ಆಗ ಆ ಮನುಷ್ಯ "ಏ ಪುಣ್ಯಾತ್ಮ ಅವ್ಳ್ ಒಬ್ಬಳ್ ಅಂಡಿ ಪಿರ್ಕಿ. ಕಾಂಬುಕೆ ಮಾತ್ರ ಒಳ್ಳೆವ್ಳ್ ಕಂಡಾಗೆ ಇದ್ದಳ್, ಆರೆ ಕಳ್ಳಿ ಯಾವುದೋ ಊರಿಂದ ನಮ್ಮೂರಿಗೆ ಬಂದಿದಳ್. ನಮ್ಮೂರಂಗೆ ಇಪ್ಪು ಒಂದ್ ಚಣ್ಣ ಮಗಿನ ಕದ್ದ್ ತಂದಿದ್ದಳು. ಆ ಮಗು ಪಾಪದ್ದ. ನಮ್ಮ ಬೀಚು ಅಕ್ಕನ ಮಗು ಅದ್ ಮಗಿನ ಅವ್ಳ್ ಕೈಯಿಂದ ತಕ್ಕಂಡ್ ಅವ್ಳ್ ಊರ್‌ಬಿಟ್ಟ್ ಓಡ್ಸುವಾ ಅಂದೇಳಿ ನಾವ್ ಹುಡ್ಕ್ತಿತ್" ಎಂದು ಹೇಳಿದ. ಇದನ್ನು ಕೇಳಿದ ಹನುಮಂತಪ್ಪನಿಗೆ ಸಿಡಿಲುಬಡಿದಂತಾಯಿತು.

ನಂತರ ಹನುಮಂತಪ್ಪ ಸೀದಾ ಮನೆಗೆ ಹೋಗಿ ದೇವರ ಮುಂದೆ ನಿಂತು "ಏ ದೇವ್ರೆ ದಾರಿಯಂಗೆ ಹೋಪು ಮಾರಿನ

ನಮ್ಮನಿಗೆ ತಂದ್ ಹಾಕಿದ್ಯಲ್ಲಾ? ದೇವ್ರೆ" ಎಂದು ದೇವರಲ್ಲಿ ಪ್ರಾರ್ಥಿಸತೊಡಗಿದ. ಆ ಸಂದರ್ಭದಲ್ಲಿ ಆ ಹೆಂಗಸು "ಅನಂತೂ, ಅನಂತೂ" ಎಂದು ಒಂದೇ ಸಮನೆ ಬೊಬ್ಬೆ ಹೊಡೆಯಲಾರಂಭಿಸಿದಳು. ಆಗ ಅವಳ ಸಮೀಪಕ್ಕೆ ಹೋದ ಹನುಮಂತಪ್ಪನನ್ನು ಆಕೆಯ ಕೈಯಲ್ಲಿ ಹೊಳೆಯುತ್ತಿದ್ದ ರಾಜಮುದ್ರೆ ಉಂಗುರವನ್ನು ನೋಡಿದ. ಆ ಮುದ್ರೆಯನ್ನು ನೋಡಿದ ನಂತರ ಇದು ಅರಸನಕೋಟೆಯ ರಾಜಮುದ್ರೆ ಎಂದು ತಿಳಿದು ಆ ಉಂಗುವನ್ನೂ ಹಾಗೂ ಆಕೆ ಮತ್ತವಳ ಬಳಿಯಿದ್ದ ಮಗುವನ್ನೂ ಕರೆದುಕೊಂಡು ಅರಸನಕೋಟೆಗೆ ಬಂದ.

ಅರಸನ ಕೋಟೆಯಲ್ಲಿ ಆಕೆಗೆ ಊರಿನಜನರೆಲ್ಲರೂ ಎಲ್ಲಿಲ್ಲದ ಗೌರವವನ್ನು ಸಲ್ಲಿಸಿದರು. ಹನುಮಂತಪ್ಪ ಮತ್ತು ಹೆಂಗಸು ಅರಮನೆಯನ್ನು ಹೊಕ್ಕ ನಂತರ ಅವನಿಗೆ ತಿಳಿಯಿತು. ಆ ಹೆಂಗಸು ಅರಸಕೋಟೆಯ ಅರಸಿ 'ಅಖಿಲಾಂಡೇಶ್ವರಿ' ಎಂದು. ಇದನ್ನು ತಿಳಿದ ಅವನು ಒಮ್ಮೆಲೆ ಆಕೆಯ ಪಾದಗಳಿಗೆ ನಮಸ್ಕರಿಸಿ ಕ್ಷಮೆಯಾಚಿಸಿದ. ಆದರೆ ಆಕೆ ಪ್ರತಿಕ್ರಿಯಿಸಿರಲಿಲ್ಲ.

ಸ್ವಲ್ಪ ಹೊತ್ತಿನ ಬಳಿಕ ಅರಸನ ಕೋಟೆಯಲ್ಲಿ ವೈಭವೋಪೇತವಾದ ಜೀವನ ನಡೆಸಿ, ಜನರಿಗೆ ಹಲವಾರು ರೀತಿಯಲ್ಲಿ ಉಪಕರಿಸಿ, ರಕ್ಷಿಸಿದ ಅರಸಿಯಾದ ಅಖಿಲಾಂಡೇಶ್ವರಿ ಪುತ್ರ ಶೋಕದಿಂದ ಬಳಲುತ್ತಿದ್ದು, ಆಕೆಯ ಮಾನಸಿಕ ಸ್ಥಿತಿಗತಿಗಳು ಸರಿಯಿಲ್ಲದೇ ಊರಿನಲ್ಲಿ ಕಂಡ ಕಂಡ ಮಗುವನ್ನು ತನ್ನದೆಂದೂ ಹೇಳಿ ರಂಪಾಟ ಮಾಡುತ್ತಿದ್ದಳು ಎಂದು.

ಒಮ್ಮೆ ಅರಸನಕೋಟೆ ಮನೆತನದವರು ದೇವಸ್ಥಾನಕ್ಕೆ ಹೋದಾಗ ಕೈತಪ್ಪಿಸಿಕೊಂಡ ಅಖಿಲಾಂಡೇಶ್ವರಿ ತನ್ನ ಮಗನ ನೆನಪಿನಲ್ಲಿ ಊರೂರು ಅಲೆದು ದಣಿದು, ಉದ್ವೇಗಕ್ಕೊಳಗಾಗಿ ಬೀಚುವಿನ ಮಗುವನ್ನು ಎತ್ತಿಕೊಂಡು ತನ್ನ ಮಗುವೆಂದು ಭಾವಿಸಿ ಓಡಲಾರಂಭಿಸಿದಳು. ಇದನ್ನು ಕಂಡ ಊರಿನ ಜನ ಆಕೆ ಕಳ್ಳಿಯೆಂದು ಭಾವಿಸಿ ಶಸ್ತ್ರಾಸ್ತ್ರಗಳೊಂದಿಗೆ ಆಕೆಯನ್ನು ಹಿಂಬಾಲಿಸಿದರು ಎಂದು ಇದನ್ನೆಲ್ಲ ಕೇಳಿದ ಹನುಮಂತಪ್ಪ ಮನದಲ್ಲಿ ನೊಂದು ಆ ಮಗುವನ್ನು ಬೀಚುವಿನ ಮಡಿಲಿಗೆ ಸೇರಿಸಿ ನೆಮ್ಮದಿಯಿಂದ ಜೀವನ ಸಾಗಿಸಿದ.

ನಿಮ್ಮೊಂದಿಗೆ ನಾನು ಊರ್ಮಿಳಾ

ಅಮೃತಾ ಹೆಚ್.ಕೆ.
ಪ್ರಥಮ ಬಿ.ಎಸ್ಸಿ.

ಅಂದು ನೀವು ಮತ್ತು ನಿಮ್ಮ ಅಣ್ಣ ವಿಶ್ವಾಮಿತ್ರ ಮುನಿವರ್ಯರೊಂದಿಗೆ ನಮ್ಮೂರ ಮನೆಗೆ ಬಂದಿರಿ. ಆ ನಿನ್ನ ಸುರದ್ರೂಪಿ ಕಾಯ ನನ್ನ ಕಣ್ಮನ ಸೆಳೆಯಿತು. ಅಂದು ಸಂಜೆ ಮುನಿವರ್ಯರು ನಿಮ್ಮ ಪರಾಕ್ರಮಗಳನ್ನು ತಂದೆಯವರಾದ ಜನಕರಲ್ಲಿ ಹೇಳುವಾಗ ಕೇಳಿಸಿಕೊಂಡಿದ್ದ ನಾನು ಪುಳಕಿತಳಾಗಿದ್ದೆ. ಮುಂದೆ ಅಕ್ಕ ಸೀತೆಯ ಸ್ವಯಂವರಕ್ಕೆ ಬಂದು ಶಿವಧನುವ ಮುರಿದು ಸ್ವಯಂವರ ಗೆದ್ದಾಗ ಆಕೆಯೊಡನೆ ನಮ್ಮ ಮದುವೆಯನ್ನು ತಂದೆಯವರು ನೆರವೇರಿಸಿದರು.

ಶ್ರೀ ರಾಮನ ಪ್ರೀತಿಯ ಸೋದರ, ಸುಮಿತ್ರೆಯ ನಂದನನಾದ ನಿಮ್ಮ ಬಗ್ಗೆ ಕೇಳಿ ತಿಳಿದಿದ್ದ ನನಗೆ ನಿಮ್ಮ ಕೈ ಹಿಡಿದ ಖುಷಿಯೊಂದಿಗೆ ನನ್ನ ಪ್ರೀತಿಯ ಅಕ್ಕ ಸೀತೆಯೊಂದಿಗೆ ದಿನಕಳೆಯಬಹುದೆಂದು ಖುಷಿ. ನಮ್ಮ ಸುಂದರ ಭವಿಷ್ಯದ ಬಗ್ಗೆ ನೂರಾರು ಕನಸುಗಳನ್ನು ಕಾಣುತ್ತಿರುವ ಸಂದರ್ಭದಲ್ಲಿ ಬೀಸಿತೊಂದು ಬಿರುಗಾಳಿ "ರಾಮ ಕಾಡಿಗೆ ಹೊರಟ" ಇದು ನನ್ನ ಜೀವನವನ್ನೇ ಅಲ್ಲೋಕಲ್ಲೋಲ ಮಾಡಿತು.

ಮಾತೆ ಕೈಕೇಯಿಯ ಮಾತಿಗೆ ತಲೆದೂಗಿ ಶ್ರೀರಾಮ ಕಾಡಿಗೆ ಹೊರಟು ನಿಂತ. ಅವನ ಹಿಂದೆ ಅವನ ಹೆಂಡತಿ ಅಂದರೆ ಅಕ್ಕ ಸೀತಾದೇವಿ ಕೂಡ ಹೊರಟಳು. ರಾಮನ ಪ್ರೀತಿಯ ತಮ್ಮನಾದ ನೀವು ಅವರನ್ನು ಅಗಲಿರಲಾರದೆ ಅವರ ಹಿಂದೆ ಹೊರಟು ನಿಂತಿರಿ. ಆದರೆ ನನ್ನ ಮಾತನ್ನು ಕೇಳುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. ನಾ ಹೊರಟು ನಿಂತಾಗ ನೀವು ನೀನು ರಾಣಿ ಸುಖವಾಗಿರಬೇಕು. ನೀನು ಇಲ್ಲೇ ಇರು ಕಾಡು ನಿನಗೆ ಬೇಡ ಮಾತೆಯ ಸೇವೆಯನ್ನು ಮಾಡಲು ಯಾರಾದರೂ ಬೇಕಲ್ಲವೇ? ಆದಷ್ಟು ಬೇಗ ಬರುತ್ತೇನೆ! ನೀನು ಬೇಜಾರಾಗದಿರು! ಎಂದು ಹೇಳಿಹೊರಟು ಹೋದರೀ

ಅಕ್ಕ ಸೀತೆ ಮಾವನವರಾದ ದಶರಥ ಮಹಾರಾಜರು ಹಾಗೂ ಅತ್ತೆಯವರ ಯೋಗಕ್ಷೇಮ ನೋಡಿಕೊಂಡು ಇಲ್ಲೇ ಇರು ಎಂದು ಹೇಳಿಹೋದಳು.

ನೀವೆಲ್ಲರೂ ಅತ್ತ ಹೊರಟು ಹೋದ ಸ್ವಲ್ಪ ಸಮಯದ ನಂತರ ಎಲ್ಲಾ ಯಥಾಸ್ಥಿತಿಗೆ ಬಂತು. ಇಲ್ಲಿ ಭರತ, ಶತ್ರುಘ್ನರು ಮಾಂಡವಿ, ಶುತಕೀರ್ತಿಯೊಂದಿಗೆ ಸುಖವಾಗಿ ಇದ್ದರು. ಅಲ್ಲಿ ಸೀತೆ ಕಾಡೇ ಆದರೂ ತನ್ನ ಗಂಡನೊಂದಿಗೆ ಸುಖವಾಗಿದ್ದಳು.

ಆದರೆ ನಾನು ಏನು ಪಾಪ ಮಾಡಿದ್ದೆ. ಎಲ್ಲಾ ಇದ್ದೂ ಏನೂ ಇಲ್ಲದ ಬದುಕು ನನ್ನದಾಯಿತು. ಇದು ಯಾವ ಜನ್ಮದ ಪಾಪವೋ? ಅದರೊಂದಿಗೆ ಇಲ್ಲಿ ಎಲ್ಲರೂ ಅಂದು ನೀನು ಏಕೆ ಗಂಡನೊಂದಿಗೆ ಹೊರಡಲಿಲ್ಲ? ಕಾಡಿಗೆ ಅಂಜಿದೆಯಾ? ಹೇಳು. ಮಾತಾಡು ಊರ್ಮಿಳಾ! ಮಾತಾಡು! ಎಂದು ನನ್ನನ್ನು ಪ್ರಶ್ನಿಸುತ್ತಾರೆ. ಚುಚ್ಚಿ ನುಡಿಯುತ್ತಾರೆ. ಏನೆಂದು ಉತ್ತರಿಸಲಿ ನಾ? ಏನು ತಪ್ಪು ಮಾಡಿದ್ದೆ ನಾನು?

ಅಂದು ನೀವು ಹೊರಟಾಗ ನಾನು ನಿಮ್ಮೊಂದಿಗೆ ಹೊರಟೆ. ಆದರೆ ನೀವು ನನ್ನ ತಡೆದಿರಿ. ಆ ಸೀತೆ ತಡೆದಳು. ಆದರೆ ಇದನ್ನು ನಾನು ಯಾರಿಗೆ ಹೇಳಲಿ? ಯಾರು ನಂಬುವರು ನನ್ನ ಮಾತನ್ನು? ನಾನು ಸೀತೆಯಂತೆ ನಿಮ್ಮ ಮಾತನ್ನು ವಿರೋಧಿಸಿ ಬಂದಿದ್ದರೆ ಮಹಾಪತಿವ್ರತೆಯ ಪಟ್ಟ ಸಿಗುತ್ತಿತ್ತು. ಹಾಂ ! ಆ ಸಂದರ್ಭದಲ್ಲಿ ಅದರ ಯೋಚನೆ ನನಗಿರಲಿಲ್ಲ. ನಿಮ್ಮ ಮಾತನ್ನು ಪಾಲಿಸಲು ನಿಂತ ನನಗೆ ಯಾಕೆ ಈ ಅಪವಾದ? ನನ್ನ ನೋವನ್ನು ಯಾರ ಬಳಿ ಹೇಳಲಿ. ಎಲ್ಲರೂ ಇಲ್ಲಿ 'ಮಾತಾಡು ಊರ್ಮಿಳಾ!' ಎನ್ನುವವರೇ ಹೊರತು ನನ್ನ ಮಾತನ್ನು ನನ್ನ ನೋವನ್ನು ಕೇಳುವ ಮನಸ್ಥಿತಿ ಮತ್ತು ಸಮಯ ಅವರಿಗಿಲ್ಲ. ಏಕೆಂದರೆ ಅವರೆಲ್ಲ ಸಂಸಾರಸ್ಥರು ನನ್ನಂತೆ ಇದ್ದು ಇಲ್ಲದ ಸಂಬಂಧದವರಲ್ಲ.

ಇನ್ನೇನು ಕೆಲವೇ ದಿನಗಳಲ್ಲಿ ನೀವು ಹಿಂದಿರುಗಲಿದ್ದೀರಿ. ನೀವು ಬರುವ ದಿನ ಹತ್ತಿರ ಬಂದಷ್ಟು ನಿಮ್ಮನ್ನು ಕಾಣಬೇಕೆಂಬ ತವಕ ಹೆಚ್ಚಾಗುತ್ತಿದೆ. ನೀವು ಮತ್ತು ಸೀತೆ ಹೇಗಾಗಿರಬಹುದು? ನೀವು ಇಷ್ಟು ದಿನ ಇದ್ದ ಪ್ರದೇಶದಲ್ಲಿ ಯಾವುದಾದರೂ ಸುಂದರ ಪರಿಮಳ ಬೀರುವ ಹೂವುಗಳನ್ನೊ ಅಥವಾ ಸವಿರುಚಿಯಾದ ಹಣ್ಣುಗಳನ್ನು ನನಗಾಗಿ ತರುವಿರೇ!? ಅಥವಾ ಕಾಡಿನಲ್ಲಿ ನಿಮಗೆ ಹೊಟ್ಟೆಗೆ ಸರಿಯಾಗಿ ಹಣ್ಣು ಹಂಪಲು ಸಿಗದೇ ಸೊರಗಿರಬಹುದೇ? ಹೇಗಿದ್ದರೂ ಪರವಾಗಿಲ್ಲ ಆದಷ್ಟು ಬೇಗ ನೀವುಗಳು ಬಂದರೆ ಸಾಕು!

ನೀವು ಬಂದಾಗ ನಿಮ್ಮ ತೊಡೆಯ ಮೇಲೆ ತಲೆ ಇಟ್ಟು ನಾನು ಇಷ್ಟುದಿನ ಪಟ್ಟ ನೋವನ್ನು ಹೇಳಬೇಕು. ನೀವು ನನ್ನ ಕಣ್ಣೊರೆಸುತ್ತಾ ಸಂತೈಸಬೇಕು. ನಾನು ಇಲ್ಲಿ ನಿಮ್ಮನ್ನು ಪ್ರತಿಕ್ಷಣವೂ ನೆನೆಯುತ್ತಿದ್ದೆ. ನೆನೆದು ಕೊರಗುತ್ತಿದ್ದೆ. ನಿಮ್ಮ ಬಿಸಿಯುಸಿರಿಗೆ ತವಕಿಸುತ್ತಿದ್ದೆ ಎಂದು ಹೇಳಬೇಕು. ಹಾಗೆಯೇ ನಿಮಗೆ ಒಮ್ಮೆಯಾದರೂ ನನ್ನ ನೆನಪಾಯಿತೇ ಎಂದು ಕೇಳಬೇಕು.

ಹಾಂ!! ಮೊದಲೇ ತನ್ನಣ್ಣನ ಪ್ರಭಾವದಿಂದ ಕವಿಯಂತೆ ಮಾತನಾಡುತ್ತಿರುತ್ತೀರಿ. ಇನ್ನು ಅಲ್ಲಿಯ ಸುಂದರ ಪ್ರಶಾಂತ ಪರಿಸರ ಕುಟೀರಕ್ಕೆ ಮಾರುಹೋಗಿ ಅಲ್ಲಿಯೇ ಇರುವ ಮನಸ್ಸು ಮಾಡಿದರೆ! ಶ್ರೀ ರಾಮನಿಗಾದರೂ ಸೀತೆ ಅಲ್ಲಿಯೇ ಇದ್ದಾಳೆ ಆದರೆ ಇವರಿಗೆ! ಹರಹರಾ!! ದೇವಾ ಇವರಿಗೆ ಇಂಥಾ ಮನಸ್ಥಿತಿ ಬಾರದ ರೀತಿಯಲ್ಲಿಡು. ಹಾಗೇನಾದರೂ ಆದರೆ ನನ್ನ ಬಾಳು ನಶ್ವರ. ಇಷ್ಟು ದಿನ ಪಟ್ಟ ಈ ವಿರಹ, ನೋವು, ಕಷ್ಟಗಳೆಲ್ಲವೂ ನೀರ ಮೇಲಿನ ಹೋಮದಂತಾಗುತ್ತದೆ. ಈಗಾಗಲೇ ಒಂದು ಸಣ್ಣ ಬಿರುಕು ಬಂದಿರುವ ನನ್ನ ಕನಸಿನ ಕನ್ನಡಿ ನುಚ್ಚು ನೂರಾದಿತು. ನೀವು ಬರುವ ದಿನ ಸಮೀಪಿಸುತ್ತಿದ್ದಂತೆ ನನ್ನ ತವಕ, ಆತಂಕ ಹೆಚ್ಚಾಗುತ್ತಿದೆ....

"ತನುವು ಚಿತ್ತವು ಮನಸು ಪ್ರಾಣವು
ನನ್ನದೆಂದು ತಿಳಿಬೇಡಣ್ಣ
ತನುವೂ ಮನವೂ ಚಿತ್ತನುಭವದೊಳು
ಹರಿದು ಹೋಗುವುದು ಕ್ಷಣದೊಳು ಪ್ರಾಣ"

– ನಾಗಲಿಂಗ ಸ್ವಾಮಿ

ಚಿನ್ನದ ಸೇಬು

(ಸಂಗ್ರಹ) : **ಬಾಳಪ್ಪ**
ಪ್ರಥಮ ಬಿ.ಎ.

ಒಂದು ಊರಿನಲ್ಲಿ ಒಬ್ಬ ರಾಜ ಮತ್ತು ಮಂತ್ರಿ ಇರುತ್ತಾರೆ. ಆ ಊರಿಗೆ ಅವರೆ ರಾಜರಾಗಿರುತ್ತಾರೆ. ರಾಜ ಚಿನ್ನದ ಸೇಬು ಹಣ್ಣಿನ ಮರಗಳನ್ನು ಬೆಳೆಸಿರುತ್ತಾನೆ. ಆ ಮರಗಳಲ್ಲಿ ತುಂಬಾ ಚಿನ್ನದ ಸೇಬುಗಳು ಇರುತ್ತವೆ. ಅವುಗಳನ್ನು ಮಾರಾಟ ಮಾಡಿ ಜೀವನವನ್ನು ನಡೆಸುತ್ತಿರುತ್ತಾನೆ. ಒಮ್ಮೆ ಒಂದು ಮರದಲ್ಲಿ ಒಂದು ಸೇಬು ಹಣ್ಣು ಕಾಣೆಯಾಗಿರುತ್ತದೆ. ಈ ವಿಷಯ ತಿಳಿದು ರಾಜ ಒಂದು ಚಿನ್ನದ ಸೇಬು ಎಲ್ಲಿ ಕಾಣೆಯಾಯಿತು ಎಂದು ಮಂತ್ರಿಯನ್ನು ಕೇಳುತ್ತಾನೆ. ಆಗ ಮಂತ್ರಿ ಗೊತ್ತಿಲ್ಲ ಎಂದು ಹೇಳುತ್ತಾರೆ. ರಾಜನಿಗೆ ಸಂಶಯ ಬರಲು ಪ್ರಾರಂಭವಾಗುತ್ತದೆ. ಅಷ್ಟರಲ್ಲಿ ಮಂತ್ರಿಯು ಹೋಗಿ ನನಗೆ ನಾಲ್ಕು ಜನ ಮಕ್ಕಳು. ಅದರಲ್ಲಿ ದೊಡ್ಡವನನ್ನು ಈ ರಾತ್ರಿ ಆ ಮರದ ಕೆಳಗೆ ಕಳಿಸೋಣ ಎಂದು ಹೇಳುತ್ತಾನೆ. ರಾಜ ಆಗಲಿ ಎಂದು ಒಪ್ಪುತ್ತಾನೆ. ಆ ರಾತ್ರಿ ಮಂತ್ರಿಯು ಮಗ ಯಾರಾದರೂ ಬರಬಹುದು ಎಂದು ಕಾತುರದಿಂದ ಕಾಯುತ್ತಿರುತ್ತಾನೆ. ಅಷ್ಟರಲ್ಲಿ ಅವನಿಗೆ ಜೋರು ನಿದ್ರೆ ಬಂದು ಅಲ್ಲಿಯೇ ಮಲಗುತ್ತಾನೆ. ಬೆಳಿಗ್ಗೆ ಮಂತ್ರಿ ಅವನಿಗೆ ನೀನು ಪ್ರಯೋಜನವಿಲ್ಲ ಎಂದು ಹೇಳುತ್ತಾನೆ.

ನಂತರ ಮರುದಿನ ಮಂತ್ರಿಯ 2ನೇ ಮಗ ಹೋಗಲು ನಿರ್ಧರಿಸುತ್ತಾನೆ. ಹಾಗೇ ರಾತ್ರಿಯಾಯಿತು. ಅವನು ಚಳಿಗೆ ಹೆದರಿ ಓಡಿ ಹೋಗಿ ನಿದ್ರೆ ಮಾಡುತ್ತಾನೆ. ಮತ್ತೆ 3ನೇ ಮಗನು ಕೂಡ ಹೋಗಲು ಭಯ ಬೀಳುತ್ತಾನೆ. ಮಂತ್ರಿಯ ಕೊನೆಯ ಮಗ ಹೊರಡಲು ಸಿದ್ಧವಾಗುತ್ತಾನೆ. ಅವನು ಚಿನ್ನದ ಸೇಬು ಹೇಗೆ ಕಾಣೆಯಾಯಿತು ಎಂದು ಯೋಚಿಸುತ್ತಾನೆ. ಹಾಗೆಯೇ ಯೋಚಿಸುತ್ತಾ ಬಿಲ್ಲನ್ನು ತೆಗೆದುಕೊಂಡು ಹೋಗುತ್ತಾನೆ. ಅದೇ ಮರದ ಕೆಳಗೆ ಧೈರ್ಯದಿಂದ ಕುಳಿತು ಕೊಂಡಿರುತ್ತಾನೆ. ಸುಮಾರು ಹೊತ್ತಿನಲ್ಲಿ ಒಂದು ಪಕ್ಷಿ ಚಿನ್ನದ ಸೇಬು ಹಣ್ಣಿನ ಮರಕ್ಕೆ ಬರುತ್ತದೆ. ಮಂತ್ರಿಯ ಚಿಕ್ಕ ಮಗನು ಆ ಹಕ್ಕಿಯನ್ನು ಹಿಡಿದು ರಾಜನಿಗೆ ತಂದು ಕೊಡುತ್ತಾನೆ. ಆಗ ರಾಜನು ಸಂತೋಷಪಡುತ್ತಾನೆ. ಆ ಸಂತೋಷದಿಂದ ಅವನಿಗೆ ತನ್ನ ಅರ್ಧ ರಾಜ್ಯವನ್ನು ಕೊಡುತ್ತಾನೆ. ಹೀಗೆಯೇ ಇವನು ಸಂತೋಷದಿಂದ ಮುಂದೆ ತನ್ನ ರಾಜ್ಯವನ್ನು ವಿಸ್ತರಿಸುತ್ತಾ ಹೋಗುತ್ತಾನೆ.

3. ಹೊತ್ತಗೆ ಓದುವ ಹೊತ್ತು

ಅಮ್ಮ ಹೇಳಿದ ಎಂಟು ಸುಳ್ಳುಗಳು – ಮಣಿಕಾಂತ್ ಎ. ಆರ್.

(ಪುಸ್ತಕ ವಿಮರ್ಶೆ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಬರಹ)

ಸೃಜನ ಯು.
ಪ್ರಥಮ ಬಿ.ಎಸ್ಸಿ.

ಅಸಹಾಯಕ ಶೋಷಿತರ, ವಿಕಲಾಂಗ ಚೇತನರ, ಅಶಿಕ್ಷಿತರ ಬದುಕಿನಲ್ಲಿ ಸಣ್ಣದೊಂದು ಭರವಸೆಯ ಆಶಾಕಿರಣವನ್ನು, ಕಣ್ಣಂಚಿನಲ್ಲಿ ಹೊಳಪನ್ನು ಮೂಡಿಸಿ, ಅವರ ಭಾವಾಲೋಚನೆಗೆ ಕಿಡಿಯನ್ನು ಹಚ್ಚಿಸಿ ಯೋಚನೆಗೆ ಹಚ್ಚಿಸುವ ಕೃತಿಯೆಂದರೆ ಅದು ಅಮ್ಮ ಹೇಳಿದ ಎಂಟು ಸುಳ್ಳುಗಳು.

ನಾನು ಪೂರ್ಣಪ್ರಜ್ಞ ಕಾಲೇಜಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಬಂದಿದ್ದಾಗ ಪುಸ್ತಕ ಮಳಿಗೆಯ ಬಳಿಗೆ ಹೋದಾಗ ಅಲ್ಲಿ ಕು.ಗೋ. ಅವರು ಇದ್ದರು. ಪುಸ್ತಕ ಕೊಂಡುಕೊಳ್ಳಿ ಎಂದು ಹೇಳಿದರು. ಆಗ ನಾನು ಕೆಲವು ಪುಸ್ತಕ ತೆಗೆದುಕೊಂಡೆ. ಮರುದಿನ ಸಮ್ಮೇಳನಕ್ಕೆ ಬಂದಾಗ ಅಲ್ಲಿಗೆ ಹೋದೆ, ಆಗ ಕು. ಗೋ. ಅವರು ನನಗೆ 'ಅಮ್ಮ ಹೇಳಿದ ಎಂಟು ಸುಳ್ಳುಗಳು' ಪುಸ್ತಕವನ್ನು ಉಚಿತವಾಗಿ ನೀಡಿದರು. ತುಂಬಾ ಖುಷಿಯಾಯಿತು.

ಮನೆಗೆ ಬಂದವಳೇ ಪುಸ್ತಕವನ್ನು ಓದಲು ಶುರುಮಾಡಿದೆ, ಯಾವುದು ಸತ್ಯಕಥೆ, ಯಾವುದು ನಿಜವಾಗಿಯೂ ಕಥೆ ಎಂಬುದು ಅವರ ಲೇಖನವನ್ನು ಓದಿದಾಗ ತಿಳಿಯುವುದಿಲ್ಲ, ಅಂತಹ ಬರಹಗಾರ ಎ. ಆರ್. ಮಣಿಕಾಂತ್.

ಎ. ಆರ್.ಮಣಿಕಾಂತ್‌ರವರ ಬರಹದ ವೈಶಿಷ್ಟ್ಯವೇ

ಅಂತಹುದು, ಯಾವಾಗ ಕಥೆ ನಮ್ಮದೇ ಪರಿಸರದ ಕಥೆ, ನಮ್ಮದೇ ಭಾವನೆಗಳನ್ನೊಳಗೊಂಡಿರುವ ಪಾತ್ರಗಳ ಕಥೆಯಿರುತ್ತದೆಯೋ ಆವಾಗ ಆ ಪುಸ್ತಕ ಗೆಲ್ಲುತ್ತದೆ.

ಅಂತೆಯೇ ಈ ಪುಸ್ತಕದಲ್ಲಿನ ಸಣ್ಣ ಸಣ್ಣ ಕಥೆಗಳು, ನಮ್ಮನ್ನು ಬಿಕ್ಕಿ ಬಿಕ್ಕಿ ಅಳುವಂತೆ ಮಾಡುವುದಿಲ್ಲ. ಬದಲಿಗೆ ಹೃದಯಕ್ಕೆ ತಟ್ಟುತ್ತದೆ. ಅಲ್ಲದೇ ಇದು ಖಿನ್ನತೆಗೆ ದೂಡುವುದಿಲ್ಲ. ಬದಲಿಗೆ ನಮ್ಮೊಳಗಿನ ಸಕರಾತ್ಮಕ ಆಲೋಚನೆಗೆ ಕಿಡಿಯನ್ನು ಹಚ್ಚುತ್ತದೆ. ಈ ಪುಸ್ತಕದಲ್ಲಿನ 'ನಾಗನರೇಶ್‌ನ ದೇವ್ರಿದ್ದಾನೆ ಬಿಡಪ್ಪ', 'ಕೈಯಿಲ್ಲ ಕಾಲಿಲ್ಲ ಚಿಂತೆನೂ ಇಲ್ಲ', 'ತಲ್ಲಣಿಸದಿರು ಕಂಡ್ಯಾ ತಾಳು ಮನವೇ' ಕಥೆಯಂತು ಬಹಳ ಚೆನ್ನಾಗಿವೆ.

ಕ್ಷಣಕ್ಷಣಕ್ಕೂ ಸೋಲನ್ನು ಸೋಲಿಸುತ್ತಾ, ಸಾವನ್ನೇ ಗೆದ್ದವನು ನಾಗನರೇಶ ಎರಡು ಕಾಲುಗಳಿಲ್ಲದಿದ್ದರೂ, ಇಂಜಿನಿಯರಿಂಗ್ ಪದವಿಯನ್ನು ಪಡೆದಿದ್ದಾನೆ. ಈ ಕಥೆಯಂತು ತುಂಬಾ ಸೊಗಸಾಗಿತ್ತು.

ಎಷ್ಟೋ ಸಲ ನಾವು ಸಣ್ಣ ಸಣ್ಣ ವಿಷಯಕ್ಕೂ ಖಿನ್ನತೆಗೊಳಗಾಗುತ್ತೇವೆ. ಅಲ್ಲದೆ ಸಾಯಬೇಕು ಎಂದುಕೊಳ್ಳುತ್ತೇವೆ. ಆದರೆ ಇವನ ಸಾಧನೆಯ ಮುಂದೆ ನಾವೆಲ್ಲ ವೇಸ್ಟ್ ಬಾಡಿಗಳು ಎಂದೆನಿಸುವುದು ಸುಳ್ಳಲ್ಲ.

'ಅಮ್ಮ' ಎಂಬ ಕಥೆಯನ್ನು ಓದಿದ ಮೇಲೆ ನನ್ನ ಮೇಲೆ ನನಗೆ ಬೇಸರವಾಯಿತು. ಏಕೆಂದರೆ ಎಷ್ಟೋಸಲ ನಾವು ಅಮ್ಮನ ಮೇಲೆ ವಿನಾಕಾರಣ ಸಿಟ್ಟು ಮಾಡಿಕೊಳ್ಳುತ್ತೇವೆ. ಅಲ್ಲದೇ ಅವಳೆಂದರೆ ಒಂದು ರೀತಿ ಅಸಡ್ಡೆ. ಆದರೆ ಅವಳು ನಮಗಾಗಿ ಪಟ್ಟ ಕಷ್ಟ, ತ್ಯಾಗವನ್ನು ಎನಿಸಿಕೊಂಡ ಮೇಲೆ ತುಂಬಾ ದುಃಖವಾಗುತ್ತದೆ.

ಯೋಧನ ಪತ್ರವನ್ನು ಮುಂದಿಟ್ಟುಕೊಂಡು ಕಥೆಯಂತು, ಹೃದಯಕ್ಕೆ ತಟ್ಟುತ್ತದೆ. ದೇಶ ಕಾಯುವ ಯೋಧನಿಗೆ ದೇಶದ ಮೇಲಿರುವ ಹೆಮ್ಮೆ, ಗೌರವವನ್ನು ಎನಿಸಿಕೊಂಡಾಗ ಹೆಮ್ಮೆಯಾಗುತ್ತದೆ. ಅಲ್ಲದೇ ಲೇಖಕರು ಹೇಳುತ್ತಾರೆ ಅಂತಹ ಯೋಧರ ಮನೆಗೆ ಭೇಟಿಕೊಟ್ಟರೆ ಅಂತಹವರಿಗೂ ಒಂದು ರೀತಿ ಹೆಮ್ಮೆಯಾಗುತ್ತದೆಯಂತೆ. ಹೌದು! ಇದು ನಿಜವಲ್ಲವೇ. ನಮ್ಮ ದೇಶಕಾಯುವ ಯೋಧನಿಗೆ ಇಷ್ಟರಮಟ್ಟಿಗಾದರೂ ನಾವು ಸಂತೋಷಪಡಿಸಬಹುದು ಅಲ್ಲವೇ?

ಈ ಪುಸ್ತಕದಲ್ಲಿ ಇರುವ ಕಥೆಯನ್ನು ಒಮ್ಮೆಲೇ ಓದಲು ಹೋಗಬಾರದು. ನಿಧಾನವಾಗಿ ಓದಬೇಕು. ಆಗ ಮಾತ್ರ ಮನಸ್ಸಿಗೆ ಹಿಡಿಸುತ್ತದೆ. ನಾನಂತೂ ಬೇಸರವಾದಾಗಲೆಲ್ಲಾ, ಅಥವಾ ಒಬ್ಬಳೇ ಇದ್ದಾಗ ಈ ಪುಸ್ತಕವನ್ನು ತೆಗೆದು ಓದುತ್ತೇನೆ.

ಆ ಎನ್ಕೌಂಟರ್‌ನಲ್ಲಿ 150 ಮಂದಿಯ ಜೀವ ಉಳಿಸಿದ ಕಥೆಯಂತೂ ಭಂಡಧೈರ್ಯವಿದ್ದರೇ ಜಗವನ್ನೇ ಜಯಿಸಬಹುದು ಎಂಬುದನ್ನು ಸಾರಿ ಹೇಳುತ್ತದೆ. ದೀಪಕ್ ಕುಂತಾವಾಲಾ ಅವರ ಸಾಹಸದ ಕಥೆಯನ್ನು, ತಾಜ್‌ಹೋಟೆಲಿಗೆ ಉಗ್ರರ ದಾಳಿಯಾದಾಗ, ನಿಧಾನವಾಗಿ ಚಿಂತಿಸಿ ಇಲ್ಲಿರುವ ಅಷ್ಟು ಮಂದಿಯ ಜೀವ ಉಳಿಸಬೇಕೆಂದು ಅವರು ಮಾಡಿದ ಸಾಹಸ ಅಪ್ಪನನ್ನೇ ಮೊದಲಿಗೆ ಕೆಳಗಿಳಿಸದ ಅವರ ಧೈರ್ಯವನ್ನು ಎಲ್ಲರು ಮೆಚ್ಚಲೇಬೇಕು.

ನಿಕ್‌ಜೆಸಿಕ್‌ರ ಕೈ ಇಲ್ಲ, ಕಾಲಿಲ್ಲ ಚಿಂತೆನೂ ಇಲ್ಲ ಎಂಬ ಕಥೆ ಎಂತಹವರಿಗೂ ಸ್ಫೂರ್ತಿಯನ್ನು ನೀಡುತ್ತದೆ. ಅಲ್ಲದೇ ಆ ಮಹಾನುಭಾವನ ಜೀವನದ ಕ್ಷಣವನ್ನು ಸ್ಫುಟವಾಗಿ ನಮ್ಮ ಮುಂದೆ ಇಡುತ್ತಾರೆ ಲೇಖಕರು. ಅಲ್ಲದೆ ಅವರು ಡಬಲ್‌ಡಿಗ್ರಿಯನ್ನು ಪಡೆದ ಕಥೆ ಮತ್ತು ಈಗ ನಿಕ್‌ಜೆಸಿಕ್‌ರವರು ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ನಂಬರ್‌ವನ್ ವ್ಯಕ್ತಿಯಾಗಿದ್ದಾರೆ.

ಜೆಸ್ಸಿಕಾ ಕಾಕ್ಸ್‌ಳ ಕಥೆಯಂತು ಎಲ್ಲರಿಗೂ ತಿಳಿದಿರುವುದೇ, ಕೈಯಿಲ್ಲದವಳು ವಿಮಾನದ ಪೈಲಟ್ ಆದ ಕಥೆ ಮತ್ತು ಕರಾಟೆಯಲ್ಲಿ ಬ್ಲಾಕ್ ಬೆಲ್ಟ್ ಪಡೆದಿದ್ದಾಳೆ, ಅಲ್ಲದೇ ಈಜು. ಕಾರನ್ನು ಓಡಿಸುವ ಕಲೆಯನ್ನು ಕಲಿತು ಕೈಕಾಲು ಇದ್ದವರಿಗಿಂತ ನಾನೇನೂ ಕಡಿಮೆ ಇಲ್ಲ ಎಂದು ಸಾಬೀತುಮಾಡಿದ್ದಾಳೆ.

ಟ್ರಾಫಿಕ್ ಪೋಲಿಸ್‌ನ ಪತ್ರ, ಮಹೇಂದ್ರ ಮೀನಾಕ್ಷಿಯರ ಕಥೆಯೂ ಬಹಳ ಚೆನ್ನಾಗಿದೆ. ಸೇನೆಗೆ ಸೋಲದ ಸಾಮ್ರಾಟ ಬಾಲೆಗೆ ಸೋತ ಕಥೆಯನ್ನು ಕೊನೆಗೆ ಓದಬೇಕು ತುಂಬಾ ಸೊಗದಾದ ಕಥೆಯಿದು.

ವಿಧಿಯ ಕ್ರೂರ ಷಡ್ಯಂತ್ರಕ್ಕೆ ಸಿಲುಕಿ ನಲುಗಿದವರು, ಬಾಳನ್ನು ಅಲ್ಲಿಗೆ ಮುಗಿಸದೆ, ಸತತ ಪರಿಶ್ರಮದಿಂದ ಸಾಧಿಸಿದ ಮೇಲ್ಕಲೆಯನ್ನು ನಮ್ಮ ಮುಂದಿಡುವ ಕೃತಿ ಎ. ಆರ್.

ಮಣಿಕಾಂತ್‌ರ ಅಮ್ಮ ಹೇಳಿದ ಎಂಟು ಸುಳ್ಳುಗಳು ಪುಸ್ತಕ. ಸಾಧನೆಗೆ ಯಾವುದೇ ಮಿತಿಯಿಲ್ಲ ಎಂದುಕೊಂಡಾಗ ಮಾತ್ರ ನಾವು ಏನನ್ನಾದರೂ ಸಾಧಿಸಬಹುದು ಎಂಬ ಆಶಾಕಿರಣ ಈ ಪುಸ್ತಕವನ್ನು ಓದಿದಾಗ ನಮಗೆ ದೊರೆಯುತ್ತದೆ.

ಅಮ್ಮ ಹೇಳಿದ ಎಂಟು ಸುಳ್ಳುಗಳು ಎಂಬ ಕಥೆಯೂ ಬಹಳ ಚೆನ್ನಾಗಿದೆ. ಮಕ್ಕಳನ್ನು ಬೆಳೆಸಲು ಅಮ್ಮ ಹೇಳುವ ಸುಳ್ಳುಗಳನ್ನು ತಿಳಿಸಿದ್ದಾರೆ.

ಲೇಖಕರು ಪ್ರತೀ ಲೇಖನದ ಕೊನೆಗೆ ಡಿಯರ್ ರೀಡರ್ ಎಂದು ಬರೆಯುತ್ತಾ ತನ್ನ ವಿಷಯವನ್ನು ಓದುಗರಿಗೆ ಲೇಖಕರು ಮನಕ್ಕೆ, ಹೃದಯಕ್ಕೆ ಮುಟ್ಟುವಂತೆ ತಿಳಿಸಿದ್ದಾರೆ.

ಪ್ರತಿಯೊಬ್ಬ ವಿದ್ಯಾರ್ಥಿಯು ಓದಬೇಕಾದ ಒಳ್ಳೆಯ ಪುಸ್ತಕ. ಅಮ್ಮ ಹೇಳಿದ ಎಂಟು ಸುಳ್ಳುಗಳು.

ಎ. ಆರ್. ಮಣಿಕಾಂತ್‌ರ ಬರಹದ ವೈಶಿಷ್ಟ್ಯವೇ ಪ್ರತಿಯೊಬ್ಬರಿಗೂ ಇಷ್ಟವಾಗುವಂತಹುದು.

ಅಪ್ಪ ಅಂದ್ರೆ ಆಕಾಶ – ಎ. ಆರ್. ಮಣಿಕಾಂತ್

ಶಿವರಾಜ್‌ಕುಮಾರ್
ದ್ವಿತೀಯ ಬಿ.ಎ.

ನಮಸ್ಕಾರ,

ಎ. ಆರ್. ಮಣಿಕಾಂತರವರು ಮಂಡ್ಯ ಜಿಲ್ಲೆಯ ನೆಲಮಂಗಲ ತಾಲೂಕಿನವರು. ಇವರು ಬಿ. ಇ. ಆಟೋಮೊಬೈಲ್ ಕಲಿತಿದ್ದು ಪತ್ರಿಕೋದ್ಯಮ ಇವರು ಸಂಯುಕ್ತ ಕರ್ನಾಟಕ. ವಿಜಯ ಕರ್ನಾಟಕ ಪತ್ರಿಕೆಗಳ ಉಪಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ. ಪ್ರಸ್ತುತ ಎ. ಆರ್. ಮಣಿಕಾಂತ್‌ರವರ ಅಪ್ಪ ಅಂದ್ರೆ ಆಕಾಶ ಎಂಬ ಲೇಖನಗಳ ಹೊತ್ತಗೆಯ ಬಗ್ಗೆ ವಿಮರ್ಶಿಸಲು, ಬರೆಯಲು ಇಚ್ಛಿಸಿದ್ದೇನೆ.

ಅಪ್ಪ ಅಂದ್ರೆ ಆಕಾಶ ಪುಸ್ತಕ ನೈಜ ಘಟನೆಗಳನ್ನು ಒಳಗೊಂಡಿವೆ. ಇನ್ನೊಬ್ಬರಿಗೆ ಸ್ಫೂರ್ತಿದಾಯಕವಾದ ಒಂದು ಪುಸ್ತಕ. ಇದರಲ್ಲಿ ಇರುವುದು ಒಟ್ಟು 30 ಲೇಖನಗಳು ನಾನು ಬರವಣಿಗೆಯ ದೃಷ್ಟಿಯಿಂದ ನನಗೆ ಇಷ್ಟವಾದ ಕೇವಲ 5 ಲೇಖನಗಳನ್ನು ಓದಿದೆ. ಲೇಖನವನ್ನು ಓದಿ ನನಗೆ ಆದ ಅನುಭವವನ್ನು ನಿಮ್ಮ ಮುಂದೆ ಇಡಲು ಇಷ್ಟ ಪಡುತ್ತೇನೆ.

ಮಣಿಕಾಂತ್‌ರವರ ಬರವಣಿಗೆಯ ಶೈಲಿ ಬಹಳ ಸರಳವಾಗಿದೆ. ಒಂದು ಸರಿ ಓದಿದ್ರೆ ಸಾಕು ಎಲ್ಲರಿಗೂ ಅರ್ಥವಾಗುವ ಶೈಲಿ. ಅಷ್ಟೆ ಅಲ್ಲ ಮಣಿಕಾಂತ ಬರವಣಿಗೆ ಜೀವನದಲ್ಲಿ ಜಿಗುಪ್ಸೆ, ಜೀವನವೇ ಬೇಡ ಸಾಕು ಎಂದು ಹೇಳುವವರು ಓದಿದರೆ ಅವರಿಗೆ ಜೀವನದ ಬಗ್ಗೆ ಸಕಾರಾತ್ಮಕವಾದ ಭಾವನೆ ಬರುತ್ತದೆ. ಮಣಿಕಾಂತ್ ಅವರು ಒಂದು ಲೇಖನ ನಾನು ಓದಿರುವುದು. 3 ಮಕ್ಕಳನ್ನು ಕಳೆದುಕೊಂಡು 30 ಮಕ್ಕಳ ಪೋಷಕರಾದವರು.

ಈ ಒಂದು ತಲೆಬರಹವನ್ನು ನೋಡಿದ ತಕ್ಷಣ ನನಗೆ ಇದು ಹೇಗೆ ಸಾಧ್ಯ ಎಲ್ಲವನ್ನು ಓದಿ ತಿಳಿಯುವ ಒಂದು ಕುತೂಹಲ ಹುಟ್ಟಿತು ಸ್ನೇಹಿತರೇ. ಆಗ ಆ ಒಳಗಿನ ಸಾರಾಂಶವನ್ನು ನೋಡಿದೆ. ಕೆ. ಪರಮೇಶ್ವರನ್ ಚೂಡಾಮಣಿ ದಂಪತಿಗಳು ನಾಗಪಟ್ಟಣಂ ಎಂಬಲ್ಲಿ ವಾಸಿಸುತ್ತಿರುತ್ತಾರೆ. ಅವರಿಗೆ 3 ಜನ ಮಕ್ಕಳು. ಒಂದು ಗಂಡು ಎರಡು ಹೆಣ್ಣು. ಅವರದ್ದು ಸುಖ ಸಂಸಾರ ಎಂಬುದರಲ್ಲಿ ಎರಡೂ ಮಾತಿಲ್ಲ. ತಂದೆಯ ಹುಟ್ಟು ಹಬ್ಬದದಿನ ಬಂಧುಗಳು ಬಂದಿರುತ್ತಾರೆ. ಅಲ್ಲಿಯೇ ಹತ್ತಿರದಲ್ಲಿ ಒಂದು ಸಮುದ್ರ ಅದಕ್ಕೆ ಹೋಗಬೇಕು ಎಂದು ಎಲ್ಲರೂ ಹೊರಡುತ್ತಾರೆ. ಹೀಗೆ ಹೋದಾಗ ಸಮುದ್ರದಲ್ಲಿ ಬೀಕರವಾದ ಒಂದು ಸದ್ದು ಬಂದು ತಂದೆ ಒಬ್ಬನ ಬಿಟ್ಟು ಎಲ್ಲರೂ ಸತ್ತು ಹೋಗುತ್ತಾರೆ. ಇದರಿಂದ ತಾಯಿ ಚೂಡಾಮಣಿ ಮತಿಭ್ರಮಣೆ ಒಳಗಾಗಿ ನಂತರ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸುತ್ತಾರೆ. ಆಗ ಕೊನೆಯ ಬಾರಿ ಸುತ್ತಾಡಲು ಹೋಗಬೇಕು ಎಂದು ಹೇಳಿದಾಗ ಅಲ್ಲಿ 30 ಜನ ಮಕ್ಕಳು ಸುನಾಮಿಯಲ್ಲಿ ಸತ್ತ ತಂದೆ ತಾಯಿ ಎಲ್ಲರನ್ನೂ ಕಳೆದುಕೊಳ್ಳುತ್ತಾರೆ. ಅವರನ್ನು ದತ್ತು ತೆಗೆದುಕೊಂಡು ಸಾಕುತ್ತಾರೆ. ಇವರಿಗೆ ಜೀವನದಲ್ಲಿ ಜಿಗುಪ್ಸೆ ಹೊರಟು ಹೋಗುತ್ತದೆ.

ಈ ಲೇಖನದಲ್ಲಿ ನನಗೆ ತಿಳಿದಿರುವುದು ತಂದೆ–ತಾಯಿ

ತಮ್ಮ ಮಕ್ಕಳನ್ನು ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಾಗ ಆ ಮುದ್ದು ಮಕ್ಕಳಲ್ಲಿ ತಮ್ಮ 3 ಜನ ಮಕ್ಕಳನ್ನು ಕಾಣುತ್ತಾರೆ. ಅದರಿಂದ ನಂಬಿಗೈ ಎಂಬ ಸಂಸ್ಥೆ ಸ್ಥಾಪಿಸುತ್ತಾರೆ. ಇವರು ಅಕಸ್ಮಾತ್ ಸತ್ತರೆ ಸಾಧಿಸಲು ಸಾಧ್ಯವಾಗುತ್ತಿತ್ತೇ?

ಅಪ್ಪ ಅಂದ್ರೆ ಆಕಾಶ: ಇದರಲ್ಲಿ ಮಣಿಕಾಂತರವರು ಒಬ್ಬ ಅಪ್ಪನ ಮಹತ್ವ ಮತ್ತು ಅವನಲ್ಲಿರುವ ಪ್ರಾಮಾಣಿಕತೆ ಮತ್ತು ಅಪ್ಪ ಮಾಲಕ ಗಾಂಧೀಜಿಯವರ ಮಾತು ಪಾಲಿಸುತ್ತಾರೆ. ಅಪ್ಪ ಬರಿ ಮಾಂಸದ ಊಟವನ್ನು ಮಾಡುತ್ತಿರುತ್ತಾನೆ. ಒಬ್ಬ ಭಾಷಣಕಾರ ಗಾಂಧೀಜಿಯ ಆತನ್ನು ಹೇಳುತ್ತಾನೆ. ಅದನ್ನು ಕೇಳಿಬಂದ ಅಪ್ಪ ತನ್ನ ಮಾಂಸದ ಊಟವನ್ನು ಬಿಡುತ್ತಾನೆ. ಇದರಿಂದ ನಾವು ಕೂಡಾ ಗಾಂಧೀಜಿ ಯವರ ಮಾತನ್ನು ಕೇಳಿದರೆ ನಮ್ಮ ದೇಶ ಉದ್ಧಾರವಾಗುತ್ತಿತ್ತು ಎಂದು ಹೇಳಬಹುದು.

ಮಣಿಕಾಂತರವರ ಲೇಖನಗಳ ಸ್ಫೂರ್ತಿದಾಯಕವಾಗಿವೆ.

ಇವರ ಲೇಖನಗಳು ಮುಂದೇನು ಆಗುತ್ತಿವೆ ಎಂಬ ಕುತೂಹಲವನ್ನು ಉಂಟು ಮಾಡುತ್ತವೆ.

ಅಂಗವೈಕಲ್ಯತೆಯಿಂದ ಇದ್ದವರು ಸಹ ಎಂತಹ ಸಾಧನೆ ಬೇಕಾದರೂ ಮಾಡಬಹುದು ಎಂಬುವ ಒಂದು ಛಲ ಹುಟ್ಟಿಸುತ್ತದೆ.

ನಮ್ಮನ್ನು ನಿಂದನೆಯ ವಿವಿಧ ಕಡೆಗೆ ಮಣಿಕಾಂತರವರ ಲೇಖನಗಳು ಕೊಂಡೊಯ್ಯುತ್ತವೆ.

ಎಂತಹ ವ್ಯಕ್ತಿಯು ಸಹ ಜೀವನದಲ್ಲಿ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಲ್ಲ ಎಂಬ ಒಂದು ಸಂದೇಶ ಈ ಲೇಖನಗಳಲ್ಲಿ ಇವೆ.

ಒಟ್ಟಾರೆ ಎ. ಆರ್. ಮಣಿಕಾಂತ್ ಅಪ್ಪ ಅಂದ್ರೆ ಆಕಾಶ ದ ಲೇಖನಗಳು ನಮ್ಮ ಜೀವನದ ದಿಕ್ಕನ್ನು ಬದಲಿಸಬಲ್ಲ ಲೇಖನಗಳು. ನಮ್ಮ ಜೀವನದಲ್ಲಿ ಎಲ್ಲವೂ ಸರಿ ಇದ್ದರೂ ಏನನ್ನು ಸಾಧಿಸಲು ಆಗುವುದಿಲ್ಲ, ಆದ ಒಬ್ಬ ವ್ಯಕ್ತಿ ತನ್ನ ಅಂಗವೈಕಲ್ಯ ಇದ್ದರೂ ಎಂ.ಬಿ. ಎ. ಮಾಡುತ್ತಾನೆ. ಅದು 95 ರಷ್ಟು ಸುಟ್ಟು 54 ಆಪರೇಷನ್ ಆದರೂ ಸಹ ಒಂದೇ ಬೆರಳಿನಲ್ಲಿ ಪರೀಕ್ಷೆ ಬರೆದು ಪಾಸ್ ಆದವರ ಒಂದು ಉದಾಹರಣೆ ನಮಗೆ ಒಂದು ಸ್ಫೂರ್ತಿಯನ್ನು ನೀಡುತ್ತದೆ.

ನಾ ಕಂಡಂತೆ ಶಿವರಾಮಕಾರಂತರ ಒಡಹುಟ್ಟಿದವರು

ದಿನೇಶ ಹೆಬ್ಬಾರ್
ದ್ವಿತೀಯ ಬಿ.ಎಸ್ಸಿ.

ಪುಸ್ತಕ ಓದುವುದು ಎಂದರೆ ಅದು ಆತ್ಮಿಕವಾದ ಸ್ನಾನ ಇದ್ದಂತೆ. ಅದು ಅಂತರಂಗ ಶುದ್ಧಿಗೆ ನಾವಿರುವ ಸಮಾಜದ ಬಗ್ಗೆ ಆಳವಾಗಿ ತಿಳಿಯಬೇಕು ಎಂದರೆ ಪುಸ್ತಕ ಓದುವ ಅಭಿರುಚಿ ಇರಲೇ ಬೇಕು. ಇದೇ ಸಮಾಜವನ್ನು ನೋಡುತ್ತಾ ಡಿ.ವಿ.ಜಿ.ಯವರು ಒಂದು ಕಡೆ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿ, ಒಂದೇ ಗಾಳಿಯ ಉಸಿರಾಡುತ್ತಾ, ಒಂದೇ ಬಣ್ಣದ ರಕ್ತ ಹೊಂದಿರುವ ಮಾನವನ ಗುಣ ಮಾತ್ರ ಅದ್ಹೇಗೆ ಭಿನ್ನ? ಎಂದು ಆಶ್ಚರ್ಯ ಚಕಿತರಾಗಿ ಪ್ರಶ್ನಿಸುತ್ತಾರೆ. ಹೇಗೆಲ್ಲಾ ಭಿನ್ನವಾಗಿರುತ್ತಾರೆ ಎಂದು ಬಹುಷಃ ಶಿವರಾಮಕಾರಂತರ ಒಡಹುಟ್ಟಿದವರು ಎಂಬ ಕಾದಂಬರಿ ಓದಿ ತಿಳಿಯಬಹುದು.

1954ರಲ್ಲಿ ಪ್ರಥಮ ಮುದ್ರಣ ಕಂಡ ಈ ಪುಸ್ತಕ ಪ್ರತಿಯೊಬ್ಬರ ಜೀವನಕ್ಕೆ ಕನ್ನಡಿ ಹಿಡಿದಂತಿದೆ. ಇಲ್ಲಿ ಬರುವ ಘಟನೆಗಳು ಸಮಾಜದಲ್ಲಿ ದಿನನಿತ್ಯ ಕಾಣುವ ಘಟನೆಗಳು. ಗಂಡ–ಹೆಂಡತಿಯ ಸಂಬಂಧ ಎನ್ನುವುದು ತ್ಯಾಗ, ಪ್ರೇಮ, ಸಹನೆಗಳೆಂಬ ನೂಲಿನಿಂದ ಸಿದ್ಧವಾದ ಬಟ್ಟೆ. ಇದನ್ನು ಹರಿಯುವುದು ಕಷ್ಟದ ಕೆಲಸವಲ್ಲ. ಆದರೆ ಉಳಿಸಿಕೊಂಡು ಹೋಗುವುದು ಬಹುದೊಡ್ಡ ಸವಾಲು. ತನ್ನ ಜೀವನದಲ್ಲಿ ಏನೆಲ್ಲಾ ಕಷ್ಟಗಳು ಬಂದರೂ ತನ್ನ ಗಂಡನನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂಬ ಹಠ ವಾಸಂತಿಯದು. ಅವಳು ಪುಸ್ತಕದುದ್ದಕ್ಕೂ ಸಹನೆಯೆ ರಾಯಭಾರಿಯಂತೆ ಕಂಡರೆ ಅವಳ ತಂಗಿ ಶೇವಂತಿಯದು ಇದಕ್ಕೆ ವ್ಯತಿರಿಕ್ತವಾದ ಸ್ವಭಾವ. ಈ ಸಹೋದರಿಯರ ಜೀವನಗಾಥೆಯೇ "ಒಡಹುಟ್ಟಿದವರು".

ವಾಸಂತಿ ಸ್ವಲ್ಪ ಕಪ್ಪು ಬಣ್ಣದ ಹುಡುಗಿ. ಆದರೆ ನಡವಳಿಕೆ

ಹಾಲಿನಷ್ಟು ಬಿಳಿ. ಶೇವಂತಿ ಸುಂದರಿ, ಶಾಲೆಗೆ ರ್‍ಯಾಂಕ್ ಬಂದು ಅಪ್ಪನ ತಲೆಗೆ ಹಿರಿಮೆಯ ಗರಿ ತೊಡಿಸಿದವಳು. ಆದರೆ ಅಪಾದಮಸ್ತಕವಾಗಿ ತುಂಬಿಕೊಂಡಿರುವ ಕೊಬ್ಬು ಅಹಂಕಾರ ಅವಳ ಕುರಿತಾಗಿ ಯಾರಿಗೂ ಒಳ್ಳೆಯ ಭಾವನೆ ಬರುವ ಹಾಗ ಇಟ್ಟಿರಲಿಲ್ಲ. ಇನ್ನು ತಂದೆಯ ಮುದ್ದು ಸಿಕ್ಕಿದ ಹುಡುಗಿ. ಕೇಳಬೇಕೆ? ಯೌವ್ವನ, ಸೌಂದರ್ಯ, ತಂದೆಯ ಸಲಿಗೆ ಸಿಕ್ಕಿದ ಹುಡುಗಿಗೆ ಲೋಕ ಕಾಣುತ್ತಿರಲಿಲ್ಲ. ಇತ್ತ ವಾಸಂತಿಗೆ ಸುಧಾಕರ ಎನ್ನುವ ಹುಡುಗನನ್ನು ಹುಡುಕಿ ಮದುವೆ ಮಾಡಿ ಕಳುಹಿಸಿಯಾಯಿತು. ಆದರೆ ಸುಧಾಕರನ ಇಚ್ಛೆಯಂತೆ ಮಾವ ತನ್ನ ಹಣದಲ್ಲಿ ಅಳಿಯನನ್ನು ಲಂಡನ್ನಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಿದರು. ಅಲ್ಲಿ ಆತ ಮುಂದೆ ಮಾಡುವ ಕಾರ್ಯ ಬೇರೆಯದ್ದೇ ಆದರೂ ವಾಸಂತಿ ಮಾತ್ರ ದಿನಾ ಗಂಡ ಬೇಗ ವಿದ್ಯಾಭ್ಯಾಸ ಮುಗಿಸಿ ಮನೆಗೆ ಬರಲಿ ಎಂದು ಪ್ರಾರ್ಥಿಸುತ್ತಿದ್ದಳು.

ಶೇವಂತಿಗೆ ಹುಡುಗನನ್ನು ಹುಡುಕುವ ಕೆಲಸ ಕಷ್ಟವೇ ಅಲ್ಲ, ಅವಳ ಸೌಂದರ್ಯಕ್ಕೆ ಎಲ್ಲರೂ ಅವಳನ್ನೇ ಹುಡುಕಿ ಬರುತ್ತಾರೆ ಎಂಬುದು ಅವಳ ತಂದೆ–ತಾಯಿಯ ಅಭಿಪ್ರಾಯ. ಹಾಗೆಯೇ ಶ್ರೀಮಂತ ವರನಾದ ವಾಸುದೇವನನ್ನು ಅಳಿಯನನ್ನಾಗಿ ಹುಡುಕಿದರು. ಆತ ಸಕಲ ಸದ್ಗುಣ ಸಂಪನ್ನ. ಶಾಂತ ಸ್ವಭಾವಿ. ಹೆಂಡತಿಯನ್ನು ಚೆನ್ನಾಗಿಯೇ ನೋಡಿಕೊಂಡ. ಆದರೆ ಆಕೆಯ ಅಹಂಕಾರ, ಅತ್ತೆ ಮಾವನ ಕುರಿತಾದ ಅಸಡ್ಡೆ ಅವನಿಗೆ ಸಿಟ್ಟು ತರಿಸಲು ಪ್ರಾರಂಭಿಸಿದವು. ಕೊನೆಗೆ ವಾಸುದೇವನ ತಾಯಿ ತೀರಿಕೊಳ್ಳುವ ಸಂದರ್ಭದಲ್ಲಿ ವ್ಯಾಪಾರದಲ್ಲಿ ನಷ್ಟವಾಗಿ ವಾಸುದೇವ ಕಂಗಾಲಾದ. ಆಗಲೂ ಶೇವಂತಿಯ ವಿಲಾಸಿ ಜೀವನ ಬದಲಾಗದೇ ಇದ್ದಾಗ ಗಂಡ–ಹೆಂಡಿರ ಜಗಳವಾಗಿ ಶೇವಂತಿ ಮಗನ ಸಮೇತ ತವರಿಗೆ ಬರುತ್ತಾಳೆ. ಈಗಲೂ ಪಶ್ಚಾತ್ತಾಪದ ಭಾವನೆ ಅವಳಲ್ಲಿ ಮೂಡುವುದಿಲ್ಲ.

ಇತ್ತ ಸುಧಾಕರ ಇಂಗ್ಲೆಂಡಿನಲ್ಲಿ ಮಾವನ ಹಣ ಮುಗಿದ ಮೇಲೆ, ಸಾಲಮಾಡಿ ಹುಡುಗಿಯರ ಜೊತೆ ಸುತ್ತಾಡುತ್ತಾ ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲಿಸಿ ಅರೆಹುಚ್ಚನಂತೆ ವಾಪಾಸಾಗುತ್ತಾನೆ. ವಾಸಂತಿ ಗಂಡನನ್ನೂ, ತಂಗಿಯನ್ನೂ ಸರಿದಾರಿಗೆ ತರಲು ಪಡುವ ಕಷ್ಟ ಅಷ್ಟಿಷ್ಟಲ್ಲ. ಕೊನೆಗೂ ತಂಗಿಯ ಮನಃಪರಿವರ್ತನೆ ಮಾಡಿ ತಂಗಿಯ ಸಂಸಾರವನ್ನು ಸರಿಮಾಡುತ್ತಾನೆ. ಹೆಂಡತಿ ಗಂಡನಿಗೆ ಎರಡನೆಯ ತಾಯಿ ಎನ್ನುತ್ತಾರೆ. ವಾಸಂತಿಯೂ ಗಂಡನನ್ನು ಮಗುವಿನಂತೆ ಕಾಳಜಿ ವಹಿಸಿ ಆತನಿಗೆ ವಿದ್ಯಾಭ್ಯಾಸ ಮುಗಿಸಿ ವಿಜ್ಞಾನಿಯಾಗುವಂತೆ ಮಾಡುತ್ತಾಳೆ.

ಒಂದೇ ತಾಯಿಯ ಮಡಿಲಲ್ಲಿ ಬೆಳೆದ ವಾಸಂತಿ ಹಾಗೂ ಶೇವಂತಿಯ ವಿಭಿನ್ನ ಗುಣ, ತಾನು ಇಂಗ್ಲೆಂಡಿಗೆ ಬಂದ ಉದ್ದೇಶ ಮರೆತು ಹಾಳಾದ ಸುಧಾಕರ, ಎಲ್ಲವನ್ನೂ ಸಹಿಸಿಕೊಂಡು ವಿವೇಕದಿಂದ ವತಿಸುವ ವಾಸಂತಿ, ಹಾಗೆಯೇ ಕತೆಗೆ ತಕ್ಕಂತೆ ಬರುವ ನೂರಾರು ಪಾತ್ರಗಳು ಜೀವನದ ನಿಜರೂಪದರ್ಶನ ಮಾಡಿಸುತ್ತವೆ. ಮಧ್ಯದಲ್ಲಿ ಒಂದೊಂದು ಪಾತ್ರಗಳ ಬಾಯಲ್ಲಿ ಶಿವರಾಮ ಕಾರಂತರು ಆಡಿಸುವ ಮಾತುಗಳು ಓದುವುದಕ್ಕೆ ಚಂದ. ಸಂಸ್ಕೃತಿ ಶಿಷ್ಟಾಚಾರದ ಮಾತುಗಳನ್ನು ಪಾತ್ರಗಳ ಮೂಲಕ ಮನೋಜ್ಞವಾಗಿ ನುಡಿಸುವಲ್ಲಿ ಕಾರಂತರನ್ನು ಮೀರಿಸುವುದು ಅಸಾಧ್ಯವೇ ಹೌದು. ಸಂಸಾರವನ್ನು ಸಸಾರವಾಗದಿರುವಂತೆ ನೋಡಿಕೊಳ್ಳಬೇಕು ಎಂಬ ಇಚ್ಛೆ ಇರುವವರೆಲ್ಲ ಈ ಕಾದಂಬರಿಯನ್ನು ಒಮ್ಮೆ ಓದಲೇಬೇಕು.

"ಅನ್ನವ ನೀಡಲು ದಿವ್ಯಾಹ್ನ ದೊರೆವುದು
ಹೊನ್ನನು ನೀಡಲು ಸುರಧೇನು ದೊರೆವುದು
ಇನ್ನೇನು ಇಲ್ಲದಿರೆ ನಿಜಧ್ಯಾನವೆಂಬೋ
ಧಾನ್ಯವ ನೀಡಲು ಮೋಕ್ಷವು ದೊರೆವುದು."

– ಕೊಡವೂರು ಬಸವಲಿಂಗ.

ಯಯಾತಿ

ಮೂಲ: ವಿ.ಎಸ್. ಖಾಂಡೇಕರ್, ಅನುವಾದ ವಿ.ಎಂ. ಇನಾಂದಾರ್

ಅಮೃತಾ
ಪ್ರಥಮ ಬಿ.ಎಸ್ಸಿ.

ಪ್ರಸ್ತುತ ನಾನು ವಿಮರ್ಶೆಗೆಂದು ಆಯ್ದುಕೊಂಡ ಪುಸ್ತಕ 'ಯಯಾತಿ'. ಈ ಪುಸ್ತಕವು ಮೂಲತಃ ಮರಾಠಿಯದ್ದಾಗಿದ್ದು ಇದನ್ನು ವಿ.ಎಸ್. ಖಾಂಡೇಕರ್ ಅವರು ರಚಿಸಿದ್ದಾರೆ. ಇದನ್ನು ವಿ.ಎಂ. ಇನಾಂದಾರ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಇದೊಂದು ಪೌರಾಣಿಕ ಕಥೆಯನ್ನು ಆಧರಿಸಿರುವುದಾಗಿದೆ. ಇದನ್ನು ಓದುತ್ತಿದ್ದಂತೆ ನಾವು ಅದೇ ಕಾಲದಲ್ಲಿದ್ದೇವೇನೋ ಎಂಬಂತೆ ಭಾಸವಾಗುತ್ತದೆ. ನಹುಷ–ಮಹಾರಾಜ ಮತ್ತು ಪುರೂರವನ ಪರಾಕ್ರಮ ಇಲ್ಲಿ ತಿಳಿಯುತ್ತದೆ. ನಹುಷ ಮಹಾರಾಜನ ಮಗ ಯಯಾತಿಯು ಕಾಮುಕನಾಗಿ ಚಿತ್ರಿತನಾಗಿದ್ದಾನೆ. ಅವನ ಶೌರ್ಯ ಪರಾಕ್ರಮ ಎಲ್ಲವೂ ಎಳೆಯ ವಯಸ್ಸಿಗೆ ಸೀಮಿತವಾದಂತೆ ಭಾಸವಾಗುತ್ತದೆ. ಕಾಮುಕತೆ ಎಂಬುದು ಅನುವಂಶಿಯ ರೋಗವೇ ಎಂಬ ಪ್ರಶ್ನೆಯನ್ನು ಓದುಗರ ಮುಂದಿರಿಸುತ್ತದೆ.

ಶುಕ್ರಾಚಾರ್ಯರ ಮಗಳು ಒಬ್ಬ ಬ್ರಾಹ್ಮಣನ ಮಗಳಾಗಿದ್ದೂ ತನ್ನ ತಂದೆಯು ಹೆಸರಿನಿಂದ ತನ್ನ ರಾಜ್ಯದ ರಾಜಕುಮಾರಿಯನ್ನೇ ದಾಸಿಯನ್ನಾಗಿಸಿಕೊಳ್ಳುವುದನ್ನು ಕಾಣಬಹುದು. ಈ ರೀತಿ ಅಹಂಕಾರದಿಂದ ಮೆರೆದ ದೇವಯಾನಿಯನ್ನು ಕೊನೆಯಲ್ಲಿ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದ ತಂದೆಯೇ ದೂರ ಮಾಡುತ್ತಾರೆ ಮತ್ತು ತದನಂತರ ದೇವಯಾನಿಯು ಬದಲಾಗುವುದನ್ನು ಕಾಣಬಹುದು. ಎಷ್ಟೋ ದುಡ್ಡಿದ್ದರೂ, ತಂದೆ–ತಾಯಿಗೆ ಒಳ್ಳೆಯ ಹೆಸರಿದ್ದರೂ ಅಹಂಕಾರದಿಂದ ಬದುಕಿದರೆ ಕೊನೆಗೆ ತಗ್ಗಬೇಕಾಗುತ್ತದೆ ಎಂಬುದನ್ನು ಇದು ತಿಳಿಸುತ್ತದೆ.

ವೃಷಭ ಮಹಾರಾಜನ ಮಗಳು ರಾಕ್ಷಸ ಕುಲದ ರಾಜಕುಮಾರಿ ಶರ್ಮಿಷ್ಠೆಯು ತನ್ನ ತಂದೆಗಾಗಿ ಮತ್ತು ದಾನವಕುಲಕ್ಕಾಗಿ ತಂದೆಯ ಮಾತಿಗೆ ಎದುರಾಡದೇ ಬ್ರಾಹ್ಮಣ ಕುವರಿಯ ದಾಸಿಯಾಗಿ ಹೋಗುವುದನ್ನು ಕಾಣಬಹುದು. ಕೊನೆಯಲ್ಲಿ ಶರ್ಮಿಷ್ಠೆಗೂ ರಾಣಿಯ ಪಟ್ಟ ಸಿಕ್ಕಿದ್ದರೆ ಚೆನ್ನಾಗಿರುತ್ತಿತ್ತು.

ಈ ಯಯಾತಿ ಕಾದಂಬರಿಯಲ್ಲಿ ಯತಿಯ ಪಾತ್ರವು ಪ್ರಭಾವಕಾರಿಯಾಗಿದೆ. ಮೂಲತಃ ರಾಜಕುಮಾರನಾದ ಯತಿಯು ಸ್ತ್ರೀ ಸಮುದಾಯವನ್ನು ವೈರಿಯಂತೆ ಕಂಡು ಅವರ ಮೇಲೆ ವೈರತ್ವವನ್ನು ಸಾಧಿಸುವುದು. ರಾಣಿ ಶಶಿಪ್ರಭೆಯ ಕಥೆಯನ್ನು ನೆನಪಿಸುತ್ತದೆ.

ಪ್ರಪಂಚದಲ್ಲಿರುವ ಎಲ್ಲಾ ಸ್ತ್ರೀಯರನ್ನು ಪುರುಷರನ್ನಾಗಿಸ ಹೊರಟ ಯತಿಯ ಮನವು ಓದುಗರ ಮನವನ್ನು ಕೆಡಿಸುತ್ತದೆ. ತದನಂತರದಲ್ಲಿ ಕಚನ ಸಂಪರ್ಕದಿಂದ ಯಯಾತಿಯ ಮನಸ್ಸು ಸರಿಹೋಗುವುದು ಖುಷಿ ನೀಡುತ್ತದೆ.

ಈ ಯಯಾತಿ ಕಾದಂಬರಿಯಲ್ಲಿ ಕಚನ ಪಾತ್ರವು ಮನಸ್ಸಿಗೆ ತುಂಬಾ ಮುದವನ್ನು ನೀಡುವಂತಹದ್ದು. ಅಗಸ್ತ್ಯರ ಆಶ್ರಮದಲ್ಲಿನ ಚಿಕ್ಕ ಹುಡುಗಿಂಯೊಂದಿಗಿನ ಕಥೆ, ಯಯಾತಿಯೊಂದಿಗೆ ಕಚನ ಸಂವಹನ, ದೇವಯಾನಿ ಮತ್ತು ಶರ್ಮಿಷ್ಠೆಯರೊಂದಿಗಿನ ಪ್ರೇಮಕಥನಗಳು ಸುಂದರವಾಗಿದೆ. ಕಚನು ಯಾವ ಸಮಯದಲ್ಲೂ ತನ್ನ ಸ್ಥಾನಮಾನವನ್ನು ಮರೆಯುವುದಿಲ್ಲ. ಇದು ನಮಗೊಂದು ಆದರ್ಶ ಮಾದರಿಯಾಗಿದೆ.

ಕಚನ ವಿವೇಚನಾ ಶಕ್ತಿ, ಮಾತಿನ ಶೈಲಿ ಎಲ್ಲರ ಮನಸ್ಸನ್ನು ಪರಿವರ್ತಿಸುವ ರೀತಿಯು ಮನಸ್ಸಿಗೆ ಸಂತೋಷವನ್ನು ನೀಡುತ್ತದೆ. ಪುರುವು ತನ್ನನ್ನು ಪ್ರೀತಿಯಿಂದ ಆಡಿಸದ, ಮುದಿತ್ವದ ತಂದೆಗಾಗಿ ತನ್ನ ಯೌವ್ವನವನ್ನೇ ಧಾರೆ ಎರೆಯುವುದು ಶ್ಲಾಘನೀಯ ಮತ್ತು ಪುರುವು ತನ್ನನ್ನು ಪ್ರೀತಿಸದ ದೊಡ್ಡಮ್ಮನ ಮಗನಾದ ಯದು ಕಷ್ಟದಲ್ಲಿರುವುದನ್ನು ಕೇಳಿದೊಡನೆ ಯುದ್ಧಗೆ ಹೋಗುವುದು ಅವನ ಕರ್ತವ್ಯ ನಿಷ್ಠೆಯನ್ನು ಸಾರುತ್ತದೆ.

ಒಟ್ಟಿನಲ್ಲಿ 'ಯಯಾತಿ' ಕಾದಂಬರಿಯ ಓದುಗರಿಗೆ ಹೊಸರೀತಿಯ ಅನುಭವವನ್ನು ನೀಡುತ್ತದೆ.

4. ಯುವ ಮನಸುಗಳ ಮಾತು–ಮಂಥನ

ಭಾರತೀಯ ಸಂಸ್ಕೃತಿಗೆ ಸಾಧುಸಂತರ ಕೊಡುಗೆ

(ಕಾಲೇಜಿನ ಸಂಸ್ಥಾಪಕರ ದಿನಾಚರಣೆಯ ಅಂಗವಾಗಿ ನಡೆಸಲಾದ ಅಂತರ್‌ಕಾಲೇಜು ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಬರಹ)

ಕೆ. ಸುಷ್ಮಾ– ತೃತೀಯ ಬಿ.ಎಸ್ಸಿ.
ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ

ಸಂಸ್ಕೃತಿ ಎಂಬ ಪದದ ಅರ್ಥ ಅತೀ ವಿಶಾಲವಾದದ್ದು. ವಿಶ್ವಸೃಷ್ಟಿಯಾದದ್ದರಿಂದ ಇಂದಿನವರೆಗೆ ಮಾನವ ಕುಲದ ಅನುಭವ, ಆಲೋಚನೆ, ನಂಬಿಕೆ ಮತ್ತು ನಡವಳಿಕೆಗಳು– ಇವುಗಳನ್ನು ನಾವು ಸಂಸ್ಕೃತಿಯ ಮೂಲವೆನ್ನಬಹುದು. ಒಂದು ದೇಶದ ಜನಾಂಗ, ಬದುಕುವ ರೀತಿ ನೀತಿಯನ್ನು ದೇಶದ ಸಂಸ್ಕೃತಿ ಎನ್ನಬಹುದಾಗಿದೆ. ಸಂಸ್ಕೃತಿಯು ದೇಶದ ಹಿರಿಮೆಯನ್ನು ತಾಯಿ ತನ್ನ ಮಗುವನ್ನು ಬೆಳೆಸಿದಂತೆ ಬೆಳೆಯುತ್ತದೆ. ಸಂಸ್ಕೃತಿ ಎಂಬುವುದು ಹರಿಯುವ ನೀರಿದ್ದಂತೆ. ಸಂಸ್ಕೃತಿಯು ಆ ನಾಡಿನ ಜನಾಂಗದ ಬದುಕಿಗೆ ಭದ್ರವಾದ ಆಧಾರ. ಸಂಸ್ಕೃತಿಯನ್ನು ರೂಪಿಸಿ ಕ್ರಿಯಾಶೀಲಗೊಳಿಸುವ ಕಲಾಕೌಶಲಗಳು ಭಾಷೆ, ಸಾಹಿತ್ಯ, ಸಂಗೀತ, ಶಿಲ್ಪ, ಚಿತ್ರಕಲೆ ಮೊದಲಾದವು. ನಾವು ಎಲ್ಲಿಯೇ ಇರಲಿ. ಹೇಗೆಯೇ ಇರಲಿ, ನಮ್ಮ ಸಂಸ್ಕೃತಿಯು ನಮ್ಮನ್ನು ಹಿಂಬಾಲಿಸಿಕೊಂಡು ಬರುತ್ತವೆ. ಪ್ರತಿಯೊಬ್ಬನ ಅಭ್ಯುದಯಕ್ಕೆ ಇದು ಕಾರಣವಾಗುತ್ತದೆ.

ಭಾರತೀಯ ಸಂಸ್ಕೃತಿಗೆ ಐದುಸಾವಿರ ವರ್ಷಗಳಿಗೂ ಮಿಕ್ಕಿದ ಗರಿಮೆಯಿದೆ. ಅಂದಿನಿಂದಲೂ ಭಾರತೀಯ ಸಂಸ್ಕೃತಿ ಬೆಳಗುತ್ತಲೇ ಬಂದಿದೆ. ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಗೆ ತನ್ನದೇ ಆದ ಉಜ್ವಲ ಪರಂಪರೆಯಿದ್ದಿತು. ನಾನಾ ರೀತಿಯ ಮತಧರ್ಮಗಳು ಇದ್ದರೂ ನಮ್ಮ ಸಂಸ್ಕೃತಿ ಏಕತೆಯನ್ನು ಬಲಿಕೊಟ್ಟು ಎಂದೂ ಬೆಳೆದಿಲ್ಲ. ಭಾರತೀಯ ಸಮಾಜವು ತೋರಿಸಿರುವ ಒಂದು ವೈಶಿಷ್ಟ್ಯವೆಂದರೆ ಸಮನ್ವಯ ಗುಣ. ಧರ್ಮ ಮತ್ತು ಸಂಸ್ಕೃತಿಯ ಮೇಲಿನ ಗೌರವವೇ ಭಾರತೀಯ ನಾಗರಿಕತೆಯ ಸಾರಸರ್ವಸ್ವ. ನಮ್ಮ ಋಷಿಮುನಿಗಳು, ಸಾಧುಸಂತರು ಜೀವನಾವಶ್ಯಕವಾದ ಮೂಲಭೂತ ವಸ್ತುಗಳಿಂದಲೇ ತೃಪ್ತರಾಗಿ ಅಧ್ಯಾತ್ಮಿಕ ಸಾಧನೆಗಳನ್ನು ಮಾಡಿ ಭಾರತೀಯ ಸಂಸ್ಕೃತಿಯ ಒಂದು ಅವಿಚ್ಛಿನ್ನ ಸ್ರೋತಕ್ಕೆ ಕಾರಣರಾಗಿದ್ದಾರೆ. ಇದು ನಮ್ಮ ಘನತೆಯೂ ಹೌದು. ಇಂದು ಪಾಶ್ಚಾತ್ಯರೂ ನಮ್ಮ ಸಂಸ್ಕೃತಿಯತ್ತ ಆಕರ್ಷಿತರಾಗುತ್ತಿದ್ದಾರೆ. ಪುರಾಣ ವೇದಗಳ ಕಾಲದಿಂದಲೂ ಅನೇಕ ಸಾಧುಸಂತರು ಸಾಹಿತ್ಯ, ಶಿಕ್ಷಣ, ವಿಜ್ಞಾನ, ಕಲೆ ಮುಂತಾದವುಗಳಿಗೆ ತಮ್ಮ ಕೊಡುಗೆಗಳನ್ನು ನೀಡುತ್ತಾ ಬಂದಿದ್ದಾರೆ.

ರಾಮಾಯಣ ಹಾಗೂ ಮಹಾಭಾರತ ಗ್ರಂಥಗಳು ವಾಲ್ಮೀಕಿ ಮತ್ತು ವ್ಯಾಸ ಮುನಿಗಳಿಂದ ರಚಿತವಾದ ಕೊಡುಗೆಗಳು. ಪಾಣಿನಿಯಿಂದ ಬರೆಯಲ್ಪಟ್ಟ ಅಷ್ಟಾಧ್ಯಾಯಿ ಗಣ್ಯ ವ್ಯಾಕರಣ ಗ್ರಂಥವಾಗಿದೆ. ಯೋಗವು ವೈದಿಕ ಸಂಸ್ಕೃತಿಯ ಗಣ್ಯ ಕೊಡುಗೆಯಾಗಿದ್ದು ಪತಂಜಲಿ ಯೋಗ ಸೂತ್ರವು ಇದರ ವಿವರಣೆ ನೀಡುವ ಅಗ್ರ ಕೃತಿಯಾಗಿದೆ. ಇದು ಯೋಗ ಗುರು ಪತಂಜಲಿ ಮುನಿಗಳ ಅಪೂರ್ವ ಕೊಡುಗೆಯಾಗಿದೆ. ಉಪನಿಷತ್ತು ಕೂಡಾ ವೇದಕಾಲದ ಉತ್ತಮ ಕೊಡುಗೆಯಾಗಿದೆ.

ಹಿಂದೂ ವೈದ್ಯ ಪದ್ಧತಿಯ ಮಹತ್ವದ ಹೆಸರು ಚರಕ ಮಹರ್ಷಿಯವರದ್ದು. ಆಯುರ್ವೇದ ಪದ್ಧತಿಯನ್ನು ಆರಂಭಿಸಿದ ಕೀರ್ತಿ ಇವರದ್ದು. ಇವರು 'ಚರಕ ಸಂಹಿತೆ' ಎಂಬ ಆಯುರ್ವೇದ ಗ್ರಂಥವನ್ನು ರಚಿಸಿದ್ದಾರೆ. ಇವರು ಆತ್ರೇಯ ಮುನಿಯ ಅದ್ಭುತ ವೈದ್ಯಗ್ರಂಥವನ್ನು ಅಭ್ಯಸಿಸಿ, ಪರಿಷ್ಕರಿಸಿ. ಅದರಲ್ಲಿ ತಮ್ಮ ಹೊಸ ಚಿಂತನೆಗಳನ್ನು ಸೇರಿಸಿ ಈ ಗ್ರಂಥವನ್ನು ರಚಿಸಿದರು.

ಐನೂರಕ್ಕೂ ಹೆಚ್ಚಿನ ಗಿಡಮೂಲಿಕೆಗಳ ಮಾಹಿತಿ ಈ ಗ್ರಂಥದಲ್ಲಿದೆ. ಭಾರತದ ರಾಜಕೀಯ ಇತಿಹಾಸದಲ್ಲಿ ಚಾಣಕ್ಯನ ಹೆಸರು ಪ್ರಸಿದ್ಧವಾದದ್ದು. ಕೌಟಿಲ್ಯನ ಅರ್ಥಶಾಸ್ತ್ರ ಎಂಬ ಗ್ರಂಥವು ಜಗತ್ಪ್ರಸಿದ್ಧವಾಗಿದೆ. ರಾಜಕೀಯಕ್ಕೆ ಬಹಳ ಸಹಾಯಕವಾದ ಗ್ರಂಥವಿದು. ಬ್ರಹ್ಮಗುಪ್ತ ಓರ್ವ ಪ್ರಸಿದ್ಧ ಗಣಿತಶಾಸ್ತ್ರಜ್ಞ ಹಾಗೂ ಬೀಜಗಣಿತದ ಪ್ರತಿಪಾದಕ. ಭಾರತೀಯ ಗಣಿತಶಾಸ್ತ್ರವನ್ನು ಇವರು ಉನ್ನತ ಸ್ಥಾನಕ್ಕೇರಿಸಿದರು. ಶೂನ್ಯ ಬಳಕೆಯ ನಿಯಮವನ್ನು

ತಿಳಿಸಿದರು. 'ಬ್ರಹ್ಮ ಸ್ಫುಟ ಸಿದ್ಧಾಂತ' ಗ್ರಂಥದಲ್ಲಿ ಜ್ಯೋತಿಷ್ಯ ಹಾಗೂ ಗಣಿತದ ಬಗ್ಗೆ ಉಲ್ಲೇಖಿಸಿದ್ದಾರೆ. ಹಾಗೆಯೇ ಭಾಸ್ಕರಾಚಾರ್ಯರು ಉಜ್ಜಯಿನಿಯ ಖಗೋಳಶಾಸ್ತ್ರ ಕೇಂದ್ರದಲ್ಲಿ ಮುಖ್ಯಸ್ಥರಾಗಿದ್ದರು. ದಶಮಾನ ಪದ್ಧತಿ ಹಾಗೂ ಆಧುನಿಕ ಬೀಜಗಣಿತದಲ್ಲಿ ಅಕ್ಷರಪದ್ಧತಿಯನ್ನು ಮೊದಲಿಗೆ ಬಳಕೆಗೆ ತಂದರು. ಇವರು ರಚಿಸಿದ ಆರು ಗ್ರಂಥಗಳಲ್ಲಿ ಸಿದ್ಧಾಂತ ಶಿರೋಮಣಿ ಖಗೋ–ಗಣಿತದ ಗ್ರಂಥವಾಗಿದೆ.

ಆರ್ಯಭಟನು ಮಹಾನ್ ಖಗೋಳಶಾಸ್ತ್ರಜ್ಞ ಮತ್ತು ಗಣಿತಶಾಸ್ತ್ರಜ್ಞ. ಇವನು ಬರೆದ ಆರ್ಯಭಟೀಯ ಎನ್ನುವುದು ಪ್ರಸಿದ್ಧ ಗ್ರಂಥವಾಗಿದೆ. ಇವನು ಗ್ರಹಗಳ ಚಲನೆ ಮತ್ತು ಗ್ರಹಣಗಳ ಬಗ್ಗೆ ಅಪಾರ ಮಾಹಿತಿ ನೀಡಿದ್ದಾನೆ. ಭೂಮಿ ದುಂಡಗಿದ್ದು, ತನ್ನದೇ ಅಕ್ಷದಲ್ಲಿ ಮತ್ತು ಸೂರ್ಯನ ಸುತ್ತ ಸುತ್ತುತ್ತದೆ ಎಂದು ಕೋಪರ್ನಿಕಸ್‌ಗಿಂತಲೂ ಒಂದು ಸಾವಿರ ವರ್ಷಗಳ ಹಿಂದೆಯೇ ಹೇಳಿದ್ದ. ಪೈ ಬೆಲೆಯನ್ನು ಕಂಡುಹಿಡಿದಿದ್ದ. ಭಾರಧ್ವಾಜರು ಪುರಾಣಗಳಲ್ಲಿ ಉಲ್ಲೇಖಿತ ಪ್ರಸಿದ್ಧ ಸಾಧುಗಳು. ಖಗೋಳಶಾಸ್ತ್ರಕ್ಕೆ ಇವರ ಕೊಡುಗೆ ಅಪಾರ. ಶುಶ್ರುತರನ್ನು ಭಾರತೀಯ ಶಸ್ತ್ರಚಿಕಿತ್ಸೆಯ ಪಿತಾಮಹ ಎಂದು ಕರೆಯಲಾಗುತ್ತದೆ. ಇವರ ಶುಶ್ರುತ ಸಂಹಿತೆ ಗ್ರಂಥದಲ್ಲಿ ಸುಮಾರು ಮುನ್ನೂರು ಶಸ್ತ್ರಚಿಕಿತ್ಸಾ ವಿಧಾನಗಳು ಹಾಗೂ ಸುಮಾರು ನೂರ ಇಪ್ಪತ್ತೈದು ಶಸ್ತ್ರಚಿಕಿತ್ಸಾ ಉಪಕರಣಗಳ ಉಲ್ಲೇಖವಿದೆ. ಕನಾದರು ಭಾರತೀಯ ತತ್ತ್ವಜ್ಞಾನಿ ಹಾಗೂ ಚಿಂತಕರು. ಅಣು ಸಿದ್ಧಾಂತವನ್ನು ಜಾನ್ ಡಾಲ್ಟನ್‌ಗಿಂತಲೂ ಮೊದಲೇ ಕಂಡುಹಿಡಿದಿದ್ದರು. ಎಲ್ಲಾ ವಸ್ತುಗಳು ಅಣುಗಳಿಂದಾಗಿವೆ ಎಂಬುದನ್ನು ತಿಳಿಸಿಕೊಟ್ಟರು. ಕಪಿಲರನ್ನು ವಿಶ್ವ ವಿಜ್ಞಾನದ ಪಿತಾಮಹ ಎಂದು ಕರೆಯುತ್ತಾರೆ. ಹೀಗೆಯೇ ವರಹಾಮಿಹಿರರು ಚಂದ್ರ ಮತ್ತು ಗ್ರಹಗಳಿಗೆ ಸ್ವಂತ ಬೆಳಕಿಲ್ಲ. ಸೂರ್ಯನಿಂದ ಪಡೆದ ಬೆಳಕನ್ನೇ ಪ್ರತಿಫಲಿಸುತ್ತವೆ ಎಂದು ಜಗತ್ತಿಗೇ ಸಾರಿದರು. ಇವರ ಬ್ರಹತ್ ಸಂಹಿತೆಯಲ್ಲಿ ಧೂಮಕೇತುಗಳ ಬಗ್ಗೆ ಮಾಹಿತಿಯಿದೆ. ಮಂಗಳಗ್ರಹದಲ್ಲಿ ನೀರಿನಾಂಶ ಇರುವುದನ್ನು ಆಗಿನ ಕಾಲದಲ್ಲೇ ಊಹಿಸಿದ್ದರು. ಭೂಮಿ ದುಂಡಗಿದೆ ಎಂಬುದನ್ನು ಪ್ರತಿಪಾದಿಸಿದರು. ನಾಗಾರ್ಜುನರನ್ನು ಎರಡನೇ ಬುದ್ಧ ಎಂದು ಕರೆಯುತ್ತಾರೆ. ಮೂಲ ಲೋಹಗಳನ್ನು ಟ್ರಾನ್ಸ್‌ಮಿಟ್ಟಿಂಗ್ ಮಾಡುವ ರಸವಿದ್ಯೆಯನ್ನು ತೋರಿಸಿಕೊಟ್ಟರು. ಇವರು ನಲಂದಾ ವಿಶ್ವವಿದ್ಯಾನಿಲಯದ ಕುಲಪತಿಗಳೂ ಆಗಿದ್ದರು.

ಹಿಂದೂಧರ್ಮ ಹಾಗೂ ತತ್ತ್ವಶಾಸ್ತ್ರಕ್ಕೆ ಶಂಕರಾಚಾರ್ಯರು ನೀಡಿದ ಕೊಡುಗೆ ಅಪಾರ. ಇವರು ಸನಾತನ ಧರ್ಮದ ಪರಮೋದ್ಧಾರಕರು. ಭಾರತೀಯ ತತ್ವಶಾಸ್ತ್ರ ಇತಿಹಾಸದಲ್ಲಿ ಅವರ ಅದ್ವೈತ ಸಿದ್ಧಾಂತವು ಪ್ರಮುಖವಾದದ್ದು. ಜೀವಾತ್ಮ ಮತ್ತು ಪರಮಾತ್ಮ ಬೇರೆಯಲ್ಲ ಎಂದು ಸಾರಿದರು. ಭಾರತದ ಉದ್ದಗಲಕ್ಕೂ ಸಂಚರಿಸಿ, ಬದರೀನಾಥದಲ್ಲಿ ಜ್ಯೋತಿರ್‌ಮಠ, ದ್ವಾರಕಾದಲ್ಲಿ ಕಾಳಿಕಾ ಪೀಠ, ಪುರಿಯಲ್ಲಿ ಗೋವರ್ಧನ ಪೀಠ, ಶೃಂಗೇರಿಯಲ್ಲಿ ಶಾರದಾಪೀಠಗಳನ್ನು ಸ್ಥಾಪಿಸಿದರು. ಸೌಂದರ್ಯ ಲಹರಿ ಮತ್ತು ಭಜಗೋವಿಂದಂ ಮುಂತಾದ ಭಕ್ತಿಸ್ತೋತ್ರಗಳನ್ನು ರಚಿಸಿದರು. ಅಲಹಾಬಾದಿನಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳ ಜಾತ್ರೆಯನ್ನು ಪ್ರಾರಂಭಿಸಿದವರು ಶ್ರೀ ಶಂಕರಾಚಾರ್ಯರು, ರಾಮಾನುಜಾಚಾರ್ಯರು ವೈಷ್ಣವ ಮತ ಪ್ರವರ್ತಕರು. ಜಾತಿವಾದವನ್ನು ಖಂಡಿಸಿದರು. ಪಂಚಮರನ್ನು ತಿರುಕುಲತ್ತರ್ ಎಂದು ಕರೆದು ಅವರಿಗೆ ಸಾಮಾಜಿಕ ಸ್ಥಾನಮಾನ ಕೊಟ್ಟರು. ಇವರ ಮುಖ್ಯ ಕೃತಿಗಳೆಂದರೆ ಶ್ರೀ ಭಾಷ್ಯ ವೇದಾಂತ ಸಾರ ಹಾಗೂ ವೇದಾಂತ ಸಂಗ್ರಹ. ಭಗವದ್ಗೀತೆಯ ಬಗೆಗಿನ ಅವರ ಭಾಷ್ಯ ಇತರ ಕೃತಿ.

ಕರ್ನಾಟಕದ ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನದಲ್ಲಿ ಬಸವೇಶ್ವರರು ಅತ್ಯಂತ ಪ್ರಮುಖ ಮತ್ತು ಕ್ರಾಂತಿಕಾರಿ ಪಾತ್ರ ವಹಿಸಿದರು. ಬಸವೇಶ್ವರರು ಬಸವಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪಿಸಿದರು. ಇದೊಂದು ಆಧ್ಯಾತ್ಮ ಸಂಸತ್ ಆಗಿತ್ತು. ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಪ್ರತಿಪಾಧಿಸಿದರು. ಜಾತೀಯತೆ, ಮೂರ್ತಿಪೂಜೆ, ಯಜ್ಞಯಾಗಾದಿಗಳನ್ನು ಖಂಡಿಸಿದರು. ಜಾತಿರಹಿತ, ವರ್ಗರಹಿತ ಸಮಾಜ ನಿರ್ಮಾಣಕ್ಕೆ ಪಣತೊಟ್ಟರು. ಚತುರ್ವರ್ಣಗಳನ್ನು ವಿರೋಧಿಸಿದರು. ಪ್ರತಿಯೊಬ್ಬರೂ ದುಡಿದು ತಿನ್ನಬೇಕು, ವೃತ್ತಿಗಳಲ್ಲಿ ಹಿರಿದು–ಕಿರಿದೆಂಬುದಿಲ್ಲವೆಂದು ಸಾರಿದರು. ಸಮಾಜದ ಸ್ವಾವಲಂಬನೆಗೆ

ಕಾಯಕ ತತ್ತ್ವ ಪ್ರತಿಪಾದಿಸಿದರು. ವೀರಶೈವ ಧರ್ಮವನ್ನು ಸುಧಾರಿಸಿದರು. ಸಕಲ ಜೀವಿಗಳಿಗೆ ಲೇಸನು ಬಯಸುವುದೇ ನಿಜವಾದ ಧರ್ಮವೆಂದು ಸಾರಿದರು. ಮಧ್ವಾಚಾರ್ಯರು ದ್ವೈತ ಸಿದ್ಧಾಂತವನ್ನು ಪ್ರತಿಪಾಧಿಸಿದರು. ದ್ವಾರಕೆಯಿಂದ ಶ್ರೀಕೃಷ್ಣನ ವಿಗ್ರಹ ತಂದು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರು. ಉಡುಪಿಯ ಅಷ್ಟಮಠಗಳು, ಉತ್ತರಾದಿ ಮಠ ಮತ್ತು ಮಂತ್ರಾಲಯದ ರಾಘವೇಂದ್ರ ಮಠ ಮಾಧ್ವರ ಮುಖ್ಯ ಧರ್ಮಕೇಂದ್ರಗಳಾಗಿವೆ. ಗುಜರಾತಿನ ವಲ್ಲಭ ಪಂಥ, ಬಂಗಾಳದ ಚೈತನ್ಯ ಪಂಥಗಳು ಇವರಿಂದ ಪ್ರಭಾವಿತವಾದವು. ಬ್ರಹ್ಮಸೂತ್ರಭಾಷ್ಯ, ಗೀತಾಭಾಷ್ಯ, ಮಹಾಭಾರತ ತಾತ್ಪರ್ಯ ನಿರ್ಣಯ, ವಿಷ್ಣು ತತ್ವ ನಿರ್ಣಯ ಇವರ ಪ್ರಮುಖ ಕೃತಿಗಳು.

ರಾಮಾನಂದರು ಭಕ್ತಿಪಂಥದ ಮೊದಲ ಸಂತರು. ಇವರು ಜನರಾಡುವ ಹಿಂದಿ ಭಾಷೆಯಲ್ಲಿ ದೇವರು ಒಬ್ಬನೇ, ಆತನೇ ಎಲ್ಲರ ತಂದೆ ಎಂದು ಜನರಿಗೆ ತಿಳಿಸಿದರು. ಜಾತಿ ಪದ್ಧತಿ ವಿರೋಧಿಸಿ, ಸ್ತ್ರೀ–ಪುರುಷರ ಸಮಾನತೆಗಾಗಿ ದುಡಿದರು. ರಾಮಭಕ್ತಿಯನ್ನು ಬೋಧಿಸಿದರು. ಕಬೀರದಾಸರು ಕವಿಗಳು, ತತ್ವಜ್ಞಾನಿ ಮತ್ತು ಸಮಾಜ ಸುಧಾರಕರು. ದೇವರು ಒಬ್ಬನೆ, ಪ್ರೇಮವೇ ದೇವರನ್ನು ಒಲಿಸಿಕೊಳ್ಳುವ ರಾಜಮಾರ್ಗ, ದೇವರು ಮಾನವನ ಹೃದಯದಲ್ಲಿದ್ದಾನೆ, ಭಕ್ತಿಯೇ ಧರ್ಮದ ಜೀವಾಳ ಎಂದು ಬೋಧಿಸಿದರು. ರಾಮ ಮತ್ತು ರಹೀಮರಲ್ಲಿ ಭೇದ ಇಲ್ಲ ಎಂದು ಒತ್ತಿ ಹೇಳಿದರು. ಚೈತನ್ಯರು ವಿಶ್ವಪ್ರೇಮವೇ ದೇವರ ಪ್ರೀತಿಯನ್ನು ಗಳಿಸುವ ಪ್ರಥಮ ಹೆಜ್ಜೆ ಎಂದು ಪ್ರತಿಪಾದಿಸಿದರು. ಕೃಷ್ಣನನ್ನು ಕುರಿತು ಕೀರ್ತನೆಗಳನ್ನು ರಚಿಸಿದರು. ತಮ್ಮ ಮನೆಯನ್ನು ಸಾಮೂಹಿಕ ಕೀರ್ತನೆ, ಭಜನೆಗಳ ಕೇಂದ್ರವನ್ನಾಗಿ ಮಾಡಿಕೊಂಡರು. ಇಂದಿನ ಹರೇಕೃಷ್ಣ ಪಂಥ ಇವರಿಂದ ಪ್ರಭಾವಿತವಾಗಿದೆ. ಗುರುನಾನಕರು ಸರ್ವಧರ್ಮ ಸಹಿಷ್ಣುತೆಯ ಸಂದೇಶವನ್ನು ಉಪದೇಶಿಸಿದರು. ಧರ್ಮಗಳ ನಡುವಿನ ಸಂಘರ್ಷ ಅಂತ್ಯಗೊಳಿಸಿ ದೇವನೊಬ್ಬನೇ ಸತ್ಯವೇ ದೇವರು, ಗುರುವಿನಿಂದ ಭಕ್ತಿಯನ್ನು, ಭಕ್ತಿಯಿಂದ ಮುಕ್ತಿಯನ್ನು ಪಡೆಯಬಹುದೆಂದು ಸಾರಿದರು. ಸಂತರ ವಾಣಿಗಳುಳ್ಳ ಗುರುಗ್ರಂಥ ಸಾಹೇಬ್ ಪೂಜ್ಯನೀಯ ಎಂದರು. ಮೀರಾಬಾಯಿ ಲೌಕಿಕ ಸಂಬಂಧವನ್ನು ತ್ಯಜಿಸಿ, ಆಧ್ಯಾತ್ಮಿಕ ಜೀವನ ಸ್ವೀಕರಿಸಿದಳು. ಕೃಷ್ಣನನ್ನೇ ಪತಿಯೆಂದು ನಂಬಿ, ಕೃಷ್ಣನ ರೂಪ, ಸೌಂದರ್ಯದ ವರ್ಣನೆಯನ್ನು ತನ್ನ ಭಜನೆ, ಕೀರ್ತನೆಗಳಲ್ಲಿ ಮನಮೋಹಕವಾಗಿ ಹಾಡಿದ್ದಾಳೆ. ಈಕೆಯ ಭಕ್ತಿರಸ ಪ್ರಧಾನವಾದ ಗೀತೆಗಳು ಇಂದಿಗೂ ಭಾರತದಲ್ಲೆಲ್ಲ ಜನಪ್ರಿಯವಾಗಿವೆ. ಇವರಷ್ಟೇ ಅಲ್ಲದೆ ಸೂರ್‌ದಾಸರ ಸೂರ್ ಸಾಗರ್, ತುಳಸೀದಾಸರ ರಾಮಚರಿತ ಮಾನಸ, ಜ್ಞಾನದೇವರ ಜ್ಞಾನೇಶ್ವರ ಕಾವ್ಯಗಳು ಅಮೂಲ್ಯ ಕೊಡುಗೆಗಳಾಗಿವೆ. ತುಕಾರಾಮ, ನಾಮದೇವ, ಸತಿ ಸಕ್ಕುಬಾಯಿ ಇವರೆಲ್ಲ ಮರಾಠಿಯಲ್ಲಿ ಭಕ್ತಿಸಾಹಿತ್ಯ ರಚಿಸಿದರು.

ಕನಕದಾಸರು ಹರಿದಾಸ ಸಾಹಿತ್ಯದ ಅಗ್ರಗಣ್ಯರಲ್ಲಿ ಒಬ್ಬರು. ಅವರ ಹರಿಭಕ್ತಿಸಾರ, ನಳಚರಿತ್ರೆ, ರಾಮಧ್ಯಾನ ಚರಿತ್ರೆ ಎಂಬ ಷಟ್ಪದಿ ಕಾವ್ಯಗಳು ಮೋಹನ ತರಂಗಿಣಿ ಎಂಬ ಸಾಂಗತ್ಯ ಕೃತಿಗಳು ಅಮೋಘ ಕೊಡುಗೆಗಳು. ಅಲ್ಲಮಪ್ರಭು ಹನ್ನೆರಡನೇ ಶತಮಾನದ ಪ್ರಸಿದ್ಧ ಚಿಂತಕ, ತತ್ತ್ವಜ್ಞಾನಿ, ಶಿವಚರಣ ಮತ್ತು ವಚನಕಾರರಾಗಿದ್ದು, ಕಲ್ಯಾಣದಲ್ಲಿ ಬಸವಣ್ಣ ಸ್ಥಾಪಿಸಿದ್ದ, ಶೂನ್ಯಪೀಠದ ಅಧ್ಯಕ್ಷರಾಗಿ ಅನೇಕರಿಗೆ ಮಾರ್ಗದರ್ಶನ ನೀಡಿದರು. ಅವರ ವಚನಗಳು ಅತ್ಯುತ್ತಮ ಕೊಡುಗೆಗಳಾಗಿವೆ. ಪುರಂದರದಾಸರು ಕರ್ನಾಟಕ ಸಂಗೀತದ ಪಿತಾಮಹರು. ಇವರ ಕೀರ್ತನೆಗಳು ಸಾಹಿತ್ಯಕ್ಕೆ ನೀಡಿದ ಕೊಡುಗೆಗಳಾಗಿವೆ. ಕೈವಾರಯೋಗಿ ನಾರಾಯಣಪ್ಪನವರು ಅನುಭವ ಕವಿ ಹಾಗೂ ಸಮಾಜ ಸುಧಾರಕರು. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಕೀರ್ತನೆಗಳು ಹಾಗೂ ತತ್ತ್ವಪದಗಳನ್ನು ರಚಿಸಿದ್ದಾರೆ. ಅಕ್ಕಮಹಾದೇವಿ ಪ್ರಸಿದ್ಧ ವಚನಕಾರ್ತಿ ಹಾಗೂ ಕವಯಿತ್ರಿಯಾಗಿದ್ದು, ಈಕೆಯ ವಚನಗಳು ವಚನಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳು. ಸಂತ ಶಿಶುನಾಳ ಶರೀಫರು ತಮ್ಮ ರಚನೆಗಳ ಮೂಲಕ ಹಾಗೂ ಗಾಯನದಿಂದಾಗಿ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧಿಯನ್ನು ಗಳಿಸಿದ್ದರು.

ಜೈನತೀರ್ಥಂಕರಾದ ವರ್ಧಮಾನ ಮಹಾವೀರ ಮತ್ತು ಬೌದ್ಧಧರ್ಮದ ಗೌತಮಬುದ್ಧರು ನೀಡಿದ ಉಪದೇಶಗಳು, ತತ್ತ್ವಗಳು ಧಾರ್ಮಿಕ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಗಳಾಗಿವೆ. ಸರ್ವಜ್ಞನು ತನ್ನ ತ್ರಿಪದಿಗಳಿಂದ ಸಮಾಜದ

ಮತ್ತು ವ್ಯಕ್ತಿಯ ಒಳಿತು ಕೆಡುಕುಗಳನ್ನು ತೋರಿಸುವುದರ ಮೂಲಕ ವ್ಯಷ್ಟಿ ಸಮಷ್ಟಿಯ ಬದುಕನ್ನು ಹಸನುಗೊಳಿಸಲು ಪ್ರಯತ್ನಿಸಿದ್ದನು. ತ್ರಿಪದಿಗಳು ಸರ್ವಜ್ಞನ ಶ್ರೇಷ್ಠ ಕೊಡುಗೆಗಳು. ಪಂಡಿತರನ್ನೂ, ಪಾಮರರನ್ನೂ ಮನರಂಜಿಸಿದ, ತಲೆದೂಗಿಸಿದ ಕನ್ನಡ ಸಾಹಿತ್ಯದಲ್ಲಿ ಚಿರಸ್ಮರಣೀಯವಾಗಿರುವ ಸರ್ವಜ್ಞನ ತ್ರಿಪದಿಗಳು ಕನ್ನಡಿಗನ ನಾಲಗೆಯಲ್ಲಿ ಇಂದಿಗೂ ನಲಿಯುತ್ತಿವೆ.

ಭಾರತೀಯ ಸಂಸ್ಕೃತಿಗೆ ಸ್ವಾಮಿ ವಿವೇಕಾನಂದರು ಹಾಗೂ ಅವರ ಗುರುಗಳಾದ ರಾಮಕೃಷ್ಣ ಪರಮಹಂಸರು ಮತ್ತು ಶ್ರೀ ಶಾರದಾದೇವಿಯವರ ಕೊಡುಗೆಗಳು ಅಮೂಲ್ಯವಾದವುಗಳು. ಇವರ ಪವಿತ್ರ ಜೀವನ, ಹಿತನುಡಿಗಳು ಇಂದಿಗೂ ಅನೇಕರ ಜೀವನ ಹಾದಿಯ ಬೆಳದಿಂಗಳಾಗಿದೆ. ಇವರುಗಳು ಸನಾತನ ಹಿಂದೂಧರ್ಮದ ಗರಿಮೆಯನ್ನು ಇಡೀ ಜಗತ್ತಿನಲ್ಲಿ ಬೆಳಗಿಸಿದರು. ಸ್ವಾಮಿ ವಿವೇಕಾನಂದರು ಕ್ರಿ.ಶ. 1897ರಲ್ಲಿ ರಾಮಕೃಷ್ಣ ಮಿಷನ್ ಎಂಬ ಸೇವಾ ಸಂಸ್ಥೆಯನ್ನು ಸ್ಥಾಪಿಸಿದರು. ದೇಶ–ವಿದೇಶಗಳಲ್ಲಿ ಈ ಸಂಸ್ಥೆಯ ಶಾಖೆಗಳು ಮತ್ತು ಚಟುವಟಿಕೆಗಳು ಬೆಳೆದವು. ರಾಮಕೃಷ್ಣಾಶ್ರಮ ಜನಸೇವೆಗಾಗಿ ಅನೇಕ ಶಾಲಾ–ಕಾಲೇಜುಗಳನ್ನು, ಅನಾಥಾಲಯುಗಳನ್ನು ಹಾಗೂ ಆಸ್ಪತ್ರೆಗಳನ್ನು ಸ್ಥಾಪಿಸಿದೆ. ಪ್ರವಾಹ, ಬರಗಾಲ, ಕ್ಷಾಮ ಮತ್ತು ರೋಗಪರಿಹಾರ ಕಾರ್ಯಗಳಲ್ಲಿ ಜನತೆಗೆ ಸೇವೆ ಮತ್ತು ಸಾಂತ್ವಾನಗಳನ್ನು ನೀಡಿದೆ. ಸ್ವಾಮಿ ವಿವೇಕಾನಂದರು ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ ವೇದಾಂತದ ಘನತೆ, ಸರ್ವಧರ್ಮಗಳ ಸಮಾನತೆಯನ್ನು ಎತ್ತಿ ಹಿಡಿದರು. ಶಿಕ್ಷಣ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆ ಅಪಾರವಾದದ್ದು. ಅವರ ಶೈಕ್ಷಣಿಕ ವಿಚಾರಧಾರೆಗಳು ಸಾರ್ವಜನಿಕ ಮೌಲ್ಯದ ಪ್ರತಿಪಾದಕತೆಯನ್ನು ಒಳಗೊಂಡು ಇಂದಿಗೂ ಆದರ್ಶನೀಯವಾಗಿದ್ದು, ಅನುಕರಣೀಯ ಎನಿಸಿದೆ.

ಸೋದರಿ ನಿವೇದಿತಾ ಐರ್ಲೆಂಡಿನಲ್ಲಿ ಜನಿಸಿದರು. ಇವರ ಮೊದಲ ಹೆಸರು ಮಾರ್ಗರೆಟ್ ಎಲಿಜಬೆತ್ ನೊಬೆಲ್. ಭಾರತಕ್ಕೆ ಬಂದು, ಭಾರತೀಯ ಆಧ್ಯಾತ್ಮವನ್ನು ಆಧರಿಸಿ, ಭಾರತೀಯರ ಸೇವೆಯನ್ನು ಮಾಡಿ, ಮಹಿಳಾ ಜಾಗೃತಿಗಾಗಿ ತಮ್ಮನ್ನು ಅರ್ಪಿಸಿಕೊಂಡ ಧೀಮಂತ ಮಹಿಳೆ. ವಿವೇಕಾನಂದರಿಂದ ಬ್ರಹ್ಮಚರ್ಯ ದೀಕ್ಷೆಯನ್ನು ಪಡೆದು ನಿವೇದಿತಾರಾದರು. ದಯಾನಂದ ಸರಸ್ವತಿಯವರು ಆರ್ಯಸಮಾಜವನ್ನು ಸ್ಥಾಪಿಸಿದರು. ವೇದಗಳ ಆಧಾರದ ಮೇಲೆ ಹಿಂದೂ ಸಮಾಜವನ್ನು ಸುಧಾರಿಸಿದರು. ಜಾತಿಪದ್ಧತಿ, ಅಸ್ಪೃಶ್ಯತೆ ಮತ್ತು ವಿಗ್ರಹಾರಾಧನೆಯನ್ನು ಖಂಡಿಸಿದರು. ಸ್ತ್ರೀಯರ ವಿದ್ಯಾಭ್ಯಾಸ ಹಾಗೂ ವಿಧವಾವಿವಾಹಗಳನ್ನು ಪ್ರತಿಪಾದಿಸಿದರು. ಸತ್ಯಾರ್ಥ ಪ್ರಕಾಶ ಎಂಬ ಹಿಂದಿ ಕೃತಿಯನ್ನು ರಚಿಸಿದರು. ಶಿಕ್ಷಣ ಪ್ರಸಾರಕ್ಕಾಗಿ ಲಾಹೋರಿನಲ್ಲಿ ದಯಾನಂದ ಆಂಗ್ಲೋ ವೈದಿಕ ಕಾಲೇಜು ಸ್ಥಾಪನೆಯಾಯಿತು. ಉತ್ತರ ಭಾರತದ ಅನೇಕ ಪ್ರದೇಶಗಳಲ್ಲಿ ಶಾಲಾ–ಕಾಲೇಜುಗಳ ಸ್ಥಾಪನೆಯಾಯಿತು.

ಶ್ರೀ ನಾರಾಯಣ ಗುರುಗಳು ಆಧ್ಯಾತ್ಮಿಕ ಚಿಂತನೆಯಿಂದ ಸಮಾನತೆಯನ್ನು ಸಾರಿದ ಮಹಾತ್ಮರು. ಅತ್ಯಂತ ಕೆಳಸ್ತರದಲ್ಲಿ ಹುಟ್ಟಿದರೂ ಪ್ರಾರಂಭದಿಂದಲೂ ದೇವರು, ಪೂಜೆ, ಶ್ಲೋಕ, ಜ್ಯೋತಿಷ್ಯ ಶಾಸ್ತ್ರ ಮುಂತಾದವುಗಳಲ್ಲಿ ಆಸಕ್ತಿ ಬೆಳೆಸಿಕೊಂಡು ಅವುಗಳನ್ನು ಗಳಿಸಿಕೊಂಡು, ವಿದ್ಯಾವಂತರಾಗಿ ಸದಾ ಕೆಳಸ್ತರದ ಏಳಿಗೆಗಾಗಿ ಶ್ರಮಿಸಿದರು. ಅಸ್ಪೃಶ್ಯತೆ, ಮೂಢನಂಬಿಕೆಗಳಂತಹ ದೌರ್ಜನ್ಯಗಳನ್ನು ಖಂಡಿಸಿದರು. ದೇವಸ್ಥಾನಗಳಲ್ಲಿ ಎಲ್ಲರಿಗೂ ಪ್ರವೇಶಾವಕಾಶ ಕಲ್ಪಿಸಿದರು. ಶೂದ್ರರಿಗಾಗಿ ದೇವಸ್ಥಾನದಲ್ಲಿ ರಾತ್ರಿಶಾಲೆಗಳನ್ನು ಪ್ರಾರಂಭಿಸಿ, ಇಂಗ್ಲೀಷ್, ಸಂಸ್ಕೃತ, ದೇವರ ಶ್ಲೋಕ, ಸ್ತೋತ್ರ ಮುಂತಾದವುಗಳನ್ನು ಕಲಿಸಿದರು. 1903ರಲ್ಲಿ ಶ್ರೀ ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಎಂಬ ಸಂಸ್ಥೆ ತೆರೆದು ಅಸ್ಪೃಶ್ಯತೆ ಆಚರಣೆ, ದೇವರು–ಮದುವೆ ಹೆಸರಿನಲ್ಲಿ ದುಂದುವೆಚ್ಚ, ಜಾತಿ ತಾರತಮ್ಯ, ಮೂಢನಂಬಿಕೆ, ಮುಂತಾದವುಗಳ ವಿರುದ್ಧ ಜನಜಾಗೃತಿ ಮೂಡಿಸಿದರು. ತನ್ನ ಜೀವಿತಾವಧಿಯಲ್ಲಿ ಶೋಷಿತ ಸಮುದಾಯಗಳಿಗಾಗಿ ಸುಮಾರು ಅರವತ್ತು ದೇವಸ್ಥಾನಗಳನ್ನು ಕಟ್ಟಿಸಿದರು. ಭಾರತೀಯ ಸಂಸ್ಕೃತಿಗೆ ಇವರ ಕೊಡುಗೆ ಅಪಾರವಾದದ್ದು. ಗಾಂಧೀಜಿಯವರೊಡನೆ ಸೇರಿ ಅಸ್ಪೃಶ್ಯತೆಯ ವಿರುದ್ಧ ನಡೆಸಿದ ವೈಕಂ ಚಳುವಳಿಯಲ್ಲಿ ಭಾಗವಹಿಸಿದ್ದರು.

ಮದರ್‌ತೆರೇಸಾರವರು ತಮ್ಮ ಅತ್ಯದ್ಭುತ ಸಮಾಜ ಸೇವೆಯಿಂದಾಗಿ ಜಗತ್ಪ್ರಸಿದ್ದರಾಗಿದ್ದಾರೆ. ಮದರ್‌ತೆರೇಸಾರವರು ಒಬ್ಬ ಮಾನವತಾವಾದಿಯಾಗಿ ಹೆಸರುವಾಸಿಯಾದವರು. ಬಡವರ, ಅನಾಥರ ಮತ್ತು ರೋಗಿಗಳ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇವರಿಗೆ ಅತ್ಯುನ್ನತವಾದ ನೊಬೆಲ್ ಶಾಂತಿ ಪ್ರಶಸ್ತಿಯು ಲಭಿಸಿದೆ.

ಈ ದಿನಗಳಲ್ಲಿ ಅನೇಕ ಸಾಧುಸಂತರು ಭಾರತೀಯ ಸಂಸ್ಕೃತಿಗೆ ತಮ್ಮ ಕೊಡುಗೆಗಳನ್ನು ನೀಡುತ್ತಿದ್ದಾರೆ. ತುಮಕೂರಿನ ಸಿದ್ಧಗಂಗಾ ಕ್ಷೇತ್ರದತ್ತ ಇಡೀ ವಿಶ್ವವೇ ನೋಡುವಂತಾಗಲು ಕಾರಣರಾದವರು ನಡೆದಾಡುವ ದೇವರೆಂದೇ ಪ್ರಸಿದ್ಧರಾಗಿರುವ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು. ಸನ್ಯಾಸದ ಸೇವಾಮುಖಕ್ಕೆ ಹೊಸ ವ್ಯಾಖ್ಯಾನ ಬರೆದವರು ಸ್ವಾಮೀಜಿ. ಸಿದ್ಧಗಂಗೆ ಇಂದು ಜ್ಞಾನಗಂಗೆಯಾಗಿ ಮಾರ್ಪಟ್ಟಿದೆ. 1940ರ ಅವಧಿಯಲ್ಲಿ ಕೇವಲ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಗೆ ಆಶ್ರಯನೀಡುತ್ತಿದ್ದ ಮಠದಲ್ಲಿಂದು, ಹದಿನೈದು ಸಾವಿರಕ್ಕೂ ಹೆಚ್ಚು ಮಕ್ಕಳು ಊಟ, ವಸತಿ ಮತ್ತು ಶಿಕ್ಷಣ ಪಡೆಯುತ್ತಿದ್ದಾರೆ. ನೂರ ಇಪ್ಪತ್ತೈದಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಈ ಸಂಸ್ಥೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಅರವತ್ತರಿಂದ ಎಪ್ಪತ್ತು ಸಾವಿರ ವಿದ್ಯಾರ್ಥಿಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ನೂರಾರು ಕಟ್ಟಡಗಳು, ಸಾಕಷ್ಟು ಶಿಕ್ಷಣ ಸಂಸ್ಥೆಗಳನ್ನು ಬೆಳೆಸಲು ಸ್ವಾಮೀಜಿ ಹರಿಸಿದ ಬೆವರು, ಪಟ್ಟಶ್ರಮ ಅಷ್ಟಿಷ್ಟಲ್ಲ. ಇವರಿಗೆ ಹಲವಾರು ಪ್ರಶಸ್ತಿಗಳು ಬಂದರೂ ನನಗೇಕೆ ಈ ಪುರಸ್ಕಾರ, ಪ್ರಶಸ್ತಿ ಎನ್ನುವ ಇವರು ಪ್ರಶಸ್ತಿಗಳನ್ನೇ ಮೀರಿಸಿದ ಅಪರೂಪದ ವ್ಯಕ್ತಿ. ಇಷ್ಟೇ ಅಲ್ಲದೆ ಪುಟ್ಟರಾಜಗವಾಯಿಯವರು ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆ ಮಹತ್ತರವಾದದ್ದು. ಇಂದು ಗವಾಯಿಗಳ ಮಠದಲ್ಲಿ ಸಾವಿರಾರು ವಿದ್ಯಾರ್ಥಿಗಳು ಸಂಗೀತಾಭ್ಯಾಸ ಮಾಡುತ್ತಿದ್ದಾರೆ. ಅಪ್ರತಿಮ ವಾಗ್ಮಿಯು, ಅದ್ವಿತೀಯ ಸಮಾಜ ಚಿಂತಕರೂ, ವಿದ್ವಾಂಸರೂ, ರಾಷ್ಟ್ರಪ್ರೇಮಿಯೂ ಆದ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥರ ಜೀವನ, ಜನಸೇವಾಕಾರ್ಯ ಇಂದಿಗೂ ನಡೆಯುತ್ತಿದೆ. ವಿದ್ಯಾರ್ಥಿಗಳಿಗೆ ಗುರುಕುಲದಲ್ಲಿ ಪುರಾಣ, ಪಾಠ-ಪ್ರವಚನ ಎಲ್ಲಾ ಹೇಳಿಕೊಡಲಾಗುತ್ತಿದೆ. ಭಾರತೀಯತೆಯನ್ನು, ಪುರಾಣಗಳನ್ನು ತಾರ್ಕಿಕವಾಗಿ ವ್ಯಾಖ್ಯಾನಿಸುವ ಇವರ ರೀತಿ ಬಹಳ ಸೃಜನಶೀಲವಾದದ್ದು. ಇಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯುತ್ತಿರುತ್ತವೆ.

ಬಾಬಾ ರಾಮ್‌ದೇವ್ ಯೋಗಗುರುಗಳಾಗಿ ಭಾರತದ ಹಾಗೂ ಇಡೀ ಜಗತ್ತಿನ ಗಮನ ಸೆಳೆದಿದ್ದಾರೆ. ಇವರ ಪತಂಜಲಿ ಸಂಸ್ಥೆ ಭಾರತೀಯ ಮಾರುಕಟ್ಟೆಯಲ್ಲಿ ತನ್ನದೇ ಛಾಪು ಮೂಡಿಸಿದೆ. ಶ್ರೀ ಸತ್ಯಸಾಯಿಬಾಬಾರವರು ಎಜುಕೇರ್ ಎಂಬ ಹೊಸ ಶಿಕ್ಷಣ ವಿಧಾನವನ್ನು ಜಾರಿಗೆ ತಂದಿದ್ದರು. ಆತ್ಮಸ್ವರೂಪಿಯಾದ ಮಾನವನಲ್ಲಿ ಹುದುಗಿರುವ ಅಪಾರವಾದ ದೈವೀಶಕ್ತಿಯನ್ನು ಹೊರಚಿಮ್ಮಿಸಿ ಹೊಸ ಜನಾಂಗವನ್ನು ಸೃಷ್ಟಿಸುವುದೇ ಇವರ ಉದ್ದೇಶವಾಗಿತ್ತು. ಇದು ಇಂದಿಗೂ ಮುಂದುವರಿಯುತ್ತಾ ಬಂದಿದೆ.

ಹೀಗೆ ಸಾಧು ಸಂತರು ಭಾರತೀಯ ಸಂಸ್ಕೃತಿಗೆ ಕೊಟ್ಟಿರುವ, ಕೊಡುಗೆಗಳು ಅಪಾರ. ಈಗಲೂ ಕೊಡುತ್ತಾ ಬಂದಿದ್ದಾರೆ. ಆದರೆ ಇಂದು ಲೌಕಿಕ ಆಕರ್ಷಣೆಗೆ ಒಳಗಾಗಿ ಭಾರತೀಯರು ಪಾಶ್ಚಾತ್ಯ ಸಂಸ್ಕೃತಿಗೆ ಆಕರ್ಷಿತರಾಗುತ್ತಿರುವುದು ಬುಡವನ್ನು ಬಿಟ್ಟು ಎಲೆಯನ್ನು ನೋಡಿದ ಹಾಗೆ ಅಲ್ಲವೆ? ಪರರ ಸಂಸ್ಕೃತಿಯನ್ನು ಪ್ರೀತಿಸು, ಆದರೆ ನಿನ್ನ ಸಂಸ್ಕೃತಿಯಲ್ಲಿ ಜೀವಿಸು ಎಂಬ ನುಡಿಮುತ್ತಿನಂತೆ ನಾವು ಹುಟ್ಟಿಬೆಳೆದ ದೇಶದ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದು ಭಾರತೀಯರಾದ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

"ಆಚಾರದಿಂದನುಪಮ ಧರ್ಮದೇಳಿಗೆ
ಆಚಾರದಿಂದಾಯುಷ್ಯ
ಆಚಾರದಿಂದಿಹಪರವದರಿಂದ ಸ
ದಾಚಾರವತಿಯೆನಿಸುವುದು"

– ಸಂಚಿ ಹೊನ್ನಮ್ಮ

ಭಾರತೀಯ ಸಂಸ್ಕೃತಿಗೆ ಸಾಧು ಸಂತರ ಕೊಡುಗೆ

(ಕಾಲೇಜಿನ ಸಂಸ್ಥಾಪಕರ ದಿನಾಚರಣೆಯ ಅಂಗವಾಗಿ ನಡೆಸಲಾದ ಅಂತರ್ ಕಾಲೇಜು ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಬರಹ)

ಶ್ರೀ ವೆಂಕಟೇಶ ಪ್ರಸಾದ ರಾಮಕೃಷ್ಣ ಹೆಗ್ಗಡೆ
ದ್ವಿತೀಯ ಬಿ.ಕಾಂ. ಪೂರ್ಣಪ್ರಜ್ಞ ಸಂಧ್ಯಾ ಕಾಲೇಜು,
ಉಡುಪಿ.

ಪ್ರಕೃತಿ, ಸಂಸ್ಕೃತಿ ಮತ್ತು ವಿಕೃತಿ ಒಂದೇ ಧಾತುವಿನಿಂದ ಜನಿಸಿದ ಮೂರು ಪದಗಳು. ಪ್ರಕೃತಿ ಎನ್ನುವುದು ದೈವಸೃಷ್ಟಿ. ನೈಸರ್ಗಿಕವಾದದ್ದು. ಅದರ ಸುಧಾರಣೆ ಮಾಡಿದರೆ ಅದು ಸಂಸ್ಕೃತಿ ಮತ್ತು ಅದರ ವಿನಾಶ ಮಾಡಿದರೆ ಅದು ವಿಕೃತಿ. ಹೀಗೆ ನೋಡಲು ಬಹಳ ಸುಲಭದ ವಿಷಯ. ಆದರೆ ಅದರ ಅಗಾಧತೆಯ, ವೈಶಾಲ್ಯದ ಅರಿವಾದಾಗ ಸಣ್ಣದೊಂದು ಕಂಪನ ಉಂಟಾಗದೇ ಇರದು. ನಾವು ಯಾರನ್ನೋ ತಪ್ಪಿ ತುಳಿದಾಗ ತಟ್ಟನೇ ನಮಸ್ಕರಿಸುತ್ತೇವಲ್ಲ, ಮಧ್ಯಾಹ್ನದ ಹೊತ್ತಿಗೆ ಯಾರೋ ಅನಿರೀಕ್ಷಿತವಾಗಿ ಮನೆಗೆ ಬಂದರೆ ಒತ್ತಾಯ ಮಾಡಿಯಾದರೂ ಊಟ ಮಾಡಿಸಿಯೇ ಕಳುಹಿಸುತ್ತೇವಲ್ಲ. ಆಗೆಲ್ಲ ಎದೆಯುಬ್ಬಿಸಿ, "ಇದು ನಮ್ಮ ಸಂಸ್ಕೃತಿ ಅಂದ್ರೆ" ಅಂತ ಹೇಳಿಕೊಳ್ಳುವುದು ಸಾಮಾನ್ಯ. ಹಾಗಿದ್ದರೆ ಇಷ್ಟೇ ನಮ್ಮ ಸಂಸ್ಕೃತಿಯ ವ್ಯಾಪ್ತಿಯೇ? ಖಂಡಿತವಾಗಿಯೂ ಅಲ್ಲ. ನಮ್ಮ ಮಾತು, ನಡತೆ, ಉಡುಗೆ, ದಿನಚರಿ, ಹವ್ಯಾಸ ಅಷ್ಟೇ ಏಕೆ ನಾಟ್ಯ, ಸಂಗೀತ ವಾಸ್ತುಶಿಲ್ಪ, ಚಿತ್ರಕಲೆ ಎಲ್ಲಿ ನೋಡಿದರೂ ನಮ್ಮ ಸಂಸ್ಕೃತಿಯ ಸುಗಂಧ ಇದ್ದೇ ಇದೆ.

ಭಾರತೀಯ ಸಂಸ್ಕೃತಿಯ ಅಗಾಧತೆಯನ್ನು, ವೈವಿಧ್ಯವನ್ನು ಕಂಡಾಗ ಒಂದು ಪ್ರಶ್ನೆ ಹುಟ್ಟಿಕೊಳ್ಳದೇ ಇರದು. ಇಷ್ಟು ವಿಶಾಲ, ವೈವಿಧ್ಯಮಯ ಸಂಸ್ಕೃತಿಯನ್ನು ಸಾವಿರಾರು ವರ್ಷಗಳ ಕಾಲ ಉಳಿಸಿಕೊಂಡು ಬರಲು ಹೇಗೆ ಸಾಧ್ಯವಾಯಿತು? ಅಲ್ಲಿಯೇ ಇರುವಂತದ್ದು ಭಾರತದ ಶ್ರೇಷ್ಠ ಗುರುಪರಂಪರೆಯ ಶಕ್ತಿ. ಇತಿಹಾಸದುದ್ದಕ್ಕೂ ಭಾರತೀಯ ಸಂಸ್ಕೃತಿಯ ಪ್ರಚಾರಕರಾಗಿ, ಸುಧಾರಕರಾಗಿ ಮತ್ತು ಸಂರಕ್ಷಕರಾಗಿ ಇಲ್ಲಿಯ ಸಾಧು ಸಂತರು ನೀಡಿದ ಕೊಡುಗೆ ಅಪಾರವಾದದ್ದು. ಮಂತ್ರ ದೃಷ್ಟಾರರಾದ ಮಹಾಮುನಿಗಳಿಂದ ಹಿಡಿದು ವೀರ ಸನ್ಯಾಸಿ ವಿವೇಕಾನಂದರು ಮತ್ತು ಅನಂತರದಲ್ಲೂ ಭಾರತೀಯ ಸಂಸ್ಕೃತಿಯ ಭವ್ಯಭವನದ ಆಧಾರ ಸ್ಥಂಭವಾಗಿ ಕಾಣುವುದು ಈ ಮಣ್ಣಿನ ಶ್ರೇಷ್ಠ ಸಾಧುಗಳು, ಮತ್ತವರು ನೀಡಿದ ಅಮೂಲ್ಯ ಕೊಡುಗೆಗಳು.

ಧಾರ್ಮಿಕ ಚಿಂತನೆಗಳು:

ಪ್ರತಿ ಸಮುದಾಯದ ಸಂಸ್ಕೃತಿಯು ಅವರ ಧಾರ್ಮಿಕ ನಂಬಿಕೆಗಳ ಮೇಲೆ ಅವಲಂಬಿತವಾಗುತ್ತವೆ. ಇದಕ್ಕೆ ಭಾರತೀಯ ಸಂಸ್ಕೃತಿಯೂ ಹೊರತಾಗಿಲ್ಲ. ನಮ್ಮ ಧಾರ್ಮಿಕ ನಂಬಿಕೆಗಳು ನೇರವಾಗಿ ಮುನಿವರೇಣ್ಯರ ಕೊಡುಗೆ ಅಲ್ಲದಿದ್ದರೂ ಮಂತ್ರದೃಷ್ಟರರಾದ ಅವರು ಸಾಕ್ಷಾತ್ಕರಿಸಿಕೊಂಡದ್ದನ್ನು ಎಲ್ಲರಿಗೂ ಮುಟ್ಟುವಂತೆ ತಿಳಿಸುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿಟ್ಟಿದ್ದಾರೆ. ವೇದಗಳು, ಉಪನಿಷತ್ತುಗಳು ಅವುಗಳಲ್ಲಿರುವ ಅದ್ಭುತ ಧಾರ್ಮಿಕ ಚಿಂತನೆಗಳು, ನಮ್ಮ ಸಂಸ್ಕೃತಿಯ ಶ್ರೇಷ್ಠ ಭಾಗಗಳು ಹುಟ್ಟಿಕೊಂಡಿದ್ದು ಅಲ್ಲಿಯೇ. ಪ್ರತಿಯೊಬ್ಬನಲ್ಲಿಯೂ ಮತ್ತು ಪ್ರತಿಯೊಂದರಲ್ಲಿಯೂ ದೇವರನ್ನು ಕಾಣುವ ಆ ಶ್ರೇಷ್ಠ ಕಲ್ಪನೆಯೇ ಎಲ್ಲರಿಗೂ ಕೈ ಮುಗಿದು ನಮಸ್ತೇ ಎನ್ನುವ ಅಥವಾ ಬೆಳಿಗ್ಗೆ ಎದ್ದ ಕೂಡಲೇ ಪಾದಸ್ಪರ್ಶಂ ಕ್ಷಮಸ್ವಮೇ ಎಂದು ಭೂತಾಯಿಯ ಕ್ಷಮೆ ಬೇಡುವ, ಮರಗಳನ್ನು, ಪ್ರಾಣಿಗಳನ್ನು, ತಿನ್ನುವ ಅನ್ನವನ್ನು, ಓದುವ ಪುಸ್ತಕವನ್ನು ಪೂಜನೀಯವಾಗಿ ಕಾಣುವ ಕಲ್ಪನೆ ನಮ್ಮ ಸಂಸ್ಕೃತಿಗೆ ಜನ್ಮದಾತೆ, ಈ ಕಲ್ಪನೆಗಳ ಸಾರವನ್ನು ಸಾಮಾನ್ಯ ಜನರಿಗೆ ತಲುಪಿಸುವ, ಸಹಸ್ರಮಾನಗಳ ಕಾಲ ಆಚರಣೆಯಲ್ಲಿ ಉಳಿಯುವಂತೆ ಮಾಡುವ ಕೆಲಸವನ್ನು ದೇಶದ ಸಾಧುಪರಂಪರೆ ಮಾಡಿದೆ. ಭಾರತೀಯ ಸಂಸ್ಕೃತಿ ಎಂದ ಕೂಡಲೇ ನೆನಪಾಗುವ ಹಬ್ಬ–ಹರಿದಿನಗಳು, ಹಲವು ಬಗೆಯ ವ್ರತ–ಉಪವಾಸಗಳು ಉಳಿದುಕೊಂಡಿರುವು ಇವರಿಂದಲೇ.

ಅಧ್ಯಾತ್ಮ, ಯೋಗ :

ಸಂಸ್ಕೃತಿಯ ಬಗ್ಗೆ ಹೇಳುವಾಗ ಅಧ್ಯಾತ್ಮ ಅಥವಾ

ಯೋಗದ ವಿಚಾರ ಎತ್ತಿದರೆ ಕೆಲವರಿಗೆ ಕಸಿವಿಸಿ ಉಂಟಾಗಬಹುದು. ಆದರೆ ಇವುಗಳು ಕೇವಲ ದೈಹಿಕ ಅಥವಾ ಮಾನಸಿಕ ಸ್ವಾಸ್ಥ್ಯಕ್ಕೆ ಸಂಬಂಧಿಸಿದವುಗಳಲ್ಲ. ಬದಲಿಗೆ ಒಂದು ಜೀವನ ವಿಧಾನ ಎಂದು ಅರಿತವರು ಇವು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ ಎಂದು ಒಪ್ಪಿಕೊಳ್ಳುತ್ತಾರೆ. ಭಾರತದ ಸಾಧುಸಂತರು ಜಗತ್ತಿಗೆ ನೀಡಿದ ಎರಡು ಶ್ರೇಷ್ಠ ಕೊಡುಗೆಗಳು ಆಧ್ಯಾತ್ಮ ಮತ್ತು ಯೋಗ. ಅಹಂ ಬ್ರಹ್ಮಾಸ್ಮಿ ಎಂಬ ಅದಿಶಂಕರರ ನುಡಿಯೇ ಅಲ್ಲವೇ ಅರಿವಿಲ್ಲದೇ ಯಾರನ್ನೋ ತುಳಿದಾಗಲೂ ತಡಬಡಿಸಿ ನಮಸ್ಕರಿಸುವಂತೆ ಮಾಡುವುದು. ಪ್ರತಿಯೊಬ್ಬನಲ್ಲೂ ಪರಮಾತ್ಮನಿದ್ದಾನೆ ಎಂಬ ಪರಿಕಲ್ಪನೆ ನಮಗರಿವಿಲ್ಲದೇ ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿದೆ. ಯೋಗವೂ ಅಷ್ಟೆ. ಪರಿಸರ, ದೇಹ ಮತ್ತು ದೈವಶಕ್ತಿ ಈ ಮೂರೂ ವಿಷಯಗಳ ಪ್ರಾಮುಖ್ಯತೆಯನ್ನು ಪರಿಗಣಿಸಿ ಪೋಣಿಸಿದ ಶಿಸ್ತುಬದ್ಧ ಜೀವನಪದ್ಧತಿ. ಪ್ರಕೃತಿಯ ಸುಧಾರಿತ ರೂಪವೇ ಸಂಸ್ಕೃತಿ ಎಂದಾದರೆ ಪ್ರಕೃತಿದತ್ತವಾದ ದೇಹವನ್ನು ಸುಧಾರಿತ ಜೀವನ ಕ್ರಮಕ್ಕೆ ಒಳಪಡಿಸುವ ಯೋಗ, ಅಧ್ಯಾತ್ಮಗಳೂ ಸಂಸ್ಕೃತಿಯೇ ಆದವಲ್ಲವೆ? ಇಂದು ಬಹುಜನರು ಈ ಮಾರ್ಗದಿಂದ ದೂರ ಸರಿದಿದ್ದರೂ ಬಾಯಿಮಾತಿನಲ್ಲಿ ನಮ್ಮ ಹೆಮ್ಮೆ ಎಂದು ಹೇಳಿಕೊಳ್ಳಲು ಯೋಗ ಮತ್ತು ಅಧ್ಯಾತ್ಮ ವಿಜ್ಞಾನ ಉಳಿದುಕೊಂಡಿರುವುದು ಇಂದಿಗೂ ಇವುಗಳ ಮಹಾತ್ಮೆಯನ್ನು ಸಾರುತ್ತಿರುವ ಬಾಬಾ ರಾಮದೇವ, ಸದ್ಗುರು ಮೊದಲಾದ ಸಾಧುಗಳಿಂದ.

ಮನುಸ್ಮೃತಿ:

ಇಂದಿನ ಸಾಮಾಜಿಕ ದೃಷ್ಟಿಕೋನದಿಂದ ನೋಡಿದಾಗ ಬಹಳ ವಿವಾದಾತ್ಮಕವಾಗಿ ಕಂಡರೂ ಮನುಸ್ಮೃತಿ ಭಾರತೀಯ ಸಾಮಾಜಿಕ ವ್ಯವಸ್ಥೆಗೆ ಒಂದು ಚೌಕಟ್ಟನ್ನು ಒಳಪಡಿಸಲು ನಡೆದಂತಹ ಆರಂಭಿಕ ಪ್ರಯತ್ನ ಮತ್ತು ಬಹುಕಾಲ ಒಪ್ಪಿತವಾಗಿದ್ದಂತದ್ದು ಕೂಡಾ. ಒಳ್ಳೆಯದ್ದೋ, ಕೆಟ್ಟದ್ದೋ, ಭಾರತೀಯ ಸಂಸ್ಕೃತಿಯ, ಸಮಾಜದ ಮೇಲೆ ಸ್ಮೃತಿಯ ಪ್ರಭಾವ ಅಸಾಧಾರಣವಾದದ್ದು. ಅನೇಕ ಬುದ್ಧಿಜೀವಿಗಳು ಹೇಳುವಂತೆ ಇದು ಒಬ್ಬನೇ ವ್ಯಕ್ತಿಯಿಂದ ರಚಿತವಾದುದಲ್ಲ ಮತ್ತು ಎಲ್ಲ ಕಾಲದಲ್ಲೂ ಏಕರೂಪದಲ್ಲಿಯೇ ಇರುವಂತದ್ದೂ ಅಲ್ಲ. ಆದರೆ ಭಾರತೀಯ ಸಮಾಜದಲ್ಲಿ ಮನುಸ್ಮೃತಿಯಲ್ಲಿ ಹೇಳಿದ ಅನೇಕ ವಿಚಾರಗಳು ಇವತ್ತಿಗೂ ಪಾಲನೆಯಾಗುತ್ತವೆ. ನಮ್ಮ ಸಮಾಜದ ಮೇಲೆ ಇದರ ಪ್ರಭಾವ ಎಷ್ಟಿತ್ತೆಂದರೆ ಬ್ರಿಟಿಷರು ಹಿಂದುಗಳಿಗೆ ಒಂದು ಕಾನೂನು ರಚಿಸಬೇಕೆಂದು ಹೊರಟಾಗ ಅವರೂ ಅವಲಂಬಿಸಿದ್ದು ಇದೇ ಸ್ಮೃತಿಯನ್ನು.

ನಾಟ್ಯಶಾಸ್ತ್ರ:

ದೈನಂದಿನ ಜೀವನದಲ್ಲಿ ನಾನು ಅನುಸರಿಸುವ ಸಂಪ್ರದಾಯಗಳು, ನಮಗೆ ಶಿಕ್ಷಿತವಾದ ಸಂಸ್ಕಾರಗಳು ಸಂಸ್ಕೃತಿಯ ಒಂದು ಭಾಗವಾದರೆ, ಇನ್ನೊಂದು ಭಾಗ ನಮ್ಮ ಕಲೆಗಳಲ್ಲಿ ಬಿಂಬಿತವಾಗುತ್ತದೆ. ಆ ನಿಟ್ಟಿನಲ್ಲಿ ನೋಡಿದರೆ ಭರತ ಮಹಾಮುನಿಯ ನಾಟ್ಯಶಾಸ್ತ್ರ ದೇಶದ ಸಂಸ್ಕೃತಿಗೆ ನೀಡಿದ ಕೊಡುಗೆ ಅದ್ವಿತೀಯ. ನಾಟಕ, ನೃತ್ಯ ಮೊದಲಾದ ನಾಟ್ಯ ಕಲೆಗಳಿಗೆ ಶಾಸ್ತ್ರೀಯ ಚೌಕಟ್ಟನ್ನು ಹಾಕಿ ಸವಿಸ್ತಾರವಾಗಿ ವಿವರಿಸಿದ್ದು ನಾಟ್ಯಶಾಸ್ತ್ರ. ಇಂದು ಗುರುತಿಸಲ್ಪಡುವ ಎಂಟು ಶಾಸ್ತ್ರೀಯ ನೃತ್ಯಗಳು, ರಂಗಭೂಮಿ ಪ್ರದರ್ಶನಗಳು ಮತ್ತು ಅವುಗಳಿಂದ ಸ್ಫೂರ್ತಿ ಪಡೆದು ರಚಿಸಲಾದ ಅದೆಷ್ಟೋ ದೇಗುಲಗಳ ಕಂಬಗಳಲ್ಲಿ ರಾರಾಜಿಸುತ್ತಿರುವ ಶಿಲ್ಪ ಕಲಾಕೃತಿಗಳು, ಅದ್ಭುತ ಚಿತ್ರಗಳು ಎಲ್ಲವುಗಳ ಮೂಲ ಇರುವುದು ನಾಟ್ಯಶಾಸ್ತ್ರದಲ್ಲಿ ಮತ್ತು ಅದಕ್ಕೆ ಬರೆಯಲ್ಪಟ್ಟ ಟಿಪ್ಪಣಿಗಳಲ್ಲಿ. ಇದು ಹುಟ್ಟುಹಾಕಿದ ನವರಸಗಳ ಕಲ್ಪನೆ ಭಾರತದ ಅಭಿನಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಮರೆಯಲು ಸಾಧ್ಯವಿಲ್ಲ. ಪಂಚಮವೇದವೆಂದೇ ಹಲವರಿಂದ ಕರೆಸಿಕೊಳ್ಳಲ್ಪಡುವ ನಾಟ್ಯಶಾಸ್ತ್ರ ಭಾರತೀಯ ಸಂಸ್ಕೃತಿಯ ಶೈಶವಾವಸ್ಥೆಯಿಂದಲೂ ಅದರ ಒಡನಾಡಿಯಾಗಿ ನಿಂತಿದೆ.

ಸಂಸ್ಕೃತಿಯ ನವೀಕರಣ:

ಸಂಸ್ಕೃತಿ ಎನ್ನುವುದು ಎಂದಿಗೂ ಸಮಾಜದಿಂದ ಪ್ರೇರೇಪಿತ. ಸಾಮಾಜಿಕ ಬದಲಾವಣೆಗೆ ಅನುಗುಣವಾಗಿ ಸಾಂಸ್ಕೃತಿಕ ಬದಲಾವಣೆಗಳೂ ಅವಶ್ಯಕವಾಗುತ್ತದೆ. ಇಂದಿನ ಸಮಾಜದ ಮೇಲೆ ಹಿಂದಿನ ಸಂಸ್ಕೃತಿಯನ್ನು ಹೇರಿದರೆ ಹರೆಯದ ಹೆಣ್ಣನ್ನು ಹಣ್ಣು ಮುದುಕನೊಂದಿಗೆ ವಿವಾಹ ಮಾಡಿಸಿದಂತಿರುತ್ತದೆ. ಕಾಲಕ್ಕೆ ತಕ್ಕಂತೆ ತನ್ನ ಮೂಲ ತತ್ವಗಳನ್ನು

ಬಿಟ್ಟು ಕೊಡದಂತೆ ನಮ್ಮ ಸಂಸ್ಕೃತಿಯೂ ಬದಲಾಗಬೇಕು. ಈ ಬದಲಾವಣೆ ಸರಿಯಾದ ರೀತಿಯಲ್ಲಿ ನಡೆಯದಿದ್ದರೆ ಅನೇಕ ಸಂಘರ್ಷಗಳಿಗೆ ನಾಂದಿಯಾಗುತ್ತದೆ. ಬಹುಶಃ ದೇಶದ ಸಾಧು ಸಂತರು ಭಾರತೀಯ ಸಂಸ್ಕೃತಿಗೆ ನೀಡಿದ ಬಹುದೊಡ್ಡ ಕೊಡುಗೆ ಇದು. ನಮ್ಮ ಸಂಸ್ಕೃತಿಯನ್ನು ತರ್ಕಹೀನವಾಗಿಯೋ ಅಥವಾ ಹಳೆಯುದನ್ನಾಗಿಯೋ ನೋಡುವಂತಹ ಸಂದರ್ಭಗಳು ಹುಟ್ಟಿಕೊಂಡಾಗಲೆಲ್ಲ ಅದರಲ್ಲಿ ಆಗಬೇಕಾದ ಬದಲಾವಣೆಗಳನ್ನು ಜನರು ಅರ್ಥೈಸಿಕೊಳ್ಳುವಂತೆ ಮಾಡಿ ಕಾಲಕ್ಕೆ ತಕ್ಕಂತೆ ಸಂಸ್ಕೃತಿ ನವೀಕರಣಗೊಳ್ಳುವಂತೆ ಮಾಡಿದ ಕೀರ್ತಿ ಈ ನೆಲದ ಸಾಧು ಸಂತರದ್ದು. ಆಚಾರ್ಯ ತ್ರಯರುಗಳು (ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು) ತೋರಿದ ಹೊಸ ಮಾರ್ಗಗಳಿರಬಹುದು. ಬಸವಣ್ಣನವರ ಕರ್ಮಸಿದ್ಧಾಂತವಿರಬಹುದು. ಭಕ್ತಿ ಚಳುವಳಿ, ವಚನ ಸಾಹಿತ್ಯ, ಆಧುನಿಕ ಭಾರತದಲ್ಲಿ ತಲೆಯೆತ್ತಿದ ಬ್ರಹ್ಮಸಮಾಜ, ಆರ್ಯಸಮಾಜದಂತಹ ಸಂಸ್ಥೆಗಳು ಎಲ್ಲವೂ ನಮ್ಮ ಸಂಸ್ಕೃತಿಯನ್ನು, ಸಮಾಜವನ್ನು ಸಂತುಲಿತವಾಗಿ ಇರುವಂತೆ ನೋಡಿಕೊಳ್ಳುತ್ತಿದ್ದವು. ತಮ್ಮ ಉಪದೇಶಗಳ ಮೂಲಕವೇ ಸಮಾಜದ ಡೊಂಕುಗಳನ್ನು ತಿದ್ದಿದ ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸರು, ಶ್ರೀಮಾತೆ ಶಾರದಾದೇವಿ ಸಂಸ್ಕೃತಿ ವಿಕೃತಿಯಾಗದಂತೆ ಕಾಪಾಡಿಕೊಂಡರೆ ವಿವೇಕಾನಂದರು ಅದೇ ಸಂಸ್ಕೃತಿಯನ್ನು ವಿಶ್ವವ್ಯಾಪಿಯಾಗಿಸಿದರು. ಸಂಸ್ಕೃತಿಯ ಹೆಸರಲ್ಲಿ ಸಮಾಜದಲ್ಲಿ ಆಚರಣೆಯಲ್ಲಿದ್ದ ಅನಿಷ್ಠ ಪದ್ಧತಿಗಳನ್ನು ಅಳಿಸಿ ಹಾಕುವ ಕೆಲಸ ಇಂದಿಗೂ ಆಗುತ್ತಿರುವುದು ಸಾಧುಗಳಿಂದ, ಸಂತರಿಂದ. ಈ ಕಾರ್ಯ ಸುಲಭದ್ದಲ್ಲ. ಜನಮಾನಸದಲ್ಲಿ ಸರಿ ಎಂದು ನಂಬಿಕೆ ಗಳಿಸಿದ ಆಚರಣೆಯೊಂದನ್ನು ತಪ್ಪು ಎಂದು ಹೇಳಿ ಅದನ್ನು ಅವರು ಒಪ್ಪುವಂತೆ ಮಾಡುವುದು ಬಹು ಕಷ್ಟದ ಕೆಲಸ. ಕಾನೂನು ಕಟ್ಟಳೆಗಳೂ ಇದನ್ನು ಸಾಧಿಸಲು ಸೋತಿವೆ. ಇಂತಹ ಕಾರ್ಯ ಸಾಧ್ಯವಿರುವುದು ಶ್ರೇಷ್ಠ ವರ್ಚಸ್ಸಿನ ವ್ಯಕ್ತಿತ್ವದಿಂದ, ಜನಮನ್ನಣೆ ಗಳಿಸಿದ ವಿದ್ವತ್ತಿನಿಂದ. ಇವೆರಡೂ ತುಂಬಿ ನಿಂತ ಸಂತಶಿರೋಮಣಿಗಳು ಸಂಸ್ಕೃತಿಯು ನಿಂತ ನೀರಾಗದಂತೆ ಕಾಯ್ದಿದ್ದಾರೆ.

ಶಿಕ್ಷಣ, ಸಂಸ್ಕೃತಿಯ ಸಂರಕ್ಷಣೆ

ನಮ್ಮ ಸಮಕಾಲೀನ ಸಮಾಜದಲ್ಲಿ ಸಾಧುಗಳೆಂದು ಗುರುತಿಸಲ್ಪಟ್ಟಿರುವ ಅನೇಕರು ಸಂಸ್ಕೃತಿಯ ರಕ್ಷಣೆಗೆ ಒತ್ತು ಕೊಡುತ್ತಿದ್ದಾರೆ. ಅದಕ್ಕಾಗಿ ಅವರು ಆರಿಸಿಕೊಂಡಿರುವ ಮಾರ್ಗ ಅನುಕರಣೀಯವಾದದ್ದು. ತಮ್ಮಲ್ಲಿರುವ ಜ್ಞಾನವನ್ನು, ನಮ್ಮ ಸಂಸ್ಕೃತಿಯ ಸಾರವನ್ನು ಎಷ್ಟು ಜನರಿಗೆ ಸಾಧ್ಯವೋ ಅಷ್ಟು ಜನರಿಗೆ ತಲುಪಿಸುವ ಕೆಲಸ ಇಂದು ಇವರಿಂದ ಆಗುತ್ತಿದೆ. ಪ್ರತಿಯೊಂದು ಸಮುದಾಯಗಳು ಒಂದೊಂದು ಗುರುವಿನ, ಗುರುಮಠದ ಅನುಯಾಯಿಗಳಾಗಿ ಇರುವುದರಿಂದ ಸಾಧುಗಳ ಕೆಲಸ ಸುಲಭವಾಗಿದೆ. ತನ್ನ ಸಮುದಾಯದ ಸಂಸ್ಕೃತಿಯ ರಕ್ಷಣೆ ಮತ್ತು ಅಲ್ಲಿ ಆಗಬೇಕಾದ ಬದಲಾವಣೆಗಳು ಮಾತ್ರ ಅವರ ಪ್ರಾಥಮಿಕ ಕಾರ್ಯಕ್ಷೇತ್ರ ಆಗಿದೆ. ಹೀಗಾಗಿ ಪ್ರಸ್ತುತ ಕಾಲಘಟ್ಟದಲ್ಲಿ ಅಖಂಡ ಭಾರತೀಯ ಸಂಸ್ಕೃತಿಯನ್ನು ನೋಡಿದರೆ ಅದರ ವೈವಿಧ್ಯತೆಯನ್ನು ಕಾಪಾಡಿಕೊಂಡು, ಐಕ್ಯತೆಯಡೆಗೆ ಕೊಂಡೊಯ್ಯುವಲ್ಲಿ ಇಂದಿನ ಸಾಧುಸಂತರು ಮುಖ್ಯ ಪಾತ್ರವಹಿಸುತ್ತಾರೆ. ಪಾಶ್ಚಾತ್ಯೀಕರಣದ ಪಾಶದಲ್ಲಿ ಸಿಲುಕಿ ಒದ್ದಾಡುತ್ತಿರುವ ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಸ್ವಲ್ಪ ಮಟ್ಟಿಗೆ ಭಾರತೀಯ ಸಂಸ್ಕೃತಿಯ ಪರಿಚಯ ವಿದ್ಯಾರ್ಥಿಗಳಿಗೆ ಆಗುತ್ತಿದೆ ಅಂತಾದರೆ ಅದು ಇಂತಹ ಸಾಧು ಸಂತರುಗಳೇ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ. ಇಂದಿಗೂ ಶುದ್ಧ ಸಂಸ್ಕೃತ ಪ್ರಾರ್ಥನೆಗಳು, ಸಾಲಾಗಿ ಕುಳಿತು ಸಂಯಮದಿಂದ ಊಟಮಾಡುವ ಶಿಸ್ತುಗಳು, ಯೋಗ, ಧ್ಯಾನ ತರಬೇತಿಗಳು, ಗುರೂಪದೇಶದ ಸುಧೆಯನ್ನು ಆಲಿಸುವ ಸುಸಂಸ್ಕೃತ ಶ್ರೋತ್ರುಗಳು ಸಿಗುವುದಾದರೆ ಅದು ಇಂತಹ ಶಿಕ್ಷಣ ಸಂಸ್ಥೆಗಳಲ್ಲಿ ಮಾತ್ರ. ಹೀಗೆ ಭಾರತೀಯ ಸಂಸ್ಕೃತಿಯ ಅಸ್ತಿತ್ವಕ್ಕೆ ಮತ್ತು ಔನತ್ಯಕ್ಕೆ ದೇಶದ ಸಾಧು–ಸಂತರೇ ಕಾರಣೀಕರ್ತರು.

ಹೀಗೆ ಹೇಳುತ್ತಾ ಹೋದರೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ವಾಲ್ಮೀಕಿ ಮತ್ತು ವ್ಯಾಸರ ರಾಮಾಯಣ, ಮಹಾಭಾರತಗಳು, ಪುರಾಣಗಳು, ಅದೆಷ್ಟೋ ಸಂಸ್ಕೃತ ನಾಟಕಗಳು ಇವುಗಳ ಪ್ರಭಾವವೂ ಭಾರತೀಯ ಸಂಸ್ಕೃತಿಯ ಮೇಲೆ ಕಡಿಮೆಯೇನಿಲ್ಲ. ಇಂದು ಅದೆಷ್ಟೋ ಆಕ್ರಮಣಗಳ

ನಂತರವೂ ಭಾರತೀಯ ಸಂಸ್ಕೃತಿ ಜಗತ್ತಿನ ಕಣ್ಮನ ಸೆಳೆಯುವಂತೆ ಬೆಳೆದುನಿಂತಿರುವುದು ಭರತ ಭೂಮಿಯ ಶ್ರೇಷ್ಠ ಗುರುಪರಂಪರೆಯಿಂದಾಗಿ. ಇವತ್ತಿಗೂ ವಿದೇಶಗಳಿಂದ ಭಾರತೀಯ ಜೀವನ ವಿಧಾನ ಕಲಿಯಲು ಜನರು ಹುಡುಕಿಕೊಂಡು ಬರುತ್ತಿರುವುದು ಇಂತಹ ಸಾಧುಸಂತರನ್ನೇ. ಇಡೀ ಜಗತ್ತನ್ನೇ ಬೆರಳ ತುದಿಯಲ್ಲಿ ಆಡಿಸುತ್ತಿರುವ ಅಂತರ್ಜಾಲದ ಬಳಕೆಯಲ್ಲಿಯೂ ಇಂದು ಇವರು ಹಿಂದೆ ಉಳಿದಿಲ್ಲ. ಅಲ್ಲಿಯೂ ದೇಶದ ಸಂಸ್ಕೃತಿಯನ್ನು ಬಣ್ಣಿಸುವ ನೂರಾರು ಪ್ರವಚನಗಳು ಕಾಣುತ್ತವೆ. ಹೀಗಾಗಿ ಪ್ರತ್ಯಕ್ಷ ಮತ್ತು ಪರೋಕ್ಷ ರೂಪದಲ್ಲಿ ಸಂಸ್ಕೃತಿಗೆ ಸಾಧುಸಂತರ ಕೊಡುಗೆ ಬಹಳಷ್ಟಿದೆ.

ಆಗಲೇ ಹೇಳಿದಂತೆ ಪ್ರಕೃತಿಯ ಸುಧಾರಿತ ರೂಪ ಸಂಸ್ಕೃತಿ ಎಂದಾದರೆ ಪ್ರಕೃತಿಗೆ ಆ ಸುಧಾರಿತ ರೂಪವನ್ನು ಲೇಪಿಸುತ್ತಿರುವುದು ಸಾಧು–ಸಂತರು. ಒಂದು ರೀತಿಯಲ್ಲಿ ನೋಡಿದರೆ ಭಾರತೀಯ ಸಂಸ್ಕೃತಿಯ ಬಹುಮುಖ್ಯ ಭಾಗವೂ ಹೌದು. ಈ ಸಂತರು. ಜ್ಞಾನಿಗಳನ್ನು ಗೌರವಿಸುವ, ಪೂಜಿಸುವ ಸಂಸ್ಕಾರ ನಮ್ಮಲ್ಲಿ ಉಳಿದುಕೊಂಡಿರುವುದು ಇಂತಹ ಸಾಧುಗಳು ಉಳಿದುಕೊಂಡಿರುವುದಿಂದಲೇ ಅಲ್ಲವೇ? ಒಟ್ಟಿನಲ್ಲಿ ಭಾರತೀಯ ಸಂಸ್ಕೃತಿಗೆ ಸಾಧುಸಂತರು ನೀಡಿದ ಕೊಡುಗೆ ಗಣನೀಯವಾದದ್ದು ಎಂಬುದು ಪ್ರಮಾಣಿತ. ಅದಕ್ಕೇ ಅಲ್ಲವೇ ಪ್ರಧಾನಿ ಮೋದಿಯವರೂ ಕಳೆದ ವರ್ಷ ನವೆಂಬರ್ ಹದಿನೆಂಟರಂದು ವೇದಿಕೆಯೊಂದರಲ್ಲಿ ನಿಂತು ಸಾಧು–ಸಂತರುಗಳು ದೇಶದ ಸಂಸ್ಕೃತಿಯನ್ನು ಕಾಪಾಡುವಲ್ಲಿ ಬಹಳಷ್ಟು ಶ್ರಮಿಸಿದ್ದಾರೆ ಎಂದದ್ದು?

ಕನ್ನಡಭಾಷೆ: ನಿನ್ನೆ ಇಂದು ನಾಳೆ– ಸವಾಲುಗಳು ಮತ್ತು ಅವಕಾಶಗಳು

ರಚಿತಾ
ಪ್ರಥಮ ಬಿ.ಕಾಂ.

ಕನ್ನಡ:

ದ್ರಾವಿಡ ಭಾಷೆಗಳಲ್ಲಿ ಪ್ರಾಮುಖ್ಯವುಳ್ಳ ಭಾಷೆಯೂ ಭಾರತದ ಪುರಾತನವಾದ ಭಾಷೆಗಳಲ್ಲಿ ಒಂದೂ ಆಗಿರುವ ಕನ್ನಡ ಭಾಷೆಯನ್ನು ಅದರ ವಿವಿಧ ರೂಪಗಳಲ್ಲಿ ಸುಮಾರು 45 ದಶಲಕ್ಷ ಜನರು ಆಡುನುಡಿಯಾಗಿ ಬಳಸುತಿದ್ದಾರೆ. ಕನ್ನಡ ಕರ್ನಾಟಕ ರಾಜ್ಯದ ಆಡಳಿತ ಭಾಷೆ. ಜಗತ್ತಿನಲ್ಲಿ ಅತ್ಯಂತ ಹೆಚ್ಚು ಮಂದಿ ಮಾತನಾಡುವ ಭಾಷೆಯೆಂಬ ನೆಲೆಯಲ್ಲಿ ಇಪ್ಪತ್ತೊಂಬತ್ತನೆಯ ಸ್ಥಾನ ಕನ್ನಡಕ್ಕಿದೆ. 2011ರ ಜನಗಣತಿಯ ಪ್ರಕಾರ ಜಗತ್ತಿನಲ್ಲಿ 64 ಕೋಟಿ ಜನಗಳು ಕನ್ನಡ ಮಾತನಾಡುತ್ತಾರೆ ಎಂದು ತಿಳಿದು ಬಂದಿದೆ. ಇವರಲ್ಲಿ 5.5 ಕೋಟಿ ಜನಗಳ ಮಾತೃಭಾಷೆ ಕನ್ನಡವಾಗಿದೆ. ಬ್ರಾಹ್ಮಿಲಿಪಿಯಿಂದ ರೂಪುಗೊಂಡ ಕನ್ನಡ ಲಿಪಿಯನ್ನು ಉಪಯೋಗಿಸಿ ಕನ್ನಡ ಭಾಷೆಯನ್ನು ಬರೆಯಲಾಗುತ್ತದೆ. ಕನ್ನಡ ಬರಹದ ಮಾದರಿಗಳಿಗೆ ಸಾವಿರದ ಐನೂರು ವರುಷಗಳ ಚರಿತ್ರೆಯಿದೆ. ಕ್ರಿ.ಶ. ಆರನೆಯ ಶತಮಾನದ ಪಶ್ಚಿಮ ಗಂಗ ಸಾಮ್ರಾಜ್ಯದ ಕಾಲದಲ್ಲಿ ಮತ್ತು ಒಂಭತ್ತನೆಯ ಶತಮಾನದ ರಾಷ್ಟ್ರಕೂಟ ಸಾಮ್ರಾಜ್ಯದ ಕಾಲದಲ್ಲಿ ಹಳೆಗನ್ನಡ ಸಾಹಿತ್ಯ ಅತ್ಯಂತ ಹೆಚ್ಚಿನ ರಾಜಾಶ್ರಯ ಪಡೆಯಿತು. ಅದಲ್ಲದೆ ಸಾವಿರ ವರುಷಗಳ ಸಾಹಿತ್ಯ ಪರಂಪರೆ ಕನ್ನಡಕ್ಕಿದೆ. ವಿನೋಭಾ ಭಾವೆ ಕನ್ನಡ ಲಿಪಿಯನ್ನು ಲಿಪಿಗಳ ರಾಣಿಯೆಂದು ಹೊಗಳಿದ್ದಾರೆ.

ಭಾಷಿಕ ಚರಿತೆ:

ಕನ್ನಡವು ಒಂದು ದ್ರಾವಿಡ ಭಾಷೆಯಾಗಿದೆ. ಕನ್ನಡ ಲಿಪಿ ಸುಮಾರು 1500–1600 ವರ್ಷಗಳಿಗಿಂತಲೂ ಹಿಂದಿನದು. ಐದನೆಯ ಶತಮಾನದ ಹಲ್ಮಿಡಿ ಶಾಸನದ ಸಮಯಕ್ಕಾಗಲೇ ಕನ್ನಡವು ಸಾಕಷ್ಟು ಅಭಿವೃದ್ಧಿ ಹೊಂದಿತ್ತು. ದ್ರಾವಿಡ ಭಾಷಾತಜ್ಞ ಸ್ವಾನ್–ಫೋರ್ಡ್ ಸ್ಟೀವರ್ ಅವರ ಅಭಿಪ್ರಾಯದಂತೆ ಕನ್ನಡದ ಭಾಷಿಕ ಚರಿತ್ರೆಯನ್ನು ಮೂರು ವಿಧವಾಗಿ ವಿಂಗಡಿಸಬಹುದು.

1. ಹಳೆಗನ್ನಡ ಕ್ರಿ.ಶ. 450 ರಿಂದ ಕ್ರಿ.ಶ. 1200ರ ವರೆಗೆ.

2. ನಡುಗನ್ನಡ ಕ್ರಿ.ಶ. 1200ರಿಂದ ಕ್ರಿ.ಶ. 1700ರ ವರೆಗೆ ಮತ್ತು

3. ಹೊಸಗನ್ನಡ ಕ್ರಿ.ಶ. 1700 ರಿಂದ ಪ್ರಸ್ತುತ ಕಾಲಘಟ್ಟದವರೆಗೆ.

ಕನ್ನಡ ಭಾಷಾ ಪರಿಣತರು ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಅಭ್ಯಾಸ ಮಾಡಬಹುದಾದ ಕಾಲಮಾನಗಳನ್ನು ಈ ಕೆಳಗಿನಂತೆಯೂ ನಿಷ್ಕರ್ಷಿಸಿದ್ದಾರೆ.

1. ಪೂರ್ವದ ಹಳಗನ್ನಡ– ಅನಿಶ್ಚಿತ ಕಾಲಘಟ್ಟದಿಂದ 7ನೇಯ ಶತಮಾನದವರೆಗೆ
2. ಹಳಗನ್ನಡ– 7ರಿಂದ 12ನೆಯ ಶತಮಾನದವರೆಗೆ
3. ನಡುಗನ್ನಡ– 12ನೆಯ ಶತಮಾನದ ಪ್ರಾರಂಭದಿಂದ 18ನೆಯ ಶತಮಾನದವರೆಗೆ
4. ಹೊಸಗನ್ನಡ– 18ನೆಯ ಶತಮಾನದ ಆದಿಯಿಂದ ಈಚೆಗೆ

ಕಳೆದ ಶತಮಾನದಲ್ಲಿ ಎಂದರೆ 20ನೆಯ ಶತಮಾನದಲ್ಲಿ ಕನ್ನಡ ಭಾಷೆಯ ಅಭಿವೃದ್ಧಿ ಬಹಳ ವ್ಯಾಪಕವಾಗಿ ನಡೆಯಿತು. ಕನ್ನಡ ಭಾಷೆಯು ಅಭಿಜಾತ ಭಾಷೆಯೆಂಬ ಸ್ಥಾನಮಾನವನ್ನು ಕೇಂದ್ರ ಸರಕಾರದಿಂದ ಪಡೆದಿದೆ. ಅಂತರಜಾಲದಲ್ಲಿ ಕನ್ನಡ ಭಾಷೆಯ ಬಳಕೆ ಯಥೇಚ್ಛವಾಗಿದೆ. ಕನ್ನಡ ಭಾಷೆ ವಾಣಿಜ್ಯ ಕ್ಷೇತ್ರದಲ್ಲಿಯೂ ಮುಂಚೂಣಿಯ ಭಾಷೆಯಾಗಿ ಬೆಳೆಯತೊಡಗಿದೆ.

ಕನ್ನಡದಲ್ಲಿ ಸಂಸ್ಕೃತದ ಪ್ರಭಾವ ಅಸಾಧಾರಣವಾದುದು. ಪ್ರಾಕೃತ, ಪಾಳಿ, ಮುಂತಾದ ಭಾಷೆಗಳ ಪ್ರಭಾವವು ಕನ್ನಡಕ್ಕಿದೆ. ಕ್ರಿ.ಪೂ. ಮೂರನೆಯ ಶತಮಾನದಕ್ಕೂ ಮುನ್ನವೇ ಕನ್ನಡ ಮೌಖಿಕ ಪರಂಪರೆಯು ಭಾಷೆಯಾಗಿ ರೂಪುಗೊಂಡಿತ್ತೆಂಬುದನ್ನು ಪ್ರಾಕೃತ ಭಾಷೆಯಲ್ಲಿಯೂ ತಮಿಳುಭಾಷೆಯಲ್ಲಿಯೂ ಬರೆಯಲ್ಪಟ್ಟ ಶಾಸನಗಳಲ್ಲಿ ಕನ್ನಡದ ಶಬ್ದಗಳ ಆಧಾರದಲ್ಲಿ ಇತಿಹಾಸ ತಜ್ಞ ಐರಾವತಂ ಮಹಾದೇವನ್ ಸಾಬೀತು ಪಡಿಸಿದ್ದಾರೆ. ಆ ಸಂಶೋಧನೆಯ ಪ್ರಕಾರ ಕನ್ನಡ ಅಗಾಧ ಪ್ರಮಾಣದ ಜನತೆ ಮಾತನಾಡುತ್ತಿದ್ದ ಭಾಷೆಯಾಗಿದ್ದಿತೆಂದೂ ತಿಳಿದುಬಂದಿದೆ. ಕೆ.ವಿ. ನಾರಾಯಣರು ಹೇಳುವಂತೆ, ಇಂದಿಗೆ ಕನ್ನಡ ಉಪಭಾಷೆಗಳೆಂದು ಗುರುತಿಸಲ್ಪಡುವ ಭಾಷೆಗಳಲ್ಲಿ ಹೆಚ್ಚಿನವು ಕನ್ನಡದ ಹಳೆಯ ರೂಪವನ್ನು ಹೋಲುವಂಥದ್ದಾಗಿರಬಹುದು. ಅಲ್ಲದೆ ಅನ್ಯಭಾಷೆಗಳ ಪ್ರಭಾವ ವ್ಯಾಪಕವಾಗಿ ಒಳಗಾಗದ ಭಾಷೆಗಳು ಇವೆಂದೂ ಅಭಿಪ್ರಾಯ ಪಡುತ್ತಾರೆ.

ಸಂಸ್ಕೃತದ ಪ್ರಭಾವ:

* ಕನ್ನಡ ಭಾಷೆಗೆ ಪೂರ್ವಕಾಲದಿಂದಲೂ ಮೂರು ಬಗೆಯ ಪ್ರಭಾವಗಳು ಉಂಟಾಗಿವೆ, ಪಾಣಿನೀಯ ಸಂಸ್ಕೃತ ವ್ಯಾಕರಣದ್ದು, ಕಟಂತ್ರ ಮತ್ತು ಶಕಟಯಾನದಂತಹ ಅಪಾಣಿನೀಯ ವ್ಯಾಕರಣಗಳದ್ದು ಹಾಗೂ ಪ್ರಾಕೃತ ವ್ಯಾಕರಣದ್ದು.

* ಪ್ರಾಚೀನ ಕರ್ನಾಟಕದಲ್ಲಿ ಗ್ರಾಂಥಿಕ ಪ್ರಾಕೃತ ಉಪಯೋಗದಲ್ಲಿತ್ತು ಎಂಬುದಕ್ಕೆ ಪುರಾವೆಗಳಿವೆ. ದೇಶ್ಯ ಪ್ರಾಕೃತವನ್ನು ಮಾತನಾಡುತ್ತಿದ್ದವರು ಮತ್ತು ಕನ್ನಡ ಮಾತನಾಡುತ್ತಿದ್ದವರ ಸಂಪರ್ಕದೊಂದಿಗೆ ಪರಸ್ಪರ ಪೋಷಿಸುತ್ತಲೇ ಬೆಳೆದವು ಎಂಬುದೂ ಸ್ಪಷ್ಟವಾಗಿದೆ. ಕನ್ನಡ ಉಪಾಸನೆಯ ಮತ್ತು ರಾಜಸತ್ತೆಯ ಭಾಷೆಯಾಗಿ ಉಪಯೋಗಿಸಲ್ಪಡುವ ಮುನ್ನವೇ ಈ ಸಂಪರ್ಕ ಮತ್ತು ತನ್ನಿಮಿತ್ತವಾದ ಕೊಡುಕೊಳ್ಳುಗೆ ಸಂಭವಿಸಿರಬಹುದು. ಕನ್ನಡದ ಧ್ವನಿಮಾದಲ್ಲಿಯೂ, ಸಂರಚನೆಯಲ್ಲಿಯೂ, ಶಬ್ದ ಸಂಪತ್ತಿಯಲ್ಲಿಯೂ, ವ್ಯಾಕರಣದಲ್ಲಿಯೂ ಹಾಗೆಯೇ ಭಾಷಿಕ ಪ್ರಯೋಗದಲ್ಲಿಯೂ ಸಂಸ್ಕೃತ ಮತ್ತು ಪ್ರಾಕೃತದ ಪ್ರಭಾವ ಸ್ಪಷ್ಟವಾಗಿದೆ.

ಕನ್ನಡದಲ್ಲಿ ಬಹಳ ಸಾಮಾನ್ಯವಾಗಿ ತತ್ಸಮ ಮತ್ತು ತದ್ಭವ ಶಬ್ದಗಳನ್ನು ಕಾಣುತ್ತೇವೆ. ಕನ್ನಡದ ಬಣ್ಣ ಎಂಬ ಶಬ್ದ ಪ್ರಾಕೃತದ ಬಣ್ಣ ಎಂಬ ಶಬ್ದದಿಂದ ಉಂಟಾಯಿತು. ಮತ್ತು ಪ್ರಾಕೃತದ ವಣ್ಣ ಎಂಬ ಶಬ್ದ ಸಂಸ್ಕೃತದ ವರ್ಣ ಎಂಬ ಶಬ್ದದಿಂದ ಉಂಟಾಯಿತು. ಕನ್ನಡದ ಹುಣ್ಣಿಮೆ ಎಂಬ ಶಬ್ದ ಪ್ರಾಕೃತದ ಪುಣ್ಣಿವ ಎಂಬ ಶಬ್ದದಿಂದ ಉಂಟಾಯಿತು ಮತ್ತು ಪ್ರಾಕೃತದ ಪುಣ್ಣಿವ ಎಂಬ ಶಬ್ದ ಸಂಸ್ಕೃತದ ಪೌರ್ಣಮಿ ಎಂಬ ಶಬ್ದದಿಂದ ಉಂಟಾದ ತದ್ಭವವಾಗಿದೆ.

ಕನ್ನಡದಲ್ಲಿ ತತ್ಸಮ ಶಬ್ದಗಳು ವ್ಯಾಪಕವಾಗಿ ಉಪಯೋಗಿಸಲ್ಪಡುತ್ತವೆ. ದಿನ, ಕೋಪ, ಸೂರ್ಯ, ಮುಖ, ನಿಮಿಷ, ಅನ್ನ ಎಂಬುದು ಕೆಲ ಉದಾಹರಣೆಗಳು.

ಸಾಹಿತ್ಯ:

ಹಳಗನ್ನಡ:

ತ್ರಿಪದಿ ಛಂದಸ್ಸಿನಲ್ಲಿ ರಚನೆಗೊಂಡ ಕನ್ನಡದ ಮೊದಲ ಕ್ರಿ.ಶ. 700ರ ಕಪ್ಪೆ ಅರಭಟ್ಟನ ಶಾಸನದಲ್ಲಿ ಕಂಡುಬರುತ್ತದೆ. ರಾಜಾನೃಪತುಂಗ ಅವೋಷ್ಠವರ್ಷ ರಚಿಸಿದ ಕವಿರಾಜಮಾರ್ಗ ಕನ್ನಡದಲ್ಲಿ ರಚನೆಗೊಂಡ ಮೊದಲ ಕೃತಿಯಾಗಿದೆ. ಸಾಹಿತ್ಯ ವಿಮರ್ಶೆಗಳನ್ನೂ ಕಾವ್ಯ ರಚನೆಯನ್ನೂ ಒಳಗೊಂಡಂಥ ಈ ಕೃತಿ ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಕನ್ನಡದ ಉಪಭಾಷೆಗಳನ್ನು ಒಂದೆಡೆ ಸೇರುವ ಪ್ರಯತ್ನ ಮಾಡಿದೆ. ಈ ಕೃತಿ ಕ್ರಿ.ಶ. 6ನೆಯ ಶತಮಾನದ ರಾಜದುರ್ವಿನೀತನ ಬಗ್ಗೆಯೂ ಕ್ರಿ.ಶ. 636ರ ಐಹೊಳೆ ಶಾಸನ ಬರೆದ ರವಿಕೀರ್ತಿಯ ಬಗ್ಗೆಯೂ ವಿವರಗಳನ್ನು ನೀಡುತ್ತದೆ. ಕನ್ನಡದಲ್ಲಿ ಲಭ್ಯವಾಗಿರುವ ಮೊದಲ ಕೃತಿ ವ್ಯಾಕರಣವನ್ನು ವಿವರಿಸುವಂಥದ್ದು ವಿವಿಧ ಕನ್ನಡ ಉಪಭಾಷೆಗಳನ್ನು ಒಂದೆಡೆ ಸೇರಿಸುವ ಪ್ರಯತ್ನ ಮಾಡುವುದರಿಂದಲೂ ಕನ್ನಡ ಭಾಷೆಯಲ್ಲಿ ಸಾಹಿತ್ಯ ರಚನೆ ಅದಕ್ಕಿಂತಲೂ ಕೆಲ ಶತಮಾನಗಳ ಹಿಂದೆಯೇ ಆರಂಭಗೊಂಡರಬಹುದೆಂದು ಊಹಿಸಬಹುದಾಗಿದೆ. ಕ್ರಿ.ಶ. 900ರಲ್ಲಿ ಶಿವಕೋಟ್ಯಾಚಾರ್ಯರು ರಚಿಸಿದ ವಡ್ಡಾರಾಧನೆ ಎಂಬ ಗದ್ಯಕೃತಿಯಲ್ಲಿ ಶ್ರವಣಬೆಳಗೊಳದ ಭದ್ರ ಬಾಹುವಿನ ಕುರಿತಾದ ವಿವರಗಳು ಲಭ್ಯವಾಗುತ್ತವೆ. ಪಂಪ ಕವಿಯು ಬರೆದ ವಿಕ್ರಮಾರ್ಜುನ ವಿಜಯಂ ಹಾಗೂ ಇನ್ನಿತರ ಕೃತಿಗಳು ಇವೆ.

ನಡುಗನ್ನಡ:

ಹದಿನೈದನೆಯ ಮತ್ತು ಹದಿನೆಂಟನೆಯ ಶತಮಾನದ ನಡುವಣ ಕಾಲ ಕನ್ನಡಭಾಷೆ ಮತ್ತು ಸಾಹಿತ್ಯದ ಉಚ್ಛ್ರಾಯ ಕಾಲವಾಗಿತ್ತು. ಆ ಕಾಲದ ಅತ್ಯಂತ ಶ್ರೇಷ್ಠನೆನಿಸಿಕೊಂಡ ಕವಿ ಕುಮಾರವ್ಯಾಸ ಕರ್ಣಾಟಭಾರತ ಕಥಾಮಂಜರಿ ಎಂಬ ಕೃತಿಯೊಂದಿಗೆ ವಿಶ್ವವಿಖ್ಯಾತನಾದನು. ಮಹಾಭಾರತವನ್ನು ಆಧರಿಸಿದ ಕೃತಿ ಭಾಮಿನಿ ಷಟ್ಪದಿ ಛಂದಸ್ಸಿನ ಪದ್ಯಗಳನ್ನೊಳಗೊಂಡಿದೆ. ಈ ಕಾಲದಲ್ಲಿ ಕನ್ನಡದ ಮೇಲೆ ಸಂಸ್ಕೃತದ ಧಾರ್ಮಿಕವೂ ಸಾಮಾಜಿಕವೂ ಆದ ಪ್ರಭಾವ ಮೂರ್ಧನ್ಯಾವಸ್ಥೆಯಲ್ಲಿತ್ತು.

ಈ ಕಾಲದಲ್ಲಿ ರಾಜ್ಯಾಡಳಿತ ಮತ್ತು ಜಮೀನ್ದಾರಿಕೆಗೆ ಸಂಬಂಧಿಸಿದ ಮರಾಠಿ ಮತ್ತು ಹಿಂದಿ ಭಾಷೆಯ ಹಲವಾರು ಶಬ್ದಗಳು ಕನ್ನಡದಲ್ಲಿ ಬಳಕೆಗೆ ಬಂದುವು.

ಕನಕದಾಸರು, ಪುರಂದರದಾಸರು, ನರಸಿಂಹ ತೀರ್ಥರು, ವ್ಯಾಸತೀರ್ಥರು, ಶ್ರೀಪಾದ ರಾಯರು, ವಾದಿರಾಜತೀರ್ಥರು, ವಿಜಯದಾಸರು, ಜಗನ್ನಾಥ ದಾಸರು, ಪ್ರಸನ್ನವೆಂಕಟದಾಸರೇ ಮೊದಲಾದ ವೈಷ್ಣವ ಸಂತರು ಕನ್ನಡದಲ್ಲಿ ದಾಸರ ಪದಗಳೆಂದು ಖ್ಯಾತವಾದ ಶ್ರೇಷ್ಠ ಭಕ್ತಿಕಾವ್ಯಗಳನ್ನು ರಚಿಸಿದರು. ಅವುಗಳಲ್ಲಿ ಹೆಚ್ಚಿನವು ಇಂದಿಗೆ ಕರ್ಣಾಟಕ ಶಾಸ್ತ್ರೀಯ ಸಂಗೀತದಲ್ಲಿ ಆದರಿಸಲ್ಪಡುವ ಕೃತಿಗಳಾಗಿವೆ. ಕನಕದಾಸರ ರಾಮಧಾನ್ಯ ಚರಿತ ಎಂಬ ಕೃತಿಯಲ್ಲಿ ಧಾನ್ಯಗಳ ರೂಪಕದೊಂದಿಗೆ ವರ್ಗ ಸಂಘರ್ಷವನ್ನು ಸೂಚಿಸಿರುವುದು ಮನಗಾಣಬಹುದು.

ಇಲ್ಲಿ ಹೆಸರಿಸಲಾದ ಮತ್ತು ಇತರ ವೈಷ್ಣವ ಸಂತರು/ಹರಿದಾಸರು ತಮ್ಮ ದಾಸಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯಕ್ಕೂ ಆ ಮೂಲಕ ಕರ್ನಾಟಕ ಸಂಗೀತಕ್ಕೂ ಶ್ರೇಷ್ಠವೆನಿಸಿದ ಕೊಡುಗೆಗಳನ್ನು ನೀಡಿದರು. ಇವರಲ್ಲಿ ಅತ್ಯಂತ ಪ್ರಸಿದ್ಧರಾದವರು ಕರ್ನಾಟಕ ಸಂಗೀತದ ಪಿತಾಮಹ ಎಂದು ಖ್ಯಾತರಾದ ಪುರಂದರದಾಸರು.

ಹೊಸಗನ್ನಡ:

ಹತ್ತೊಂಬತ್ತನೆಯ ಶತಮಾನದ ನಂತರದ ಕನ್ನಡ ಕೃತಿಗಳ ಭಾಷೆಯಲ್ಲಿ ಗಮನಾರ್ಹ ವ್ಯತ್ಯಯ ಕಂಡು ಬಂದಿತು. ಈ ಬಗೆಯಲ್ಲಿ ರೂಪುಗೊಂಡ ಕನ್ನಡ ಭಾಷೆಯನ್ನು ಹೊಸಗನ್ನಡ ಎಂದು ಕರೆಯುತ್ತೇವೆ. ಹೊಸಗನ್ನಡ ಬರಹಗಾರರಲ್ಲಿ ಅತ್ಯಂತ ಪ್ರಮುಖನಾದವನು ಮುದ್ದಣ ಎಂಬ ಕಾವ್ಯನಾಮದೊಂದಿಗೆ ಪ್ರಸಿದ್ಧನಾದ ನಂದಳಿಕೆ ಲಕ್ಷ್ಮೀನಾರಣಪ್ಪ. ಮುದ್ದಣನ ಕಾವ್ಯ ಕನ್ನಡದಲ್ಲಿ ಹೊಸದೊಂದು ಪರಂಪರೆಗೆ ನಾಂದಿಯಾಗಿದ್ದರೂ ಭಾಷಾ ವಿದ್ವಾಂಸರು ಗುಲ್ವಾಡಿ ವೆಂಕಟರಾಯರು ಬರೆದ ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯವು ಎಂಬ ಕೃತಿಯನ್ನು ಹೊಸಗನ್ನಡದ ಮೊದಲ ಕೃತಿಯನ್ನು

ಗುರುತಿಸುತ್ತಾರೆ. 1817ರಲ್ಲಿ ವಿಲಿಯಂಕಾರಿ ರಚಿಸಿ ಶ್ರೀರಾಮಪುರದಿಂದ ಪ್ರಕಾಶನಗೊಂಡ ಕಾನರೀಸ್ ವ್ಯಾಕರಣ ಎಂಬ ಕೃತಿ ಕನ್ನಡದಲ್ಲಿ ಮೊದಲಬಾರಿಗೆ ಅಚ್ಚುಗೊಂಡ ಕೃತಿಯೆಂದು ಅಗ್ಗಳಿಕೆ ಪಾತ್ರವಾಗಿದೆ.

1820ರಲ್ಲಿ ಜೋನ್‌ಹ್ಯಾನ್ ಬೈಬಲಿನ ಕನ್ನಡದ ಅನುವಾದವನ್ನು ಪ್ರಕಟಿಸಿದರು.

ಅಚ್ಚುಗೊಂಡ ಮೊದಲ ಕಾದಂಬರಿ ಪಿಲ್‌ಗ್ರಿಂಸ್ ಪ್ರೋಗ್ರಿಸ್ ಎಂಬ ಕೃತಿಯಾಗಿದೆ. ಕಾನರೀಸ್ ಪ್ರೋವರ್ಟ್ಸ್ (ಕನ್ನಡ ಗಾದೆಗಳು) ಎಂಬ ಕೃತಿಯೂ ಮೇರಿಮಾರ್ತ್ ಷೆರ್ವುಡ್ ಬರೆದ ದ ಹಿಸ್ಟರಿ ಆಫ್ ಹೆನ್ರಿ ಅಂಡ್ ಹಿಸ್ ಬೇರರ್ ಎಂಬ ಕೃತಿಯೂ ಕ್ರಿಸ್ತಿಯನ್ ಗೋತ್ಲೋವ್ ಬಾರ್ತನು ಬರೆದ ಬೈಬಲ್ ಸ್ಟೋರಿಸ್ ಮತ್ತು ಕನ್ನಡ ಸ್ತೋತ್ರ ಪುಸ್ತಕ ಇಲ್ಲಿ ಪ್ರಕಾಶನಗೊಂಡವು.

ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಹಲಬಗೆಯ ಚಳುವಳಿಗಳಿಂದ ಪ್ರಭಾವಗೊಂಡಿದೆ. ಇವುಗಳಲ್ಲಿ ಪ್ರಮುಖವಾದುವು ನವೋದಯ, ನವ್ಯ, ನವ್ಯೋತ್ತರ, ದಲಿತ, ಬಂಡಾಯ ಎಂಬುವುಗಳಾಗಿವೆ. ಪ್ರಸ್ತುತ ಕನ್ನಡ ಸಾಹಿತ್ಯ ಸಮಾಜದ ಎಲ್ಲಾ ವರ್ಗಗಳನ್ನೂ ತಲುಪುತ್ತಲಿದೆ. ಅಷ್ಟಲ್ಲದೆ ಕನ್ನಡದಲ್ಲಿ ಪ್ರಸಿದ್ಧರೂ ಶ್ರೇಷ್ಠರೂ ಆದ ಕುವೆಂಪು, ದ.ರಾ.ಬೇಂದ್ರೆ, ವಿ.ಕೃ.ಗೋಕಾಕ್ ಮುಂತಾದ ಕವಿಗಳೂ ಸಾಹಿತಿಗಳೂ ಬಾಳಿ ಬದುಕಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಎಂಟು ಸಾರಿ ಜ್ಞಾನಪೀಠ ಪುರಸ್ಕಾರ ದೊರೆತಿದೆ.

ಭಾರತೀಯ ಭಾಷೆಗಳ ಕೃತಿಗಳಿಗೆ ದೊರಕುವ ಜ್ಞಾನಪೀಠ ಪುರಸ್ಕಾರವು ಎಂಟು ಬಾರಿ ಕನ್ನಡ ಭಾಷೆಗೆ ದೊರೆಯಿತು. ಹಲವು ಬಾರಿ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರಗಳೂ ಕನ್ನಡ ಭಾಷೆಗೆ ಲಭ್ಯವಾಗಿವೆ. ದಿಲ್ಲಿಯ ಕೆ.ಕೆ. ಬಿರ್ಲಾಫೌಂಡೇಶನ್ ಕೊಡ ಮಾಡುವ ಸರಸ್ವತಿ ಸಮ್ಮಾನವೂ ಕನ್ನಡ ಭಾಷೆಗೆ ಲಭ್ಯವಾಗಿದೆ. ಎಸ್.ಎಲ್. ಭೈರಪ್ಪನವರ ಮತ್ತು ಶಿವರಾಮಕಾರಂತರ ಕೃತಿಗಳು ಭಾರತದ ಹದಿನಾಲ್ಕು ಭಾಷೆಗಳಲ್ಲಿ ಅನುವಾದಗೊಂಡಿವೆ.

ಕನ್ನಡ ಉಪಭಾಷೆಗಳು:

* ಬರೆಯಲು ಉಪಯೋಗಿಸುವ ಮತ್ತು ಮಾತನಾಡುವ ಭಾಷೆಯಲ್ಲಿ ಇರುವ ವ್ಯತ್ಯಾಸ ಇತರ ಭಾಷೆಗಳಲ್ಲಿ ಇರುವಂತೆ ಕನ್ನಡದಲ್ಲಿಯೂ ಇದೆ. ಮಾತನಾಡಲು ಉಪಯೋಗಿಸುವ ಕನ್ನಡ ಪ್ರದೇಶಕ್ಕೆ ಅನುಸಾರವಾಗಿ ಬದಲಾಗುತ್ತದೆ. ಆದರೆ ಬರೆಯಲು ಉಪಯೋಗಿಸುವ ಕನ್ನಡ ಕರ್ನಾಟಕದ ಹೆಚ್ಚಿನ ಎಲ್ಲೆಡೆ ಒಂದೇ ಬರೆಯದಾಗಿದೆ. ಕುಂದಗನ್ನಡ, ಕೋಟಗನ್ನಡ, ಹವ್ಯಕಕನ್ನಡ, ಅರೆಭಾಷೆ (ಗೌಡಕನ್ನಡ), ಸೋಲಿಗ ಕನ್ನಡ ಎನ್ನುವಂಥ ಇಪ್ಪತ್ತರಷ್ಟು ಉಪಭಾಷೆಗಳು ಕನ್ನಡಕ್ಕಿವೆ.

* ಇವುಗಳಲ್ಲಿ ಕುಂದಗನ್ನಡ ಕುಂದಾಪುರದ ಸಮೀಪ ಮಾತನಾಡಲು ಉಪಯೋಗಿಸುವ ಭಾಷೆಯಾಗಿದ್ದು ಇದರಂತೆಯೇ ಹವ್ಯಕ ಮತ್ತು ಸೋಲಿಗ ಕನ್ನಡ ಆಯಾ ಸಮುದಾಯಕ್ಕೆ ಸೇರಿದವರು ಮಾತನಾಡಲು ಉಪಯೋಗಿಸುವ ಭಾಷೆಯಾಗಿದೆ. ಹೀಗೆ ಪ್ರದೇಶಕ್ಕೂ ಸಮುದಾಯಕ್ಕೂ ಅಳವಡಿಸಲ್ಪಟ್ಟ ಇತರ ಕನ್ನಡ ಉಪಭಾಷೆಗಳೆಂದರೆ ನಾಡವ ಕನ್ನಡ, ಮಲೆನಾಡ ಕನ್ನಡ, ಧಾರವಾಡದ ಕನ್ನಡ ಮುಂತಾದವುಗಳು.

* ಕನ್ನಡದ ಒಂದು ಉಪಭಾಷೆಯಂತೆಯೇ ತೋರಿಬರುವ ಭಾಷೆಯೆಂದರೆ ಬಡಗ ಭಾಷೆ. ಬಡಗ ಭಾಷೆಯನ್ನು ಬರೆಯಲು ಕನ್ನಡ ಲಿಪಿಯನ್ನು 1890ರಲ್ಲೆ ಉಪಯೋಗಿಸಲಾಗುತ್ತಿತ್ತು. ಬಡಗ ಮಾತ್ರವಲ್ಲದೆ ಕನ್ನಡದೊಂದಿಗೆ ನಿಕಟ ಸೌಮ್ಯವನ್ನು ಹೊಂದಿರುವಂಥ ಭಾಷೆಗಳಾಗಿವೆ ಹೊಲಿಯ ಮತ್ತು ಉರಾಳಿ.

ಸವಾಲುಗಳು

1) ಆಂಗ್ಲಭಾಷೆ ಪ್ರಭಾವ:

"ವಿಜ್ಞಾನ–ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದೆ. ಆಂಗ್ಲ ಭಾಷೆ ಎಲ್ಲವನ್ನು ಆವರಿಸಿಕೊಳ್ಳುತ್ತಿದೆ. ವಿದೇಶಿ ಕಂಪೆನಿಗಳು ನಮ್ಮ ದೇಶದಲ್ಲಿ ಬಂಡವಾಳ ಹೂಡುತ್ತಿರುವುದರಿದ ಆಂಗ್ಲಭಾಷೆಯ ಪ್ರಭಾವವು ಹೆಚ್ಚಾಗಿ ಜನಸಾಮಾನ್ಯರಲ್ಲೂ ಆಂಗ್ಲಭಾಷೆಯ ಮೋಹ ಹೆಚ್ಚಾಗಿ ದೇಶಿಯ ಭಾಷೆ ಮತ್ತು ರಾಷ್ಟ್ರೀಯ ಭಾಷೆಗಳು ಮೂಲೆ ಗುಂಪಾಗುತ್ತಿವೆ".

ಹಿಂದಿ ಭಾಷೆ ಸೇರಿದಂತೆ ಮಾತೃಭಾಷೆ ಕನ್ನಡ, ತಮಿಳು, ಇತರೆ ಭಾಷೆಗಳಿಗೆ ಸಿಗಬೇಕಿದ್ದ ಸ್ಥಾನಮಾನವು ಸಿಗುತ್ತಿಲ್ಲ. ಭಾಷೆಯ ಉಳಿವಿಗಾಗಿ ಹೋರಾಡುವ ಪರಿಸ್ಥಿತಿ ಉಂಟಾಗಿದೆ. ತಂತ್ರಜ್ಞಾನದ ಪ್ರಭಾವ ಹೆಚ್ಚಾಗಿದ್ದು, ಇ–ಲ್ಯಾಂಗ್ವೇಜ್‌ನಿಂದಾಗಿ ಇಂದಿನ ತಲೆಮಾರಿನ ಮಕ್ಕಳು ತಮ್ಮ ಮಾತೃಭಾಷೆಯನ್ನು ಮರೆಯುತ್ತಿದ್ದಾರೆ. ಇದರಿಂದಾಗಿ ಭಾಷೆಯ ಮೌಲ್ಯ ಕುಸಿಯುತ್ತಿದೆ.

ಎಲ್ಲಾ ಭಾಷೆಗಳಲ್ಲೂ ಆಂಗ್ಲಭಾಷೆ ಮಿಶ್ರಿತವಾಗುತ್ತಿದೆ. ಹಾಗೆಯೇ ಹಿಂದಿ ಭಾಷೆಗೂ ಸಹ ಆಂಗ್ಲದ ಪ್ರಭಾವ ಹೆಚ್ಚಾಗುತ್ತಿದೆ. ಇಂಟರ್‌ನೆಟ್‌ಯುಗದಲ್ಲಿ ಭಾಷೆಯು ಸರಳೀಕರಣಗೊಂಡಿದ್ದು, ಹೊಸಭಾಷೆ ಕಲಿಯಲು ಶ್ರಮಪಡುವ ಅಗತ್ಯವಿಲ್ಲದಂತಾಗಿದೆ.

"ಮಾಧ್ಯಮಗಳಿಂದ ಹಿಂದಿ ಭಾಷೆ ಪ್ರಚಲಿತಗೊಂಡಿದೆ. ಖ್ಯಾತ ಕವಿ ಪ್ರೇಮ್‌ಚಂದ್ ಅವರ ಹೆಸರಿಗಿಂತ ಸಿನಿಮಾ ನಟರ ಹೆಸರು ಹೆಚ್ಚು ಜನಪ್ರಿಯತೆ ಹೊಂದುತ್ತಿದೆ".

2) ಕನ್ನಡಭಾಷೆ ನಿರ್ಲಕ್ಷ್ಯ:

ಕನ್ನಡನಾಡಿನಲ್ಲಿ ಕನ್ನಡಕ್ಕೆ ಬೆಲೆ ಇಲ್ಲದಂತಾಗಿದೆ. ಮಾತೃಭಾಷೆಯ ಬಗ್ಗೆ ಎಲ್ಲರಲ್ಲೂ ಗೌರವಭಾವನೆ ಬೆಳೆಯಬೇಕು. ಆಗ ಮಾತ್ರ ಕನ್ನಡ ಉಳಿಸಿ, ಬೆಳೆಸಲು ಸಾಧ್ಯವಾಗುತ್ತದೆ.

ಮಾತೃಭಾಷೆಯ ಬಗ್ಗೆ ಉಪೇಕ್ಷೆ ಸರಿಯಲ್ಲ. ಭಾಷೆ ಬಳಸಿದಂತೆ ಬೆಳೆಯುತ್ತದೆ. ಭಾಷೆಯ ಬಳಕೆ ಮಾಡುವುದರಿಂದಲೇ ಭಾಷೆ ವೃದ್ಧಿಯಾಗುತ್ತದೆ. ವಿದ್ಯಾರ್ಥಿಗಳು ಅಂಕಗಳಿಕೆಗೆ ಆಂಗ್ಲಮಾಧ್ಯಮದ ಮೊರೆ ಹೋಗುತ್ತಿರುವುದು ವಿಷಾದನೀಯ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಆಂಗ್ಲ ಭಾಷೆ ಅಗತ್ಯವಾಗಿದ್ದರೂ, ಅದೇ ಸರ್ವಸ್ವ ಆಗಬಾರದು. ಅಧ್ಯಯನ ಕೇವಲ ಪರೀಕ್ಷೆಗೆ ಮಾತ್ರ ಸೀಮಿತವಾಗಬಾರದು. ವಿದ್ಯಾರ್ಥಿಗಳು ತಕ್ಕಮಟ್ಟಿಗಾದರೂ ತಂತ್ರಜ್ಞಾನ ತಿಳಿದುಕೊಳ್ಳಬೇಕು. ಜನರಿಂದ ಜನರಿಗಾಗಿ ಸೃಷ್ಟಿಯಾದದ್ದು ಜಾನಪದ ಸಾಹಿತ್ಯ ಅದೇ ಮನುಷ್ಯನಿಗೆ ಮೊದಲ ಗುರು.

ಜಾನಪದ ಸಾಹಿತ್ಯದಲ್ಲಿ ಜೀವನದ ಮೌಲ್ಯಗಳು ಅಡಗಿವೆ. ಯಾವುದೇ ಮುದ್ರಿತ ಸಾಮಗ್ರಿ ಇಲ್ಲದೇ, ಬಾಯಿಯಿಂದ ಬಾಯಿಗೆ ಹಾಡಿನ ರೂಪದಲ್ಲಿ ಬಂದಿರುವ ಜನಪದ ಸಾಹಿತ್ಯ ಇಂದಿಗೂ ತನ್ನ ಶ್ರೀಮಂತಿಕೆಯನ್ನು ಉಳಿಸಿಕೊಂಡಿದೆ.

ಜಾನಪದವು ಎಂದೂ ಅಳಿಯದ ಸಂಪತ್ತಾಗಿದೆ. ಅದು ಪ್ರಾಚೀನಕಾಲದಿಂದ ಕಾಲಕಾಲಕ್ಕೆ ಹೊಸರೂಪ ಪಡೆಯುತ್ತ ಬಂದಿದೆ. ನಮ್ಮ ಬದುಕಿನುದ್ದಕ್ಕೂ ಸಂಬಂಧ ಹೊಂದಿದೆ.

ಆಂಗ್ಲಶಾಲೆ– (ಬೆಂಕಿ ಕೊಡೆ ಇದ್ದಂತೆ)

ನಾಡಿನ ತುಂಬೆಲ್ಲ ಆಂಗ್ಲಶಾಲೆಗಳಿಗೆ ಸರ್ಕಾರ ಅನುಮತಿ ನೀಡಿದ್ದೆ ಮೊದಲ ಅಪರಾಧ. ಇಂತಹ ಸಂದರ್ಭದಲ್ಲಿ ಕನ್ನಡಿಗರ ಬದುಕಿಗೆ ಕನ್ನಡವೇ ಭದ್ರತೆ ಎಂಬುದನ್ನು ಮರೆಯಬಾರದು.

ನಾಯಿಕೊಡೆಯಂತೆ ಹಬ್ಬಿದ ಆಂಗ್ಲಶಾಲೆಗಳು ಇಂದು ಬೆಂಕಿಕೊಡೆಗಳಾಗಿವೆ. ಅನೇಕ ಸುಳ್ಳುಗಳನ್ನು ಸತ್ಯವಾಗಿ ಬಿಂಬಿಸುವುದೇ ರಾಜಕೀಯ. ರಾಜಕೀಯ ಪಕ್ಷಗಳು ಸದಸ್ಯತ್ವ ಅಭಿಯಾನ ಮೂಲಕ ಪ್ರಜೆಗಳನ್ನು ಪಕ್ಷಗಳ ಗುಲಾಮರನ್ನಾಗಿ ಮಾಡಲು ಹೊರಟಿವೆ. ನಾಗರಿಕರು ಯಾವುದೇ ಪಕ್ಷದ ಗುಲಾಮರಾಗಬೇಡಿ. ಇಂತಹ ರಾಜಕಾರಣಿಗಳ ಮಧ್ಯೆ ಕನ್ನಡದ ಕೊಲೆಯಾಗುತ್ತಿದೆ.

ಅವಕಾಶಗಳು

ಕಲಾವಿಭಾಗದಲ್ಲಿ ಪ್ರವೇಶ ಪಡಿದಿದ್ದಾನೆ ಎಂದರೆ ಮೂಗು ಮುರಿಯುವವರೇ ಹೆಚ್ಚು. ಆದರೆ ಭಾಷಾ ವಿಷಯಗಳಲ್ಲಿ ಪದವಿ ಪೂರೈಸಿದವರಿಗೆ ಇರುವಷ್ಟು ಅವಕಾಶಗಳು ಬೇರೆ ಯಾವ ಕ್ಷೇತ್ರಗಳಲ್ಲೂ ಇಲ್ಲ.

ವಿಜ್ಞಾನ ಮತ್ತು ವಾಣಿಜ್ಯ ಪದವಿ ಅಧ್ಯಯನ ಮಾಡಿದಲ್ಲಿ ಶೀಘ್ರ ಉದ್ಯೋಗ ಸಿಗುತ್ತದೆ ಎಂಬ ನಂಬಿಕೆ ಹಲವರಲ್ಲಿದೆ. ಕಲಾಪದವಿ ಅಧ್ಯಯನದಿಂದ ವಿವಿಧ ಕ್ಷೇತ್ರಗಳಲ್ಲಿ ವಿಫುಲ ಉದ್ಯೋಗಾವಕಾಶ ಸಿಗುವುದಲ್ಲದೇ ಉತ್ತಮ ಭವಿಷ್ಯಕ್ಕೆ ಪೂರಕವಾಗಿ ಜ್ಞಾನವೂ ವೃದ್ಧಿಯಾಗುತ್ತದೆ. ವಿಜ್ಞಾನ ಮತ್ತು ವಾಣಿಜ್ಯ ಪದವೀಧರರು ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಬಹುದು. ಆದರೆ ಕಲಾಪದವೀಧರರು ಇತಿಹಾಸ,

ಸಮಾಜ, ರಾಜ್ಯಶಾಸ್ತ್ರ, ಮನಶಾಸ್ತ್ರ, ಭಾಷಾಶಾಸ್ತ್ರ ಮುಂತಾದ ವಿಷಯಗಳಲ್ಲಿ ವಿಶಿಷ್ಟ ಸಾಧನೆ ಮಾಡಬಹುದು. ಆಸಕ್ತ ವಿಷಯಗಳಲ್ಲಿ ಸಂಶೋಧನೆ ಕೈಗೊಳ್ಳಬಹುದು.

ಕಲಾ ಪದವೀಧರರು ಉನ್ನತ ಶಿಕ್ಷಣ ಅಧ್ಯಯನಕ್ಕೆ ಆದ್ಯತೆ ನೀಡಬಹುದು. ಇಲ್ಲವೇ ಪದವಿ ಆಧಾರದ ಮೇಲೆ ಸರ್ಕಾರ ಮತ್ತು ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ಗಳಿಸಬಹುದು. ಶಾಲಾ ಶಿಕ್ಷಕ ಅಥವಾ ಕಾಲೇಜು ಪ್ರಾಧ್ಯಾಪಕರಾಗಿ ಬೋಧನಾ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಉನ್ನತ ಸರ್ಕಾರಿ ಉದ್ಯೋಗಕ್ಕೆ ಸೇರಿಕೊಳ್ಳಬಹುದು.

ವಿಜ್ಞಾನ, ವಾಣಿಜ್ಯ ಪದವೀಧರರಿಗೆ ತಾಂತ್ರಿಕ ಅಥವಾ ವಿಜ್ಞಾನ ಕ್ಷೇತ್ರದಲ್ಲಿ ಮುಂದುವರಿಯುವುದು ಅನಿವಾರ್ಯ. ಕಲಾ ಪದವೀಧರರು ಅಂತಹ ಯಾವ ಒತ್ತಡಕ್ಕೂ ಒಳಗಾಗದೇ ಆಸಕ್ತಿ ಮತ್ತು ಭವಿಷ್ಯಕ್ಕೆ ಪೂರಕವಾಗಿ ಯಾವುದೇ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬಹುದು. ವಿವಿಧ ವಿಷಯಗಳ ಕುರಿತಾದ ಜ್ಞಾನದಿಂದ ಉದ್ಯೋಗ ಪಡೆಯಬಹುದು.

ಬಹುತೇಕ ಸಾಧಕರು ಕಲಾ ಪದವೀಧರರು:

ಕಲಾಪದವಿ ಇತರೆ ಪದವಿಗಳಷ್ಟೇ ಉತ್ಕೃಷ್ಟವಾದದ್ದು, ದೇಶ, ಸಮಾಜ ಮತ್ತು ಸಂಸ್ಕೃತಿ ಅಧ್ಯಯನ ದೃಷ್ಟಿಯಿಂದ ಈ ಪದವಿ ಉಪಯುಕ್ತ. ಕಲೆ, ಸಾಹಿತ್ಯ, ಸಾಂಸ್ಕೃತಿಕ ಅಲ್ಲದೇ ಇನ್ನಿತರ ಕ್ಷೇತ್ರಗಳಲ್ಲಿನ ಬಹುತೇಕ ಸಾಧಕರು ಕಲಾ ಪದವೀಧರರು ಎಂಬುದು ಗಮನಾರ್ಹ. ಕಲಾಪದವೀಧರರು ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಮುಂದಾಗಬಹುದು. ಕವನ, ಲೇಖನ ಅಥವಾ ಸಂಶೋಧನಾತ್ಮಕ ಬರಹಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರದಲ್ಲಿನ ಉನ್ನತ ಸಾಧನೆ ಮಾಡಬಹುದು.

ಕಲಾ ಪದವಿಗೆ ಪೂರಕವಾಗಿ ಕಾನೂನು ಪದವಿ ಗಳಿಸಿದಲ್ಲಿ ವಕೀಲರಾಗಬಹುದು. ಕಂಪ್ಯೂಟರ್ ಅಥವಾ ಬೆರಳಚ್ಚು ತರಬೇತಿ ಪಡೆದು ಸ್ವಯಂ–ಉದ್ಯೋಗ ಕಂಡುಕೊಳ್ಳಬಹುದು. ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರ ಕಷ್ಟವೆಂದು ಭಾವಿಸುವವರು ಕಲಾ ಅಧ್ಯಯನದಿಂದ ಬಯಸಿದ ಕ್ಷೇತ್ರದಲ್ಲಿ ಸಾಧನೆ ಮಾಡಲು ಪ್ರಯತ್ನಿಸಬಹುದು.

ಯಾವುದೇ ಪದವಿಯಲ್ಲಿ ಪಡೆದ ಶಿಕ್ಷಣ ಅಥವಾ ಗಳಿಸಿದ ಜ್ಞಾನ ವ್ಯರ್ಥವಾಗುವುದಿಲ್ಲ. ಒಂದಿಲ್ಲೊಂದು ಹಂತದಲ್ಲಿ ಅದು ಪ್ರಯೋಜನಕ್ಕೆ ಬರುತ್ತದೆ. ವೈದ್ಯರು ಅಥವಾ ಎಂಜಿನಿಯರು ಸಮಾಜದಲ್ಲಿ ಒಂದು ರೀತಿಯ ಸ್ಥಾನಮಾನಗಳಿಸಿದರೆ, ಕಲಾ ಪದವೀಧರರು ಹೆಚ್ಚಿನ ಅಧ್ಯಯನದಿಂದ ತಮ್ಮದೇ ಆದ ವಿಶಿಷ್ಟ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು.

ಸಮಾಜದಲ್ಲಿ ಸಾಧನೆ ತೋರಿದ ಮಹನೀಯರಲ್ಲಿ ಕಲಪದವೀದರರು ಹೆಚ್ಚು. ಭಾಷೆಯ ಮೇಲೆ ಹಿಡಿತ ಸಾಧಿಸಿದ ವ್ಯಕ್ತಿ. ಪತ್ರಿಕೋದ್ಯಮದ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿಯೂ ಕಾರ್ಯನಿರ್ವಹಿಸಬಹುದು. ಶಿಕ್ಷಕರೂ ಆಗಬಹುದು. ವಿದ್ಯಾರ್ಥಿಗಳು ಕಲಿಕಾಹಂತದಲ್ಲಿಯೇ ಭಾಷೆಯನ್ನು ಗಟ್ಟಿಗೊಳಿಸಿಕೊಳ್ಳಬೇಕು.

ನನ್ನ ಭಾರತ

(ಸ್ವಾತಂತ್ರ್ಯೋತ್ಸವ ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಬರಹ)

ಶಾಂಭವಿ ವಿ. ಭಟ್ಟ
ಪ್ರಥಮ ಬಿ.ಎಸ್ಸಿ.

ಪ್ರಸ್ತಾವನೆ:

"ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಹೆತ್ತ ಮಾತೆ, ಹೊತ್ತ ಧರೆಯು ಸ್ವರ್ಗಕ್ಕಿಂತಲೂ ಮಿಗಿಲು. ಭರತಖಂಡ, ಭಾರತವರ್ಷ ಎಂಬೆಲ್ಲಾ ಅಭಿದಾನದಿಂದ ಕೂಡಿದ ನಮ್ಮ ದೇಶ ನಭೋಮಂಡಲದ ಧ್ರುವತಾರೆಯಂತೆ. ಭೂಖಂಡಗಳಲ್ಲಿ ದೇದಿಪ್ಯಮಾನವಾಗಿ ಪ್ರಜ್ವಲಿಸುತ್ತಿದೆ. "ಧರೆಗವತರಿಸಿದ ಸ್ವರ್ಗದ ಸ್ಪರ್ಧಿಯು ಸುಂದರ ತಾಯ್ನೆಲವು, ನಮ್ಮೀ ತಾಯ್ನೆಲವು" ಎಂಬ ಹೆಗ್ಗಳಿಕೆಗೆ ಪಾತ್ರವಾದದ್ದು, ಭರತ ಚಕ್ರವರ್ತಿಯಿಂದ ಆಳಲ್ಪಟ್ಟ ದೇಶವು ನಮ್ಮದು.

ಸಾವಿರಾರು ವರ್ಷಗಳ ಪುರಾತನವಾದ

ಸಿಂಧೂನಾಗರಿಕತೆ, ಅಶೋಕ, ಕೃಷ್ಣದೇವರಾಯ, ಹರ್ಷವರ್ಧನರಂತಹ ಅಪ್ರತಿಮ ಪ್ರಭುಗಳ ಆದರ್ಶಪ್ರಾಯವಾದ ಆಡಳಿತ, ಭರತಭೂಸಂಜಾತರ ಆಚಾರ, ವಿಚಾರ ಆದರಾತಿಥ್ಯ ನಮ್ಮ ಸಂಸ್ಕೃತಿಯ ಆಸ್ತಿ. ಪ್ರಪಂಚದಲ್ಲಿ ನಮ್ಮ ದೇಶವು ಗುರುತಿಸಲ್ಪಡುತ್ತದೆ ಎಂದಾದರೆ ಅದಕ್ಕೆ ಕಾರಣ ನಮ್ಮ ದೇಶದ ಸನಾತನ ಸಂಸ್ಕೃತಿ ಎಂದು ಅರುಹಲು ಹೆಮ್ಮೆ ಅನಿಸುತ್ತದೆ.

ರಾಮಕೃಷ್ಣ ಪರಮಹಂಸರಂತಹ ಮಹಾನ್‌ಗುರು, ಸ್ವಾಮಿ ವಿವೇಕಾನಂದರಂತಹ ದಾರ್ಶನಿಕ, ಭಗತ್‌ಸಿಂಗರಂತಹ ದೇಶಪ್ರೇಮಿ, ಸಂಗೊಳ್ಳಿರಾಯಣ್ಣನಂತಹ ಶೂರರನ್ನು ಹೆತ್ತ ನಾಡಿದು. ಬ್ರಹ್ಮಗುಪ್ತ, ವರಾಹಮಿಹಿರ, ಭಾಸ್ಕರಾಚಾರ್ಯರಂತಹ ಗಣಿತಜ್ಞರನ್ನು, ಆರ್ಯಭಟ, ಸಿ.ವಿ.ರಾಮನ್, ಅಬ್ದುಲ್ ಕಲಾಂರಂತಹ ಮಹಾನ್ ವಿಜ್ಞಾನಿಗಳನ್ನು ಜಗತ್ತಿಗೆ ನೀಡಿದ ಭೂತಾಯಿ ನಮ್ಮ ಭಾರತಮಾತೆ.

ಮಹಾನ್ ಕವಿ ಕಾಳಿದಾಸ, ಸರ್ವಶ್ರೇಷ್ಠ ವಚನಕಾರ ಬಸವಣ್ಣ, ಅಂತೇ ಗುರುದೇವರೆನಿಸಿಕೊಂಡ ರಬೀಂದ್ರನಾಥ ಠಾಗೋರರಿಗೆ ಜನ್ಮನೀಡಿದವಳು ನಮ್ಮ ಭಾರತಾಂಬೆ.

ಬೆಳವಣಿಗೆ:

ಒಂದು ನಿವಾಸ ಎಂದೆನಿಸಿಕೊಳ್ಳಬೇಕಾದರೆ ಅದರಲ್ಲಿ ಪೂಜಾಗೃಹ, ಸ್ನಾನಗೃಹ, ಅಡುಗೆ ಮನೆ, ಶಯನಾಗಾರ, ಶೌಚಗೃಹ ಎಲ್ಲವೂ ಇರಬೇಕು. ಇಡೀ ಪ್ರಪಂಚವೇ ಒಂದು ಮನೆ ಎಂದೆನಿಸಿಕೊಂಡರೆ ಅಲ್ಲಿ ನಮ್ಮ ದೇಶಕ್ಕೆ ಇರುವ ಸ್ಥಾನ ಪೂಜಾಗೃಹ ಎಂದು ನಾವು ಅಹಂಕಾರ ಪಟ್ಟರೆ ಅದು ಸಾತ್ವಿಕವಾದ ಅಹಂಕಾರ. ಅಲೆಗ್ಸಾಂಡರ್, ಅರಿಸ್ಟಾಟಲ್‌ನ ಹತ್ತಿರ ಭಾರತಕ್ಕೆ ಹೋಗುವುದಾದರೆ ತಲೆ ತಗ್ಗಿಸಿ ಹೋಗು ಎಂದು ಹೇಳಿದ್ದನಂತೆ. ಇದು ನಮ್ಮ ದೇಶದ ಸಂಸ್ಕೃತಿಯ ಪ್ರತೀಕ. ನಮ್ಮ ದೇಶದ ಸಂಸ್ಕೃತಿ ಕೇವಲ ಭೂತವಲ್ಲ, ವರ್ತಮಾನ ಕೂಡಾ.

ಈಗಲೂ ಮಾತಾ ಅಮೃತಾನಂದಮಯಿಯಂತಹ ಮಾತೆಯರು, ಶಂಕರಾಚಾರ್ಯರ ತತ್ವವನ್ನು ಪಾಲಿಸುವ ಜಗದ್ಗುರುಗಳು, ಪ್ರಪಂಚಕ್ಕೆ ಆದರ್ಶಪ್ರಾಯರಾಗಿರುವ ಸಾಧುಸಂತರ ಕೃಪಾಶೀರ್ವಾದದಿಂದಲೇ ನಾವಿಂದು ನೆಮ್ಮದಿಯ ಜೀವನ್ನು ನಡೆಸುತ್ತಿದ್ದೇವೆ.

'ಶಾಂತಿ' ನಮ್ಮ ದೇಶದ ಮಂತ್ರ. 'ವೈವಿಧ್ಯದ ಏಕತೆ' ನಮ್ಮ ದೇಶದ ಸಂಕೇತ. ಎಲ್ಲ ಜಾತಿ, ಎಲ್ಲ ಮತ, ಎಲ್ಲ ಧರ್ಮಗಳಿಗೂ ನಮ್ಮ ದೇಶ ತವರೂರು. ನಮ್ಮ ದೇಶದ ಬಾಗಿಲು ಎಲ್ಲರಿಗೂ ಸದಾ ತೆರೆದೇ ಇರುತ್ತದೆ. ಯಾವ ಬೇಧ-ಭಾವ ಇಲ್ಲದೇ ಎಲ್ಲರನ್ನೂ ಆತ್ಮೀಯವಾಗಿ ಪ್ರೀತಿಯಿಂದ ಸ್ವಾಗತಿಸುತ್ತದೆ ನಮ್ಮ ದೇಶ.

ಇನ್ನು ಭಾಷೆಯ ವಿಚಾರ ವ್ಯಕ್ತಪಡಿಸುವುದಾದರೆ ಎಲ್ಲ ಭಾಷೆಗಳ ತಾಯಿ ನಮ್ಮ ದೇಶದ ಸಂಸ್ಕೃತ ಭಾಷೆ. ಇಂದು ಜಗತ್ತಿನಲ್ಲಿ ತಂತ್ರಜ್ಞಾನ ಎಷ್ಟೇ ಮುಂದುವರೆದಿದ್ದರೂ, ಅವುಗಳ ಬೇರು ಇರುವುದು ವೇದ, ಉಪನಿಷತ್ತುಗಳಲ್ಲಿ. ಅಂತಹ ವೇದ-ಉಪನಿಷತ್ತುಗಳಿರುವುದು ಸಂಸ್ಕೃತದಲ್ಲಿ. ಸಂಸ್ಕೃತವು ನೆಲೆಯೂರಿರುವುದು ನಮ್ಮ ಭರತಖಂಡದಲ್ಲಿ. ಇಂದಿನ ವಿಜ್ಞಾನಿಗಳು ಆಕಾಶಕಾಯಗಳ ಬಗ್ಗೆ ಸಂಶೋಧನೆ ನಡೆಸಿ ಅವುಗಳ ಬಗ್ಗೆ ಉಲ್ಲೇಖಿಸಿದರೆ, ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಭಾರತೀಯ ಖಗೋಳ ಶಾಸ್ತ್ರಜ್ಞರು ಮುಂದೆ ಘಟಿಸಬಹುದಾದ ಗ್ರಹಣಗಳ ಬಗ್ಗೆ ಅಂದೇ ಉಲ್ಲೇಖಿಸಿದ್ದಾರೆ. ಇಂತಹ ಮಹಾತ್ಮರ ತವರೂರು ನಮ್ಮ ಭಾರತ.

ನಮ್ಮ ದೇಶವು ಪ್ರಾಕೃತಿಕ ಸೌಂದರ್ಯದ ಬೀಡು. ಉತ್ತರದಲ್ಲಿ ಬೆಳ್ಳಿಯ ಬೆಟ್ಟವಾದ ಹಿಮಾಲಯವಿದ್ದರೆ, ದಕ್ಷಿಣಕ್ಕೆ ಕನ್ಯಾಕುಮಾರಿಯು ತಲೆಯೆತ್ತಿ ನಿಂತಿದ್ದಾಳೆ. ಗಂಗೆ, ತುಂಗೆ, ಕಾವೇರಿ, ಕಬಿನಿಯಂತಹ ಪುಣ್ಯತೀರ್ಥಗಳು ನಮ್ಮ ದೇಶದಲ್ಲಿ ಹರಿದು ಪಾವನಗೊಳಿಸಿವೆ. ನಮ್ಮ ದೇಶವು ಅನೇಕ ಪುಣ್ಯಕ್ಷೇತ್ರಗಳನ್ನು ಹೊಂದಿರುವ ಪಾವನ ಭೂಮಿಯೆಸಿಕೊಂಡಿದೆ.

ಇಡೀ ವಿಶ್ವವನ್ನೇ ಬೆರಗುಗೊಳಿಸುವ ಸಂಸ್ಕೃತಿಯು ನಮ್ಮ ರಾಷ್ಟ್ರದ್ದು. ಪ್ರಾಚೀನ ಕಾಲದಿಂದ ಇಂದಿನ ನವ್ಯಯುಗದವರೆಗೂ ಅನೇಕ ಸಂಶೋಧನೆ, ಸಾಧನೆಗಳು ನಮ್ಮ ತಾಯ್ನೆಲದಲ್ಲಿ ನಡೆಯುತ್ತಲೇ ಇವೆ. ಬುದ್ಧ, ಮಹಾವೀರ

ಮುಂತಾದ ಪವಾಡ ಪುರುಷರನ್ನು ಸೃಷ್ಟಿಸಿದ ದಿವ್ಯ ನೆಲವು ನಮ್ಮದು. ಪರಕೀಯರ ಆಡಳಿತಕ್ಕೆ ಒಳಪಟ್ಟು ತತ್ತರಿಸಿದರೂ ತನ್ನ ಆಂತರಿಕ ಸೌಂದರ್ಯವನ್ನು ಭಾರತಾಂಬೆ ಎಂದಿಗೂ ಕಳೆದುಕೊಂಡಿಲ್ಲ.

ಸರ್ವಧರ್ಮ ಸಮಾನತೆಯನ್ನು ಸಾರುವ ದೇಶ ನಮ್ಮದಾಗಿದೆ. ಇಲ್ಲಿ ಅನೇಕ ಜಾತಿ, ಪಂಗಡಗಳ ಜನರು ವಾಸಿಸುತ್ತಿದ್ದರೂ ಅವರ ನಡುವೆ ಭ್ರಾತೃತ್ವವನ್ನು ಕಾಣಬಹುದಾಗಿದೆ. ಇಂತಹ ಪಾವನಮಯಿಯ ಮಡಿಲಲ್ಲಿ ಜನಿಸಿದ ನಾವೇ ಧನ್ಯರು. ಈ ಭಾರತಮಾತೆಯ ವಾತ್ಸಲ್ಯವನ್ನು ಪಡೆದ ನಾವೇ ಪುಣ್ಯವಂತರು.

ಇಂದು ಜಗತ್ತಿಗೆ ಬೇಕಿರುವುದು ಅಧ್ಯಾತ್ಮದ ಬಲ. ಯುವ ಪೀಳಿಗೆಯು ಮಾನಸಿಕವಾಗಿ ಕುಗ್ಗಬಾರದೆಂದರೆ ಅವರು ತಮ್ಮನ್ನು ಅರಿತುಕೊಳ್ಳಬೇಕು. ಅದು ಅಧ್ಯಾತ್ಮದಿಂದ ಮಾತ್ರ ಸಾಧ್ಯ. ಅಂತಹ ಅಧ್ಯಾತ್ಮಿಕ ಕ್ಷೇತ್ರದಲ್ಲಿ ನಮ್ಮ ದೇಶವು ಎಷ್ಟೋ ಸಾವಿರ ವರ್ಷಗಳ ಹಿಂದೆಯೇ ಪ್ರಾವಿಣ್ಯತೆಯನ್ನು ಪಡೆದಿದೆ. ಅಧ್ಯಾತ್ಮಿಕ ಕ್ಷೇತ್ರಕ್ಕೆ ನಮ್ಮ ದೇಶದ ಕೊಡುಗೆ ಅಪಾರ.

ನಮ್ಮ ದೇಶದ ಯೋಧರು ನಿಜವಾದ ವೀರರು. ನಮ್ಮ ಯೋಧರ ಗುಂಡಿಗೆಯು ವಜ್ರದಂತೆ. ಅದು ನಮ್ಮ ದೇಶಕ್ಕಾಗಿಯೇ ಮಿಡಿಯುವ ಹೃದಯಗಳು. ದೇಶಕ್ಕಾಗಿ ತಮ್ಮ ದೇಹವನ್ನೇ ತ್ಯಜಿಸಿ, ಪ್ರಾಣತ್ಯಾಗವನ್ನು ಮಾಡುವ ಅನೇಕ ಕಲಿಗಳನ್ನು ನಮ್ಮ ನೆಲದಲ್ಲಿ ಕಾಣಬಹುದು. ಅಂತಹ ಹೆಮ್ಮೆಯ ಮಕ್ಕಳ ತಾಯಿಯು ನಮ್ಮ ಭಾರತಾಂಬೆ.

ನಮ್ಮ ರಾಷ್ಟ್ರವಾಣಿಯು ಹುಲಿ. ಹುಲಿಯ ಸ್ವಭಾವವೆಂದರೆ ಧರ್ಮ, ಛಲ. ಇದು ನಮ್ಮ ದೇಶದ ಸಂಕೇತವಾಗಿದೆ. ನವಿಲು ತನ್ನ ಒಡಲಿನಲ್ಲಿ ಅನೇಕ ಬಣ್ಣಗಳನ್ನು ತುಂಬಿಕೊಂಡಿದೆ. ಅಂತೆಯೇ ನಮ್ಮ ದೇಶದ ಭೂಪಟದಲ್ಲಿ ನಾವು ಅನೇಕ ವಿಸ್ಮಯ, ಚಿತ್ತಾರಗಳನ್ನು ಕಾಣಬಹುದಾಗಿದೆ. ಅನೇಕ ಸುಂದರ, ನಯನ, ಮನೋಹರ ತಾಣಗಳನ್ನು ಅಲಂಕೃತಗೊಳಿಸಿಕೊಂಡಿರುವ ಸೌಂದರ್ಯಮಯಿ ನಮ್ಮ ತಾಯಿ.

ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಮದಕರಿನಾಯಕರಂತಹ ಅನೇಕ ವೀರರತ್ನಗಳ ಆಶ್ರಯತಾಣವು ಇದಾಗಿತ್ತು. ನಮ್ಮ ನೆಲದಲ್ಲಿ ಅನೇಕ ವೀರರ ದೇಹಗಳು ಮಣ್ಣಾಗಿವೆ. ಇಂತಹ ಅನೇಕ ಶೂರರ ನೆತ್ತರು ನಮ್ಮ ದೇಶದ ನೆಲದಲ್ಲಿ ಹರಿದಿದೆ. ದೇಶಕ್ಕಾಗಿಯೇ ಬಲಿದಾನವನ್ನು ನೀಡಿರುವ ಚಂದ್ರಶೇಖರ ಆಜಾದ್, ಸುಭಾಶ್‌ಚಂದ್ರಬೋಸ್ ಮುಂತಾದ ಅಮರರನ್ನು ಸಾಕಿದ ಹೆಮ್ಮೆಯ ನಾಡು ನಮ್ಮದು.

ಇನ್ನು ಕಲೆಯ ವಿಚಾರದಲ್ಲಿ ಮಾತನಾಡ ಹೊರಟರೆ ಸಕಲಕಲಾವಲ್ಲಭೆ ಎಂದರೂ ತಪ್ಪಾಗದು. ಸಂಗೀತ, ನಾಟ್ಯ, ವಾದನ ಮುಂತಾದ ಕಲೆಯನ್ನು ರಕ್ತಗತವಾಗಿ ಬೆಳೆಸಿಕೊಂಡ ಅನೇಕ ಕಲಾಶಿರೋಮಣಿಗಳನ್ನು ನಾವು ಕಾಣಬಹುದು. ಕಲ್ಲನ್ನು ಕರಗಿಸುವಂತಹ ಕಲೆಯು ನಮ್ಮ ಕವಿಕಾವ್ಯದಲ್ಲಿ ಕಲೆತಿದೆ. ಮನಸ್ಸಿಗೆ ನಾಟುವ ನಾಟ್ಯ, ನಾಟಕಗಳೂ ಇಲ್ಲಿ ಬೇರೂರಿದೆ. ಅನೇಕ ಕಲೆಗಳ ಬೀಡು ನಮ್ಮ ನಾಡಾಗಿದೆ.

ರಾಮನು ಆಳಿದ ರಾಮರಾಜ್ಯವು ನಮ್ಮ ದೇಶ. ಕೃಷ್ಣನು ಜನಿಸಿದ ಪುಣ್ಯದೇಶವೂ ನಮ್ಮ ದೇಶವೇ. ಬುದ್ಧನ ಉಗಮ ಸ್ಥಾನವೂ ಇದೇ ಆಗಿದೆ. ಅನೇಕ ಪುರುಷೋತ್ತಮರು ಜನಿಸಿ, ಮಡಿದ ದೇಶವೂ ಇದೇ ಆಗಿದೆ. ಈ ಪುಣ್ಯಭೂಮಿಯು ಎಲ್ಲರಿಗೂ ಆಶ್ರಯ ನೀಡುವ ಕರ್ಮಭೂಮಿಯಾಗಿದೆ.

ಸಹನಾಮೂರ್ತಿಯಾದ ನಮ್ಮ ಭಾರತಾಂಬೆಯೂ ಸ್ವತಂತ್ರಳಾಗಿದ್ದಾಳೆ. 1947ರಲ್ಲಿ ನಮ್ಮಿಂದ ಕಸಿಯಲ್ಪಟ್ಟ ನಮ್ಮ ಸ್ವಾತಂತ್ರ್ಯವು ನಮಗೆ ದೊರಕಿತು. ಅಂದು ನಮ್ಮ ನಾಡಿನ ಮರುಜನ್ಮವಾಯಿತು. ಗಣತಂತ್ರ ದೇಶವು ನಮ್ಮದಾಯಿತು. ಎಲ್ಲರಿಂದ, ಎಲ್ಲರಿಗಾಗಿ, ಎಂಬ ಶಾಂತಿಮಂತ್ರವು ನಮ್ಮದಾಯಿತು.

ಈ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ವೀರರು ಪ್ರಾಣತ್ಯಾಗವನ್ನು ಮಾಡಿದ್ದುಂಟು. ಬಾಲಗಂಗಾಧರ ತಿಲಕ್, ಲಾಲ್‌ಬಹದ್ದೂರ್ ಶಾಸ್ತ್ರಿ, ಬಿಪಿನ್ ಚಂದ್ರಪಾಲ್, ಮಂಗಲ್‌ಪಾಂಡೆ ಮುಂತಾದವರ ರಕ್ತದ ಹೊಳೆಯು ನಮ್ಮ ನೆಲದಲ್ಲಿ ಹರಿದಿದೆ. ಇಂತಹ ಅನೇಕ ಯೋಧರ ನೆತ್ತರಿನ ಫಲವೇ ನಮಗಿಂದು ದೊರೆತಿರುವ ಸ್ವಾತಂತ್ರ್ಯ. ಇಂತಹ ನಮ್ಮ ರಕ್ಷಕರನ್ನು ಸ್ಮರಿಸುವುದು ಪ್ರತಿಯೊಬ್ಬ ಭಾರತೀಯನ

ಆದ್ಯಕರ್ತವ್ಯ.

ನಮ್ಮ ದೇಶದ ಚರಿತ್ರೆಯೆಂಬುದು ಬಿಡಿಸಲಾಗದ ಕಗ್ಗಂಟಿನಂತೆ ಅಥವಾ ಅಕ್ಷಯಪಾತ್ರೆಯಂತೆ. ಎಷ್ಟು ಒಳಹೋಗಿ ಹುಡುಕಿದರೂ ನವ್ಯ ವಿಚಾರಗಳು ಗೋಚರಿಸುತ್ತದೆ. ರಾಮಾಯಣ, ಮಹಾಭಾರತ, ಶ್ರೀಮದ್ಭಗವದ್ಗೀತೆಯಂತಹ ಮಹಾಕಾವ್ಯಗಳ ತವರು ನಮ್ಮ ಭಾರತ. ಇಂತಹ ಅನೇಕ ಕೃತಿಗಳನ್ನು ತನ್ನ ಒಡಲಲ್ಲಿಟ್ಟುಕೊಂಡು ಶೋಭಿಸುತ್ತಿರುವ ಈ ಮಾತೆ ಸರ್ವಸಂಪನ್ನಳು.

'ಮಾತೃದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ' ಎಂಬ ಗುರುವಾಣಿಯನ್ನು ತನ್ನಸಕಲ ಶಿಷ್ಯವೃಂದಕ್ಕೆ ನೀಡುವ ಗುರುವೃಂದದ ಗುಡಿ ನಮ್ಮ ಭಾರತ. ಪುಣ್ಯಕೋಟಿಯು ನೆಲೆಸಿರುವ, ಅದನ್ನು ಪೂಜನೀಯ ಎಂದು ತೋರಿಸುವ ತಾಣ ಭಾರತ.

ಉಪಸಂಹಾರ:

ತ್ರಿವರ್ಣವನ್ನು ತನ್ನ ಮುಡಿಗೇರಿಸಿಕೊಂಡ ನಮ್ಮ ಭಾರತವು, ಧೈರ್ಯ, ಶಾಂತಿ ಮತ್ತು ಸಹನೆಯ ಸಂಕೇತ. ಈ ದೇಶದಲ್ಲಿ ಜನಿಸಿದ ಪ್ರತಿಯೊಬ್ಬನೂ ಭಾರತಮಾತೆಯ ಮಗನಾದ ಭಾರತೀಯನೆನಿಸಿಕೊಳ್ಳುತ್ತಾನೆ. ಇಂತಹ ಭಾರತಾಂಬೆಯ ಮಡಿಲಲ್ಲಿ ಬೆಳೆದ ನಾವು ನಿಜವಾಗಿಯೂ ಧನ್ಯರು.

ಪ್ರತಿಯೊಬ್ಬ ಮಾನವನೂ ತನ್ನ ದೇಶದ ಹಿರಿಮೆಯನ್ನು ಇನ್ನಷ್ಟು ಉತ್ತುಂಗಕ್ಕೆ ಏರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗಬೇಕು. ಆಗ ದೇಶದ ಅಭಿವೃದ್ಧಿ ಸಕಲ ಮೂಲಗಳಿಂದ ಶತಸಿದ್ಧ. ಈ ನಾಡಿನಲ್ಲಿ ಜನಿಸಿದ ಪ್ರತಿಯೊಬ್ಬನ ನಾಡಿಯಲ್ಲಿ ಹರಿಯುತ್ತಿರುವುದು ದೇಶಪ್ರೇಮದ ರಕ್ತ. ಆ ದೇಶದ ಬಗೆಗಿನ ಅಭಿಮಾನವೂ ಎಲ್ಲರ ಎದೆಯಲ್ಲಿಯೂ ಮೊಳಗಬೇಕು.

ಇಂತಹ ಪುಣ್ಯಭೂಮಿಯಲ್ಲಿ ಜನಿಸಿರುವ ನಾವು ಧನ್ಯರು ಎಂಬ ಭಾವನೆ ಎಲ್ಲರಲ್ಲಿ ಮೂಡಬೇಕು. ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಯಿಂದ ಎದೆತಟ್ಟಿ 'ನನ್ನ ಭಾರತ' ಎಂದು ನುಡಿದಾಗ ಆತನಲ್ಲಿನ ದೇಶಭಕ್ತಿಯು ಜಾಗೃತಗೊಳ್ಳುವುದಲ್ಲದೇ. ಆತನ ಮಾತನ್ನು ಆಲಿಸುವವರಲ್ಲಿಯೂ ಕೂಡ ದೇಶಭಕ್ತಿಯ ಬೀಜವು ಮೊಳಕೆಯೊಡೆದು ಹೆಮ್ಮರವಾಗಬೇಕು. ಆಗ ನಮ್ಮ ದೇಶದ ಸ್ವಾತಂತ್ರ್ಯ ನಮ್ಮ ಕರದಲ್ಲಿ ದೃಢವಾಗಿರುತ್ತದೆ.

ಇಂತಹ ಭಾರತಾಂಬೆಯ ಮಡಿಲಲ್ಲಿ ಹುಟ್ಟಿ, ಮಡಿದ, ಪ್ರಸ್ತುತ ಬದುಕುತ್ತಿರುವ, ಮುಂದೆ ಜನಿಸಲಿರುವ ಎಲ್ಲರ ಎದೆಯಲ್ಲಿ ಮಿಡಿಯುವುದು, ಪ್ರತಿಧ್ವನಿಸುತ್ತಿರುವುದು ಒಂದೇ ಮಾತು 'ನಾನು ಭಾರತೀಯ', 'ನನ್ನ ದೇಶ ಭಾರತ'.

॥ಜೈ ಹಿಂದ್॥

ಗ್ರಂಥಗಳು ನಮ್ಮ ಮಿತ್ರರು

ಗ್ರಂಥಪಾಲಕರ ದಿನದಂದು ಕಾಲೇಜು ವಿದ್ಯಾರ್ಥಿಗಳಿಗಾಗಿ ಗ್ರಂಥಾಲಯ ಮತ್ತು ಕನ್ನಡವಿಭಾಗ ಆಯೋಜಿಸಿದ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ

ಹೆಚ್.ಜಿ. ಸಹನಾ
ಪ್ರಥಮ ಬಿ.ಕಾಂ.

ಒಮ್ಮೆ ನನ್ನ ತಂದೆಯವರು ಅನಾರೋಗ್ಯಕ್ಕೆ ತುತ್ತಾದರು. ಹಾಗಾಗಿ ಅವರನ್ನು ದೂರದ ಊರಿನ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಬೇಕಾಗಿ ಬಂತು. ಅವರ ಜೊತೆ ನಾನು ಹೋಗಿದ್ದೆ. ಬಸ್ಸಿನಲ್ಲಿ ಪ್ರಯಾಣ ಮಾಡಬೇಕಾಗಿತ್ತು. ಮೊದಲೇ ನನಗೆ ಪ್ರಯಾಣ ಮಾಡುವುದೆಂದರೆ ಬೇಸರದ ಸಂಗತಿಯಾಗಿತ್ತು. ನನ್ನ ಜೊತೆ ಇರಲಿ ಎಂದು ನಾಲ್ಕೈದು ಒಳ್ಳೆಯ ಪುಸ್ತಕಗಳನ್ನು ಒಯ್ದಿದ್ದೆ. ಅದು ನನ್ನ ಬೇಸರ ನೀಗಿಸುವ ಸಾಧನವಾಯಿತು. ನನ್ನ ಊರಿನಿಂದ ನಾವು ತಲುಪುವ ಊರು ಬಂದಿದ್ದೇ ತಿಳಿಯಲಿಲ್ಲ. ಆ ಪುಸ್ತಕ ನನಗೆ ತನ್ಮಯತೆಯನ್ನು ನೀಡಿತ್ತು. ನನ್ನ ತಂದೆ ಎಚ್ಚರಿಸಿದಾಗಲೇ ತಿಳಿದಿದ್ದು ನನಗೆ, ನಾವು ತಲುಪುವ ಊರು ಬಂದಿತೆಂದು. ಬಸ್ಸಿನಲ್ಲೇ ಒಂದು ಪುಸ್ತಕ ಓದಿ ಮುಗಿಸಿದ್ದೆ. ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ತಂದೆಯವರು ಹದಿನೈದು ದಿನಗಳ ಕಾಲ ಇರುವಂತಾಯಿತು. ಅವರ ಆರೈಕೆಯ ಸಮಯ ಬಿಟ್ಟು

ಉಳಿದ ಸಮಯವು ನನಗೆ ಪುಸ್ತಕ ಓದುವುದರಲ್ಲಿ ಕಳೆಯಿತು. ಆಗಲೇ ನಾನು ಭಗವದ್ಗೀತೆಯ ಸಾರವನ್ನು ಓದಿ ತಿಳಿದಿದ್ದೆ. ಪುಸ್ತಕಗಳಿಲ್ಲದಿದ್ದರೆ ಅಲ್ಲಿ ಸಮಯ ಕಳೆಯುವುದು ಸಾಧ್ಯವಾಗುತ್ತಿರಲಿಲ್ಲ. ಆಗ ಪುಸ್ತಕಗಳೇ ಮಿತ್ರರಾದರು. ಆಗಲೇ ಗ್ರಂಥಗಳು ನಮ್ಮ ಮಿತ್ರರು ಎಂದು ಅರ್ಥವಾಗಿದ್ದು.

ಮಾನವ ಅತೀ ವಿಶ್ವಾಸಿ, ಸದಾ ಅವನ ಬಳಿ ಇದ್ದು ಉತ್ತಮ ಮಾರ್ಗದರ್ಶನ ನೀಡುವ ಸನ್ಮಿತ್ರರೆಂದರೆ ಉತ್ತಮ ಗ್ರಂಥಗಳು. ಸನ್ಮಿತ್ರರೆಂದು ಕರೆಸಿಕೊಳ್ಳುವ ಗ್ರಂಥಗಳನ್ನು ನಾವು ಗ್ರಂಥಾಲಯಗಳಲ್ಲಿ ಬೆಟ್ಟಿಯಾಗಬಹುದು. ಎಲ್ಲೋ ನಾಲ್ಕು ಜನ ಸೇರಿ ಕಾಡು ಹರಟೆ ಹೊಡೆಯುವ ಬದಲು ಗ್ರಂಥಾಲಯಗಳಲ್ಲಿ ಕುಳಿತು ನಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸುವ ಗ್ರಂಥಗಳನ್ನು ಓದುವುದು ಹೆಚ್ಚು ಪ್ರಯೋಜನಕಾರಿ ಎಂದು ನನ್ನ ಭಾವನೆ. ಎಲ್ಲ ವಿಷಯಗಳ ಮೇಲೂ ಉಪಯುಕ್ತವಾದ ಮಾಹಿತಿಯನ್ನು ನಾವು ಗ್ರಂಥಗಳಿಂದ ಪಡೆಯಬಹುದು. ಮೇಧಾವಿಗಳಿಂದ ರಚಿತವಾದ ಗ್ರಂಥಗಳು ನಮಗೆ ಅನೇಕ ವಿಷಯಗಳ ಬಗ್ಗೆ ತಿಳುವಳಿಕೆಗಳನ್ನು ನೀಡುತ್ತಿವೆ. ಸಾಮಾಜಿಕ, ಆರ್ಥಿಕ, ರಾಜಕೀಯ, ಕ್ರೀಡೆ, ಸಾಹಿತ್ಯ ಹೀಗೆ ಯಾವುದೇ ರಂಗದ ಬಗ್ಗೆ ಬೇಕಾದರೂ ಪುಸ್ತಕಗಳಿಂದ ಮಾಹಿತಿ ಸಂಗ್ರಹಿಸಬಹುದು. ಗ್ರಂಥಗಳಿಲ್ಲದ ಮನೆ ಹೃದಯವಿಲ್ಲದ ವ್ಯಕ್ತಿಯಂತೆ ಎಂದು ನನ್ನ ಭಾವನೆ. ಮೊಬೈಲ್, ಟಿ.ವಿಗಳನ್ನು ಉಪಯೋಗಿಸಿ ನಮ್ಮ ಕಾಲ ಮತ್ತು ಆರೋಗ್ಯವನ್ನು ವ್ಯರ್ಥ ಮಾಡಿಕೊಳ್ಳುವುದಕ್ಕಿಂತ ಉತ್ತಮ ಗ್ರಂಥಗಳನ್ನು ಓದುವುದು ಉತ್ತಮ ಹವ್ಯಾಸ. ಅವು ನಮ್ಮ ಮನಸ್ಸಿಗೆ ಸಂತೋಷ ನೀಡುವುದಲ್ಲದೆ, ನಮ್ಮ ಮನಸ್ಸನ್ನು ಉತ್ತಮ ಚಿಂತನೆಗೆ ಪ್ರೇರೇಪಿಸುತ್ತದೆ. ತಮ್ಮ ಬಿಡುವಿನ ವೇಳೆಯನ್ನು ಒಳ್ಳೆಯ ಗ್ರಂಥ ಓದಲು ಮೀಸಲಾಗಿಟ್ಟರೆ ಬಹುಶಃ ಯಾವ ವ್ಯಕ್ತಿಗಳೂ ಅಪರಾಧಿಗಳಾಗಲು ಸಾಧ್ಯವಿಲ್ಲವೇನೋ. ಇತ್ತೀಚಿನ ದಿನಗಳಲ್ಲಿ ಮನುಷ್ಯರು ಅರ್ಥವನ್ನು ಗಳಿಸುವುದರಲ್ಲಿ ತಮ್ಮ ಸಮಯವನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಜನರಲ್ಲಿ ಉತ್ತಮ ಆದರ್ಶಗಳು ಮರೆಯಾಗುತ್ತಿವೆ.

ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿರುವರೆಲ್ಲ ಉತ್ತಮ ಗ್ರಂಥಗಳನ್ನು ಓದಿ ತಮ್ಮ ಮನಸ್ಸಿನ ಮಲಿನಗಳನ್ನೆಲ್ಲ ಕಿತ್ತೆಸೆದಿದ್ದರೆ ಜಗತ್ತು ತುಂಬಾ ಸುಂದರ ಮತ್ತು ನಿರ್ಮಲವಾಗಿರುತ್ತಿತ್ತೇನೋ. ಹಲವಾರು ಕೆಟ್ಟ ಮಿತ್ರರನ್ನು ಹೊಂದಿ ಹಾಳಾಗುವುದಕ್ಕಿಂತ ಒಂದು ಒಳ್ಳೆಯ ಗ್ರಂಥ ಓದಿ ಮಾನವನಾಗುವುದು ಉತ್ತಮ. ಜ್ಞಾನಾರ್ಜನೆಗೆ ಗ್ರಂಥಗಳು ನೆರವಾಗಬಲ್ಲವೇ ಹೊರತು ವ್ಯರ್ಥ ಕಾಲಹರಣವಲ್ಲ.

ಒಮ್ಮೆ ನಾನು ರೈಲಿನಲ್ಲಿ ದೂರದ ಊರಿಗೆ ಪ್ರಯಾಣಿಸುತ್ತಿದ್ದೆ. ಇಬ್ಬರು ಮಕ್ಕಳು ತಮ್ಮ ತಾಯಿಯರೊಂದಿಗೆ ಪ್ರಯಾಣಿಸುತ್ತಿದ್ದರು. ರೈಲು ಹೊರಟೊಡನೆ ಒಂದು ಮಗು ಎಳೆಯರ ರಾಮಾಯಣ ಎಂಬ ಪುಸ್ತಕವನ್ನು ಓದತೊಡಗಿದಳು. ಮತ್ತೊಂದು ಮಗು ಹಾಗೇ ಸುಮ್ಮನೆ ಕುಳಿತಿತ್ತು. ಸ್ವಲ್ಪ ಸಮಯದ ನಂತರ ಆ ಮಗುವು ಗಲಾಟೆ ಶುರು ಮಾಡಿತು. ನನಗೆ ಅದು ಬೇಕು, ಇದು ಬೇಕು, ನನಗೆ ಬೇಸರವಾಗುತ್ತಿದೆ. ಏನಾದರೂ ತಿನ್ನಲು ಕೊಡು. ಹಾಗೆ ಹೀಗೆ ಎಂದು ತಾಯಿಯನ್ನು ಪೀಡಿಸುತ್ತಿತ್ತು. ಇದರಿಂದ ಪ್ರಯಾಣಿಕರಿಗೂ ಕಿರಿಕಿರಿಯಾಗತೊಡಗಿತ್ತು. ಆದರೆ ಪುಸ್ತಕ ಓದುತ್ತಿದ್ದ ಮಗು ಇದಾವುದರ ಪರಿವೆಯಿಲ್ಲದೆ ಓದುತ್ತಲೆ ಇದ್ದಳು. ನನಗೆ ಆ ಮಗುವಿನ ಬಗ್ಗೆ ಹೆಮ್ಮೆ ಎನಿಸಿತ್ತು. ಆ ತನ್ಮಯತೆಯನ್ನು ಅವಳಿಗೆ ಪುಸ್ತಕ ನೀಡಿತ್ತು.

ಬದುಕನ್ನು ಬೆಳಗಿಸಲು ಪುಸ್ತಕಗಳು ದಾರಿದೀಪ ಎಂದು ರಬೀಂದ್ರನಾಥ ಠಾಕೂರವರು ಹೇಳಿದ್ದಾರೆ. ಎಷ್ಟು ಮಾರ್ಮಿಕ ನುಡಿಯಲ್ಲವೇ? ಗ್ರಂಥಗಳೇ ಜೀವಂತ ಜಾಗೃತ ದೇವತೆಗಳು. ಅವುಗಳ ಸೇವೆ ಮಾಡಿದರೆ ವರ ಪ್ರಾಪ್ತವಾಗುವುದು ಎಂದು ಎಲ್ಲೋ ಓದಿದ ನೆನಪು ನನಗೆ. ವಿಚಾರಗಳ ಯುದ್ದದಲ್ಲಿ ಪುಸ್ತಕಗಳೆ ಅಸ್ತ್ರ ಎಂದು ಬರ್ನಾಡ್ ಷಾ ಹೇಳಿದ್ದಾರೆ. ಹೌದು ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಬಂದರೆ ಆ ವಿಚಾರದ ಬಗ್ಗೆ ಪುಸ್ತಕಗಳು ಸೃಷ್ಟಿ ಕಾರಣ ನೀಡಬಲ್ಲವು. ಆಗ ಭಿನ್ನಾಭಿಪ್ರಾಯವೂ ಮಾಯವಾಗುತ್ತದೆ.

ಹಳೆಯ ಅಂಗಿಯನ್ನೇ ಧರಿಸಿದರೂ ಒಳ್ಳೆಯ ಗ್ರಂಥಗಳನ್ನು ಕೊಂಡು ಓದಬೇಕಂತೆ. ಗ್ರಂಥಗಳ ಒಳ್ಳೆಯ ವಿಷಯಗಳೂ ನಮ್ಮ ಮನಸ್ಸನ್ನು ಸುಂದರವಾಗಿ ಇಡುತ್ತವೆ. ಪುಸ್ತಕಗಳು ಜೇಬಿನಲ್ಲಿನ ನೋಟಿನಂತೆ ಎಂದು ಅರೇಬಿಯನ್ ಗಾದೆ ಹೇಳುತ್ತದೆ.

ಪುಸ್ತಕಗಳಿಲ್ಲದೆ ಈಶ್ವರನೂ ಮೌನ. ನ್ಯಾಯ ನಿದ್ರಿಸುತ್ತದೆ. ಪ್ರಾಕೃತಿಕ ವಿಜ್ಞಾನ ಸ್ತಬ್ಧವಿರುತ್ತದೆ, ದರ್ಶನವು ಕುಂಟುತ್ತದೆ, ಶಬ್ದವು ಕಿವುಡಾಗುತ್ತದೆ. ಅಲ್ಲದೆ ಎಲ್ಲ ಪುಸ್ತಕಗಳು ಮಾನವ ಮುಂದಿನ ಪೀಳಿಗೆಗೆ ಕೊಡುವ ಒಳ್ಳೆಯ ಕಾಣಿಕೆ ಎಂದು ಎಡಿಸನ್‌ರವರು ಹೇಳಿದ್ದಾರೆ. ಬೇರೆಯವರು ಬರೆದ ಗ್ರಂಥಗಳನ್ನು ಓದಿ, ಅಭ್ಯಾಸ ಮಾಡಿ ನಮ್ಮನ್ನು ತಿದ್ದಿಕೊಳ್ಳುವುದರ ಮೂಲಕ ಸಮಯವನ್ನು ಸದುಪಯೋಗ ಮಾಡಿಕೊಳ್ಳಬಹುದಲ್ಲವೆ? ಮಾನವನ ವಿಚಾರ, ಸಾಧನೆ, ಕಾರ್ಯಸಿದ್ಧಿಗಳೆಲ್ಲಾ ಗ್ರಂಥಗಳಲ್ಲಿ ಇದ್ದವುಗಳೇ ಆಗಿವೆ.

ಒಟ್ಟಿನಲ್ಲಿ ಗ್ರಂಥಗಳೇ ನಮ್ಮ ಮಿತ್ರರು. ನಮ್ಮ ಕೆಟ್ಟ ಗುಣಗಳನ್ನು ದೂಡಿ, ಶುದ್ಧ ಮನಸ್ಸನ್ನು ನೀಡಿ, ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಿ ಜ್ಞಾನವೆಂಬ ಬೆಳಕನ್ನು ನೀಡುವ ಮಿತ್ರರೇ ಗ್ರಂಥಗಳು ಎಂದು ನಾನು ದೃಢವಾಗಿ ನಂಬಿದ್ದೇನೆ. ನಿಮ್ಮ ನಂಬಿಕೆಯೂ ಇದೇ ಎಂದು ನಂಬಿದ್ದೇನೆ. ನಿಮ್ಮ ನಂಬಿಕೆಯೂ ಇದೇ ಆಗಿರಲಿ ಎಂದು ಹಾರೈಸುತ್ತೇನೆ.

ಗ್ರಂಥಗಳು ವಿದ್ಯಾರ್ಥಿ ಮಿತ್ರರು

ಗ್ರಂಥಪಾಲಕರ ದಿನದಂದು ಕಾಲೇಜು ವಿದ್ಯಾರ್ಥಿಗಳಿಗಾಗಿ ಗ್ರಂಥಾಲಯ ಮತ್ತು ಕನ್ನಡ ವಿಭಾಗ ಆಯೋಜಿಸಿದ ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ

ಶ್ವೇತಾ ಕುಮಾರಿ
ದ್ವಿತೀಯ ಬಿ.ಕಾಂ.

ಪೀಠಿಕೆ :

ಮಾನವ ಜನ್ಮ ದೊಡ್ಡದು ಅದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ ಎಂದು ಪುರಂದರದಾಸರು ಮಾರ್ಮಿಕವಾಗಿ ಮಾನವ ಜನ್ಮದ ಶ್ರೇಷ್ಠತೆ ಕುರಿತು ಜಗತ್ತಿಗೆ ಸಾರಿರುತ್ತಾರೆ. ಈ ಚೈತನ್ಯಮಯ ಪ್ರಕೃತಿಯಲ್ಲಿ ಇತರ ಜೀವಿಗಳಂತೆ ಆಕಸ್ಮಿಕ ಹುಟ್ಟನ್ನು ಪಡೆಯುವ ಮನುಷ್ಯ ಜೀವಿ ತನ್ನ ವಿಚಾರವಂತಿಕೆ ಬುದ್ಧಿಮತ್ತೆ ಮತ್ತು ವಿಮರ್ಶಾತ್ಮಕ ಬುದ್ಧಿ ಶಕ್ತಿಯಂದ ಪ್ರಪಂಚದ ಇತರ ಜೀವಿಗಳಿಗಿಂತ ಶ್ರೇಷ್ಠತಮ ಸ್ಥಾನದಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಈ ವಿಚಾರವಂತಿಕೆ ಬುದ್ಧಿಮತ್ತೆಗಳ ಮನುಷ್ಯ ಜೀವಿಗೆ ಪ್ರಕೃತಿಯಲ್ಲಿ ವೈಶಿಷ್ಟ್ಯ ಪುರಾಣ ನೆಲೆಯನ್ನು ಕಲ್ಪಿಸಿದರೆ ಶಿಕ್ಷಣದ ಮೂಲಕ ಪಡೆದುಕೊಳ್ಳು ಜ್ಞಾನ ವ್ಯಕ್ತಿಗೆ ಅನನ್ಯವಾದ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ. ಹಾಗಾದರೆ ಈ ಜ್ಞಾನವನ್ನು ಒದಗಿಸುವ ಸಾಧನಗಳು ಯಾವುವು? ಅವುಗಳೇ ಪುರಾತನ ಕಾಲದಿಂದ ಹಿಡಿದು ಇಂದಿನ ವರೆಗೆ ಜಗತ್ತಿನಾದ್ಯಂತಹ ಶ್ರೇಷ್ಠ ಸಾಹಿತಿಗಳಿಂದ, ಲೇಖಕರಿಂದ, ಕವಿಗಳಿಂದ ರಚಿತಗೊಂಡ ಗ್ರಂಥಗಳು, ಕಾವ್ಯಗಳು ಕಾದಂಬರಿಗಳು ಇತ್ಯಾದಿಗಳೇ ಆಗಿವೆ.

ನಮ್ಮ ಇಂದಿನ ವಿಮರ್ಶೆಗೆ ತೆಗೆದುಕೊಂಡ ವಿಚಾರ ಗ್ರಂಥಗಳು ವಿದ್ಯಾರ್ಥಿಗಳಿಗೆ ಸ್ನೇಹಿತರು. ಈ ವಿಷಯವನ್ನು ವಿಮರ್ಶಿಸುವ ಮೊದಲು ವಿದ್ಯಾರ್ಥಿ ಎಂದರೆ ಯಾರು? ಎಂಬುವುದು ಮುಖ್ಯ. ಕೇವಲ ಶಾಲೆಯ ನಾಲ್ಕು ಗೋಡೆಗಳ ನಡುವೆ ಕುಳಿತು ಪಾಠ ಕೇಳುವವರು ಮಾತ್ರ ವಿದ್ಯಾರ್ಥಿಗಳಲ್ಲ. ಜಗತ್ತಿನ ಪ್ರತಿಯೊಂದು ವ್ಯಕ್ತಿ ಜ್ಞಾನದಾಹಿಯಾಗಿದ್ದಾಗ ಆತ ವಿದ್ಯಾರ್ಥಿಯೇ ಆಗಿರುತ್ತಾನೆ.

ಅಂದರೆ ಪ್ರತಿಯೊಂದು ಜ್ಞಾನಾರ್ಥಿಯೂ ಪ್ರತಿಕ್ಷಣವೂ ವಿದ್ಯಾರ್ಥಿಯಾಗಿರುತ್ತಾನೆ. ಆತನ ಜ್ಞಾನದಾಹವನ್ನು ತಣಿಸುವ ಪ್ರತಿಯೊಂದು ರಚನೆಗಳು ಆತನ ಮಿತ್ರರೇ ಆಗಿರುತ್ತವೆ. ಗ್ರಂಥಗಳು ಜ್ಞಾನ ನೀಡುವ ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಸ್ನೇಹಿತರಾದರೆ ಈ ಜ್ಞಾನಗಳು, ವಿದ್ಯಾರ್ಥಿಗಳಿಗೆ ಆಪತ್ಕಾಲದಲ್ಲಿ ಉಪಯೋಗಕ್ಕೆ ಬರುವುದರಿಂದ ಗ್ರಂಥಗಳಿಂದ ಸಿಗುವ ಜ್ಞಾನ ಆಪತ್ತಿಗೆ ಸಹಾಯ ಮಾಡುವ ಸ್ನೇಹಿತನಂತೆ ವಿದ್ಯಾರ್ಥಿಗಳಿಗೆ ಅಗತ್ಯವಿದ್ದಾಗ ಅವರ ಸಹಾಯಕ್ಕೆ ನಿಲ್ಲುತ್ತದೆ. ಇದನ್ನೇ ಆಂಗ್ಲಭಾಷೆಯಲ್ಲಿ "A friend in need is a friend indeed" ಎಂದು ಹೇಳಿರುವುದು.

ವಿದ್ಯಾಭ್ಯಾಸ ಮಾಡುತ್ತಿರುವ ಅಥವಾ ವಿದ್ಯಾಭ್ಯಾಸ ಮುಗಿಸಿರುವ ಓರ್ವ ವಿದ್ಯಾರ್ಥಿ ಸಾಮಾಜಿಕ ಬದುಕಿಗೆ ಬಂದಾಗ ಆತನಿಗೆ ಆ ಸಾಮಾಜಿಕ ವ್ಯವಸ್ಥೆಯ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಎಲ್ಲರಂತೆ. ತಾನೂ ಸಮಾಜದಲ್ಲಿ

ಗಟ್ಟಿಯಾಗಿ ನೆಲೆ ನಿಂತು ಎಲ್ಲರೂ ಗುರುತಿಸಲಾಗುವ ಗೌರವಯುತ ವ್ಯಕ್ತಿತ್ವವನ್ನು ಕಟ್ಟಿಕೊಂಡು ಜೀವನ ನಿರ್ವಹಿಸುವಲ್ಲಿ ಈ ಗ್ರಂಥಗಳು ಸಹಕಾರಿಗಳಾಗುತ್ತವೆ. ಹೀಗೆ ಸಮಾಜದಲ್ಲಿ ತನ್ನ ನೆಲೆಯನ್ನು ಕಂಡುಕೊಳ್ಳುವಲ್ಲಿ ಆತನಿಗೆ ಜ್ಞಾನ, ತಿಳುವಳಿಕೆ, ವಿಮರ್ಶಾತ್ಮಕ ಚಿಂತನೆ, ಧೈರ್ಯ, ಆತ್ಮಸ್ಥೈರ್ಯ, ವಿವೇಚನೆ, ಸಾಮಾಜಿಕ ಮೌಲ್ಯಗಳು, ಶ್ರಮವಹಿಸಿ ದುಡಿಯುವುದು, ಜವಾಬ್ದಾರಿ ನಿರ್ವಹಣೆ, ನಾಯಕತ್ವ ವಹಿಸುವುದು, ಹೊಂದಾಣಿಕೆ, ಸಾಂಸ್ಕೃತಿಕ ತಿಳುವಳಿಕೆ, ಮುಂತಾದ ಜೀವನ ಮೌಲ್ಯಗಳು ಅಗತ್ಯವಾಗಿರುತ್ತವೆ. ಈ ಎಲ್ಲಾ ಮೌಲ್ಯಗಳನ್ನು ಜಗತ್ತಿನ ಶ್ರೇಷ್ಠತಮ ಗ್ರಂಥಗಳು ಸದಾ ವಿದ್ಯಾರ್ಥಿಗಳಿಗೆ ಒದಗಿಸುವುದರಿಂದ ವಿದ್ಯಾರ್ಥಿಯೊಬ್ಬ ಸಮಾಜ ಮುಖಿಯಾಗಿ ಬೆಳೆಯುವಲ್ಲಿ ಒಬ್ಬ ಉತ್ತಮ ಮಾರ್ಗದರ್ಶಕ ಸ್ನೇಹಿತನಾಗಲು ಸಹಕರಿಸುತ್ತವೆ.

ಸನಾತನ ಭಾರತೀಯ ಸಂಸ್ಕೃತಿಯ ಪ್ರತಿರೂಪಗಳೇ ಆದ ವೇದ, ಉಪನಿಷತ್ತುಗಳು ಜ್ಞಾನದ ಕಣಜಗಳೇ ಆಗಿವೆ. ಜೀವನದ ವಿವಿಧ ಮಜಲುಗಳ ಮೇಲೆ ಸವಿಸ್ತಾರವಾದ ಬೆಳಕನ್ನು ಚೆಲ್ಲುವ ಈ ಶ್ರೇಷ್ಠಗ್ರಂಥಗಳು ವಿದ್ಯಾರ್ಥಿಗಳು ಬದುಕಿನೊಂದಿಗೆ ಹೇಗೆ ಹೊಂದಿಕೊಳ್ಳಬೇಕು. ತಮ್ಮ ವ್ಯಕ್ತಿತ್ವವನ್ನು ಹೇಗೇ ಅನನ್ಯವಾಗಿಸಿಕೊಳ್ಳಬಹುದು ಎಂಬುವುದರ ಕುರಿತು ಸ್ಪಷ್ಟ ಮಾಹಿತಿ ನೀಡುತ್ತವೆ. ಮನು ಮುನಿಯಿಂದ ರಚಿತವಾದ 'ಮನುಸ್ಮೃತಿ', ಮಾನವನ ಬದುಕಿನ ಪ್ರಾರಂಭದಿಂದ ಹಿಡಿದು ಅಂತ್ಯದವರೆಗೆ ಅಗತ್ಯವಾದ ಎಲ್ಲಾ ಅವಶ್ಯಕತೆಗಳನ್ನು ನಿರೂಪಿಸಲ್ಪಟ್ಟ ಮಹಾಭಾರತ, ರಾಮಾಯಣಗಳಿಂದ ಮನುಷ್ಯನ ಜೀವನಕ್ಕೆ ಅಥವಾ ವಿದ್ಯಾರ್ಥಿಗಳ ಜೀವನಾನುಭವಕ್ಕೆ ಬೇಕಾದ ಎಲ್ಲಾ ಜ್ಞಾನವನ್ನು ಒದಗಿಸುವಷ್ಟು ಸಮೃದ್ಧವಾಗಿವೆ.

ಒಬ್ಬ ವಿದ್ಯಾರ್ಥಿ ಕವಿಯೋ, ಸಾಹಿತಿಯೋ, ಲೇಖಕನೋ ಆಗಬೇಕೆಂದು ಬಯಸುವುದಾದರೆ ಗ್ರಂಥ ರಚನೆಯ ಕುರಿತಾದ ಮಾಹಿತಿ ಹೊಂದಿರುವ ಅನೇಕ ಗ್ರಂಥಗಳು ಉಪಲಬ್ಧವಿದ್ದು ಅವುಗಳಿಂದ ಪಡೆದ ಜ್ಞಾನದ ಮೂಲಕ ವಿದ್ಯಾರ್ಥಿಗಳು ಗ್ರಂಥಗಳನ್ನು, ಕಾವ್ಯಗಳನ್ನು ರಚಿಸಬಹುದು. ಉದಾಹರಣೆಗೆ ಕನ್ನಡದ ಮೊದಲ ವ್ಯಾಕರಣ ಗ್ರಂಥ ಶ್ರೀ ವಿಜಯನ ಕವಿರಾಜಮಾರ್ಗ, ಕೇಶಿರಾಜನ ಶಬ್ದಮಣಿದರ್ಪಣದಂತಹ ವ್ಯಾಕರಣ ಗ್ರಂಥಗಳು.

ಒಬ್ಬ ವಿದ್ಯಾರ್ಥಿ ವೈದ್ಯನಾಗಬೇಕೆಂದರೆ ವೈದ್ಯಕೀಯ ಶಾಸ್ತ್ರದ ಬಗ್ಗೆ ತಿಳುವಳಿಕೆ, ಜ್ಞಾನ ನೀಡುವ ಅದೆಷ್ಟೋ ಗ್ರಂಥಗಳು ಜಗತ್ತಿನ ವಿವಿಧ ಭಾಷೆಗಳಲ್ಲಿ ಲಭ್ಯವಿದೆ. ಚರಕಮಹರ್ಷಿಯ ಚರಕ ಸಂಹಿತೆ ಗ್ರಂಥ ಎನ್ನುವ ಆಯುರ್ವೇದ ಶಾಸ್ತ್ರದ ಕುರಿತು ಜ್ಞಾನ ನೀಡುವ ಗ್ರಂಥವನ್ನು ಇದಕ್ಕೆ ಉದಾಹರಿಸಬಹುದು.

ವಿದ್ಯಾರ್ಥಿಯೋರ್ವ ಉತ್ತಮ ಇಂಜಿನಿಯರ್ ಆಗಬಯಸಿದರೆ ಇದಕ್ಕೆ ಬೇಕಾದ ಜ್ಞಾನವನ್ನು ಕೂಡ ವಿವಿಧ ಗ್ರಂಥಗಳೇ ಒದಗಿರುತ್ತವೆ. ನಾಟ್ಯಶಾಸ್ತ್ರ ಪ್ರವೀಣನಾಗಬೇಕೆಂದರೆ ಭರತ ಮುನಿಯಿಂದ ಜಗತ್ತಿಗೆ ಪರಿಚಿತವಾದ 'ನಾಟ್ಯಶಾಸ್ತ್ರ' ಗ್ರಂಥವು ನಟನೆ, ನಟನಾಟ್ಯ, ತಾಳ, ಲಯಗಳ ಕುರಿತ ಸಂಪೂರ್ಣ ಜ್ಞಾನವನ್ನು ಒದಗಿಸುತ್ತವೆ.

ಓರ್ವ ಉತ್ತಮ ಕೃಷಿಕನಾಗಬೇಕೆಂದು ಬಯಸುವುದಾದರೆ ಭಾರತದ ಮೂಲ ಕಸುಬು ಕೃಷಿಯ ಕುರಿತು ಅಗಾಧ ಜ್ಞಾನವನ್ನು ನೀಡುವ ಗ್ರಂಥಗಳು ಲಭ್ಯವಿದೆ.

ವಿದ್ಯಾರ್ಥಿಯೋರ್ವ ಅರ್ಥಶಾಸ್ತ್ರ ಪ್ರವೀಣನಾಗಲು ಬಯಸಿದರೆ ಚಾಣಕ್ಯನ ಅರ್ಥಶಾಸ್ತ್ರ ಗ್ರಂಥ, ಪಾಣಿನಿ ಬರೆದ ಗ್ರಂಥಗಳು ಈ ವಿದ್ಯಾರ್ಥಿಗಳಿಗೆ ಜ್ಞಾನದ ರಾಶಿಯನ್ನು ತೆರೆದಿಡುತ್ತವೆ. ಓರ್ವ ವಿದ್ಯಾರ್ಥಿ ಯೋಗ ಪಟುವಾಗ ಬಯಸಿದರೇ ಪತಂಜಲಿ ಮುನಿಯಿಂದ ರಚಿತವಾದ ಯೋಗಶಾಸ್ತ್ರದ ಕುರಿತು ಗ್ರಂಥಗಳು ನೆರವಾಗುತ್ತವೆ. ಈ ಗ್ರಂಥಗಳಿಂದ ಪಡೆದ ಜ್ಞಾನ ಆಧಾರವಾಗಿ ಬಳಸಿಕೊಂಡು ತನ್ನ ವಿಚಾರಧಾರೆಗಳನ್ನು ಅರುಹಿದಾಗ ಒಬ್ಬ ಉತ್ತಮ ವಾಗ್ಮಿಯಾಗಲು ಸಾಧ್ಯ. ಒಬ್ಬ ಕ್ರೀಡಾಪಟುವಾಗಲು ಬಯಸಿದರೆ ಓರ್ವ ಜ್ಯೋತಿಷಿಯಾಗಲು ಬಯಸಿದರೆ, ಓರ್ವ ಶಿಕ್ಷಕ, ಓರ್ವ ಆರಕ್ಷಕ, ನ್ಯಾಯವಾದಿ, ನ್ಯಾಯಾಧೀಶ, ಹೀಗೆ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಿಧ ಉದ್ಯೋಗ, ವೃತ್ತಿಗಳನ್ನು ಆರಿಸಿಕೊಂಡಾಗಲೂ ಅವನಿಗೆ ಸಹಾಯಕವಾಗಿ ನಿಲ್ಲುವುದು

ಆತ ವಿವಿಧ ಗ್ರಂಥಗಳಿಂದ ಪಡೆದ ಜ್ಞಾನವೇ.

ಮಹಾಭಾರತವನ್ನು ಅಧ್ಯಯನ ಮಾಡಿದರೆ ಜಗತ್ತಿನ ಶ್ರೇಷ್ಠ ರಾಜಕಾರಣಿ ಶ್ರೀ ಕೃಷ್ಣನ ಮಾರ್ಗದರ್ಶಕ ಮಾಹಿತಿಗಳು ಒಬ್ಬ ರಾಜಕಾರಣಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹಾಯವಾಗುತ್ತವೆ. ಓರ್ವ ಪುರೋಹಿತನಿಗೆ ವೇದ ಉಪನಿಷತ್ತುಗಳು ಜ್ಞಾನವನ್ನು ನೀಡಿದರೆ ಓರ್ವ ಅಡುಗೆ ಭಟ್ಟನಾಗುವವನಿಗೂ ಪಾಕಶಾಸ್ತ್ರದ ಗ್ರಂಥಗಳು ಮಾಹಿತಿಯನ್ನು ಒದಗಿಸುತ್ತವೆ.

ಹನ್ನೆರಡನೆ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಕ್ರಾಂತಿಕಾರಕ ಸಾಮಾಜಿಕ ಬದಲಾವಣೆಗೆ ಕಾರಣೀಭೂತವಾದ ವಚನ ಸಾಹಿತ್ಯವು ಓರ್ವ ಉತ್ತಮ ಸಾಮಾಜಿಕ ಕಾರ್ಯಕರ್ತನಾಗುವವನಿಗೆ ಸಾಮಾಜಿಕ ಅನ್ಯಾಯಗಳು, ಮೇಲ್ವರ್ಗದವರ ಶೋಷಣೆ, ಕೆಳವರ್ಗದವರ ಶೋಚನೀಯ ಬದುಕಿನ ಬವಣೆಗಳು, ಅವುಗಳ ವಿರುದ್ಧ ಹೋರಾಟ ಸಂಘಟಿಸುವಲ್ಲಿ ಬೇಕಾದ ಮಾರ್ಗದರ್ಶನವನ್ನು ಒದಗಿಸುತ್ತವೆ. ಹಾಗೇ ದಲಿತ ಬಂಡಾಯ ಸಾಹಿತ್ಯಗಳೂ ಈ ಕುರಿತು ಅಗತ್ಯ ಮಾಹಿತಿಗಳನ್ನು ಒದಗಿಸುತ್ತವೆ.

ಉಪಸಂಹಾರ:

ಒಟ್ಟಾರೆಯಾಗಿ ಪ್ರಾಚೀನಕಾಲದ ವೇದ, ಉಪನಿಷತ್ತುಗಳು, ರಾಮಾಯಣ ಮಹಾಭಾರತದಂತಹ ಗ್ರಂಥಗಳು, ಹಳೆಗನ್ನಡದ ಗ್ರಂಥಗಳು, ನಡುಗನ್ನಡ, ಹೊಸಗನ್ನಡ, ನವ್ಯ, ನವೋದಯ, ವಚನ ಸಾಹಿತ್ಯ, ದಲಿತ ಬಂಡಾಯ, ಸಾಹಿತ್ಯಗಳಲ್ಲದೆ ಇಂದಿನ ಪ್ರಸ್ತುತ ಕಾಲದಲ್ಲಿ ರಚನೆಗೊಳ್ಳುತ್ತಿರುವ ವಿವಿಧ ಗ್ರಂಥಗಳಲ್ಲಿ ಅಡಕವಾಗಿರುವ ಜ್ಞಾನಗಳು ವಿದ್ಯಾರ್ಥಿಗಳ ಆತ್ಮಸ್ಥೈರ್ಯವನ್ನು ಹೆಚ್ಚಿಸಿ ಅವರು ಒಂದು ಪ್ರಬುದ್ಧ ವ್ಯಕ್ತಿತ್ವವನ್ನು ಕಟ್ಟಿಕೊಂಡು ಸಾಮಾಜಿಕ ಬದುಕಿನೊಂದಿಗೆ ಹೊಂದಿಕೊಂಡು ಸಾಗುವಲ್ಲಿ ನೆರವಾಗುವುದರೊಂದಿಗೆ ವಿದ್ಯಾರ್ಥಿಗಳಿಗೆ ಸ್ನೇಹಿತರಾಗಿ ನಿಲ್ಲುತ್ತವೆ. ಅಲ್ಲದೆ ವಿರಾಮಕಾಲದಲ್ಲಿ ಪುಸ್ತಕಗಳು ಉತ್ತಮ ಸ್ನೇಹಿತರಾಗಿ ನಿಮ್ಮೊಂದಿಗೆ ಉಳಿದುಕೊಳ್ಳುತ್ತವೆ.

ಬಹುಭಾಷಾ ಕರ್ನಾಟಕ

ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಲೇಖನ

ಗಣೇಶ
ದ್ವಿತೀಯ ಬಿ.ಎಸ್ಸಿ.

ಯಾವುದೇ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಗುರುತಿಸುವುದು ಅವನು ಆಡುವ ಭಾಷೆಯ ಮೂಲಕ. ಅವನ ಪರಿಚಯ ಯಾರಿಗೂ ಇರದಿದ್ದರೂ ಅವನು ಯಾವ ಪ್ರದೇಶದಿಂದ ಬಂದಿರಬಹುದು ಎನ್ನುವುದು ಅವನ ಭಾಷೆಯಿಂದ ತಿಳಿಯುತ್ತದೆ.

ಬಹುಭಾಷಾ ಕರ್ನಾಟಕ ಶೀರ್ಷಿಕೆಯೇ ಸೂಚಿಸುವಂತೆ ನಮ್ಮ ಕರ್ನಾಟಕ ರಾಜ್ಯ ಹಲವಾರು ಭಾಷೆಗಳನ್ನು ಮೈತುಂಬಿಸಿಕೊಂಡು ಸಮೃದ್ಧವಾಗಿದೆ ಎಂದು ತಿಳಿಯಬಹುದು. ನಮಗೆಲ್ಲಾ ಈ ಶೀರ್ಷಿಕೆಯನ್ನು ನೋಡಿದ ಕೂಡಲೇ ಹಲವಾರು ಆಲೋಚನೆಗಳು ಮನಸ್ಸಿಗೆ ಬರುತ್ತದೆ. ಯಾಕೆ ಎಲ್ಲರೂ ಒಂದೇ ಭಾಷೆಯನ್ನು ಬಳಸುತ್ತಿಲ್ಲ. ನಮ್ಮೆಲ್ಲ ವ್ಯವಹಾರಗಳಿಗೆ, ದಿನಂಪ್ರತಿ ಕೆಲಸಗಳಿಗೆ ಬೇರೆ ಬೇರೆ ಭಾಷೆಗಳ ಅವಶ್ಯಕತೆ ಇದೆಯೇ ಒಂದೇ ಭಾಷೆ ಸಾಕಾಗುವುದಿಲ್ಲವೆ? ಹಾಗೆಯೇ ಓ.ಎಲ್. ನಾಗಭೂಷಣಸ್ವಾಮಿ ಅವರು ಹೇಳಿರುವಂತಹ ಒಂದೇ ಭಾಷೆ ಸಾಲದೆ?

ನಮ್ಮ ರಾಜ್ಯವಾದ ಕರ್ನಾಟಕವೂ ಹಲವಾರು ಭಾಷೆಗಳಿಂದ ಕೂಡಿದೆ. ಇಲ್ಲಿ ಕನ್ನಡ, ಇಂಗ್ಲೀಷ್, ತುಳು, ತಮಿಳು, ಮಲೆಯಾಳಂ ಉರ್ದು ಹೀಗೆ ಹೇಳುತ್ತಾ ಹೋದರೆ ಸುಮಾರು 7000 ದಷ್ಟು ಭಾಷೆಯನ್ನು ಮಾತನಾಡುವ ಜನರು ಈ ಜಗತ್ತು ಮತ್ತು ಪ್ರಪಂಚದಲ್ಲಿದ್ದಾರೆ.

ಕರ್ನಾಟಕದ ರಾಜ್ಯ ಭಾಷೆ "ಕನ್ನಡ"ವಾಗಿದ್ದು ಈ ಭಾಷೆ ಮೂಲತಃ ದ್ರಾವಿಡ ಭಾಷೆಯಾಗಿದೆ. ಹಾಗೆಯೇ ಜಗತ್ತಿನಲ್ಲಿ ಇದು ಒಂದು ಉತ್ತಮ ಭಾಷೆಯಾಗಿ ಹೊರಹೊಮ್ಮಿದೆ.

ಜಗತ್ತಿನಲ್ಲಿ ಸುಮಾರು 7.4 ಕೋಟಿ ಜನ ಕನ್ನಡ ಭಾಷೆ ಮಾತನಾಡುವವರಿದ್ದಾರೆ. ಅದರಲ್ಲಿ 5.5 ಕೋಟಿ ಜನ ಕನ್ನಡವನ್ನು ಮಾತೃಭಾಷೆಯನ್ನಾಗಿಸಿಕೊಂಡಿದ್ದಾರೆ ಎಂದು ಹೇಳಲು ಹೆಮ್ಮೆಯಾಗುತ್ತಿದೆ.

ಕನ್ನಡ ಭಾಷೆ ಅಲ್ಲದೆ ಇನ್ನೂ ಹಲವಾರು ಭಾಷೆಗಳನ್ನು ಕರ್ನಾಟಕದ ಜನರು ಆಡುವುದರಿಂದ ಅವರು ಕರ್ನಾಟಕದ ಯಾವ ಭಾಗದಿಂದ ಬಂದಿದ್ದಾರೆ ಎಂದು ನಾವು ತಿಳಿಯಬಹುದು. ಕೆಲವೊಂದು ರಾಜ್ಯಗಳಲ್ಲಿ ಏಕಭಾಷೆ ಮಾತ್ರ ಇದ್ದರೆ ಕರ್ನಾಟಕ ಎಲ್ಲಾ ಭಾಷೆಗಳನ್ನು ಮೈತುಂಬಿಸಿಕೊಂಡಿದೆ. ಗೋವಾದಲ್ಲಿ ಕೊಂಕಣಿ, ತಮಿಳುನಾಡಿನಲ್ಲಿ ತಮಿಳು. ಹೀಗೆ ಅಲ್ಲಿಯ ಜನ ಕೇವಲ ಒಂದು ಭಾಷೆಗೆ ಮಾತ್ರ ಪ್ರಾಶಸ್ತ್ಯ ನೀಡುತ್ತಿದ್ದಾರೆ. ಆದರೆ ನಮ್ಮ ಕರ್ನಾಟಕವನ್ನು ಭಾರತ ದೇಶಕ್ಕೆ ಹೋಲಿಸಬಹುದು. ಏಕೆಂದರೆ ಭಾರತ ಹೇಗೆ ಎಲ್ಲಾ ಜಾತಿ, ಮತ ಧರ್ಮದವರಿಂದ ಕೂಡಿದೆಯೋ ಕರ್ನಾಟಕವೂ ಕೂಡಾ ಹಾಗೆಯೇ ಹಾಗಿದೆ.

ಕರ್ನಾಟಕದ ಜನರು ಅವರವರ ಪ್ರದೇಶದ ವ್ಯವಹಾರಗಳಿಗೆ ಅನುಗುಣವಾಗಿ ಒಂದೊಂದು ಭಾಷೆಯನ್ನು ಬಳಸುತ್ತಿದ್ದಾರೆ. ಒಂದು ಪ್ರದೇಶದ ಭಾಷೆ ಆ ಪ್ರದೇಶದ ಜನರ ಮೂಲಭೂತ ಹಾಗೂ ಸಾಮಾಜಿಕ ಚಟುವಟಿಕೆ ಹಾಗೂ ಲಕ್ಷಣಗಳನ್ನ ಬಿಂಬಿಸುತ್ತದೆ ಎಂದು ಎಡ್ವರ್ಡ್ ಸಪಿರ್‌ರವರು ಹೇಳಿದ್ದಾರೆ.

ನಮ್ಮ ನಾಡಿನಲ್ಲಿ ಹಲವಾರು ಭಾಷೆಗಳಿವೆ ಎನ್ನುವುದು ನಮಗೆಲ್ಲ ತಿಳಿದಿರುವ ವಿಷಯ. "ಆಡುಮುಟ್ಟದ ಸೊಪ್ಪಿಲ್ಲ" ಎನ್ನುವಂತೆ ನಮ್ಮ ನಾಡಿನಲ್ಲಿ ಬಳಸದ ಭಾಷೆ ಇಲ್ಲ ಎಂದೇ ನನ್ನ ಅಭಿಪ್ರಾಯ.

ನಾವು ಆಲೋಚಿಸಿದರೆ ಇಷ್ಟೊಂದು ಸಾವಿರಾರು ಭಾಷೆಗಳ ಅಗತ್ಯವಿದೆಯೇ? ನಮಗೆಲ್ಲ ಒಂದೇ ಭಾಷೆ ಇದ್ದಿದ್ದರೆ ಎಷ್ಟೊಂದು ಸಂತೋಷವಾಗುತ್ತಿತ್ತು. ಎಲ್ಲರೊಂದಿಗೂ ನಾವು ನಿರ್ಭಯವಾಗಿ ಮಾತನಾಡಬಹುದಿತ್ತು ಅಲ್ಲವೇ? ತುಂಬಾ ಜನರು ಕೆಲಸಕ್ಕೆಂದು ಬೇರೆ ಕಡೆ ಹೋದರೆ ಅಲ್ಲಿನ ಭಾಷೆ ಬರದೆ ಅವರು ಕುಸಿಯುತ್ತಾರೆ, ಮೂಕರಾಗಿ ಬಿಡುತ್ತಾರೆ. ಅವರು ಯಾರ ಜೊತೆಯೂ ಬೆರೆಯುವುದಿಲ್ಲ. ಪ್ರತಿಯೊಂದು ಭಾಷೆಯೂ ಒಂದೊಂದು ಸಮುದಾಯದ ಲಕ್ಷಣ, ಸಂಸ್ಕೃತಿಯನ್ನು ತಿಳಿಸುತ್ತದೆ ನಿಜ. ಆದರೆ ಎಲ್ಲಾ ಪ್ರದೇಶದಲ್ಲಿಯೂ ಒಂದೇ ಭಾಷೆ ಇದ್ದಿದ್ದರೆ ಎಲ್ಲರಿಗೂ ಒಳ್ಳೆಯದಾಗಿರುತ್ತಿತ್ತು ಅಲ್ಲವೇ? ಎನ್ನುವುದು ಕೆಲವು ಜನರ ಅಭಿಪ್ರಾಯವಾದರೆ,

ಪ್ರತಿಯೊಂದು ಭಾಷೆಯೂ ಒಂದೊಂದು ಸಮುದಾಯದ ಅವರ ಪ್ರದೇಶದ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತದೆ. ಹಾಗಾಗಿ ಯಾವುದೇ ಒಂದು ಭಾಷೆ ನಶಿಸಿಹೋದರೂ ಒಂದು ಸಮುದಾಯದ ಸಂಸ್ಕೃತಿ. ಜನಜೀವನ ನಾಶವಾದಂತೆ ಎನ್ನುವುದು ಕೆಲ ಜನರ ನಿರ್ಧಾರವಾಗಿದೆ.

ಎಲ್ಲಾ ಭಾಷೆಯೂ ಅಗತ್ಯ ಹಾಗೆಯೇ ಎಲ್ಲಾ ಭಾಷೆಯನ್ನು ಪೋಷಿಸಬೇಕು. ಕೇವಲ ಇಂಗ್ಲೀಷ್‌ನಂತಹ ವಿದೇಶಿ ಭಾಷೆಗಳಿಗೆ ಜನರು ಮಾರುಹೋಗಿ ತಮ್ಮ ಪ್ರಾದೇಶಿಕ ಭಾಷೆಯನ್ನು ಮರೆಯಬಾರದು. ಎಲ್ಲಾ ಭಾಷೆಗೂ ಅದರದ್ದೇ ಆದ ಹಿನ್ನೆಲೆ, ಮಹತ್ವ, ಪ್ರಾಶಸ್ತ್ಯ ಇದೆ. ಅದು ಒಂದು ಚರಿತ್ರೆಯನ್ನು ಎತ್ತಿ ಹಿಡಿಯುತ್ತದೆ. ಆ ಭಾಷೆಯಲ್ಲಿಯೂ ಅನೇಕ ಗ್ರಂಥಗಳು, ಕಥೆ, ಕಾದಂಬರಿಗಳು ಪ್ರಕಟವಗಿರುತ್ತವೆ.

ಕರ್ನಾಟಕದ ಮಾತೃಭಾಷೆ ಕನ್ನಡ. ಬೇರೆ ರಾಜ್ಯದಂತೆಯೇ ನಮ್ಮ ರಾಜ್ಯ ಕೂಡ ಕನ್ನಡ ಭಾಷೆಗೆ ಮಾತ್ರ ಸೀಮಿತವಾಗಿದ್ದರೆ ಕರ್ನಾಟಕವನ್ನು ಬಹುಭಾಷಾ ಕರ್ನಾಟಕ ಎಂದು ಯಾರು ಗುರುತಿಸುತ್ತಿರಲಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ನಮ್ಮ ಕನ್ನಡ ಭಾಷೆಯನ್ನು ಉಳಿಸಲು ಕನ್ನಡ ಮಾಧ್ಯಮದ ಶಾಲೆಗಳು ಗಟ್ಟಿಯಾಗಬೇಕು. ಈಗ ಎಲ್ಲ ಇಂಗ್ಲೀಷ್ ಮಾಧ್ಯಮಕ್ಕೆ ಮಾರು ಹೋಗಿದ್ದಾರೆ. ಇಂಗ್ಲೀಷ್ ಭಾಷೆ ಬಳಸಬಾರದು ಎಂದು ಹೇಳುತ್ತಿಲ್ಲ. ಎಲ್ಲಾ ಭಾಷೆಗೂ ಒಂದು ಗೌರವ ಇದೆ ಅದನ್ನು ನಾವು ನೀಡಲೇ ಬೇಕು. ಆದರೆ ಇಂಗ್ಲೀಷ್‌ನ್ನು ಒಂದು ಭಾಷೆಯನ್ನಾಗಿ ಬಳಸುವುದಕ್ಕಿಂತ ಅದನ್ನು ಒಂದು ವಿಷಯವಾಗಿ ಮಕ್ಕಳಿಗೆ ಕಲಿಸಬೇಕು ಉಳಿದೆಲ್ಲಾ ವಿಷಯವನ್ನು ಕನ್ನಡ ಹಾಗೆಯೇ ಆಯಾ ಪ್ರದೇಶದ ಭಾಷೆಯಲ್ಲಿ ಮಕ್ಕಳು ಅಭ್ಯಾಸ ಮಾಡುವಂತೆ

ಆಗಬೇಕು ಎಂದು ಹಾ.ಮಾ.ನಾಯಕರವರು ಹೇಳಿದ್ದಾರೆ.

ಇಂದಿನ ವಿದ್ಯಾರ್ಥಿಗಳು ಅವರ ಪ್ರದೇಶದ ಭಾಷೆಯನ್ನೇ ತಿಳಿಯದೆ ಇಂಗ್ಲೀಷನ್ನು ಮಾತ್ರ ಕಲಿತರೆ ಅವರು ತಾಯಿ ನೆಲದ ಭಾಷೆ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವುದು ಯಾವಾಗ? ಅವರಿಗೆ ತಮ್ಮ ನೆಲದ ಭಾಷೆಯ ಮಹತ್ವ ತಿಳಿಯುವುದು ಯಾವಾಗ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಸ್ಪೋಟಕ ಸುದ್ದಿ

ಹಾಸ್ಯಬರಹ ಸ್ಪರ್ಧೆಯಲ್ಲಿ ಮೊದಲಬಹುಮಾನ ಪಡೆದ ಬರಹ

ದರ್ಶನ್ ಶೆಟ್ಟಿ
ದ್ವಿತೀಯ ಬಿ.ಎಸ್ಸಿ.

ವಾರ್ತೆಯನ್ನು ಶುರು ಮಾಡುವ ಮೊದ್ಲಿಗೆ ಎಲ್ಲರತ್ರ ಕೇಂಬುದು ಒಂದೆ. ಇದು ಹಾಸ್ಯಕ್ಕೆ ಹೊರತು ಇನ್ನೊಬ್ಬರನ್ನು ನಿಂದಿಸುವ ವಿಚಾರವಾಗಿ ಅಲ್ದೆ. ಹಾಂಗೂ ಮಾತಂಗೆ ಎಂತಾರು ಬೇಜಾರಾದ್ರೆ ಚೀಂಟಿ ಹೊಟ್ಟೆಗೆ ಹ್ಯಾಕಣಿ.

ಏ ರಾಮ, ಈಗಳಿನ್ ಪೇಪರ್ ಅಲ್ಲಿ ಬಪ್ಪುದ್ ವಿಷಯ ಒಂದಾ, ಎರಡಾ.... ಟಿವಿಗಳಲ್ಲಿ ವಾರ್ತೆಯಲ್ಲಿ ಬಪ್ಪುದೂ ಹಾಂಗೆ ನಂಬುವಂತಹ ಅಸಾಧ್ಯ ನಿಗೂಢ ರಹಸ್ಯಗಳು.

ವಾರ್ತೆಗಳು ಓದುತ್ತಿರುವವರು ಮೊಂಕಪ್ಪಣ್ಣ. ಇವ ಇಡೀ ಹೊತ್ತು ಮೊಂಕ್ ಹೊಡೆದು ಬಿದ್ದಿರ್ತ. ಮುಖ್ಯಾಂಶಗಳು. ಆರೋಗ್ಯ ಮಂತ್ರಿಗಳು ದೇಶದ ಎಲ್ಲಾ ನೀರ್ ನಾಯಿಗಳಿಗೆ ಪೋಲಿಯೋ ಡ್ರೋಪ್ಸ್ ನೀಡಬೇಕೆಂದು ತಿಳಿಸಿದ್ದಾರೆ.

ಲಾರಿಯ ಟೈಯರ್ ಅಡಿಯಲ್ಲಿ ಬಿದ್ದು ಸತ್ತವರಿಗೆ ನಮ್ಮ ಮೀನ್ಸೀ ಗೋಪು ಅಣ್ಣನವರು, ತಲಾ ಹತ್ತು ಸಾವಿರ ರೂಪಾಯಿಗಳನ್ನು ಸತ್ತವರ ಕೈಯಲ್ಲಿಯೇ ಕೊಡುತ್ತೇನೆಂದು ಸ್ನಾನ ಮಾಡುವಾಗ ವೀಡಿಯೋ ಕಾಲಲ್ಲಿ ತಿಳಿಸಿರುತ್ತಾರೆ.

ನಮ್ಮ ದೇಶದಲ್ಲಿ ಆಡಳಿತವು ಸರಿ ಇಲ್ಲ ಎಂದಂತಹ ವಿರೋಧ ಪಕ್ಷ ನಾಯಕರು ಮೊನ್ನೆ ಮಿಣ್ಣಕ್ಕಿಂದ ಪಾಕಿಸ್ಥಾನಕ್ಕೆ ಹೋಗಿ ನಾಲ್ಕು ಗರ್ನಲ್ ಅನ್ನು ಧರ್ಮಕ್ಕೆ ಕೊಟ್ಟು ಬಂದಿರುತ್ತಾರೆ. ನಿಜವಾಗಿ ಹೇಳಬೇಕೆಂದರೆ ನಮ್ಮ ದೇಶದಲ್ಲಿ ಈಗಿನ ಆಡಳಿತದ ಬಗ್ಗೆ ಮಾತನಾಡಲು ಅವರು ಅರ್ಹರಲ್ಲ ಎಂದು ಇನ್ನೊಬ್ಬ ವಿರೋಧಿ ಪಕ್ಷ ನಾಯಕರು ತಿಳಿಸಿದ್ದಾರೆ.

ಮೊನ್ನೆ ಮಲ್ಪೆಯಲ್ಲಿ ಪೋಲೀಸರು ಬೀಸಿದ ಬಲೆಗೆ ನಾಲ್ಕು ಬಂಗ್ಡಿ ಮೀನುಗಳು ಸಿಕ್ಕಿದವು ಎಂದು ತಿಳಿದ ತಕ್ಷಣ ಆರಕ್ಷಕ ಠಾಣೆಗೆ ಕರೆಮಾಡಿ ಒಂದ್ ಕೇಜಿ ಬಂಗ್ಡೆ ಪಾರ್ಸೆಲ್ ಎಂದೆ. ಕೆಪ್ಪೆ ಮೇಲೆ ಬಿಡ್ತೆ ಭಾಷಿಬರ್ದಿದ್ದವ್ನೆ ಎಂದರು. ಆ ಮೇಲೆ ಗೊತ್ತಾಗಿದ್ದು ಪೋಲಿಸರು ಬೀಸಿದ ಬಲೆ ಕಳ್ಳರಿಗೆ.

ಬಾಯಿ ಬರದವ್ನಿಗೆ ಮೂಕ ಎನ್ನುತ್ತಾರೆ, ಕೆಮಿ ಕೇಳ್ದಿದ್ದವ್ನಿಗೆ ಏನು ಹೇಳಬೇಕು ಎಂದು ನಮ್ಮ ಸುಭಾಸಣ್ಣ ಕೇಳಿದರು. ವಾರ್ತಾ ವಿರಾಮದ ನಂತರ ತಿಳಿಸುತ್ತೇವೆ.

ಈಗ ಎಡ್ವರ್ಡ್ ಟೈಸ್‌ಮೆಂಟು ಇದೊಂದು ದೊಡ್ಡ ಎಡ್ವಟ್ ಮರ್ರೆ. ಮಂಡಿ ಕೂದ್ಲ್ ಇಲ್ಲಿದ್ದರಿಗೆ ಒಂದು ಎಣ್ಣೆ ಹಾಕಿದಾಗ ಕೂದ್ಲ್ ಬತ್ತ್ ಅಂಬ್ರ್, ಎಂತ ಮಂಡಿಗೆ ಚುಮ್ಮಿ ಎಣ್ಣೆ ಹಾಕುದಾ...

ಮುಖ ಬೆಳಿ ಆಯ್ತಾ?

ಭಾಷೆ ಇಲ್ದವ್ರೆ ಬ್ಯಾಡ್ದ್ದ್, ಬೇಕಾದ್ ಮಣ್ಣ್ ಮಷಿ ಕ್ರೀಮ್ ಎಲ್ಲ ಹಾಕ್ಬೇಡಿ, ಬೆಳಿಗ್ಗೆ ಬೇಗ ಎದ್ದು ಭಾರತಿಯ ಸಂಸ್ಕೃತಿಯನ್ನು ಬಿಂಬಿಸುವ ಸೀರೆ ಉಟ್ಟುಕೊಂಡು ತೊಳಸಿಕಟ್ಟೆ ಹತ್ರ ಬನ್ನಿ, ಕಡಿಕೆ ನಮ್ಮ ಗೋಮಾತೆಯ ಅಂದ್ರೆ ದನಿದ್ ಸಗಣಿ ಉದ್ಗಣಿ ಮುಖಕ್ಕೆ, ಬೇಗ ನಿಮ್ಮ ಮುಖದ ಕಾಂತಿ ಹೆಚ್ಚುತ್ತದೆ.

ನಿರೂಪಕ– ಈಗ ಮತ್ತೊಮ್ಮೆ ಸ್ಪೋರ್ಟ್ಸ್ ಸುದ್ದಿಗೆ ಸ್ವಾಗತ

ನಿರೂಪಕಿ– ಸ್ವಾಗತ ಅಲ್ಲ ಮಗ ಭೂಗತ

ನಿರೂಪಕ –ಯಾಕಾ?

ನಿರೂಪಕಿ– ದೇಶದ ಗಡಿಯಂಗೆ ಬೆಂಕಿ ಬಿದ್ದಿತ್ ಅದನ್

ತೋರ್ಸಿಮರ್ರೆ ನಿಮ್ದೆಂತಾ ಸಾವ್, ಬರೀ ಸುಳ್ಳು ಸುಳ್ಳೆ ತೋರ್ಸ್‌ಬೇಡಿ.

ದೇಶದ ಗಡಿಯಂಗೆ ಬೆಂಕಿ ಬಿದ್ದಿದೆ. ಏ ಮರಾಯ ಗೆದ್ದಿಗೆ ಸುಡ್ಮಣ್ ಹಾಕದ್ದೇನೋ, ಅದ್ರದ್ ಹೋಗಿ ಹೋತಿತ್ತ್. ಬೊಂಬ್ ಬಿದ್ದಿದ್ದು. ಆ: ಹೌದಾ

ಏ ರಾಮ. ಈ ದೇಶದಲ್ಲಿ ಒಂದ್ ಕಾಟ್ ರಾಜಕಾರ್ಣಿ ಸತ್ರೆ ರಜೆ ಕೊಡ್ತ್ರ್, ಪಿಚ್ಚರ್ ಆಕ್ಟ್ರು ಸತ್ರೆ ರಜೆ ಕೊಡ್ತ್ರ್, ನಮ್ಮ ದೇಶದ ಗಡಿಯಂಗೆ, ಊಟ ತಿಂಡಿ ಬಿಟ್ಟ್, ಸಂಪೂರ್ಣ ಮನಿಯರ್ ಸಂಪರ್ಕ ಬಿಟ್ಟ್ ರಾತ್ರಿ ಹಗ್ಲ್ ಕಾಯ್ತಿರ್ತ್ ಕಾಣಿ ವೀರ ಸೈನಿಕರು, ನಲವತ್ತ ಮೂರು ಸೈನಿಕರು ಸತ್ತಾಗ ಒಂದ್ ಒಪ್ಪತ್ತು ಶಾಲಿ ಮಕ್ಕಳಿಗೆ ರಜಿ ಕೊಡ್ಲಿಲ್ಯಲೆ ದೇವ್ರೆ. ಇದು ನಮ್ಮ ಪರಿಸ್ಥಿತಿ ಹೋಯಿ. ಬೇಜಾರ್ ಮಾಡ್ಕಬೇಡಿ. ಹಾಸ್ಯ ಆದ್ರೂ ಒಳ್ಗಿಂದ ವಿಷಯ ಆಳವಾಗಿತ್ತ್, ಮಹಾನ್ ನಾಯಕನ್ನ ತೆಗಿಕೆ ಕಾಂತಿಂದ್ ಹಂದಿಗಳೆ, ಹಾಂಗಾತಿಲ್ಲ, ದೇಶದ ಜನ್ರ್ ಗಂಜಿ ಬೇಸ್ತೆ ಇಲ್ಲ ಎಂದು ದುಗುಮಕ್ಕಿ ಶಂಭು ಇವರು ತಿಳಿಸಿದ್ದಾರೆ.

ತಾಯಿಯೇ ದೇವ್ರ್ ಅಂತ್ರಿ ಮರ್ರೆ, ಮತ್ತೆ ಮನಿಗ್ ಹೋರ್‌ಗತಿಗೆ ಬಯ್ಯುಕ್ ಶುರು ಮಾಡ್ರೆ, ಹೆತ್ತ್ ತಾಯಿಗ್ ಬೆಲಿಯೇ ಕೊಡುದಿಲ್ಲ ಈಗಿನ ಮಕ್ಳು ಎಂದು ದಾರಿಮಕ್ಕಿ ಜಲ್ಜಕ್ಕ ತಿಳಿಸಿದ್ದಾರೆ. ಆದರೂ ತಾಯಿಗೆ, ತಂದೆಗೆ ಗೌರವವನ್ನು ಕೊಡುವುದು ಮಕ್ಕಳ ಕರ್ತವ್ಯ.

ಈಗಿನ್ ಮಕ್ಕಳ್, ಎರ್ಡ್ ಮೂರ್ ತಿಂಗ್ಳಿಂದ ವಾಟ್ಸಾಪ್, ಫೇಸ್ಬುಕಲ್ಲೋ ಯಾವನೋ, ಯಾವಳೋ ಸಿಕ್ಕಿದಳ್ ಅಂದೇಳಿ, ಸತತ ಹದಿನೆಂಟ್ ಇಪ್ಪತ್ತ್ ವರ್ಷದಿಂದ ಕಷ್ಟ ಪಟ್ಟ್, ಹೊಟ್ಟೆ ಬಾಯಿ ಕಟ್ಟಿ ಸಾಕಿದ ಅಮ್ಮ, ಅಪ್ಪನ್ ಬಿಟ್ಟ್ ರಾತ್ರೋ ರಾತ್ರಿ ಅವರನ್ನು ಕಟ್ಟ್‌ಕಂಡ್ ಓಡಿ ಹೋತೊ. ಅವ್ ಓಡಿ ಹೋತ್ವೋ, ಬಸ್ಸಿಗ್ ಹೋತ್ವೋ ಗೊತ್ತಿಲ್ಲ. ಆದ್ರೆ ಈ ಅಮಾಯಕ ತಂದೆ ತಾಯಿಯರಿಗೆ ಜೀವನದಲ್ಲಿ ಸುಖ ಇಲ್ಯೆ ಹಾಂಗೆ ಮಾಡುಕಾಗ್ದೆ.

ನೋಟ ಬದಲಿಸಿ

ವಿದ್ಯಾಭಾರತಿ ಕೆ.ಪಿ.
ಪ್ರಥಮ ಬಿ.ಎಸ್ಸಿ.

ನೋಟ ಬದಲಿಸಿ, ಯಾಕೆ ನಾನು ಹೀಗೆ ಹೇಳಿದ್ದು ಅಂದರೆ, ಪ್ರತಿಯೊಬ್ಬ ಮನುಷ್ಯನು ಒಂದೇ ರೀತಿ ಯೋಚನೆ ಮಾಡುತ್ತಿದ್ದಾನೆ. ಈ ಯಾವುದೊಂದು ಕವಿ ಅಂದರೆ ತಪ್ಪಾಗುತ್ತೆ, ಎಲ್ಲಾ ಕವಿ, ಲೇಖಕರು ತಮ್ಮ ಬರಹದಲ್ಲಿ ಮನುಷ್ಯನು ಒಬ್ಬನೆ ಸ್ವಾರ್ಥಿ ಮತ್ತೆ ಎಲ್ಲಾ ಪ್ರಾಣಿಗಳು, ಪಕ್ಷಿಗಳು, ಮುಖ್ಯವಾಗಿ ಮರಗಳು ನಿಸ್ವಾರ್ಥಿಗಳು. ಅದನ್ನು ಓದಿದ ಓದುಗರು ಸಹ ಅದೇ ಸರಿ ಅಂತ ಇತರರಿಗೂ ಹೇಳುತ್ತಾರೆ.

ಯಾಕೆ ಯಾರು ಬೇರೆ ದಿಕ್ಕಿನಲ್ಲಿ ಯೋಚಿಸುವುದಿಲ್ಲ. ಮನುಷ್ಯ ಸ್ವಾರ್ಥಿ ಅಲ್ಲ ಅಂತ ಹೇಳುತ್ತಿಲ್ಲ. ಬೇರೆ ಪ್ರಾಣಿಗಳೆಲ್ಲ ನಿಸ್ವಾರ್ಥಿಗಳಲ್ಲ. ಸಿಂಹ, ಹುಲಿ ತಮ್ಮ ಉಳಿವಿಗಾಗಿ ಬೇರೆ ಪ್ರಾಣಿಗಳನ್ನು ಕೊಂದು ತಿನ್ನುತ್ತೆ ಅವುಗಳೇನು ನಾನು ನಿಸ್ವಾರ್ಥಿ ನಾನು ಸತ್ರು ಪರವಾಗಿಲ್ಲ ಜಿಂಕೆ, ಇತರ ನನಗೆ ಆಹಾರ ಆಗುವ ಪ್ರಾಣಿಗಳಾದ್ರು ಉಳಿಲಿ ಅಂತ ಬಿಡ್ತಾವ. ನಮ್ಮ ಕನ್ನಡ ಶಿಕ್ಷಕಿ ಪ್ರಜ್ಞಾ ಮೇಡಮ್ ಒಂದು ಕಥೆ ಹೇಳಿದ್ರು. ಪೂರ್ಣಚಂದ್ರ ತೇಜಸ್ವಿಯವರದ್ದು ಒಂದು ಹಾವು ತನ್ನ ಹಸಿವು ನೀಗಿಸಿಕೊಳ್ಳಲಿಕ್ಕೆ ಕಪ್ಪೆ ತಿನ್ನುತ್ತೆ. ಅದಕ್ಕೆ ಹೊಟ್ಟೆ ಭಾರ ಆಗಿ ಹರಿಲಿಕ್ಕೆ ಆಗಲ್ಲ. ಆಗ ಅದು ಪಕ್ಷಿಗೆ ಆಹಾರ ಆಗೋ ಸಂದರ್ಭ. ಆಗ ಅದೇ ಹಾವು ಕಪ್ಪೆಯನ್ನು ತನ್ನ ಜೀವ ಉಳಿಸಿಕೊಳ್ಳಲಿಕ್ಕೆ ಉಗುಳುತ್ತೆ. ಇದು ಆಹಾರಕ್ಕೆ ಆಗಿ ನಡೆದ ಯುದ್ಧ. ಆದರೆ ನಮ್ಮ ನೋಟದ ಪ್ರಕಾರ ಹಾವಿನ ಸ್ವಾರ್ಥ.

ಮುಖ್ಯವಾಗಿ ಮರ, ಮರಗಳು ನಮಗೆ ಯಾವ ಸ್ವಾರ್ಥ ಇಲ್ಲದೆ ನೆರಳು, ಆಮ್ಲಜನಕ, ಹಣ್ಣುಹಂಪಲು ಎಲ್ಲ ನೀಡುತ್ತೆ. ಪಕ್ಷಿಗಳಿಗೆ ಗೂಡುಕಟ್ಟಲು ಜಾಗ ಕೊಡುತ್ತೆ. ಮನುಷ್ಯನ ತರ ಜಾತಿ ಇಲ್ಲ. ಎಲ್ಲರನ್ನೂ ಸಮನಾಗಿ ಕಾಣುತ್ತೆ. ಬಳ್ಳಿ ಹಬ್ಬಲು ಬಿಡುತ್ತೆ, ಸಾಮಾನ್ಯವಾಗಿ ಎಲ್ಲರೂ ಯೋಚನೆ ಮಾಡೋದು ಹೀಗೆ.

ಆದರೆ ಮರಕ್ಕೆ ಮಾತು ಬರಲ್ಲ, ನಡಿಯೋಕು ಆಗಲ್ಲ. ಅದಕ್ಕೆ ಮರಗಳಿಗೆ ಇದು ಅನಿವಾರ್ಯ. ಮರಗಳಿಗೆ ಮಾತು, ನಡಿಯೋಕೆ ಬಂದಿದ್ದರೆ ಹಕ್ಕಿಗೂಡು ಕಟ್ಟೋಕೆ, ನಾವು ನೆರಳಿಗಾಗಿ ಬಂದಿದ್ದರೇ ಓಡಿಸುತ್ತಿತ್ತೇನೋ ಯಾರಿಗೆ ಗೊತ್ತು. ಈಗಲೂ ಅದು ಮನಸ್ಸಿನಲ್ಲಿ ಎಷ್ಟು ಬೈದುಕೊಂಡು ನಮಗೆ ಇಷ್ಟೆಲ್ಲ ಕಷ್ಟ ಕೊಡುತ್ತಿದೆಯಾ ಯಾರಿಗೆ ಗೊತ್ತು ಎನ್ನಬಹುದು.

ಮರಗಳು ಆಮ್ಲಜನಕವನ್ನು ನಿಸ್ವಾರ್ಥದಿಂದ ಹೊರಬಿಡುವುದಕ್ಕೆ ನಾವೆಲ್ಲ ಬದುಕುತ್ತಿದ್ದೇವೆ. ಇದನ್ನೆ ನಾನು ಹೇಳುವುದಾದರೆ ಅದರ ಸ್ವಾರ್ಥ ಯಾಕೆಂದರೆ ಆಮ್ಲಜನಕ ಅದು ಹಿಡಿದು ಇಟ್ಟುಕೊಂಡರೆ ಅದರ ಸಾವಾಗುತ್ತೆ. ಬೇರೆ ವಿಧಿ ಇಲ್ಲದೇ ಹೊರಹಾಕುತ್ತಿದೆ.

ಆಮ್ಲಜನಕವನ್ನು ಹೊರಹಾಕುವ ಪ್ರಕ್ರಿಯೆ ಮರಗಳ ನಿಸ್ವಾರ್ಥ. ಆದರೆ ಮನುಷ್ಯ ಬಿಡುವ ಇಂಗಾಲದ ಡೈಆಕ್ಸೈಡ್ ಕೂಡ ಮರಕ್ಕೆ ಉಪಯೋಗ. ಇದು?

ನನ್ನ ಪ್ರಕಾರ ಎಲ್ಲರೂ ಸ್ವಾರ್ಥಿಗಳೆ. ಅವರವರ ಅವಶ್ಯಕತೆಗಳು ಬಂದರೆ ಎಲ್ಲರೂ ಸ್ವಾರ್ಥಿಗಳೆ. ಮನುಷ್ಯ ಮಾತ್ರವಲ್ಲ.

ಈ ಭೂಮಂಡಲದಲ್ಲಿ ಮೊದಲಿನಿಂದಲೂ ಯಾವ ಪ್ರಾಣಿ ಶಕ್ತಿಯುಳ್ಳದ್ದೋ, ಬುದ್ದಿವಂತಿಕೆಯದ್ದು ಅದು ಮಾತ್ರ ಬದುಕಲು ಅರ್ಹವಾದದ್ದು.

ಎವರೆಸ್ಟ್ ಏರಿದ ಅಂಗವಿಕಲೆ

ಪೂಜಾ
ಪ್ರಥಮ ಬಿ.ಎಸ್ಸಿ.

ಅರುನಿಮಾ ಸಿನ್ಹಾ:

ಸಿನ್ಹಾ ಉತ್ತರಪ್ರದೇಶದ ಅಂಬೇಡ್ಕರ್ ನಗರದ ನಿವಾಸಿ. ರಾಷ್ಟ್ರಮಟ್ಟದ ವಾಲಿಬಾಲ್ ಆಟಗಾರ್ತಿ. 2011ರ ಎಪ್ರಿಲ್ 12 ರಂದು ಲಖನೌನಿಂದ ದಿಲ್ಲಿಗೆ ಪದ್ಮಾವತಿ ಎಕ್ಸ್ ಪ್ರೆಸ್‌ನಲ್ಲಿ ಪ್ರಯಾಣಿಸುವಾಗ, ದುಷ್ಕರ್ಮಿಗಳು ದಾಳಿ ಮಾಡಿದರು. ಈಕೆ ಧರಿಸಿದ್ದ ಸರ ಅಪಹರಿಸಲು ಯತ್ನಿಸಿದರು. ತೀವ್ರ ಪ್ರತಿರೋಧ ತೋರಿದಾಗ, ಅವರು ಈಕೆಯನ್ನು ಬೋಗಿಯಿಂದ ಹೊರಕ್ಕೆಸೆದರು. ಆಗ ಮತ್ತೊಂದು ರೈಲಿಗೆ ಡಿಕ್ಕಿ ಹೊಡೆದು ಕಂಬಿಗಳ ಮೇಲೆ ಉರುಳಿ ಬಿದ್ದಳು. ಪಕ್ಕೆಲುಬು ಹಾಗೂ ಕಾಲುಗಳು ಮುರಿದವು. ಜೀವ ಉಳಿಸುವುದಕ್ಕಾಗಿ ವೈದ್ಯರು ಆಕೆಯ ಎಡಗಾಲನ್ನು ಕತ್ತರಿಸಲೇಬೇಕಾಯ್ತು. ಇದ್ದಕ್ಕಿದ್ದಂತೆ ಎರಗಿದ ಈ ಆಕಸ್ಮಿಕ ದುರ್ಘಟನೆಯಿಂದ ಆಕೆಯ ಜಂಘಾಬಲವೇ ಉಡುಗಿ ಹೋಯಿತು. ಮೆಚ್ಚುಗೆ ಕಣ್ಣೋಟಗಳು ಕರಗಿ, ಅಲ್ಲಿ ಅನುಕಂಪ ಜಿನುಗುತ್ತಿತ್ತು. ಚಿಂತೆ ಹೆಪ್ಪುಗಟ್ಟಿತ್ತು. ಇದು ಸಿನ್ಹಾಳಲ್ಲಿ ತೀವ್ರ ಕಸಿವಿಸಿ ತಂದಿತು.

ಧೃತಿಗೆಡದ ಸಿನ್ಹಾ ಅವಳಲ್ಲಿ ಏನಾದರೊಂದು ಸಾಧನೆ ಮಾಡಬೇಕು, ಅಂಗವಿಕಲತೆ ಸಾಧನೆಗೆ ಅಡ್ಡಿಯಾಗಬಾರದು. ತಾನೊಂದು ಮಾದರಿ ವ್ಯಕ್ತಿಯಾಗಬೇಕೆಂಬ ಹೆಬ್ಬಯಕೆ ಸದಾ ತುಡಿಯುತ್ತಿತ್ತು. ಇದಕ್ಕಾಗಿ 2 ವರ್ಷ ಜೆಮ್‌ಷೆಡ್ ಪುರದಲ್ಲಿರುವ ಟಾಟಾ ಸಾಹಸ ಅಕಡೆಮಿಯಲ್ಲಿ ಮೌಂಟ್ ಎವರೆಸ್ಟ್ ಏರಿದ ದೇಶದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಬಚೇಂದ್ರಿ ಪಾಲ್ ಅವರಲ್ಲಿ ತರಬೇತಿ ಪಡೆದ ಅರುನಿಮಾ ಸಿನ್ಹಾ ಟಾಟಾ ಗ್ರೂಪ್‌ನ ಇಕೊ ಎವರೆಸ್ಟ್ ಎಕ್ಸ್‌ಪಿಡಿಷನ್ ತಂಡದ ಸದಸ್ಯರಾಗಿ ಪರ್ವತಾರೋಹಣದಲ್ಲಿ ಭಾಗವಹಿಸಿದರು. ಎತ್ತರದ ಗುರಿ ಆದರೆ ಅದನ್ನು ಹೇಗಾದರೂ ಸರಿ ಮುಟ್ಟಲೇ ಬೇಕು ಎನ್ನುವ ಛಲ. ಆದರೆ ಇರುವುದು ಒಂದೇ ಕಾಲು. ಮತ್ತೊಂದು ಕೃತಕ ಕಾಲಿನಲ್ಲಿ ಸೋರುತ್ತಿರುವ ರಕ್ತ ಹಾದಿಯುದ್ದಕ್ಕೂ ಸಾಹಸ ಮಾಡಲು ಹೋಗಿ ಅಸುನೀಗಿದವರ ಹೆಣದರ್ಶನ, ಹಿಂದಕ್ಕೆ ಎಳೆಯುತ್ತಿದ್ದ ಚೈತನ್ಯ, ಮುಂದಕ್ಕೆ ಹೋಗಲೇಬೇಕು ಎನ್ನುವ ಅದಮ್ಯ ಹಂಬಲ. ಇಂತಹ ಭಾವಗಳ ಅಲೆಯಲ್ಲಿ ಕೊನೆಗು ಜಗತ್ತಿನ ನೆತ್ತಿ ಏರಿನಿಂತಾಗ ಮಗುವೊಂದು ಅಮ್ಮನ ಮಡಿಲು ಸೇರಿದ ಮಹಾ ಸಂತೃಪ್ತಿ.

52ನೇ ದಿನದಲ್ಲಿ 26 ಗಂಟೆಗಳ ಕಾಲ ನಿರಂತರ ನಡೆದು

ಮೇಲಕ್ಕೆ ನೋಡಿದಾಗ ಉತ್ತುಂಗ ಶಿಖರ ಕೈಬೀಸಿ ಕರೆಯುವಂತಿತ್ತು. ಬೇಗನೆ ಓಡಿ ಹೋಗಿ ಆ ಸ್ಥಳವನ್ನು ಮುಟ್ಟುವ ಹಂಬಲ. ಆದರೆ ಅತಿಯಾದ ಆಯಾಸದಿಂದ ಹಾಗೆ ಮಾಡಲಾಗಲಿಲ್ಲ. ಮೆಲ್ಲನೆ ಹೆಜ್ಜೆ ಹಾಕಿ ಕೊನೆಗೂ ತನ್ನ ಗುರಿ ತಲುಪಿದರು. ಭಾರತದ ತ್ರಿವರ್ಣ ಧ್ವಜ ಹಿಡಿದು ಮೇರಾ ಭಾರತ್ ಮಹಾನ್ ಎಂದು ಕೂಗಿ ಸಂಭ್ರಮಿಸಿದರು. ತನ್ನನ್ನು ರೈಲಿನಿಂದ ಹೊರಕ್ಕೆಸೆದವರಿಗೆ ಆ ಧ್ವನಿ ಕೇಳಲಿ ಎಂಬುದು ಅದರ ಉದ್ದೇಶವಾಗಿತ್ತು. ಮಂಜಿನ ಉತ್ತುಂಗ ಶಿಖರದ ಮೇಲೆ ವಿವಿಧ ರಾಷ್ಟ್ರಗಳ ಧ್ವಜಗಳ ಅಲಂಕಾರವಿದ್ದಿತ್ತು. ಅಲ್ಲಿ ಭಾರತದ ತ್ರಿವರ್ಣ ಧ್ವಜವೂ ರಾರಾಜಿಸುವಂತೆ ಮಾಡಿದರು. ಮೌಂಟ್ ಎವರೆಸ್ಟ್ ಏರುವಾಗ ಎಷ್ಟು ಕಷ್ಟವಾಗಿತ್ತೋ ಅಷ್ಟೇ ಕಷ್ಟ ಇಳಿಯುವಾಗಲೂ ಆಯಿತು. ಕೃತಕ ಕಾಲನ್ನು ಜೋಡಿಸಿದ ಜಾಗದಲ್ಲಿ ರಕ್ತ ಸುರಿಯುವುದು ನಿಂತಿರಲಿಲ್ಲ. ಎತ್ತರದ ಶಿಖರವನ್ನು ಹತ್ತಿದ ನಂತರ ನನಗೆ ಸಂತೃಪ್ತಿಯ ಭಾವ. ಆಗ ನೆನಪಾಗಿದ್ದು ರೈಲಿನಿಂದ ನನ್ನನ್ನು ಹೊರಕ್ಕೆ ಎಸೆದಿದ್ದ ಆ ದುಷ್ಕರ್ಮಿಗಳ ಮುಖ. ತಾನು ಅನುಭವಿಸಿದ ಕಷ್ಟ ಭವಿಷ್ಯದಲ್ಲಿ ಜಗತ್ತಿನ ಯಾವುದೇ ಹೆಣ್ಣು ಮಕ್ಕಳಿಗೆ ಬಾರದಿರಲಿ ಎಂಬುದೇ ಅವರ ಆಶಯ.

ಕರುನಾಡ ಕಾಫಿ

ಸಿಂಚನ ಆರ್ ಬಾಯರ್
ಪ್ರಥಮ ಬಿ.ಎಸ್ಸಿ.

ಕಾಫಿ ಎಂಬ ಎರಡಕ್ಷರದ ಸ್ವಾದವನ್ನು ನಾವು ಬರಿಯ ಬರೆವಣಿಗೆಯಲ್ಲಿ ಹೇಳಲು ಅಸಾಧ್ಯ. ಬಾಯಿ ಮಾತಿನಲ್ಲಿ ಹೇಳುತ್ತಾ ಹೋದರೆ ಒಂದು ಗ್ರಂಥವನ್ನೇ ರಚಿಸಬಹುದೇನೋ??

ಹೆಂಗಸರ ಬೆಳಗು ಶುರುವಾಗುವುದೇ ಆ ದಿನದ ಕಾಫಿಯ ಪುಡಿಗೆ ಬಿಸಿನೀರು ಕಾಯಿಸಿ ಪಿಲ್ಟರ್ಗೆ ಹಾಕುವ ಮೂಲಕ. ಹೆಂಗಸರು ಮನೆ ಬಾಗಿಲನ್ನು ಸಾರಿಸಿ ರಂಗೋಲಿ ಹಾಕುವುದು ಮರೆತರೂ ಸಹ, ಬೆಳಗಿನ ಕಾಫಿ ಮರೆಯಲು ಅಸಾಧ್ಯ. ಕಾಫಿ ಎಂದಾಕ್ಷಣ ನೆನಪಾಗುವುದೇ ಮಲೆನಾಡಿನ ಕಾಫಿ ತೋಟಗಳು. ಮಲೆನಾಡಿನಲ್ಲಿ ಪ್ರತಿಯೊಂದು ಮನೆಯಲ್ಲಿನ ಗಂಡಸರ, ಹಿರಿಯರ, ಮಕ್ಕಳ ಮುಖ ಅರಳುವುದು ಈ ಕಾಫಿಯಿಂದಲೇ ಎನ್ನಬಹುದು. ಅಲ್ಲದೆ ಮೋಸ್ಟ್ ಹೈಲೆಟೆಡ್ ಪಾಯಂಟ್ ಅಂದ್ರೆ ನಾವು ಕೊಟ್ಟ ಕಾಫಿಯಲ್ಲಿ 'ಡಿಕಾಕ್ಷನ್ ಹೆಚ್ಚು', 'ಸಕ್ಕರೆ ಕಮ್ಮಿ' 'ಹಾಲು ಕಮ್ಮಿ,' ಸ್ವಲ್ಪ ಸ್ಟ್ರಾಂಗ್ ಆಯ್ತು' ಎಂಬ ಉಪಮೇಯಗಳೇ ಜಾಸ್ತಿ.

ಟಿ.ವಿ.ಯಲ್ಲಿ ಬರುವಂತೆ ತಾಜಾಭರಿತ ಕಾಫಿ ಕೊಟ್ಟ ಹೆಂಡತಿಯನ್ನು ಏನು ಅಟ್ಟದಮೇಲೆ ಕೂರಿಸುವುದಿಲ್ಲ ಬಿಡಿ.

ನಮ್ಮ ಮಲೆನಾಡ ಕಾಫಿಯಲ್ಲಿ ಎಂಥ ಬಿನ್ನ ಬಿನ್ನ ರುಚಿಯ ಕಾಫಿಗಳಿವೆ ಎನ್ನುವುದು ಅಚ್ಚ ಮಲೆನಾಡಿಗರಿಗೆ ಮಾತ್ರ ಗೊತ್ತಿರುವ ಸತ್ಯ ಎಂದರೆ ತಪ್ಪಾಗದು.

ಮಳೆಗಾಲದಲ್ಲಿ ಪಟಪಟನೆ ಬೀಳುವ ಮಳೆಯ ಹನಿಯ ಜೊತೆಗೆ ಸ್ಟ್ರಾಂಗ್ ಆದ ಬಿಸಿ ಬಿಸಿ ಕಾಫಿ ಹೀರುವ ಮಜವೋ ಮಜ. ಜೊತೆಗೆ ಬಿಸಿ ಬಿಸಿ ಪಕೋಡ ಇರಬೇಕು. ಮಳೆಗಾಲದಲ್ಲಿ ಆಗಾಗ್ಗೆ ಗುಟುಕರಿಸುತ್ತಲೇ ಇರುವ ಎಮ್ಮೆ ಹಾಲು ಮಿಶ್ರಿತ ಗಟ್ಟಿ ಕಾಫಿ, ಹಸು ಹಾಲಿನ ಸಾದಾ ಕಾಫಿ, ಬೆಲ್ಲ ಹಾಕಿ ಮಾಡಿದ ಬೆಲ್ಲದ ಕಾಫಿ, ಇನ್‌ಸ್ಟೆಂಟ್ ಕಾಫಿ ಪುಡಿ ಹಾಕಿ ಮಾಡಿದ ಇನ್‌ಸ್ಟೆಂಟ್ ಕಾಫಿ, ಸಕ್ಕರೆಯೊಂದಿಗೆ ಬೆರೆಸಿದ ಕಪ್ಪು ಕಾಫಿ, ಬರೇ ಕಾಫಿ ಪುಡಿ ಹಾಕಿ ಮಾಡಿದ ಡೈರೆಕ್ಟ್ ಕಾಫಿ ಒಂದ...ಎರಡಾ..ಹಾಲು ಹೇರಳವಾಗಿದ್ದರೆ ಒಂದು ಬಗೆಯ ಕಾಫಿ, ಹಾಲು ಕಮ್ಮಿಯಿದ್ದಾಗ ಇನ್ನೊಂದು ಬಗೆಯ ಕಾಫಿ,ಇನ್ನು ಮನೆಯೊಡತಿಯ ಮೂಡ್ ಮೇಲೆ ಅವಲಂಬಿತವಾಗಿ ತಯಾರಾಗುವ ಚೆಂದದ ಕಾಫಿ, ಚೆಂದವಿಲ್ಲದ ಕಾಫಿ ಹೀಗೆ ನೂರೆಂಟ ಬಗೆಯ ಕಾಫಿಗಳುಂಟು.

ಇಷ್ಟೇ ಅಲ್ಲದೇ ಆಯಾ ಮನೆಯಲ್ಲಿ ಪರಂಪರೆಯಿಂದ ನಡೆದುಕೊಂಡು ಬಂದಂತಹ ಬಗೆಯ ಕಾಫಿ ವಿಧಾನಗಳಿವೆ. ಇಷ್ಟೆ ಅಲ್ಲದೆ, ಇನ್ನು ಕಾಫಿಯ ವೆರೈಟಿಗಳನ್ನು ಹೇಳುವುದಾದರೆ ಹೋಟೆಲ್‌ನಲ್ಲಿ ಗಾಜಿನ ಲೋಟದಲ್ಲಿ ತುಂಬಿ ಚೆಲ್ಲುವಂತೆ ಕೊಡುವ ಗ್ಲಾಸ್‌ಕಾಫಿ, ಇನ್ನು ಕೆಲವೆಡೆ ಲೋಟ ಹಾಗೂ ಬಟ್ಟಲ ಆಕಾರದ ಸಾಸರ್ ಸಮೇತದಲ್ಲಿನ ಒಂದು ಬಗೆಯ ಕಾಫಿ, ಇತ್ತೀಚೆಗೆ ಪರಿಚಯಗೊಂಡ ಪೇಪರ್ ಕಪ್ ಕಾಫಿಯೂ

ಒಂದು ಎನ್ನಬಹುದು.

ಹೀಗೆ ಪಟ್ಟಿ ಮಾಡುತ್ತಾ ಹೋದರೆ ಒಂದು ಕಪ್ ಕಾಫಿ ಎಷ್ಟೆಲ್ಲಾ ರೂಪು ಹೊಂದಿದೆ ಎಂದು ಅಚ್ಚರಿಯನ್ನುಂಟು ಮಾಡುವುದು.

ಇನ್ನು ಕಾಫಿ ಕಂಡರೆ ಓಡಿ ಹೋಗುವ ಮಂದಿಯ ಬಗ್ಗೆ ಹೇಳಲೇಬೇಕಾದ ವಿಷಯ. ಎಲ್ಲರೂ ತಿಳಿದಂತೆ ಕೊಡಗು ಒಂದು ಶೀತದ ಪ್ರದೇಶವಾಗಿದ್ದು, ಅಲ್ಲಿ ಕಾಫಿ ಒಂದು ಪ್ರಮುಖ ಪೇಯ ಎಂದರೆ ತಪ್ಪಾಗದು. ಸಾದಾರಣವಾಗಿ ಬೆಂಗಳೂರು ಮತ್ತು ಮೈಸೂರು ಜನರು, ಕೊಡಗಿನ ಮಂದಿ ನಿಮಿಷಕ್ಕೊಮ್ಮೆ ಕಾಫಿ ಸೇವಿಸುವುದನ್ನು ಕಂಡು ಮದ್ಯಪಾನ ಕುಡಿಯುವ ರೀತಿಯಲ್ಲಿನ ತಪ್ಪು ಭಾವನೆಯನ್ನು ವ್ಯಕ್ತಪಡಿಸುವರು. ಇನ್ನು ಮಲೆನಾಡಿನ ಮಂದಿಗಂತೂ ತೋಟದ ಗದ್ದೆಯ ಕೆಲಸ ಮುಗಿಸಿ ಬಂದು ಕಾಫಿ ಕುಡಿಯುವುದು ಒಂದು ಚಟವೇ ಎನ್ನಬಹುದು. ವಯಸ್ಸಾದವರಂತೂ ಮನೆಯಲ್ಲಿ ಇದ್ದರೆ ಗಳಿಗೆಗೊಮ್ಮೆ ಒಂದು ಲೋಟ ಕಾಫಿ ಸಿಗುತ್ತಾ? ಎಂದು ಪದೇ ಪದೇ ಅಡುಗೆ ಮನೆಯತ್ತ ಕಣ್ಣು ಹಾಯಿಸುವುದು ಸಹಜ. ಇನ್ನು ಕಾಫಿ ಮಾಡಿಕೊಡುವವರ ಪಾಡೋ ದೇವರೇ ಗತಿ ಎನ್ನುವಂತಾಗುವುದು, ಅಲ್ಲದೆ ಕಾಫಿ ಕೊಟ್ಟ ಮನೆಯಾಕೆಯ ಸಹಸ್ರನಾಮ ಸರ್ವೇಸಾಮಾನ್ಯ. ಅದಕ್ಕಾಗಿ ಕಾಫಿಯನ್ನು ಹಿಡಿದಿಟ್ಟುಕೊಳ್ಳುವ ಪ್ಲಾಸ್ಕ್‌ಗಳು ಎಲ್ಲರ ಮನೆಯಲ್ಲೂ ಇರುತ್ತದೆ.

ಯಾರೇ ಮನೆಗೆ ಬಂದರೂ, ಅವರ ಮಾತು ಪ್ರಾರಂಭವಾಗುವುದೇ ಒಂದು ಕಪ್ ಕಾಫಿಯಿಂದಲೇ...ಮನೆಯಾಕೆಯ ಪರಿಚಯವಾಗುವುದೇ ಆ ಒಂದು ಕಪ್ ಕಾಫಿಯಿಂದಲೇ ಎಂದರೂ ತಪ್ಪಾಗದು.

ಇನ್ನು ಕಾಫಿ ಮಾಡುವವರು ಒಂದೆಡೆಯಾದರೆ, ಕಾಫಿ ಮಾಡಲುಬಾರದವರು ಇನ್ನೊಂದೆಡೆ. ಅದೊಂದು ಕಾಫಿನಾ? ಕಾಫಿ ಮಾಡೋಕು ಬರಲ್ಲ. ಅವಳೊಬ್ಬಳು ಹೆಂಗಸಾ? ಎಂದು ಕಾಫಿ ಮಾಡಲು ಬಾರದಿರುವವರ ಬಗ್ಗೆ ಹಿಯಾಳಿಸುವವರು ಹಲವಾರು ಮಂದಿ.

ಕಾಫಿ ಕಂಡರೆ ಮಾರು ದೂರು ಓಡುವವರೂ ಇದ್ದಾರೆ. ಇಂಥವರಿಗೆ ಕೊಡಗು, ಮಲೆನಾಡ ಪ್ರದೇಶಕ್ಕೆ ಕರೆದೊಯ್ದರೆ ಬಂದು ಅನ್ಯಗ್ರಹಕ್ಕೆ ಹೋದಂತೆ ವರ್ತಿಸುತ್ತಾರೆ. ಅಲ್ಲಿನ ಮನೆಗಳಿಗೆ ಹೋದರೆ ಅವರ ಮಾತು ಶುರುವಾಗುವುದೇ ಒಂದು ಕಪ್ ಕಾಫಿ ಕೊಡುವ ಮೂಲಕವೇ ಎನ್ನಬಹುದು. ಕಾಫಿ ಕುಡಿಯದವರಿಗೆ ಇದು ನರಕ ಎನ್ನಿಸಬಹುದು. ಕಾಫಿ ಬೇಡ ಎಂದರೆ, ಯಾಕೆ ಎನ್ನುವ ಪ್ರಶ್ನೆ. ಟೀ, ಹಾಲು ಬೂಸ್ಟ್ ಕುಡಿಯುತ್ತೀರಾ ಎಂದು ಬೇರೆ ಬಾಯಾರಿಕೆಯ ಪ್ರಶ್ನೆ ಒಡ್ಡುವರು.

ಇನ್ನು ಕಾಫಿ ಕುಡಿಯುವ ಸಮಯ. ಕೆಲವರಿಗೆ ಕಣ್ ಬಿಟ್ಟ ತಕ್ಷಣ, ಇನ್ನು ಕೆಲವರಿಗೆ ಎಚ್ಚರ ಆದಕೂಡಲೇ ಹಾಸಿಗೆಯ ಮೇಲೆ (ಬೆಡ್‌ಕಾಫಿ) ಕೆಲವರಿಗೆ ಬ್ರಶ್ ಆದ ಮೇಲೆ, ತಿಂಡಿ ತಿನ್ನುವಾಗ, ತಿಂಡಿಯ ನಂತರ ಕಾಫಿ ಕುಡಿಯಬೇಕು. ಇನ್ನು ಕೆಲವರಿಗೆ ಬೆಳಿಗ್ಗೆ ಎದ್ದಲ್ಲಿಂದ ರಾತ್ರಿ ಅಡುಗೆಮನೆ ದೀಪ ಆರುವವರೆಗೂ ಕಾಫಿ ಸೇವನೆ ಆಗಾಗ ಮಾಡಬೇಕು.

ಕೆಲವರಿಗೆ ತುಂಬಾ ಚಳಿಯಾದಾಗ, ವಿಪರೀತ ತಲೆನೋವಾದಾಗ, ಬೇಸರವಾದಾಗ, ಸಂತೋಷವಾದಾಗ... ಎಲ್ಲಾ ಸಮಯವೂ ಕಾಫಿಗೆ ಪ್ರಶಸ್ತಿ. ಕೆಲವರಿಗೆ ಕಾಫಿ ಚಟವಾದರೆ, ಕೆಲವರಿಗೆ ಅಗತ್ಯ, ಇನ್ನು ಒಂದಿಷ್ಟು ಜನರಿಗೆ ಕಾಫಿ ಬೇಕಂತಲೇ ಇಲ್ಲ. ಮೈಸೂರಿನ ಪ್ರದೇಶದಲ್ಲಿ ಕಾಫಿಯು ಒಂದು ಪೇಯ ಎಂದು ಗುರುತಿಸುವುದಿಲ್ಲ. ಅಲ್ಲದೆ ಅಲ್ಲಿ ಹೋದ ಮಂದಿಯ ಸ್ಥಿತಿ ಬಾಲಸುಟ್ಟ ಬೆಕ್ಕಿನಂತೆ ಆಗುವುದು. ಇನ್ನು ನಮ್ಮ ಕೊಡಗಿನವರಿಗೆ ಆರು ಗಂಟೆಗೆ ಕಾಫಿ ಕುಡಿದು ಆಗಬೇಕು, ಆದರೆ ಬೆಳಿಗ್ಗೆ ಹತ್ತಾದರೂ ಕೊಡಲ್ಲ. ಹಾಗಂತ ಇವರು ಅಡುಗೆ ಮನೆಯತ್ತ ನೋಡುವುದನ್ನು ಬಿಡೊಲ್ಲ ಅನ್ನುವ ಹಾಗಾಗುತ್ತದೆ. ಮೈಸೂರಿನಲ್ಲಿಯೂ ಕಾಫಿ ಪ್ರೇಮಿಗಳಿದ್ದು, ಮಲೆನಾಡಿಗರಷ್ಟು ಪ್ರೇಮ ಇರಲು ಸಾಧ್ಯವಿಲ್ಲ.

ಇನ್ನು ಕೆಲ ಮಕ್ಕಳಿಗೋ ಕಾಫಿಯೆಂದರೆ ಪಂಚಪ್ರಾಣ. ಮಕ್ಕಳು ಕುಡಿಯುವ ಕಾಫಿಯು ಹಲವು ವಸ್ತುಗಳ ಮೇಲೆ ಬಿದ್ದು ಕಾಫಿಯ ಕಲೆಗಳಾಗುತ್ತದೆ. ಟೀ–ಶರ್ಟ್, ಬೆಡ್‌ಶೀಟ್ ಮೇಲಿನ ಈ ಕಾಫಿಯ ಆಳವಾದ ಕಲೆಯು ಹೋಗದೆ

ಗಟ್ಟಿಯಾಗಿ ಉಳಿಯುವುದು.

ಇನ್ನು ಕಾಫಿಯ ಹದಕ್ಕೆ ಬಂದರೆ ಕೆಲವರಿಗೆ ಸಾಧಾರಣ ಬಿಸಿ ಇರಬೇಕು, ಕೆಲವರಿಗೆ ಕುದಿಯುವ ಬಿಸಿ ಇರಬೇಕು ಹೀಗೆ ಮನೆಯಾಕೆ ಎಲ್ಲರ ಹದದ ಬಗ್ಗೆ ಅರಿತಿರಬೇಕು.

ಇತ್ತೀಚಿನ ದಿನಗಳಲ್ಲಿ ಪ್ರಪಂಚವೇ ಬದಲಾಗುತ್ತಿದ್ದು, ಹಾದಿಬೀದಿಯ ಮಕ್ಕಳೆಲ್ಲಾ ಕಾಫಿ ಡೇ, ಕಾಫಿ ಕೆಫೆ ಅನ್ನಲಾರಂಭಿಸಿದ್ದಾರೆ. ಕಾಫಿಯ ರುಚಿಯು ಅಂತಾರಾಷ್ಟ್ರೀಯ ಮಟ್ಟದವರೆಗೂ ಹೆಸರುವಾಸಿಯಾಗಿದೆ. ಅತಿಯಾದ ಸೇವನೆಯಿಂದ ಕಾಯಿಲೆ ಬರುತ್ತದೆ ಎಂದರೂ ಸಹ ಆ ಕಾಫಿಯನ್ನು ಕುಡಿಯುವ ಅಭ್ಯಾಸವನ್ನು ಯಾರೂ ಬಿಡುವುದಿಲ್ಲ. ಇಂದು ಮದುವೆ ಸಂಬಂಧ ಪಕ್ಕಾ ಮಾಡುವ ಸೆಂಟರ್‌ಗಳು ಈ ಕಾಫಿಡೇಗಳಾಗುತ್ತಿವೆ. ಮನೆಮಂದಿಯ ಜೊತೆ ಹರಟುತ್ತಾ ಕಾಫಿ ಕುಡಿಯುವ ಸುಖ ಇಂದು ನಗರದ ಮಂದಿಯಲ್ಲಿ ನಿಧಾನವಾಗಿ ನಶಿಸುತ್ತಿದೆ. ಅಮ್ಮ ಪ್ರೀತಿ ಬೆರೆಸಿ ಕೊಡುತ್ತಿದ್ದ ಒಂದು ಚಿಕ್ಕ ಖುಷಿಯನ್ನು ಕಿತ್ತು ಕಾಫಿಡೇಗಳಿಗೆ ಅಡವಿಟ್ಟಾಗಿದೆ. ಆದರೆ ಕಾಫಿಯ ತಲೆಮಾರು, ಕಾಫಿ ಬಗೆಗಿನ ಒಂದು ಸುಂದರ ಅನುಭವ ನಮ್ಮ ಮಲೆನಾಡ ಜನರಲ್ಲಿ ಇನ್ನೂ ಉಳಿದಿದೆ. ಆ ಚಿಕ್ಕ ಸಂಪತ್ತು, ಸಂತಸವನ್ನು ಹಾಗೇ ಕಾಪಾಡೋಣ.

ಆಗದು ಎಂದು ಕೈಕಟ್ಟಿ ಕುಳಿತರೆ

ಅಂಕಿತಾ
ಪ್ರಥಮ ಬಿ.ಎ.

ಈ ತಲೆಬರಹ (ಟೈಟಲ್) ನೋಡಿದಾಗ ನಮಗೆಲ್ಲರಿಗೂ ತಕ್ಷಣ ನೆನಪಾಗುವುದು ಡಾ. ರಾಜ್‌ಕುಮಾರ್‌ರವರು ಹಾಡಿರುವ "ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ...". ಸಾಮಾನ್ಯವಾಗಿ ವಿದ್ಯಾರ್ಥಿಗಳು ಕಿರುಪರೀಕ್ಷೆ, ಪರೀಕ್ಷೆಗಳಲ್ಲಿ ಕಡಿಮೆ ಅಂಕ ಬಂದವು ಎಂದು ಆತ್ಮಸ್ಥೈರ್ಯವನ್ನೇ ಕಳೆದುಕೊಂಡು ಇನ್ನೇನು ಜೀವನವೇ ಮುಗಿಯಿತು ಎಂದುಕೊಳ್ಳುತ್ತಾರೆ. ಇನ್ನು ಹಿರಿಯರೂ ಜೀವನದಲ್ಲಿ ತಮ್ಮ ವ್ಯಾಪಾರದಲ್ಲಿ ನಷ್ಟ ಅನುಭವಿಸಿದಾಗ ಕಷ್ಟದಲ್ಲಿ ಸಿಲುಕಿದಾಗ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೆ.ಇವೆಲ್ಲಾ ಕೆಟ್ಟ ಮಾರ್ಗವನ್ನು ಬಿಟ್ಟು ವಿದ್ಯಾರ್ಥಿಗಳು, ಹಿರಿಯರು ಕಷ್ಟವನ್ನು ಯಾವಾಗಲೂ ಧೈರ್ಯ ಮತ್ತು ಸಂತೋಷದಿಂದ ಎದುರಿಸಿದಾಗ ಮಾತ್ರ ಕಷ್ಟಗಳು ಮಂಜಿನಂತೆ ಕರಗಿಹೋಗಿ ಜೀವನ ಸುಖವಾಗಿರುತ್ತದೆ. ಇದಕ್ಕೆ ಸಂಬಂಧಪಟ್ಟ ಚಿಕ್ಕ ಕಥೆಯನ್ನು ನಿಮಗೆ ಹೇಳುತ್ತೇನೆ. ಅದೇನೆಂದರೆ....

ಯುವಕರಿಗೂ ಉನ್ನತ ಆದರ್ಶದ ಒಂದು ಮಾದರಿ ಹಾಕಿಕೊಟ್ಟ ವೃದ್ಧರೊಬ್ಬರ ಆದರ್ಶ ಎಲ್ಲರಿಗೂ ಅನುಕರಣೀಯವಾಗಬಲ್ಲದು. ಜಪಾನ್ ದೇಶದ ಸೋಇಚಿರೊ ಹೊಂಡಾ ಎಂಬ ಉದ್ಯಮಿಯೊಬ್ಬರು ವಾಹನ ಉದ್ಯಮವನ್ನು ಸ್ಥಾಪಿಸಿದರು. ತುಂಬಾ ಕಷ್ಟಪಟ್ಟು ತಮ್ಮ ಕಂಪೆನಿಯನ್ನು ದೇಶದ ಅಗ್ರಸ್ಥಾನದಲ್ಲಿ ಕೊಂಡೊಯ್ದರು. ಆದರೆ ದುರದೃಷ್ಟವಶಾತ್ ನಂತರ (1939–1945) ದ್ವಿತೀಯ ವಿಶ್ವಯುದ್ಧದ ಬಳಿಕ ದಿವಾಳಿಯಾದರು. ಅಮೇರಿಕಾವು ಹಿರೋಷಿಮಾ ಮತ್ತು ನಾಗಸಾಕಿಯ ಮೇಲೆ ಬಾಂಬ್ ಹಾಕಿತಲ್ಲ. ಆ ಬಾಂಬ್ ಸ್ಫೋಟಕ್ಕೆ ಸಿಲುಕಿ ಅವರ ಕಂಪೆನಿಯ ಕಾರ್ಖಾನೆಯು ಸುಟ್ಟು ಅಪಾರವಾದ ಹಾನಿಯುಂಟಾಯಿತು. ಬಳಿಕ ಸಂಭವಿಸಿದ ಭೂಕಂಪದಲ್ಲಿ ಅವರ ಅಟೋಪ್ಲಾಂಟ್ ಪೂರ್ಣವಾಗಿ ನಿರ್ನಾಮವಾಯಿತು. ಬೆನ್ನುಬೆನ್ನಿಗೇ ಅವರಿಗೆ ಸಂಭವಿಸಿದ ಅವಳಿ ದುರಂತಗಳಿಂದ ಅವರೂ ವಸ್ತುಶಃ ಛಿದ್ರವಾಗಿ ಹೋಗಿದ್ದರು. ವಿಪತ್ತಿನ ಸುರಿಮಳೆಗೆ ಸಿಲುಕಿ ಹೋಗಿದ್ದರು. ಆದರೂ ಧೈರ್ಯವನ್ನು ಕಳೆದುಕೊಳ್ಳಲಿಲ್ಲ, ಅಂಜಲಿಲ್ಲ, ಅಳುಕಲಿಲ್ಲ. ಅತ್ಯಂತ ಕಷ್ಟದಲ್ಲಿಯೂ ಧನಾತ್ಮಕವಾಗಿ ಯೋಚಿಸುವ ವಿವೇಕ ಚಿಂತನೆ ಅವರಲ್ಲಿತ್ತು.

ಇವೆಲ್ಲಾ ದುರ್ಘಟನೆ ನಡೆದ ಬಳಿಕ ಆ ಸಮಯದಲ್ಲಿ ಅವರ ಬಳಿ ಉಳಿದದ್ದು ಕೇವಲ ಒಂದು ಸೈಕಲ್. ಸುಮ್ಮನೇ ಕುಳಿತು ಯೋಚಿಸುತ್ತಿರುವಾಗ ಅವರ ತಲೆಯಲ್ಲಿ ಒಂದು ಹೊಸ ವಿಚಾರ ಹೊಳೆಯಿತು. ಅದೇನೆಂದರೆ ಅವರು ಎಲ್ಲಿಂದಲೋ ಒಂದು ಹಾಳಾದ ಜಿಪಿ ಎಂಜಿನ್

ತೆಗೆದುಕೊಂಡು ಬಂದರು. ಅದನ್ನು ಅವರ ಬಳಿ ಇದ್ದ ಸೈಕಲ್‌ಗೆ ಅಳವಡಿಸಿದರು. ಅವರ ಹೊಸ ಪ್ರಯೋಗ ಯಶಸ್ವಿಯಾಗಿ ಹೋಯಿತು. ಅವರ ಸಾಮಾನ್ಯ ಸೈಕಲ್ ಮೋಟಾರ್ ಸೈಕಲ್ ಅಗಿ ಪರಿವರ್ತನೆಗೊಂಡಿತು!

ತನ್ನ ವಿಶಿಷ್ಟ ಶೋಧವಾದ ಈ ಮೋಟಾರ್ ಸೈಕಲ್‌ನೊಂದಿಗೆ ತನ್ನ ಗೆಳೆಯನ ಮನೆಗೆ ಹೋದಾಗ ಅವರ ಗೆಳೆಯನಿಗೆ ಈ ಮೋಟಾರ್ ಸೈಕಲ್ ಇಷ್ಟವಾಯಿತು. ತನಗೂ ಅದೇ ಮಾದರಿಯ ಒಂದು ಮೋಟಾರ್ ಸೈಕಲ್ ಮಾಡಿಕೊಡುವಂತೆ ವಿನಂತಿಸಿದ. ಗೆಳೆಯರ ಬಳಿಕ ಗೆಳೆಯರ ಸರಣಿ ಸಾಗಿತು. ಆರ್ಡರ್‌ಗಳು ಹೆಚ್ಚಾದಾಗ 1948ರಲ್ಲಿ ಹೊಂಡಾಬೈಕ್ ಕಾರ್ಖಾನೆಯೇ ಆರಂಭವಾಗಿಬಿಟ್ಟಿತು. ಅವರ ಸುಟ್ಟು ಭಸ್ಮವಾಗಿದ್ದ ಮೊದಲಿದ್ದ ಕಂಪೆನಿಗೆ ಜೀವತುಂಬಿ ಕೇವಲ ಮೂರು ವರ್ಷಗಳಲ್ಲೇ ಅವರ ಕಂಪೆನಿಯನ್ನು ಅಗ್ರಸ್ಥಾನಕ್ಕೆ ಕೊಂಡೊಯ್ದರು. ಮುಂದೆ ಹೋಂಡಾ ಸೃಷ್ಟಿಸುತ್ತಿರುವ ದಾಖಲೆಗಳು ಇಡೀ ಜಗತ್ತಿನಲ್ಲೆಡೆ ಆಳವಾಗಿ ಬೇರುಬಿಟ್ಟಿವೆ.

ಹೀಗೆ ಎಷ್ಟೇ ವಿಪತ್ತು, ತಾಪತ್ರಯ ಬಂದರೂ ಎಲ್ಲವನ್ನು ಧೈರ್ಯದಿಂದ ಎದುರಿಸುತ್ತಾ ಮುನುಗ್ಗಬಲ್ಲವರು ತಮ್ಮ ಬದುಕಿನಲ್ಲಿ ಯಶಸ್ಸನ್ನು ಗಳಿಸಲು ಸಮರ್ಥರಾಗುತ್ತಾರೆ. ಮುಂದೆ ಸಾಗಲು ಕಲಿತವರನ್ನು ಇಡೀ ಪ್ರಪಂಚವೇ ಮೆಚ್ಚಿಕೊಳ್ಳುತ್ತದೆ ಹಾಗೂ ಅನುಕರಿಸಿ ಗೆಲುವನ್ನು ಸಾಧಿಸುತ್ತದೆ.

"ಜೀವನವೆಂಬುದು ನೂರು ಪುಟಗಳ ಒಂದು ಪುಸ್ತಕ". ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಂದರೆ ವಿದ್ಯಾಭ್ಯಾಸ ಜೀವನದಲ್ಲಿ, ವೈಯಕ್ತಿಕ ಜೀವನದಲ್ಲಿ ಕುಗ್ಗದೇ ಧೈರ್ಯದಿಂದ ಕಷ್ಟವನ್ನು ಎದುರಿಸಿ ಮುನ್ನುಗ್ಗಿ ಯಶಸ್ಸು ಗಳಿಸಲು ಸಮರ್ಥರಾಗಬೇಕು.

ಹಾಗೆ ಯಶಸ್ಸು ಸಾಧಿಸಿರಿ ಮತ್ತು ಖುಷಿಯಿಂದಿರಿ ಎಂದು ಎಲ್ಲರಿಗೂ ಶುಭ ಹಾರೈಸುತ್ತೇನೆ.

ಗೆಳೆತನ

ಜಯಾ
ಪ್ರಥಮ ಬಿ.ಎಸ್ಸಿ.

ಗೆಳೆತನವೊಂದು ಸುಂದರವಾದ ಅರ್ಥಪೂರ್ಣವಾದ ಭಾವನಾತ್ಮಕತೆಯ ಪದ. ಅದೆಷ್ಟೋ ಮನಸ್ಸುಗಳನ್ನು ಒಂದು ಗೂಡಿಸಿ ಸುಂದರವಾದ ಸಂಬಂಧವನ್ನು ಹೆಣೆದು ಜೀವನದ ಪ್ರತಿಯೊಂದು ಭಾಗದಲ್ಲೂ ತನ್ನ ಸಾರ್ಥಕತೆಯನ್ನು ಮೆರೆಯುವುದು.

ಎಲ್ಲೋ ಹುಟ್ಟಿ, ಹೇಗೋ ಬೆಳೆದು, ಎಲ್ಲಿಂದಲೋ ಬಂದು ಕ್ಷಣಾರ್ಧದಲ್ಲಿಂಯೇ ಗೆಳೆತನವೆಂಬ ಸಂಬಂಧಕ್ಕೆ ಅಂಟಿಕೊಂಡಾಗ ಆಗುವ ಮನಸ್ಸಿನ ತೊಳಲಾಟ ಅದೊಂದು ರೋಮಾಂಚಕವಾದ ಕ್ಷಣ. ಎಲ್ಲವನ್ನೂ ಹಂಚಿಕೊಂಡು, ನೋವು–ನಲಿವಿನಲ್ಲೂ ಒಬ್ಬರ ದನಿಗೆ ಮತ್ತೊಬ್ಬರು ದನಿಗೊಟ್ಟು ನಿನ್ನ ಬೆನ್ನೆಲುಬಾಗಿ ನಾನಿರುವೆ ಎಂದು ಸಮಾಧಾನಪಡಿಸಿ, ಮತ್ತೆ ದುಃಖದ ಮೊಗದಲ್ಲಿ ನಗುವನ್ನು ತರಿಸುವ ಪ್ರಯತ್ನ ಕೇವಲ ಗೆಳೆತನವೆಂಬ ಸಂಬಂಧಗಳಲ್ಲಿ ಮಾತ್ರ ಸಾಧ್ಯ. ರಕ್ತಸಂಬಂಧಕ್ಕೂ ನಿಲುಕದ, ಸಾಟಿಯಿಲ್ಲದ ಮುಗ್ಧ, ಸ್ವಚ್ಛ ಮನಸ್ಸುಗಳ ಸೇತುವೆಯೇ ಗೆಳೆತನ. ಜಾತಿ–ಬೇಧವಿಲ್ಲದೆ ಒಬ್ಬರಿಗೊಬ್ಬರು ಕಷ್ಟ ಮತ್ತು ನಗುವಿನಲ್ಲಿ ಜೊತೆಗೂಡುವುದೇ ಗೆಳೆತನ.

ಜೀವನವೆಂಬುದು ನಿಂತ ನೀರಲ್ಲ. ಅದು ಎಂದೆಂದಿಗೂ ಹರಿಯುತ್ತಿರುವ ನದಿ. ಹಾಗೆಯೇ ನಮ್ಮ ಈ ಜೀವನದಲ್ಲಿ, ಸಾಗುವ ಪಯಣದಲ್ಲಿ ಹಲವರು ಪರಿಚಯವಾಗುವರು, ಇನ್ನು ಕೆಲವರು ಮನಸ್ಸಿನ ಬಾಗಿಲನ್ನು ತಟ್ಟಿ ಗೆಳೆಯ/ಗೆಳತಿಯರಾಗುವರು. ಇನ್ನೊಮ್ಮೆ ದೂರ ಹೋದರೂ ಒಮ್ಮೊಮ್ಮೆ ಅವರನ್ನು ನೆನೆದು ಮನಸ್ಸು ಅಳುಕಿದರೂ ಬಿಳಿ ಕಾಗದದಲ್ಲಿ ಸಿಹಿಯಾಗಿ ಬಂದು ಸವಿ ನೆನಪುಗಳನ್ನು ಕೊಟ್ಟು ಕಹಿಯಾದ ನಿರ್ಗಮನದಿಂದ ಬೇಜಾರಾದರೂ ನಮ್ಮೀ ಗೆಳೆತನ ಎಂದೆಂದಿಗೂ ಅವಿಸ್ಮರಣೀಯ ಎಂದು ಗೀಚುವೆವು. ಚಿಗುರಿಟ್ಟ

ಮಾಮರದಲ್ಲಿ ಮತ್ತೆ ಕೋಗಿಲೆ ಹಾಡಿತೆಂದು ಬದುಕಿನ ಪಯಣದಲ್ಲಿ ಮುಂದೆ ಸಾಗುವೆವು.

ಗೆಳೆತನವೆಂಬುದು ರಕ್ತಸಂಬಂಧಗಳಿಲ್ಲದೆ ಹುಟ್ಟಿಕೊಳ್ಳುತ್ತವೆ. ಗೆಳೆತನದ ಮಹತ್ವ ಇರುವುದು ಇಲ್ಲೇ. ಅದು ಎಷ್ಟು ಸುಲಭವೋ ಅಷ್ಟೇ ದುರ್ಬಲವೂ ಹೌದು. ಹೀಗಾಗಿ ಪರಿಚಿತರು ಉದುರಿಹೋಗಿ ನಿಜವಾದ ಗೆಳೆಯರು ಮಾತ್ರ ಕೊನೆಯಲ್ಲಿ ಉಳಿದುಕೊಳ್ಳುತ್ತಾರೆ. ಏನೇ ಆದರೂ ನಿಮಗೆ ತಕ್ಕಂತಹ ಗೆಳೆಯರು ಈ ಜಗತ್ತಿನಲ್ಲಿ ಖಂಡಿತ ಇರುತ್ತಾರೆ.

ಯುಗಾದಿ ಹಬ್ಬದ ಮಹತ್ವ

ಪೂಜಾ ಎಸ್. ಕರ್ಕೇರ
ತೃತೀಯ ಬಿ.ಕಾಂ.

ಯುಗಾದಿಯೆಂದರೆ ಹೊಸವರ್ಷದ ಆರಂಭದ ದಿನವಾದರೂ ಭಾರತದಲ್ಲಿ ಈ ದಿನವನ್ನು ನಿರ್ಧರಿಸುವ ರೀತಿ ಹಲವಾರಿವೆ. ಮುಖ್ಯವಾಗಿ ಚಾಂದ್ರಮಾನ ಹಾಗೂ ಸೌರಮಾನ ಎಂಬ ಎರಡು ಪ್ರಭೇದಗಳಿದ್ದು, ಹಿಂದೂ ಧರ್ಮದ ವೇದಾಂಗ ಜ್ಯೋತಿಷ ಶಾಸ್ತ್ರದಿಂದ ನಿರ್ಣಯಗೊಳ್ಳುತ್ತವೆ. ಚಂದ್ರನ ಚಲನೆಯನ್ನಾಧರಿಸಿ, ದಿನಗಣನೆ ಮಾಡುವುದನ್ನು ಚಾಂದ್ರಮಾನ ಹಾಗೂ ಸೂರ್ಯನ ಗತಿಯಿಂದ ಎಣಿಕೆ ಮಾಡುವುದನ್ನು ಸೌರಮಾನ ಎನ್ನುತ್ತಾರೆ. ಕರ್ನಾಟಕದಲ್ಲಿ ಚಾಂದ್ರಮಾನ ಪದ್ಧತಿ ಮೊದಲಿನಿಂದ ರೂಢಿಯಲ್ಲಿದೆ.

ಯುಗಾದಿ ಹಬ್ಬದ ಸಾಂಪ್ರದಾಯಿಕ ಆಚರಣೆಗಳಲ್ಲಿ ಕೆಲವೆಂದರೆ ಸೂರ್ಯ ನಮಸ್ಕಾರ, ಪಂಚಾಗದ ಪೂಜೆ, ಹಾಗೂ ಸರ್ವೇಸಾಮಾನ್ಯವಾಗಿ "ಬೇವು ಬೆಲ್ಲ". ಜೀವನದ ಸಿಹಿ ಕಹಿಗಳೆರಡನ್ನೂ ಪಡೆಯಬೇಕೆಂದು ನೆನಪಿಸಲು ಬೇವು ಬೆಲ್ಲಗಳ ಮಿಶ್ರಣವನ್ನು ತಿನ್ನಲಾಗುತ್ತದೆ. ಯುಗಾದಿಯ ದಿನ ಸುಖದ ಸಂಕೇತವಾದ ಬೆಲ್ಲವನ್ನೂ ಮತ್ತು ಕಷ್ಟದ ಸಂಕೇತವಾದ ಬೇವನ್ನೂ ಸಮನಾಗಿ ಸ್ವೀಕರಿಸುವರು.

ಇಂದಿನ ದಿನದಿಂದ ವಸಂತ ಮಾಸ ಪ್ರಾರಂಭವಾಗಿ ತರುಲತೆಗಳು ಚಿಗುರುತ್ತವೆ. ಹೊಸ ಹೊಸ ಹೂಗಳು ಕಂಪನ್ನು ಬೀರುತ್ತವೆ. ಹಳೆಯ ತರಗೆಲೆಗಳು ಉದುರಿ ಗಿಡ ಮರಗಳು ಮತ್ತೆ ಮರಳಿ ಹೊಸ ಚೈತನ್ಯ ಪಡೆಯುತ್ತವೆ. ಜೀವನದಲ್ಲಿ ಒಂದು ವರ್ಷದಲ್ಲಿ ಕಂಡ ಸುಖದುಃಖಗಳನ್ನು ಮರೆತು ಹೊಸ ಬಾಳನ್ನು ನೋಟ್‌ಬುಕ್ಕಿನ ಹೊಸ ಪುಟದಂತೆ ಪ್ರಾರಂಭಿಸುವ ಸೂಚನೆಯ ಈ ದಿನವನ್ನು ಹಬ್ಬವನ್ನಾಗಿ ಆಚರಿಸುತ್ತಾರೆ.

ಈ ದಿನ ಶ್ರೀರಾಮನು ರಾವಣನನ್ನು ಜಯಿಸಿ ಮರಳಿ ಅಯೋಧ್ಯೆಗೆ ಬಂದು ರಾಜ್ಯಭಾರ ಮಾಡಿದನೆಂದು ಪ್ರತೀತಿ. ಇಂದಿನ ದಿನವೇ ವಿಷ್ಣುವು ಮತ್ಸ್ಯಾವತಾರವನ್ನು ತಳೆದದ್ದೆಂದೂ, ಶಾಲಿವಾಹನ ವಿಕ್ರಮಾದಿತ್ಯನನ್ನು ಜಯಿಸಿ ಶಾಲಿವಾಹನ ಶಕೆ ಎಂದು ನವಭಾರತವನ್ನು ನಿರ್ಮಿಸಿದರೆಂದೂ ಚರಿತ್ರೆಯಲ್ಲಿ ನಮೂದಿಸಿರುವರು.

ಆಂಧ್ರ ಮತ್ತು ಕರ್ನಾಟಕದಲ್ಲಿ ಇದು ಯುಗಾದಿಯಾದರೆ, ಮಹಾರಾಷ್ಟ್ರದಲ್ಲಿ **"ಗುಡಿಪಡ್ವ"**, ಪಾಡ್ಯಮಿ ದಿವಸ ಗುಡಿಯನ್ನು ಏರಿಸುವುದೇ ಗುಡಿಪಡ್ವ. ಒಂದು ಕೋಲಿಗೆ ವಸ್ತ್ರವನ್ನು ಕಟ್ಟಿ, ಹೂವಿನ ಹಾರವನ್ನು ಏರಿಸಿ ಗುಡಿ ಎಂದು ಮೂಲೆಯಲ್ಲಿ ಇರಿಸುವರು. ಇದು ಹೊಸವರುಷದ ಆಗಮನಕ್ಕೆ ಬಾವುಟವನ್ನು ಹಾರಿಸುವುದರ ಸಂಕೇತ. ಆಂಧ್ರಪ್ರದೇಶದಲ್ಲಿ ಹುಣಸೇಹಣ್ಣು, ಬೆಲ್ಲ, ಮಾವಿನಕಾಯಿ, ಉಪ್ಪು, ಮೆಣಸು, ಬೇವು ಇತ್ಯಾದಿಗಳ ಮಿಶ್ರಣ ಮಾಡಿ 'ಯುಗಾದಿ ಪಚ್ಚಡಿ" ಎಂಬ ಹೆಸರಿನ ಪದಾರ್ಥವನ್ನು ಸೇವಿಸುವರು.

ತಳಿರು ತೋರಣವನ್ನು (ಎಳೆಯ ಹಸಿರು ಮಾವಿನೆಲೆ ಮಧ್ಯೆ ಮಧ್ಯೆ ಬೇವಿನ ಎಲೆ ಹೂಗಳ ಗೊಂಚಲು) ಮನೆಗಳ ಮುಂಬಾಗಿಲಿಗೆ ಮತ್ತು ದೇವರ ಮನೆಯ ಬಾಗಿಲಿಗೆ ಕಟ್ಟುವರು. ಮನೆಯ ಮುಂದೆ ಬಣ್ಣ ಬಣ್ಣದ ರಂಗೋಲಿಯನ್ನಿಡುವರು. ಮುಂಜಾನೆ ಬೇಗನೆದ್ದು ಅಭ್ಯಂಜನ (ಎಣ್ಣೆ ಸೀಗೇಕಾಯಿಯಿಂದ ತಲೆಯನ್ನು ತೊಳೆದುಕೊಳ್ಳುವರು) ಮಾಡಿ ಪುಣ್ಯಾಹ ಮಂತ್ರಗಳನ್ನು ಉಚ್ಚರಿಸಿ ಮಾವಿನೆಲೆಯಿಂದ ಮನೆಯ ಎಲ್ಲ ಕಡೆ ಕಳಶದ ನೀರನ್ನು ಸಿಂಪಡಿಸುವರು. ನಂತರ ಹೊಸ ಬಟ್ಟೆ ಧರಿಸಿ ಸಂತೋಷದಿಂದ ಹಾಡಿ ನಲಿವರು.

ಯುಗಾದಿಯ ದಿನ ಸುಖದ ಸಂಕೇತವಾದ ಬೆಲ್ಲವನ್ನೂ ಮತ್ತು ಕಷ್ಟದ ಸಂಕೇತವಾದ ಬೇವನ್ನೂ ಸಮನಾಗಿ ಸ್ವೀಕರಿಸುವರು. ತಿಂದ ಮೇಲೆ ಬೆಲ್ಲವು ಹೊಟ್ಟೆಯೊಳಗೆ ಉರಿಯ ಅಥವಾ ಶಾಖವನ್ನು ಉಂಟು ಮಾಡಿದರೆ ಬೇವು ಈ ಉರಿಯ ಶಮನಕಾರಿ. ಬೇವು–ಬೆಲ್ಲದ ಮಿಶ್ರಣವನ್ನು ತಿನ್ನುವಾಗ ಹೇಳುವ ಒಂದು ಶ್ಲೋಕ ಹೀಗಿದೆ–: ಶತಾಯುಃ ವಜ್ರದೇಹಾಯ ಸರ್ವಸಂಪತ್ಕರಾಯಚ। ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ"॥– ಅದರರ್ಥ ಹೀಗಿದೆ:– ನೂರು ವರುಷಗಳ ಆಯುಷ್ಯ, ಸದೃಢ ಆರೋಗ್ಯ, ಸಕಲ ಸಂಪತ್ತುಗಳ ಪ್ರಾಪ್ತಿಯಾಗಿಯೂ, ಸಕಲ ಅರಿಷ್ಟ ನಿವಾರಣೆಗಾಗಿಯೂ ಬೇವು ಬೆಲ್ಲ ಸೇವನೆ ಮಾಡುತ್ತೇವೆ.

ವರಕವಿ ದ.ರಾ.ಬೇಂದ್ರೆಯವರ ಯುಗಾದಿ ಬಗೆಗಿನ ಕವಿತ ಸುಪ್ರಸಿದ್ಧವಾದುದು.

"ಯುಗ ಯುಗಾದಿ ಕಳೆದರು ಯುಗಾದಿ ಮರಳಿ ಬರುತ್ತಿದೆ
ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ
ಹೊಂಗೆ ಹೂವ ತೊಂಗಲಲಿ ಭೃಂಗದ ಸಂಗೀತ ಕೇಳಿ ಮತ್ತೆ ಮತ್ತೆ ಬರುತಿದೆ
ಬೇವಿನ ಕಹಿ ಬಾಳಿನಲ್ಲಿ ಹೂವಿನ ನಸುಗಂಪು ಸೂಸಿ ಜೀವ ಕಳೆಯ ತರುತಿದೆ
ವರುಷಕೊಂದು ಹೊಸತು ಜನ್ಮ ವರುಷಕೊಂದು ಹೊಸತು ನೆಲೆಯು ಅಖಿಲ ಜೀವಜಾತಕೆ
ಒಂದೆ ಒಂದು ಜನ್ಮದಲ್ಲಿ ಒಂದೆ ಬಾಲ್ಯ ಒಂದೆ ಹರೆಯ ನಮಗದಷ್ಟೆ ಏತಕೋ
ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಸಲ ನವೀನ ಜನನ ನಮಗೆ ಏಕೆ ಬಾರದೋ"॥ ಯುಗ ಯುಗಾದಿ ಕಳೆದರು॥

ನಡೆದಾಡುವ ದೇವರು

ಆಕಾಶ್ ಎಸ್. ಕೈಕಿನಿ
ತೃತೀಯ ಬಿ.ಕಾಂ.

ಶಿವಕುಮಾರ ಸ್ವಾಮಿಯವರ ಜನನ 1 ಎಪ್ರಿಲ್ 1907. ಒಬ್ಬ ಭಾರತೀಯ ಅಧ್ಯಾತ್ಮಿಕ ನಾಯಕ, ಮಾನವೀಯ ಮತ್ತು ಶಿಕ್ಷಣ ತಜ್ಞ. ಅವರು ಹಿಂದೂ ಲಿಂಗಾಯತ ಧಾರ್ಮಿಕ ವ್ಯಕ್ತಿಯಾಗಿದ್ದರು ಮತ್ತು ಕರ್ನಾಟಕದ ಸಿದ್ಧಗಂಗಾ ಮಠದ ಮಠಾಧಿಪತಿಗಳಾಗಿದ್ದರು. ಅವರು ಶ್ರೀ ಸಿದ್ಧಗಂಗಾ ಎಜುಕೇಶನ್ ಸೊಸೈಟಿಯನ್ನು ಸ್ಥಾಪಿಸಿದರು. ಹಿಂದು ಧರ್ಮದ ಲಿಂಗಾಯುತ ಸಂಪ್ರದಾಯದ ಅತ್ಯಂತ ಗೌರವಾನ್ವಿತ ಅನುಯಾಯಿಯಾಗಿದ್ದರು. ಅವರನ್ನು ರಾಜ್ಯದಲ್ಲಿ "ನಡೆದಾಡುವ ದೇವರು" ಎಂದು ಕೂಡ ಉಲ್ಲೇಖಿಸಲಾಗಿದೆ. ಭಾರತದಲ್ಲಿ ವಾಸಿಸುತ್ತಿದ್ದ ಅತ್ಯಂತ ಅತ್ಯುನ್ನತ ಪುರಾತನ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಅವರಿಗೆ ಭಾರತದ ಸರಕಾರವು 2015ರಲ್ಲಿ ಭಾರತದ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿದೆ. ಇವರು ಅನ್ನ, ಅಕ್ಷರ, ಜ್ಞಾನ ದಾಸೋಹಿ. ದೇಶ ಮತ್ತು ಸಮಾಜದ ಪ್ರಗತಿಯ ಬಗ್ಗೆ ಕಳಕಳಿಯಿರುವ ಸ್ವಾಮೀಜಿಯವರು ಮುಂದಿನ ಪೀಳಿಗೆಯ ಬೆಳವಣಿಗೆಗಾಗಿ ಪಣತೊಟ್ಟಿದ್ದರು. ಇವರು ಸಮಾಜದ ಎಷ್ಟೋ ಗಣ್ಯರ ಬಾಲ್ಯ ಜೀವನಗಳ ಪರಿವರ್ತನೆಗೆ ಕಾರಣವಾಗಿದ್ದಾರೆ. ತಮ್ಮ ಮಠದಲ್ಲಿ ಹತ್ತು ಸಾವಿರ ವಿದ್ಯಾರ್ಥಿಗಳಿಗೆ ಆಶ್ರಯವಿತ್ತು ತ್ರಿವಿಧ ದಾಸೋಹವನ್ನು ಸತತವಾಗಿ ನಡೆಸುತ್ತಾ ಬಂದಿದ್ದರು.

ಶ್ರೀಗಳ ದಿನಚರಿ ನಮಗೆ ಒಂದು ಅತ್ಯುತ್ತಮ ಉದಾಹರಣೆಯಾಗಿದೆ. ಸಮಸ್ತ ಲೋಕದ ಜನತೆಗೆ ಒಂದು ಉದಾಹರಣೆಯಾಗಿದ್ದಾರೆ. ಪ್ರತಿದಿನವೂ ಶ್ರೀಗಳು ಬೆಳಗಿನ ನಾಲ್ಕು ಗಂಟೆಗೆ ಎದ್ದು ಸ್ನಾನ ಮಾಡಿ, ಪೂಜಾ ಕೋಣೆಯಲ್ಲಿ ಒಂದು ತಾಸಿಗೂ ಹೆಚ್ಚು ಸಮಯ ಧ್ಯಾನದಲ್ಲಿ ತಲ್ಲೀನರಾಗುತ್ತಿದ್ದರು. ನಂತರ ಇಷ್ಟಲಿಂಗ ಪೂಜೆ. ದೂರದಿಂದ ಸ್ವಾಮಿಗಳ ದರ್ಶನಕ್ಕಾಗಿ ಬರುವ ಭಕ್ತರಿಗೆ ತ್ರಿಪುಂಡ ಭಸ್ಮವನ್ನು ಕೊಟ್ಟು ತಾವು ಧರಿಸಿ, ಪೂಜೆಯನ್ನು ಮುಗಿಸುತ್ತಿದ್ದರು. ನಂತರ ಆಹಾರ ಸೇವನೆ, ಮುಂಜಾನೆ ಆರೂವರೆ ಗಂಟೆಗೆ ಒಂದು ಅಕ್ಕಿ–ಇಡ್ಲಿ, ಸ್ವಲ್ಪ ಹೆಸರುಬೇಳೆ– ತೊವ್ವೆ, ಸಿಹಿ ಹಾಗೂ ಖಾರ ಚಟ್ನಿ ಸೇವನೆ. ಎರಡು ತುಂಡು ಸೇಬು ಇದರ ಬಳಿಕ, ಬೇವಿನ ಚಕ್ಕೆ ಕಷಾಯ ಸೇವನೆ ಮಾಡುತ್ತಿದ್ದರು.

ಸಮಾಜದ ನಾನಾ ಕ್ಷೇತ್ರಗಳಲ್ಲಿ ತನ್ನನ್ನೇ ತೊಡಗಿಸಿಕೊಂಡು ಬಡವರ ಸರ್ವತೋಮುಖ ಏಳಿಗೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟು ನಮ್ಮನಗಲಿದ್ದಾರೆ. ಆದರೆ ಅವರ ಸಾಮಾಜಿಕ ಕೆಲಸ ಯಾವತ್ತು ಅಚ್ಚಳಿಯದೇ ಉಳಿದಿದೆ. ಅವರು ಶಿಕ್ಷಣ ಮತ್ತು ತರಬೇತಿಗಾಗಿ ಒಟ್ಟು 132 ಸಂಸ್ಥೆಗಳನ್ನು ಸ್ಥಾಪಿಸಿದರು. ಇವರು ಸಂಸ್ಕೃತದ ಸಾಂಪ್ರದಾಯಿಕ ಕಲಿಕೆಯಲ್ಲಿ ಆಧುನಿಕ ಶಿಕ್ಷಣ ಮತ್ತು ತಂತ್ರಜ್ಞಾನದಲ್ಲಿ ಶಿಕ್ಷಣ ನೀಡುವ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿದರು. ಅವರ ಪರೋಪಕಾರಿ ಕೆಲಸಕ್ಕಾಗಿ ಎಲ್ಲಾ ಸಮುದಾಯಗಳಿಂದ ವ್ಯಾಪಕವಾಗಿ ಗೌರವಿಸಲ್ಪಟ್ಟರು. ಸ್ವಾಮೀಜಿಯವರ ಮಠ 10000ಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿದೆ. 5 ವಯಸ್ಸಿನಿಂದ 16 ವರ್ಷ ವಯಸ್ಸಿನ ಯಾವುದೇ ಹಂತದಲ್ಲಿ ಮತ್ತು ಉಚಿತ ಆಹಾರ, ಶಿಕ್ಷಣ ಮತ್ತು ಆಶ್ರಯವನ್ನು ಒದಗಿಸುವ ಧರ್ಮ, ಜಾತಿ ನೋಡದೆ ಎಲ್ಲಾ ಮಕ್ಕಳಿಗೆ ತೆರೆದಿರುತ್ತದೆ. ಇವರ ಈ ಕಾರ್ಯ ಅತ್ಯಂತ ಪ್ರಮುಖವಾದದ್ದು.

ಭಕ್ತರ ಕಷ್ಟ–ಸುಖಕ್ಕೆ ಸ್ಪಂದನ, ಮಧ್ಯಾಹ್ನ ಮೂರು ಗಂಟೆಯವರೆಗೂ ನಿರಂತರವಾಗಿ ಸಾಗುತ್ತಿತ್ತು. ಮಠಕ್ಕೆ ಭೇಟಿ ಕೊಡುವ ಬಹುತೇಕ ಭಕ್ತರು ರೈತಾಪಿ ವರ್ಗದವರಾದ್ದರಿಂದ ಶ್ರೀಗಳು ಬೇರೆ ಬೇರೆ ಪ್ರದೇಶದಿಂದ ಬಂದ ರೈತರಲ್ಲಿ ಮಳೆ ಬೆಳೆಗಳ ಬಗ್ಗೆ ಪ್ರಶ್ನಿಸುತ್ತಿದ್ದರು. ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಹಿಡಿದು ಪದವಿ ಅಭ್ಯಾಸದಲ್ಲಿರುವ ತರುಣರವರೆಗೂ ವಿದ್ಯೆಕೊಟ್ಟು ಸಲಹಿದ್ದಾರೆ. ಸಾವಿರಾರು ಜನ ಒಟ್ಟಿಗೆ ಪ್ರಾರ್ಥನೆ ಮಾಡುವುದನ್ನೂ ನೋಡುವುದು ಸಿದ್ಧಗಂಗೆಯ ಒಂದು ಪ್ರಮುಖ ಆಕರ್ಷಣೆ.

ಮಳೆ–ಬೆಳೆ ಕುಶಲೋಪರಿ ವಿಚಾರ, ಗಣ್ಯರ ಭೇಟಿ, ಮಠದ ಆಡಳಿತ ಕಡತಗಳ ಪರಿಶೀಲನೆ, ಪತ್ರವ್ಯವಹಾರಗಳೇ ಮುಂತಾಗಿ ಹಲವಾರು ಕಾರ್ಯಗಳಲ್ಲಿ ನಿರತವಾಗಿರುತ್ತಿದ್ದರಲ್ಲದೆ ಇಳಿವಯಸ್ಸಿನಲ್ಲೂ ಧಣಿವರಿಯದೇ ಕಾರ್ಯನಿರತರಾಗಿ **"ಕಾಯಕವೇ ಕೈಲಾಸ"** ಎಂಬ ನಾಣ್ನುಡಿಯಂತೆ ನಡೆದ ಮಹಾಸಂತ ಡಾ. ಶಿವಕುಮಾರ ಸ್ವಾಮೀಜಿಯವರು.

ತಾಯಿಯ ಪ್ರೀತಿ ಕೋಟಿ ಕೊಟ್ಟರೂ ಸಾಲದು

ಅಂಕಿತಾ
ಪ್ರಥಮ ಬಿ.ಎ.

ಸ್ನೇಹಿತರೇ, ತಾಯಿ ತನ್ನ ಮಕ್ಕಳ ಮೇಲೆ ಎಷ್ಟು ಪ್ರೀತಿ ಇಟ್ಟಿರುತ್ತಾಳೆ ಎಂದು ಈ ಕಥೆ ನಿಮಗೆ ತಿಳಿಸಿಕೊಡುತ್ತದೆ. ತಾಯಿ ನಮಗೆ ಜನ್ಮಕೊಟ್ಟು, ನಮ್ಮನ್ನು ಚೆನ್ನಾಗಿ ಬೆಳೆಸುತ್ತಾಳೆ. ಏಕೆಂದರೆ ಮುಂದೆ ನಾವು ಬೆಳೆದು ಅವರನ್ನು ಚೆನ್ನಾಗಿ ನೋಡಿಕೊಳ್ಳುವುದಕ್ಕೆ ಅಲ್ಲ. ಈ ಜಗತ್ತಿನಲ್ಲಿ ಕೆಟ್ಟ ಜನರು ಮತ್ತು ಒಳ್ಳೆಯ ಜನರು ಇದ್ದಾರೆ. ಏನಾದರೂ ಒಳ್ಳೆಯ ಕೆಲಸ ಮಾಡಲು ಹೊರಟರೆ ಅದನ್ನು ತಡೆಯವರು ನೂರಾರು ಜನರು ಇದ್ದಾರೆ. ಆ ನೂರಾರು ಜನರ ನಡುವೆ ಬದುಕಿ ಬಂದವಳು ತಾಯಿ. ಅಂತಹ ಜನರ ನಡುವೆ ನಾವು ಹೇಗೆ ಬದುಕಬೇಕೆಂದು ಮತ್ತು ನಮ್ಮ ದೇಶದಲ್ಲಿ ಕೆಟ್ಟ ಜನರನ್ನು ಕೊಂದು ನಮ್ಮ ದೇಶಕ್ಕೆ ಕೀರ್ತಿಯನ್ನು ತರಲು ನಮಗೆ ಜನ್ಮ ಕೊಡುತ್ತಾಳೆ.

ಒಂಬತ್ತು ತಿಂಗಳು ತನ್ನ ಹೊಟ್ಟೆಯಲ್ಲಿ ನಮ್ಮನ್ನು ಇಟ್ಟುಕೊಂಡು ಈ ದೇಶದ ಜನರ ನಡುವೆ ಬದುಕುತ್ತಾಳೆ. ನಮಗೆ ಜನ್ಮ ಕೊಡುವ ಸಂದರ್ಭದಲ್ಲಿ ಅವಳು ಎಷ್ಟು ಕಷ್ಟ ನುಂಗುತ್ತಾಳೆ ಎಂದರೆ ಈ ಭೂಮಿಯು ನಮ್ಮ ಮೇಲೆ ಬಿದ್ದರೆ ಹೇಗೆ ಆಗುತ್ತೋ, ಅಂತಹ ಕಷ್ಟ ಅವಳು ಆ ಸಂದರ್ಭದಲ್ಲಿ ಅನುಭವಿಸುತ್ತಾಳೆ. ಯಾವುದೇ ಕಷ್ಟ ಬಾರದ ಹಾಗೆ ಆ ಮಗುವನ್ನು ನೋಡಿಕೊಳ್ಳುತ್ತಾಳೆ. ತನ್ನ ಗಂಡ ಕುಡಿದು ತನಗೆ ಎಷ್ಟೆ ಹೊಡೆದರೂ ಅವಳು ನಮ್ಮ ಮೇಲೆ ಒಂದು ಸಣ್ಣ ಇರುವೆ ಬಾರದ ಹಾಗೆ ನೋಡಿಕೊಳ್ಳುತ್ತಾಳೆ. ನಾವು ಇಷ್ಟು ದೊಡ್ಡವರಾದರು ನಮ್ಮ ಅಮ್ಮ ನಮ್ಮ ಹಿಂದೆ ಎಷ್ಟು ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದಾಳೆ ಎಂಬುದು ಗೊತ್ತಿಲ್ಲ. ನಾವು ಅದರ ಬಗ್ಗೆ ಯೋಚನೆ ಮಾಡುವುದಕ್ಕೂ ಹೋಗುವುದಿಲ್ಲ. ತನಗೆ ಎಷ್ಟೆ ಕಷ್ಟ ಬಂದರೂ, ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಇದು ತಾಯಿಯ ನಿಜವಾದ ಪ್ರೀತಿ.

ಈಗ ನಾನು ನಿಮಗೆ ಕಥೆ ಹೇಳಲು ಪ್ರಾರಂಭಿಸುತ್ತೇನೆ. ಕಥೆ ಹೇಳು ಮುನ್ನ ನಿಮ್ಮ ಹತ್ತಿರ ನಾನು ಕೇಳಿಕೊಳ್ಳುವುದೇನೆಂದರೆ ಕಥೆಯನ್ನು ಓದುವಾಗ ಆ ತಾಯಿಯ ಪಾತ್ರವನ್ನು ನಿಮ್ಮ ಪಾತ್ರವೆಂದು ತಿಳಿದುಕೊಂಡು ಕಥೆಯನ್ನು ಓದಿ.

ಒಂದು ಪುಟ್ಟ ಗ್ರಾಮದಲ್ಲಿ ಒಂದು ಕಡುಬಡತನದ ದಂಪತಿಗಳು ಇರುತ್ತಾರೆ. ಆ ದಂಪತಿಗಳ ಮೊದಲೆರಡು ಮಕ್ಕಳು ತಾಯಿಯ ಗರ್ಭದಲ್ಲಿದ್ದಾಗಲೆ ಸತ್ತು ಹೋಗಿರುತ್ತವೆ. ಕೊನೆಗೆ ಮೂರನೇ ಮಗು ಜೀವಂತವಾಗಿ ತಾಯಿಯ ಗರ್ಭದಿಂದ ಹೊರ ಬರುತ್ತದೆ. ಆ ದಂಪತಿಗಳಿಗೆ ಎಲ್ಲಿಲ್ಲದ ಸಂತೋಷ, ಆನಂದ. ಆ ಮಗುವಿಗೆ ರವಿಯೆಂದು ನಾಮಕರಣ ಮಾಡಲಾಗುತ್ತದೆ. ತಮಗೆ ಎಷ್ಟೆ ಕಷ್ಟ ಬಂದರು. ಆ ಮಗುವನ್ನು ಸಂತೋಷದಿಂದ ನೋಡಿಕೊಳ್ಳುತ್ತಿದ್ದರು. ಒಂದು ದಿನ ಆ ಸಂತೋಷದ ಕುಟುಂಬಕ್ಕೆ ಮರೆಯಲಾಗದ ಅಪಘಾತವಾಗುತ್ತದೆ. ಅದೇನೆಂದರೆ ಒಂದು ಅಪಘಾತದಲ್ಲಿ ರವಿಯ ತಂದೆ ನಿಧನರಾಗುತ್ತಾರೆ. ಆ ಘಟನೆ ಕಪ್ಪುಚುಕ್ಕಿ ಹಾಗೆ ಉಳಿದುಕೊಳ್ಳುತ್ತದೆ. ಆ ನೋವಿನಲ್ಲೂ ರವಿಯನ್ನು ಆ ತಾಯಿ ಸಂತೋಷದಿಂದ ನೋಡಿಕೊಳ್ಳುತ್ತಾಳೆ. ರವಿಯ ತಂದೆ ನಿಧನರಾದಂದಿನಿಂದ ಅವನ ತಾಯಿ ತುಂಬ ಕಷ್ಟ ಪಟ್ಟು ಬೇರೆಯವರ ಕಾಲನ್ನು ಹಿಡಿಯುತ್ತಾ, ಬೇರೆಯವರ ಮನೆಯಲ್ಲಿ ಕೆಲಸ ಮಾಡುತ್ತ ತನ್ನ ಮಗನ ವಿದ್ಯಾಭ್ಯಾಸವನ್ನು ನೋಡಿಕೊಳ್ಳುತ್ತಿರುತ್ತಾಳೆ. ರವಿಯು ಚೆನ್ನಾಗಿ ಓದುತ್ತಾ ದ್ವಿತೀಯ ಪಿಯುಸಿಗೆ ಬರುತ್ತಾನೆ. ಮಗನ ಕಾಲೇಜಿನ ಫೀಸ್ ಕಟ್ಟಲು ಹಣವಿರುವುದಿಲ್ಲ. ಆಗ ಆ ತಾಯಿ ತನ್ನ ಹತ್ತಿರವಿರುವ ಎಲ್ಲ ಆಭರಣಗಳು, ಹೊಲ, ಮನೆಯನ್ನು ಮಾರಿ, ಅದರಿಂದ ಬಂದ ಹಣದಿಂದ ಕಾಲೇಜಿನ ಫೀಸ್‌ನ್ನು ಕಟ್ಟುತ್ತಾಳೆ. ಬೆಳಿಗ್ಗೆಯಿಂದ ರಾತ್ರಿಯವರಿಗೂ ಬೇರೆಯವರ ಮನೆಯಲ್ಲಿ ಕೆಲಸ ಮಾಡುತ್ತ ತನ್ನ ಜೀವನವನ್ನು ನಡೆಸುತ್ತಾಳೆ. ದ್ವಿತೀಯ ಪಿಯುಸಿ ಅವನು ಸರಕಾರದ ವಸತಿ ಕಾಲೇಜಿನಲ್ಲಿ ಓದುತ್ತಾನೆ. ಕಪ್ಪು ಬಣ್ಣದ ಹಾಗೆ ಅವನ ಗೆಳೆಯರು ಅವನ ಜೀವನದಲ್ಲಿ ಕಾಲು ಇಡುತ್ತಾರೆ.

ಯಾಕೋ ಏನೋ, ಆ ದಿನ ರವಿಗೆ ಒಳ್ಳೆಯದಾಗಿರಲಿಲ್ಲ. ರವಿಯು ತನ್ನ ಗೆಳೆಯರ ಜೊತೆ ಹೊರಗಡೆ ಹೋಗುತ್ತಾನೆ. ಹೊರಗಡೆ ಹೋದ ಸಮಯದಲ್ಲಿ ಗೆಳೆಯರ ಒತ್ತಾಯದಿಂದ ಅವನು ಅವರ ಜೊತೆ ಸೇರಿ ಸರಾಯಿ ಕುಡಿಯುತ್ತಾನೆ. ಕುಡಿದು ಮರಳಿ ವಸತಿಗೃಹಕ್ಕೆ ಹೋದ ಸಮಯದಲ್ಲಿ ಅಲ್ಲಿನ ವಾರ್ಡನ್‌ಗಳಿಗೆ ಅವರ ಮೇಲೆ ಅನುಮಾನ ಹುಟ್ಟುತ್ತದೆ. ಆಗ ಅವರನ್ನು ಪರೀಕ್ಷೆ ಮಾಡುತ್ತಾರೆ. ಅವರು ಹೊರಗಡೆ ಕುಡಿದಿದ್ದು ವಾರ್ಡನ್‌ಗಳಿಗೆ ಗೊತ್ತಾಗುತ್ತದೆ. ಆಗ ಅವರ ಪಾಲಕರನ್ನು ಕರೆಯುತ್ತಾರೆ. ರವಿಯನ್ನು ಬಿಟ್ಟು ಉಳಿದ ವಿದ್ಯಾರ್ಥಿಗಳ ಪಾಲಕರು ಬಹಳ ಶ್ರೀಮಂತರಾಗಿರುತ್ತಾರೆ. ಆ ವಿದ್ಯಾರ್ಥಿಗಳ ಪಾಲಕರು ಬಂದು ಒಂದೆರಡು ಬುದ್ಧಿ ಮಾತುಗಳನ್ನು ಹೇಳಿ ಹೋಗುತ್ತಾರೆ. ಅದರೆ ರವಿಯು ತಾಯಿ ಹಾಗಲ್ಲ. ವಾರ್ಡನ್ ಕಾಲೇಜಿಗೆ ಬರಲು ಹೇಳಿದಾಗ, ಅವಳು ತನ್ನ ಮಗನಿಗೆ ಏನಾಯಿತು ಎಂದು ಆ ಮುದ್ದು ತಾಯಿ ಊರಿನಿಂದ ಓಡುತ್ತಾ ಬರುತ್ತಾಳೆ. ರವಿಯು ಅವನ ಗೆಳೆಯರ ಜೊತೆಗೆ ಕುಡಿದಿದ್ದು ಆ ತಾಯಿಗೆ ಕಾಲೇಜಿಗೆ ಬಂದಾಗ ಗೊತ್ತಾಗುತ್ತದೆ. ಅದನ್ನು ಕೇಳಿದ ಆ ತಾಯಿ ಮೂರ್ಛೆ ಹೋಗುತ್ತಾಳೆ. ಸ್ವಲ್ಪ ಸಮಯದ ಬಳಿಕ ಅವಳು ಕಣ್ಣು ಬಿಡುತ್ತಾಳೆ. ಆಗ ಅಲ್ಲಿನ ಸಿಬ್ಬಂದಿವರ್ಗ ಮತ್ತು ಅವನ ತಾಯಿ ಅವನಿಗೆ ಬುದ್ಧಿ ಮಾತು ಹೇಳಿ, ಮರಳಿ ಅವಳ ಊರಿಗೆ ಹೋಗುತ್ತಾಳೆ.

ಎಂತಹ ಕೆಟ್ಟ ಮನಸ್ಸು ಉಳ್ಳವನಾದರು ಒಂದು ಸಲ ಆ ತಾಯಿ ಕಷ್ಟ ಪಡುತ್ತಿರುವುದನ್ನು ನೋಡಿದರೆ, ಅವರ ಮನಸ್ಸು ಪರಿವರ್ತನೆಯಾಗುತ್ತದೆ. ಆದರೆ ಆ ರವಿಗೆ ಪರಿವರ್ತನೆಯಾಗುವುದಿಲ್ಲ. ತನ್ನ ತಾಯಿಯನ್ನು ಒಂದು ಸಲನೂ ನೆನಪಿಸಿಕೊಳ್ಳುವುದಿಲ್ಲ. ಎರಡು ವರ್ಷದ ನಂತರ ಆ ಪಾಪಿ ಗೆಳೆಯರ ಜೊತೆ ಸೇರಿ ಜಗಳವಾಡಲು ಹೋಗುತ್ತಾನೆ. ಆ ಜಗಳ ಅವನಿಗೆ ಸಂಬಂಧವೇ ಇರುವುದಿಲ್ಲ. ಆದರೂ ಅವನ ಗೆಳೆಯರ ಜೊತೆಗೆ ಜಗಳವಾಡಲು ಹೋಗುತ್ತಾನೆ. ಆದರೆ ವಿಧಿವಶಾತ್ ಆ ಜಗಳದಲ್ಲಿ ನಾಲ್ಕು ಜನ ಮೃತಪಡುತ್ತಾರೆ. ಆ ನಾಲ್ಕು ಜನ ಮೃತಪಟ್ಟವರಲ್ಲಿ ರವಿಯ ಒಬ್ಬ. ರವಿ ಮೃತಪಟ್ಟಿರುವ ವಿಷಯ ಅಪ್ಪಿ–ತಪ್ಪಿ ಅವನ ತಾಯಿಗೆ ಗೊತ್ತಾದರೆ ಏನಾಗಬಹುದು ಯೋಚನೆ

ಮಾಡಿ, ಕೊನೆಗೆ ಆ ವಿಷಯ ಅವನ ತಾಯಿಗೆ ಗೊತ್ತಾಗುತ್ತದೆ. ಆ ವಿಷಯ ತಿಳಿದ ತಕ್ಷಣವೇ ಆ ತಾಯಿಗೆ ಹೃದಯಾಘಾತವಾಗುತ್ತದೆ. ತಕ್ಷಣವೇ ಆ ತಾಯಿಯನ್ನು ಆಸ್ಪತ್ರೆಗೆ ಕರೆದೊಯ್ಯುತ್ತಾರೆ. ಆದರೆ ಆಸ್ಪತ್ರೆಯ ವಾಹನದಲ್ಲಿಯೇ ಆ ತಾಯಿ ಮೃತಪಡುತ್ತಾಳೆ.

ಸ್ನೇಹಿತರೇ, ನೀವೇ ಯೋಚನೆಮಾಡಿ, ಈ ಕಥೆಯಲ್ಲಿ ತಪ್ಪು ಯಾರದ್ದು? ಆ ತಾಯಿ ಆ ಪಾಪಿ ಮಗನನ್ನು ಹೆತ್ತಿದ್ದು ತಪ್ಪೆ? ಅಥವಾ ಅವನ ಗೆಳೆಯರ ತಪ್ಪೆ? ಅಥವಾ ರವಿಯ ತಪ್ಪೆ? ಎಂಥವರ ಜೊತೆ ಸ್ನೇಹ ಮಾಡಬೇಕೆಂಬುದು ರವಿಗೆ ತಿಳಿದರು, ಆ ಪಾಪಿಗೆಳೆಯರ ಸ್ನೇಹಮಾಡಿ ಕೊನೆಗೆ ಮೃತಪಡುತ್ತಾರೆ. ಯಾರ ಜೀವನದಲ್ಲಿಯೂ ಅಂತಹ ಪಾಪಿ ಗೆಳೆಯರು ಸಿಗಲೇಬಾರದು ಎಂದು ಆ ದೇವರಲ್ಲಿ ಕೇಳುತ್ತೇನೆ. ಆ ತಾಯಿ ತನ್ನ ಗಂಡನನ್ನು ಕಳೆದುಕೊಂಡಾಗ ಮಗನಿಗಾಗಿ ಬದುಕುತ್ತಾಳೆ. ಆದರೆ ರವಿ ತನ್ನ ಗೆಳೆಯರ ಜೊತೆ ಸೇರಿ ಕೆಟ್ಟದಾರಿ ಹಿಡಿದು ಕೊನೆಗೆ ಜೀವಕಳೆದುಕೊಳ್ಳುತ್ತಾನೆ. ಆ ತಾಯಿಗೆ, ತನ್ನ ಮಗ ಮುಂದೆ ಇಂತಹ ಕೆಟ್ಟ ದಾರಿ ಹಿಡಿದು ಕೊನೆಗೆ ಯಮಲೋಕಕ್ಕೆ ಹೋಗುತ್ತಾನೆಂದು ಮೊದಲೇ ಗೊತ್ತಿದ್ದರೆ ಆ ಪಾಪಿ ಮಗನನ್ನು ಹೊಟ್ಟೆಯಲ್ಲೇ ಸಾಯಿಸುತ್ತಿದ್ದಳು. ಜಗಳಕ್ಕೆ ಹೋಗುವ ಮುಂಚೆ ಆ ತಾಯಿಯನ್ನು ರವಿ ಒಂದು ಸಲ ನೆನಪಿಸಿಕೊಳ್ಳಬೇಕಿತ್ತು.

ಸ್ನೇಹಿತರೇ, ನಿಮ್ಮ ತಾಯಿ....ಬೇರೆ ದೇವರಿಲ್ಲ. ಒಮ್ಮೆ ಆ ತಾಯಿಯನ್ನು ಕಳೆದುಕೊಂಡರೆ ಮತ್ತೆ ಆ ತಾಯಿ ಸಿಗಲು ಸಾಧ್ಯವಿಲ್ಲ. ನಿಮ್ಮತ್ತಿರ ನಾನು ಕೇಳುವುದೇನೆಂದರೆ ಒಳ್ಳೆಯ ಗೆಳೆತನ ಮಾಡಿ ಮತ್ತು ನಿಮ್ಮ ತಂದೆ–ತಾಯಿಯರನ್ನು ಚೆನ್ನಾಗಿ ನೋಡಿಕೊಳ್ಳಿ.

ಕುಂದಗನ್ನಡ

ಆಶಿಕ
ಪ್ರಥಮ ಬಿ.ಎಸ್ಸಿ.

ಭಾರತ...ಇದು ಹಲವು ಸಂಸ್ಕೃತಿಗಳ ತವರು. ನೂರಾರು ಭಾಷೆಗಳ ನೆಲೆಬೀಡು. ಇಂತಹ ಅಖಂಡ ಭಾರತವೆಂಬ ವಿಶಾಲವನದಲ್ಲಿ ಕರ್ನಾಟಕವೆಂಬುದು ಒಂದು ಸುಂದರ ಹೂದೋಟವಿದ್ದಂತೆ. ಇಲ್ಲಿನ ಪ್ರತಿ ಜಿಲ್ಲೆಗೂ, ಪ್ರತೀ ಊರಿಗೂ ತನ್ನದೇ ಆದ ಅಮೂಲ್ಯ ಆಚರಣೆಗಳಿವೆ. ವಿಭಿನ್ನ ಸಂಸ್ಕೃತಿ ಸಂಪ್ರದಾಯಗಳಿವೆ. ಅದರಲ್ಲೂ ಇಡೀ ಕರ್ನಾಟಕದಲ್ಲೆ ತನ್ನ ವಿಶಿಷ್ಟ ಪ್ರಾಕೃತಿಕ ಮತ್ತು ಪ್ರಾದೇಶಿಕ ವೈವಿಧ್ಯತೆಗೆ ಹೆಸರುವಾಸಿಯಗಿರುವುದು ನಮ್ಮ ಕರಾವಳಿ. ಇಲ್ಲಿನ ಭಾಷೆ ಆಚರಣೆಗಳ ಸೊಬಗು ಕಡಲಿನಂತೆ ವಿಶಾಲವಾದದ್ದು, ಸಮೃದ್ಧವಾದದ್ದು.

ಈ ಕರಾವಳಿಯ ಪ್ರಮುಖ ಆಡುಭಾಷೆಗಳಲ್ಲಿ ಒಂದು 'ಕುಂದಗನ್ನಡ'. ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಬ್ರಹ್ಮಾವರ ತಾಲೂಕುಗಳಲ್ಲಿ ಬಳಸಲ್ಪಡುವ ಆಡುಭಾಷೆಯೇ ಕುಂದಗನ್ನಡ. ತನ್ನ ವೈವಿಧ್ಯತೆಯಿಂದಲೇ ಕರ್ನಾಟಕದಾದ್ಯಂತ ಹೆಸರುವಾಸಿಯಾದ ಭಾಷೆಯಿದು. ಹಳೆಗನ್ನಡದ ಸೊಗಡನ್ನು ಬಹುತೇಕ ಬಳಸಿಕೊಂಡಿರುವ ಭಾಷೆಯೆಂದರೆ ಅದು ಕುಂದಗನ್ನಡ. ಪದಗಳೆಲ್ಲವನ್ನು ಸಂಕುಚಿತಗೊಳಿಸಿ ಪಟಪಟನೆ ಅರಳು ಹುರಿದಂತೆ ಮಾತನಾಡುವುದೇ ಈ ಭಾಷೆಯ ವಿಶೇಷ. ಬೇರೆ ಭಾಷೆಗಳಿಗೆ ಹೋಲಿಸುವುದಾದರೆ ಕುಂದಗನ್ನಡ ಹಲವು ಹಾಸ್ಯಮಯ ಪದ ಸಂಯೋಜನೆಗಳನ್ನು ಒಳಗೊಂಡು ಕೇಳುಗರ ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ಹಾಗೆ ಕುಂದಗನ್ನಡ ಬರಿಯ ಆಡುಭಾಷೆಯಲ್ಲ ಇದು ಒಂದು ಜನಸಮೂಹದ ಜೀವನ ಶೈಲಿ ಎಂದರೆ ತಪ್ಪಾಗಲಾರದು. ಈ ಭಾಷೆಗೆ ತನ್ನದೇ ಆದ ಸಾಹಿತ್ಯವಿದೆ. ಕುಂದಗನ್ನಡದ ಹಲವು ಜಾನಪದ ಹಾಡುಗಳು ಮತ್ತು ಗಾದೆ, ಕಥೆಗಳು ಅಂದಿನ ಜನರ ಜೀವನಕ್ಕೆ ಹಿಡಿದ ಕೈಗನ್ನಡಿಯಂತೆ. ಇದಕ್ಕೆ ಉದಾಹರಣೆಯಂತೆ ಒಂದು ಭತ್ತಕುಟ್ಟುವ ಹಾಡನ್ನು ನಾವು ಗಮನಿಸಬಹುದು

ಕೂಕಣಿ ನೆಂಟರೆ ಕೂಳಿಗಕ್ಕಿಯಿಲ್ಲೆ
ನಾ ಕುಟ್ಟು ಭತ್ತ ನಂದಲ್ಲ ॥ನೆಂಟರೆ॥
ಹೊತ್ ಆಯ್ಕರ್ ಹೊಳಿ ದಾಂಟ್‌ಕಣಿ....

ಈ ಸಾಲುಗಳನ್ನು ಗಮನಿಸುವಾಗ ಅಂದಿನ ಕಾಲದಲ್ಲಿ ಒಡೆಯರ ಅಡಿಯಾಳಾಗಿ ದುಡಿಯುತ್ತಿದ್ದ ಮಹಿಳೆ ತುತ್ತು ಅನ್ನಕ್ಕೂ ಪಡುತ್ತಿದ್ದ ಪಾಡು ನಮ್ಮ ಕಣ್ಮುಂದೆ ಬರುತ್ತದೆ. ಆದರೆ ಅದೇ ನೋವನ್ನು ಹಾಸ್ಯಮಯ ರೀತಿಯಲ್ಲಿ ಬಣ್ಣಿಸಿರು ರೀತಿ ಅಂದಿನ ಕಾಲದ ಮಹಿಳೆಯ ಜಾಣ್ಮೆಯನ್ನು ನಮ್ಮ ಅರಿವಿಗೆ ತರುತ್ತದೆ. ಇದೇ ರೀತಿಯಲ್ಲಿ ಹಲವು ಗಾದೆ ಮಾತುಗಳು. ಜಾನಪದ ಕಥೆಗಳು, ಪದ್ಯಗಳು ಹುಡುಕಿದಷ್ಟು ನಮ್ಮ ಗಮನಕ್ಕೆ ಬರುತ್ತದೆ. ಇಂದಿನ ಹೊಸತಲೆಮಾರಿನಲ್ಲೂ ಕೂಡ ಸಾಹಿತ್ಯ, ಸಿನಿರಂಗಗಳಲ್ಲಿ ಕುಂದಗನ್ನಡ ವಿಶ್ವವಿಖ್ಯಾತವಾಗುತ್ತಿರುವುದು ಸಂಭ್ರಮದ ಸಂಗತಿ.

ಆದರೆ ಭಾರತದ ಎಲ್ಲಾ ಪ್ರಾದೇಶಿಕ ಭಾಷೆಗಳು ಎದುರಿಸುತ್ತಿರುವ ಆ ಒಂದು ಸಮಸ್ಯೆ ಕುಂದಗನ್ನಡಕ್ಕೂ ಇದ್ದೇ ಇದೆ. ಇಂಗ್ಲೀಷ್ ವ್ಯಾಮೋಹ ಹೆಚ್ಚುತ್ತಿರುವ ಈ ಕಾಲದಲ್ಲಿ ಪ್ರಾದೇಶಿಕ ಭಾಷೆ ಮಾತನಾಡುವುದು ನಮ್ಮ ಗೌರವವನ್ನು ಕಡಿಮೆ ಮಾಡುವುದು ಎಂಬ ಭಾವನೆ ಇಂದಿನ ಹಲವು ವಿದ್ಯಾವಂತರದ್ದು. ಆದರೆ ನಮ್ಮ ಮಾತೃಭಾಷೆಯೇ ನಮ್ಮ ವ್ಯಕ್ತಿತ್ವದ ಪ್ರತೀಕ ಎಂಬುವುದನ್ನು ಇಂದಿನ ಯುವ ಜನತೆ ಅರಿತಾಗ ಮಾತ್ರ ನಮ್ಮ ಈ ಭಾಷೆ ಹರಡಲು ಸಾಧ್ಯ. ಭಾಷೆಯೊಂದಿಗೆ ಕುಂದಗನ್ನಡಿಗರ ವಿಭಿನ್ನ ಸಂಸ್ಕೃತಿ, ಆಚಾರ ವಿಚಾರಗಳು ಜಗದೆಲ್ಲೆಡೆ ಬಿತ್ತರಿಸಲು ಸಾಧ್ಯ. ಈ ನಿಟ್ಟಿನಲ್ಲಿ ನಮ್ಮ ಯುವ ಜನತೆ ಸಾಗಲಿ. ನಮ್ಮ ಭಾಷೆ, ನಮ್ಮೂರು ಎನ್ನುವ ಅಭಿಮಾನ ನಮ್ಮೆಲ್ಲರಲ್ಲಿ ಮನೆಮಾಡಲಿ.

ಮತ್ತೆ ಬರಲಿ ಆ ದಿನಗಳು

ಸ್ವಾತಿ
ಪ್ರಥಮ ಬಿ.ಎಸ್ಸಿ.

ನನ್ನ ಲೇಖನ ಓದುತ್ತಿರುವ ನನ್ನೆಲ್ಲಾ ಗೆಳೆಯ ಗೆಳತಿಯರಿಗೆ ನನ್ನ ನಮಸ್ಕಾರಗಳು

ನಾವೆಲ್ಲರೂ ಕೂಡ ವಿದ್ಯಾರ್ಥಿ ಜೀವನದ ಮೇಲು ಹಂತದಲ್ಲಿದ್ದೇವೆ. ಇನ್ನೇನು ಕೆಲವೇ ವರುಷಗಳಲ್ಲಿ ವಿದ್ಯಾರ್ಥಿ ಜೀವನ ಮುಗಿದುಹೋಗುತ್ತದೆ. ಒಂದೊಮ್ಮೆ ನಾವೆಲ್ಲರೂ ಕಳೆದ ಹಿಂದಿನ ದಿನಗಳನ್ನು ನೆನೆದಾಗ ಕೆಲವು ತಮಾಷೆಯ ಸನ್ನಿವೇಶಗಳೂ, ಕಹಿನೆನಪುಗಳೂ, ಸಿಹಿ ನೆನಪುಗಳು, ಮರೆಯಲಾಗದ ಮಧುರ ಕ್ಷಣಗಳು ಹೀಗೆ ಅದೆಷ್ಟೋ ನೆನಪಾಗುತ್ತದೆ.

ಆದರೆ ನನ್ನಂತೆಯೇ ಕೆಲವೊಂದು ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆ ಮಾತ್ರ ತಾವು ಕಳೆದ ಕ್ಯಾಂಪ್‌ನ ದಿನಗಳನ್ನು ಮರೆಯಲಾಗುವುದಿಲ್ಲ. ಈ ವಿದ್ಯಾರ್ಥಿ ಜೀವನದಲ್ಲಿ ಗೇಮ್ ಆಡುವುದು, ಕ್ಲಾಸ್‌ಗೆ ಬಂಕ್ ಹಾಕುವುದೆಲ್ಲಾ ತುಂಬಾ ಖುಷಿಯಾಗುತ್ತೆ ಎಂದು ಬಹಳಷ್ಟು ಜನ ಹೇಳುತ್ತಾರೆ. ಆದರೆ ನಮ್ಮ ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆ ಕ್ಯಾಂಪ್‌ಗೆ ಹೋಗುವುದು ತುಂಬಾ ಖುಷಿಯ ಸಂಗತಿ ಏಕೆಂದರೆ ಪದವಿಯ ಜೀವನದಲ್ಲಿ ಎರಡು ಬಾರಿ ಕ್ಯಾಂಪ್‌ಗೆ ಹೋಗುವ ಅವಕಾಶ ಸಿಗುತ್ತದೆ. ಹಾಗೆಯೇ ಕೆಲವೊಬ್ಬರಿಗೆ ಹಾಗೂ ಕೆಲವರು ಅವರಿಗೆ ಸಿಗುವ 2 ಸಲ ಕ್ಯಾಂಪ್‌ನ ಶಿಬಿರಾರ್ಥಿಗಳಾಗಿ ಹೋಗುವ ಅವಕಾಶ ಸಿಕ್ಕಿದರೂ, ಸಿಗದಿದ್ದರೂ ಕ್ಯಾಂಪ್‌ನ ಬಗ್ಗೆ ಆಗಾಗ ಮಾತನಾಡುವುದು ಸುಳ್ಳಲ್ಲ.

ನನ್ನಂತೆಯೇ ಒಂದು ಬಾರಿ ಕ್ಯಾಂಪ್‌ಗೆ ಹೋದವರಿಗೆ ಇನ್ನೊಮ್ಮೆ ಹೋಗಬೇಕೆಂಬ ಹಂಬಲ. ಎರಡನೇ ಬಾರಿ ಹೋಗುತ್ತಿರುವವರಿಗೆ ಶಿಬಿರಾರ್ಥಿಯಾಗಿ ಹೋಗುತ್ತಿರುವ ಕೊನೆಯ ಕ್ಯಾಂಪ್ ಅಂತ ಸ್ವಲ್ಪ ಮಟ್ಟಿನ ಬೇಜಾರು. ಇನ್ನು ನಮ್ಮ ಹಿರಿಯ ಶಿಬಿರಾರ್ಥಿಗಳು ಕ್ಯಾಂಪ್‌ಗೆ ಎಲ್ಲರೂ ಹೋಗಿ ನಮ್ಮ ಬೆಂಬಲವಿದೆ ಎಂದು ಸದಾ ಹಸನ್ಮುಖರಾಗಿ ಹೇಳುತ್ತಾರೆ.

ನಾನು ಈ ಲೇಖನದಲ್ಲಿ ನನ್ನ ಕ್ಯಾಂಪ್ ದಿನಗಳ ಬಗ್ಗೆ ಹೇಳೋದಕ್ಕೆ ಬಯಸುತ್ತೇನೆ. ಈ ಕ್ಯಾಂಪ್ ಇದೆಯಲ್ಲಾ ಇದು ತನ್ನಲ್ಲಿಗೆ ಬಂದ ಎಲ್ಲ ಶಿಬಿರಾರ್ಥಿಗಳಿಗೆ ಎಲ್ಲಾ ಸಮಾನರೆಂಬ ಹಾಗೂ ಸ್ವಂತ ಮನೆಗಿಂತ ಒಳ್ಳೆಯ ಅನುಭವ ನೀಡುತ್ತದೆ. ಹಾಗೂ ಅದರಲ್ಲಿ ನನ್ನಂತೆಯೇ ಕೆಲವು ಶಿಬಿರಾರ್ಥಿಗಳೂ

ಕೂಡ ತಮ್ಮ ತಮ್ಮ ವಿದ್ಯಾರ್ಥಿ ಜೀವನದಲ್ಲಿ ಕೆಲವು ದಿನಗಳ ಕಾಲ ತಮ್ಮ Best friends ಜೊತೆ ಒಂದು ಪರಿಚಯವಿಲ್ಲದ ಊರು, ಇನ್ನೂ ಅಪರಿಚಿತ ದೇವಸ್ಥಾನ, ಅಥವಾ ಯಾವುದಾದರೊಂದು ಸ್ಥಳದಲ್ಲಿ ಕ್ಯಾಂಪ್ ಏರ್ಪಟ್ಟಾಗ ಅಲ್ಲಿ ಸಿಗುವ ಸಮಯದಲ್ಲಿ ತಮ್ಮ ತಮ್ಮ friends ಜೊತೆಯಲ್ಲಿ, ಹರಟೆ ಹೊಡೆಯುವುದು ಹೀಗೆ ಕೆಲವೊಂದು ವಿಷಯದಲ್ಲಿ ಸಮಯ ಕಳೆಯಲು ಉತ್ಸುಕರಾಗುತ್ತಾರೆ. ಹಾಗೂ ಅವರ ಖುಷಿಯನ್ನು ವರ್ಣಿಸಲು ಸಾಧ್ಯವಿಲ್ಲ.

ನಮ್ಮಂತಹ ಎಲ್ಲಾ ಶಿಬಿರಾರ್ಥಿಗಳಿಗೆ, ರಕ್ಷಕರಂತೆ ಹಾಗೂ ತಂದೆ, ತಾಯಿಯಂತೆ ನೋಡಿಕೊಳ್ಳುವ ಎನ್.ಎಸ್.ಎಸ್. ಯೋಜನಾಧಿಕಾರಿಗಳಿಗೆ ಎಷ್ಟೋ ಬಾರಿ ಧನ್ಯವಾದಗಳನ್ನು ಹೇಳಿದರೂ ಮನಸ್ಸಿಗೆ ತೃಪ್ತಿಯಾಗುವುದಿಲ್ಲ.

ನಮ್ಮ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಏರ್ಪಡಿಸಿದ ಕ್ಯಾಂಪ್‌ನಲ್ಲಿ ಎಪ್ಪತ್ತು ವಿದ್ಯಾರ್ಥಿಗಳಲ್ಲಿ ನಾನು ಒಬ್ಬಳು ಆಯ್ಕೆ ಆದೆ. ಅಂತೆಯೇ ಕ್ಯಾಂಪ್‌ನ ದಿನಗಳು ಹತ್ತಿರ ಬಂತು. ಆದರೆ ಕ್ಯಾಂಪ್‌ಗೆ ಹೋಗುವ ಹಿಂದಿನ ದಿನವು ತುಂಬಾ ಕುತೂಹಲಕರಿಯಾಗಿತ್ತು. ಕ್ಯಾಂಪಿನಲ್ಲಿ ದಿನನಿತ್ಯದ ವ್ಯವಸ್ಥೆಯು ಸರಿಯಾಗಿ ಇರುತ್ತದೆಯೋ, ಇಲ್ಲವೋ ಎಂಬ ಆತಂಕ. ಅದರ ಜೊತೆಯಲ್ಲಿ ಆ ಕ್ಯಾಂಪ್ ಕಬ್ಬಿನಾಲೆಯ ಶ್ರೀ ಗೋಪಾಲಕೃಷ್ಣ ಸನ್ನಿಧಾನದಲ್ಲಿ ಇದೆ ಎಂದು ಮುಂಚಿತವಾಗಿ ಫ್ರೆಂಡ್ಸ್ ಮಾತನಾಡಿಕೊಳ್ಳುತ್ತಾ ಇದ್ದರು. ಹಾಗೂ ಆ ಸ್ಥಳದಲ್ಲಿ ಕೆಲವೊಂದು ಕಾಡುಪ್ರಾಣಿಗಳು ಇರುತ್ತವೆ ಹಾಗೂ ಅದು ನಕ್ಸಲೈಟ್ ಪ್ರದೇಶ ಎಂದೆಲ್ಲಾ ಮಾತನಾಡಿಕೊಳ್ಳುತ್ತಿದ್ದರು. ಕ್ಯಾಂಪ್‌ಗೆ ಬರಲು ಇಚ್ಛಿಸಿದ ಕೆಲವು ವಿದ್ಯಾರ್ಥಿಗಳು ಹೋಗಬಾರದೆಂದು ತೀರ್ಮಾನಿಸಿದರು. ಹೀಗೆ ಎಲ್ಲಾ ರೀತಿಯ ಆತಂಕ, ಭಯಗಳನ್ನು ಲೆಕ್ಕಿಸದೆ ನನ್ನ ಫ್ರೆಂಡ್ ಜೊತೆ ಕ್ಯಾಂಪ್‌ಗೆ ಸಿದ್ಧಳಾದೆ. ನನ್ನ ಫ್ರೆಂಡ್ ನನಗಿಂತ ಸ್ವಲ್ಪ ಧೈರ್ಯದವಳು.

ಮೊದಲ ದಿನ ಅಲ್ಲಿಗೆ ಹೋದ ತಕ್ಷಣ ಮೊಬೈಲ್ ನೆಟ್‌ವರ್ಕ್ ಹಾರಿಹೋಯಿತಲ್ಲ ಎಂಬ ಚಿಂತೆ ಹಲವರದ್ದಾದರೆ ನಮ್ಮ ಬಿ.ಎಸ್.ಎನ್.ಎಲ್. ಗೆ ಬೇಡಿಕೆ ಬಂತಲ್ಲ ಈಗ ಎಂಬ ಖುಷಿ ಕೆಲವರದ್ದು.

ಪ್ರಕೃತಿಯ ತಪ್ಪಲಿನಲ್ಲಿ ಇರುವ ಆ ದೇವಾಲಯದ ವಾತಾವರಣ ಯಾರಿಗೆ ತಾನೆ ಇಷ್ಟವಾಗಲಾರದು? ಸುತ್ತಲೂ ನೋಡಿದರೆ ಹಚ್ಚ ಹಸುರಿನ ಸಮೃದ್ಧಿಯಿಂದ ಬೆಳೆದು ನಿಂತ ಕಾಡು, ಮರಗಳು. ಅಲ್ಲಿನ ಪರಿಸರದಲ್ಲಿ ಬೆಳಗ್ಗಿನ ಜಾವದಲ್ಲಿ ಚಳಿರಾಯನು ತನ್ನ ಚಳಿಯ ವಿಶೇಷತೆಯನ್ನು ತೋರ್ಪಡಿಸುತ್ತಾನೆ. ಮೊದಲ ದಿನ ಎಲ್ಲರೂ ತಮ್ಮ ತಮ್ಮ ಫ್ರೆಂಡ್ಸ್ ಜೊತೆ ಕಳೆದರು. ಉದ್ಘಾಟನಾ ಸಮಾರಂಭವಾಯಿತು. ಅಂದು ರಾತ್ರಿ ಮರೆಯಲಾಗದ ಅವಲೋಕನಾ ಸಭೆಯು ಕೂಡ ಆಯಿತು. ಅಂದು ಎಲ್ಲಾ ಶಿಬಿರಾರ್ಥಿಗಳನ್ನು ಐದು ತಂಡಗಳಾಗಿ ವಿಭಾಗಿಸಿದರು. ಅರ್ಜುನ, ನಕುಲ, ಸಹದೇವ, ಭೀಮ, ಯುದಿಷ್ಠಿರ ಎಂಬ ವಿಶೇಷವಾದ ಹೆಸರುಗಳನ್ನು ಒಂದೊಂದು ತಂಡಗಳಿಗೆ ನೀಡಿದರು. ಅವತ್ತಿನ ರಾತ್ರಿ ಒಂದು ಚೀಟಿಯನ್ನು ನೀಡಿ ಅದರಲ್ಲಿ ರಕ್ತದ ಗುಂಪು, ತರಗತಿ, ನಮ್ಮ ಹೆಸರು, ಗುಂಪಿನ ಹೆಸರುಗಳನ್ನು ಬರೆಯಲು ಹೇಳಿದರು ಅದರಂತೆಯೇ ನಾವು ಬರೆದು ಅದನ್ನು ನಮ್ಮ ಐ.ಡಿ. ಕಾರ್ಡ್ ಅಂತೆ ಇಟ್ಟುಕೊಂಡೆವು.

ಹೇಳುತ್ತಾ ಹೋದರೆ ಲೆಕ್ಕಿಸದಷ್ಟು ಸನ್ನಿವೇಶಗಳು ಕಣ್ಣೆದುರು ಬರುತ್ತದೆ. ಆದರೆ ಅದರಲ್ಲಿ ಕೆಲವೊಂದು ವಿಷಯವನ್ನು ಹೇಳಲಿಕ್ಕೆ ಬಯಸುತ್ತೇನೆ.

ನಂತರದ ದಿನಗಳಲ್ಲಿ ಶ್ರಮದಾನ, ಅಂದಿನ ತಂಡದ ಕಾರ್ಯ, ಅವಲೋಕನ ಸಭೆ, ಮಧ್ಯಾಹ್ನದ ಕಾರ್ಯಕ್ರಮಗಳು ಸಾಗಿದವು. ಪ್ರತಿದಿನ ಕ್ಯಾಂಪ್‌ನಲ್ಲಿ ಬೆಳಗ್ಗಿನ ಜಾಗಿಂಗ್ ಯಾರೂ ಮರೆಯಲಿಕ್ಕಿಲ್ಲ. ಕೆಲವರಿಗೆ ಅದು ಸಿಹಿನೆನಪುಗಳಾಗಿ ಉಳಿದರೆ ಇನ್ನೂ ಕೆಲವರಿಗೆ ಅದು ಕಹಿನೆನಪುಗಳಾಗಿ ಉಳಿಯುತ್ತದೆ. ಪ್ರತಿನಿತ್ಯ ಕ್ಯಾಂಪ್‌ನ ದಿನದಲ್ಲಿ ನಾವು 4.00 ಗಂಟೆಗೆ ಎದ್ದು ತಮ್ಮ ತಮ್ಮ ಕೆಲಸವನ್ನು ಮುಗಿಸಿ ರೆಡಿ ಆಗಿರಬೇಕಿತ್ತು. ನಂತರ 5.00 ಗಂಟೆಯ ಸುಮಾರಿಗೆ ಒಂದು ವಿಜಿಲ್‌ನ ಶಬ್ದ ಕೇಳುತ್ತಿತ್ತು. ಆಗ ಎಲ್ಲಾ ಶಿಬಿರಾರ್ಥಿಗಳು ತಮಗೆ ನಿಗದಿಪಡಿಸಿದ ಸ್ಥಳದಲ್ಲಿ ಬಂದು ಹಾಜರಿರಬೇಕಿತ್ತು. ಒಂದು ವೇಳೆ ತಮ್ಮ ತಮ್ಮ ತಂಡದಿಂದ ಯಾರಾದರೂ ಬರದೇ ಹೋದರೆ ಅದು ಆ ತಂಡದ ಲೀಡರ್‌ನ ಜವಾಬ್ದಾರಿಯಾಗಿತ್ತು. ಆ ಕಬ್ಬಿನಾಲೆಯ ಪ್ರದೇಶವು

ಅರಣ್ಯದಿಂದ ಕೂಡಿದ್ದರಿಂದ ಬೆಳಿಗ್ಗೆ 5.00 ಗಂಟೆ ಎಂದರೆ ಸ್ವಲ್ಪ ಕತ್ತಲೆಯಿಂದ ಕೂಡಿತ್ತು ಹಾಗೂ ಇನ್ನೇನು ಚಂದಿರ ಮರೆಯಾಗುತ್ತಾನೆ ಎನ್ನುವ ಸಮಯವದು. ಕತ್ತಲಿನಲ್ಲಿ ಹೆಬ್ರಿಯ ಕಬ್ಬಿನಾಲೆಯ ರೋಡ್‌ನಲ್ಲಿ ನಾವು ಜಾಗಿಂಗ್‌ಗೆ ತೆರಳಿದೆವು. ಎಲ್ಲಾ ಶಿಬಿರಾರ್ಥಿಗಳನ್ನು ಬೇರ್ಪಡಿಸಿ ಮೂರು ಬೃಹತ್ ಉದ್ದವಾದ ಸಾಲನ್ನು ಮಾಡಿಸಿದ್ದರು. ನಾವು ಅದೇ ಸರದಿ ಸಾಲಿನಂತೆ ರಸ್ತೆಯಲ್ಲಿ ಜಾಗಿಂಗ್‌ಗೆ ಹೊರಟೆವು. ಹೀಗೆ ಹೋಗುವಾಗ ಮೂರು ಕಿಲೋಮೀಟರ್ ಬರುವಾಗ ಮೂರು ಕಿಲೋಮೀಟರ್ ಒಟ್ಟಿಗೆ ಆರು ಕಿಲೋಮೀಟರ್ ಜಾಗಿಂಗ್ ಮಾಡುತ್ತಿದ್ದೇವೆ. ಹೀಗೆ ಮುಂದುಗಡೆ ಸೂಪರ್ ಸೀನಿಯರ್ಸ್ ಜಾಗಿಂಗ್ ಮಾಡುತ್ತಿದ್ದರು. ಅವರ ಹಿಂದೆಯೇ ನಮ್ಮ ಸಾಲುಗಳು ಜಾಗಿಂಗ್ ಮಾಡುತ್ತಿದ್ದವು. ಆ ಸಾಲಿನಲ್ಲಿ ಕೆಲವೊಬ್ಬ ಶಿಬಿರಾರ್ಥಿಗಳು ನಿಷ್ಠೆಯಿಂದ ಜಾಗಿಂಗ್ ಮಾಡುತ್ತಿದ್ದರು. ಮಧ್ಯದ ಸಾಲಿನಲ್ಲಿ ಇರುವವರು ನಡೆದು ಬರುತ್ತಿದ್ದರು. ಸೀನಿಯರ್ಸ್ ಯಾರಾದರೂ ಹಿಂದೆ ನೋಡಲು ಬಂದಾಗ ಮಾತ್ರ ಜಾಗಿಂಗ್ ಮಾಡುತ್ತಿದ್ದರು. ಹೀಗೆ ರಸ್ತೆಯ ಅಕ್ಕಪಕ್ಕದಲ್ಲಿ ವಿವಿಧ ಜಾತಿಯ ಮರಗಿಡಗಳು ದಪ್ಪವಾಗಿ ಬೆಳೆದಿದ್ದವು. ಅವುಗಳು ಸ್ವಲ್ಪ ಮಟ್ಟಿಗೆ ಗುಹೆಯಂತೆ ಗೋಚರಿಸುತ್ತಾ ಇದ್ದವು. ಸ್ವಲ್ಪ ಮಟ್ಟಿಗೆ ಭಯವನ್ನು ಸಹ ಉಂಟುಮಾಡುತ್ತಿದ್ದವು. ಆದರೆ ನಮ್ಮ ಜೊತೆ ಫ್ರೆಂಡ್ಸ್ ಇರುವಾಗ ಭಯ ಮಾಯವಾಗುತ್ತಿತ್ತು. ನಮಗೆ ಜಾಗಿಂಗ್‌ನ ಸಮಯದಲ್ಲಿ ಸಿಕ್ಕ, ನಡೆದ ವಿಷಯಗಳು ತುಂಬಾ ಸಂತೋಷವನ್ನು ನೀಡುತ್ತದೆ.

ನಾವು ಮೊದಲು ಜಾಗಿಂಗ್ ಹೋಗುವಾಗ ಒಂದು ಲೋಟ ಬಿಸಿನೀರನ್ನು ಕುಡಿದು ಹೋಗುತ್ತಿದ್ದೆವು. ಬಂದಾಗ ಕೂಡ ಒಂದು ಲೋಟ ನೀರನ್ನು ಕುಡಿಯುತ್ತಿದ್ದೆವು. ನಂತರ ನಮಗೆ 5 ನಿಮಿಷ ರೆಸ್ಟ್, ನಂತರ ಪ್ರೇಯರ್‌ಗೆ ಧಾವಿಸುತ್ತಿದ್ದೆವು. ಅಲ್ಲಿನ ಊರಿನ ಕೆಲವೊಬ್ಬರು ಅತಿಥಿಗಳಾಗಿ ಬಂದು ಧ್ವಜಾರೋಹಣವನ್ನು ನಡೆಸಿಕೊಡುತ್ತಿದ್ದರು. ನಂತರ ನಾವು ಎನ್.ಎಸ್.ಎಸ್. ಗೀತೆಗಳನ್ನು ಹೇಳಿ. ತಮ್ಮ ತಮ್ಮ ಗುಂಪಿಗೆ ನೀಡಿದ ಕೆಲಸವನ್ನು ನಿರ್ವಹಿಸಲು ಹಾಗೂ ಶ್ರಮದಾನಕ್ಕೆ ತೆರಳಿದೆವು. ಹೀಗೆ ಪ್ರತಿಯೊಂದು ಗುಂಪಿಗೆ Food department, Instrument, cleaning, cultural programme, documentary ಈ ರೀತಿಯ ಐದು ಕೆಲಸವನ್ನು ವಿಭಾಗ ಮಾಡಿ ನೀಡುತ್ತಿದ್ದರು. ನಾನು ಇರುವ ತಂಡದ ಹೆಸರು "ಅರ್ಜುನ" ನಮಗೆ ಮೊದಲ ದಿನ ಸಿಕ್ಕಿದಂತಹ ಕೆಲಸ Food department ಅದು ನಾವು ಅಡುಗೆಮನೆಯಲ್ಲಿ ಸಹಾಯ ಮಾಡುವಂತಹ ಕೆಲಸ ಆಗಿತ್ತು. ನಾವು ಅಲ್ಲಿ ತರಕಾರಿ ಹೆಚ್ಚುವುದು, ಅಡುಗೆ ಭಟ್ಟರಿಗೆ ಸಹಾಯ ಮಾಡುವುದು ಹಾಗೂ ಎಲ್ಲಾ ಶಿಬಿರಾರ್ಥಿಗಳಿಗೆ ಊಟೋಪಚಾರದ ವ್ಯವಸ್ಥೆಯನ್ನು ನೋಡಿಕೊಳ್ಳಬೇಕಿತ್ತು. ಒಂದು ವಿಶೇಷ ಸಂಗತಿ ಎಂದರೆ ಅಡುಗೆ ಮಾಡಲು ಒಬ್ಬರೇ ಒಬ್ಬರು ಭಟ್ಟರು ಇದ್ದರು. ಆದ್ದರಿಂದ ನಾವು ಅವರಿಗೆ ತುಂಬಾ ಸಹಾಯ ಮಾಡಬೇಕಿತ್ತು. ಮೊದಲ ದಿನವೇ ನಮಗೆ Food department ಸಿಕ್ಕಿದ್ದಕ್ಕೆ ತುಂಬಾ ನಿಷ್ಠೆ ಹಾಗೂ ಜಾಗೃತೆಯಿಂದ ಕೆಲಸ ಮಾಡುತ್ತಿದ್ದೆವು. ಭಟ್ಟರಿಗೂ ನಾವೆಲ್ಲಾ ಮಾಡುವ ಕೆಲಸ, ಅವರಿಗೆ ಸಹಾಯ ಮಾಡುವ ರೀತಿ ಇದನ್ನೆಲ್ಲಾ ನೋಡಿ ಭಟ್ಟರು ಒಳ್ಳೆಮಕ್ಕಳು, ಒಳ್ಳೆ ಸಹಾಯ ಮಾಡ್ತಾರೆ ಎಂದೆಲ್ಲಾ ಹೇಳುತ್ತಿದ್ದರು. ಇದರಿಂದ ನಾವು ಭಟ್ರು ತುಂಬಾ ಪಾಪದವರು ಎಂದು ಎಣಿಸಿಕೊಂಡಿತ್ತು. ನಂತರದ ದಿನಗಳಲ್ಲಿ ಬೇರೆ ತಂಡದವರಿಗೆ Food department ಸಿಕ್ಕಾಗ ಆ ತಂಡದ ಶಿಬಿರಾರ್ಥಿಗಳು ಭಟ್ರು ತುಂಬಾ ಜೋರಿದ್ದಾರೆ ಎಂತೆಲ್ಲಾ ಮಾತಾಡುತ್ತಿದ್ದರು. ನಾವು ಅವರೆಲ್ಲ ಸುಳ್ಳು ಹೇಳ್ತಿದ್ದಾರೆ ಎಂದುಕೊಂಡೆವು. ಆದರೆ ಕೊನೆಯ ದಿನ ಪುನಃ Food department ನಮಗೆ ಸಿಕ್ಕಿದಾಗ ಗೊತ್ತಾಯ್ತ್ ಭಟ್ರ್ ಸ್ವಲ್ಪ ಜೋರಿದ್ರ್ ಅಂತ. ಪಾಪ ಅವರು ಅಡುಗೆ ಮಾಡುವಾಗ ತಲೆಬಿಸಿ ಆದ್ರೆ ಮಾತ್ರ ಬೈಯುತ್ತಿದ್ದರು. ಆದರೂ ಅವರು ಒಳ್ಳೆಯ ಹಾಗೂ ಪಾಪದ ಭಟ್ಟರು ಆಗಿದ್ದರು. ಹೀಗೆ ಬೇರೆ ಬೇರೆ ರೀತಿಯ ಕೆಲಸವು ಒಂದು ತಂಡದಿಂದ ಇನ್ನೊಂದು ತಂಡಕ್ಕೆ ವರ್ಗಾವಣೆ ಆಗಿತ್ತು. ಹೀಗೆ ಶ್ರಮದಾನದಲ್ಲಿ ತೊಡಗಿದ ಮೇಲೆ ಸುಮಾರು 10.00 ಗಂಟೆಯ ಹೊತ್ತಿಗೆ ತಿಂಡಿಯ ವ್ಯವಸ್ಥೆ ಹಾಗೂ ಮಧ್ಯಾಹ್ನ 1.00 ಅಥವಾ 1.30 ರಹೊತ್ತಿಗೆ ರುಚಿ ರುಚಿಯಾದ ಊಟದ ವ್ಯವಸ್ಥೆ ಇತ್ತು. ಹೀಗೆ ಇದನ್ನು ಮುಂದುವರಿಸುತ್ತಾ ಒಂದು

ಸಣ್ಣ ವಿಷಯವನ್ನು ಹೇಳಲಿಚ್ಛಿಸುತ್ತೇನೆ. ನಮಗೆಲ್ಲರಿಗೂ ಕೂಡ ಖುಷಿಯಾದ ಸಂಗತಿ ಎಂದರೆ ಅದು ಕಬ್ಬಿನಾಲೆ ಜನತೆಯ ಪ್ರೀತಿ, ವಾತ್ಸಲ್ಯ, ನಮ್ಮೆಲ್ಲಾ ಎನ್.ಎಸ್.ಎಸ್. ಗೆಳೆಯ ಗೆಳತಿಯರನ್ನು ತುಂಬಾ ಚೆನ್ನಾಗಿ ನೋಡಿಕೊಂಡಿದ್ದರು. ಇದು ಹೇಗೆ ಎಂದರೆ ನಮ್ಮ ಶ್ರಮದಾನ ಮುಗಿದ ಮೇಲೆ ಮಧ್ಯಾಹ್ನದ ಸಮಯದಲ್ಲಿ ಊಟಕ್ಕಿಂತ ಮೊದಲು ಅಲ್ಲಿರುವ ಕೆಲವೊಂದು ಮನೆಗಳಿಗೆ ಸ್ನಾನಕ್ಕೆ ತೆರಳುತ್ತಿದ್ದೆವು. ಆಗ ಅಲ್ಲಿ ನಮ್ಮನ್ನು ತುಂಬಾ ಅಕ್ಕರೆಯಿಂದ ಹಾಗೂ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ನಾವು ಎಂದೆಂದೂ ಕೂಡ ಆ ಊರಿನ ಗ್ರಾಮಸ್ಥರನ್ನು ಮರೆತು ಬಿಡಲು ಸಾಧ್ಯವಿಲ್ಲ. ಹೀಗೆ ನಾನು ಹೇಳಿದ ಮೊದಲ ವಿಷಯವನ್ನು ಮುಂದುವರಿಸಲು ಖುಷಿಪಡುತ್ತೇನೆ. ಹೀಗೆ ಎಲ್ಲರೂ ಕೂಡ ಊಟ ಮಾಡಿದ ಮೇಲೆ ನಮಗೆ ಅರ್ಧಗಂಟೆ ಸಿಗುತ್ತಿತ್ತು. ಆ ಸಮಯದಲ್ಲಿ ಸ್ವಚ್ಛತೆ ಇರುವ ತಂಡದವರು ಅವರವರ ಕೆಲಸವನ್ನು ಮುಗಿಸುತ್ತಿದ್ದರು. ನಂತರ ಭಾಷಣ ಏರ್ಪಡಿಸುತ್ತಾ ಅದು 2.00 ಗಂಟೆಯಿಂದ ಆರಂಭವಾಗಿ 6.00 ಗಂಟೆ ಅಥವಾ 5.00 ಗಂಟೆ ಆದ ಮೇಲೆ ಮುಗಿಯುತ್ತಿತ್ತು. ಈ ಭಾಷಣದ ಸಮಯದಲ್ಲಿ ಕೆಲವೊಬ್ಬ ಶಿಬಿರಾರ್ಥಿಗಳು ಅರೆನಿದ್ರೆಯಲ್ಲಿ ಹಾಗೂ ಕೆಲವೊಬ್ಬರು ಕಣ್ಣು ತೆರೆದು ನಿದ್ರೆಯ ಗುಂಗಿನಲ್ಲಿ ಭಾಷಣವನ್ನು ಕೇಳುತ್ತಿದ್ದರು. ಆ ಭಾಷಣದಲ್ಲಿ ಕೆಲವೊಬ್ಬರು ಬೇರೆ ಬೇರೆ ಊರಿನ ಅತಿಥಿಗಳ ಭಾಷಣ ಇರುತ್ತದೆ. ಅದರಲ್ಲಿಯೂ ಕೆಲವು ಹಿರಿಯರು ತುಂಬಾ ದೊಡ್ಡ ಅಥವಾ ಜಾಸ್ತಿ, ಅಂದರೆ ಭಾಷಣಕ್ಕೆ ಅಂತ್ಯವೇ ಇರುವುದಿಲ್ಲ ಅಷ್ಟು ಭಾಷಣ ಮಾಡುತ್ತಾರೆ. ನಮಗೆ ಹಾಗೂ ಕೆಲವೊಬ್ಬ ಗೆಳೆಯ, ಗೆಳತಿಯರಿಗೆ ಭಾಷಣ ಕೇಳಲು ಕಿರಿ ಕಿರಿಯಾದರೂ ಕೂಡ ಕಷ್ಟಪಟ್ಟು ಭಾಷಣ ಕೇಳುತ್ತಿದ್ದವರಂತೆ ನಟನೆ ಮಾಡುತ್ತೇವೆ. ನಂತರ ಇವರ ಭಾಷಣ ಆದ ಮೇಲೆ ಅವರಿಗೆ ಧನ್ಯವಾದಗಳನ್ನು ನುಡಿದು ಕಳಿಸಿಕೊಡುತ್ತೇವೆ. ನಂತರ ಚಹಾ ಹಾಗೂ ಮಾಲ್ಟ್‌ನ ವ್ಯವಸ್ಥೆ ಇರುತ್ತದೆ. ಅದನ್ನು ಸೇವಿಸಿ ಕೆಲವೊಬ್ಬರು ರಾತ್ರಿಯ ಕಾರ್ಯಕ್ರಮಕ್ಕೆ ಕೆಲವೊಂದು ನೃತ್ಯ, ಹಾಡು, ನಾಟಕ ಇವುಗಳನ್ನು ಪ್ರಾಕ್ಟೀಸ್ ಮಾಡುತ್ತಾರೆ. ನಾವು ಕಬ್ಬಿನಾಲೆಗೆ ಹೋದ ಮೊದಲ ದಿನ ಆ ಊರಿನ ಮಕ್ಕಳ ಮನರಂಜನೆಯ ಕಾರ್ಯಕ್ರಮ ಇದ್ದಿತ್ತು. ನಂತರದ ದಿನಗಳಲ್ಲಿ ನಮ್ಮ ಎನ್.ಎಸ್.ಎಸ್. ಶಿಬಿರಾರ್ಥಿಗಳ ಮನರಂಜನೆಯ ಕಾರ್ಯಕ್ರಮ ದಿನನಿತ್ಯ ಇದ್ದಿತ್ತು. ಇದನ್ನು ನೋಡು ಆ ಊರಿನ ಗ್ರಾಮಸ್ಥರು ಹಾಗೂ ಬೇರೆ ಊರಿನ ಗ್ರಾಮಸ್ಥರು ಆ ಕತ್ತಲೆಯಲ್ಲಿ ಹಾಗೂ ಚಳಿಯಲ್ಲಿ ಬಂದು ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿದ್ದರು. ಒಂದೆರಡು ದಿನ ಕುಣಿತಭಜನೆಯು ಕೂಡ ಇದ್ದಿತ್ತು. ಮೊದ ಮೊದಲು ರಾತ್ರಿಯ ಕಾರ್ಯಕ್ರಮದಲ್ಲಿ ತೊಡಗದವರೇ ಇರುತ್ತಿದ್ದರು. ಇದರಿಂದ ಸ್ವಲ್ಪ ಬೇಸರಗೊಂಡ ನಮ್ಮ ಎನ್.ಎಸ್.ಎಸ್.ನ ಯೋಜನಾಧಿಕಾರಿಯವರು ಎಲ್ಲಾ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ತೊಡಗಬೇಕು. ಇಲ್ಲದಿದ್ದರೆ Punishment ಎಂದಿದ್ದರು. ಆ ಮಾತಿನಿಂದಾಗಿ ಹೆದರಿದ ಕೆಲವರು ಎಲ್ಲಾ ಕಾರ್ಯಕ್ರಮದಲ್ಲಿ ತೊಡಗಿದ್ದರು. ಇದೂ ಕೂಡ ಮರೆಯಲಾಗದ ನೆನಪು. ಹೀಗೆ ಕಾರ್ಯಕ್ರಮ ಮುಗಿಯುವಾಗ 10.00 ಅಥವಾ 10.30 ಆಗುತ್ತದೆ. ಆಗ ನಮಗೆ ರಾತ್ರಿ ಊಟಕ್ಕೆ ಗಂಜಿಯ ವ್ಯವಸ್ಥೆ ಇರುತ್ತದೆ. ಗಂಜಿಯ ಜೊತೆ Combination ಗೆ ಚಟ್ನಿಯ ವ್ಯವಸ್ಥೆ ಇರುತ್ತದೆ. ಹೀಗೆ ಊಟದ ವಿಷಯ ಬಂದಾಗ ಇನ್ನೊಂದು ನಗುವಿನ ಸಂಗತಿ ಹೇಳಲು ಇಷ್ಟಪಡುತ್ತೇನೆ.

ಹೀಗೆ Food department ಬೇರೆ ತಂಡಕ್ಕೆ ಸಿಕ್ಕಾಗ ಆ ತಂಡದಲ್ಲಿರುವಂತಹ ನಮ್ಮ ಸೀನಿಯರ್ ಒಬ್ಬರು ಮಾಡಿದ ಕೆಲಸ ನೆನಪು ಬರುತ್ತದೆ. ಅದು ನಾವು ಹಸಿಮೆಣಸನ್ನು ನೋಡಿದಾಗ ಅವರೇ ನೆನಪು ಬರುತ್ತಾರೆ. ಹೀಗೆ ಒಂದು ದಿನ ಆ ತಂಡದಲ್ಲಿರುವವರು ತರಕಾರಿ ಹೆಚ್ಚುತ್ತಿದ್ದರು. ಭಟ್ರು ಮೊದಲೇ ಜೋರಿದ್ದಾರೆ ಅಂತಾ ಅರಿತಿದ್ದರು. ಹೀಗೆ ಭಟ್ರು ನಮ್ಮ ಸೀನಿಯರ್ ಒಬ್ಬರ ಹತ್ತಿರ 150ಗ್ರಾಂ ಹಸಿಮೆಣಸು ಹೆಚ್ಚಲಿಕ್ಕೆ ಹೇಳಿದ್ದರು. ಆ ಭಟ್ರು ಸರಿಯಾಗಿ ಮಾತಾಡುದೇ ಅಪರೂಪ. ಅದರಲ್ಲೂ ಒಂದು ಕೆಲಸ ಮಾಡಿಕೊಡಲು ಹೇಳಿದ್ದರು. ಹೀಗೆ ನಮ್ಮ ಸೀನಿಯರ್ ಹೆದರಿಕೊಂಡೇ ಅಥವಾ ಭಟ್ರ ಒಂದ್ ಕೆಲಸ ಕೊಟ್ಟಿದ್ದಾರೆ ಎಂಬ ಖುಷಿಯಿಂದಲೋ ಅವರು ಹೇಳಿದ್ದನ್ನು ಸರಿಯಾಗಿ ಕೇಳಿಸಿಕೊಳ್ಳದೆ ಗಡಿಬಿಡಿಯಿಂದ 150 ಹಸಿಮೆಣಸಿನ ಕಾಯಿಯನ್ನು ಹೆಚ್ಚಿದರು. ನಂತರ ತುಂಬಾ ಸಮಯ ಆದ ಮೇಲೆ ಅವರಿಗೆ ತಿಳಿಯಿತು.

ಭಟ್ರು ಬೈತಾರೇನೋ ಎಂದು ಎಣಿಸಿಕೊಂಡಿದ್ದರು. ಆದರೆ ಭಟ್ರು ಬೈಯಲಿಲ್ಲ. ಆ ದಿನ ಮಧ್ಯಾಹ್ನದ ಊಟ ಖಾರಾ ಇರಲಿಲ್ಲ. ಆದರೆ ರಾತ್ರಿ ಗಂಜಿಗೆ Combination ಆದ ಚಟ್ನಿ ತುಂಬಾ ಖಾರಾ ಇತ್ತು. ನಮ್ಮ ಕ್ಯಾಂಪ್‌ಲ್ಲಿ ಒಂದು ನಿಯಮವಿತ್ತು. ನಮ್ಮ ಊಟದ ಬಟ್ಟಲಿನಲ್ಲಿ ಯಾವುದೇ ರೀತಿಯ ಆಹಾರವನ್ನು ಬಿಡುವಂತಿರಲಿಲ್ಲ. ಆ ದಿನ ಚಟ್ನಿ ತಿನ್ನಲು ಇಷ್ಟವಿಲ್ಲದಿದ್ದರೂ ಕೂಡ ತಿನ್ನಲೇ ಬೇಕಾದ ಪರಿಸ್ಥಿತಿ ಇದ್ದುದರಿಂದ ಅದನ್ನು ತಿನ್ನಲೇ ಬೇಕಾಯಿತು. ಇದೂ ಕೂಡ ಎನ್.ಎಸ್.ಎಸ್.ನ ಒಂದು ಮರೆಯಲಾಗದ ನೆನಪಾಗಿದೆ. ಹೀಗೆ ಹೇಳುತ್ತಾ ಹೋದರೆ ತುಂಬಾ ವಿಷಯಗಳು ನೆನಪಿಗೆ ಬರುತ್ತದೆ.

ನಂತರ ನಮ್ಮ ರಾತ್ರಿ ಊಟ ಆದ ಮೇಲೆ ಅವಲೋಕನ ಸಭೆ ಪ್ರಾರಂಭವಾಗುತ್ತದೆ. ಆ ಸಭೆಯಲ್ಲಿ ಒಂದೊಂದು ತಂಡದಿಂದ ಒಬ್ಬೊಬ್ಬರು ಶಿಬಿರಾರ್ಥಿಗಳು ಎದುರು ಬಂದು ಆ ದಿನದ, ತಾವು ಮಾಡಿದ, ತಮ್ಮ ತಮ್ಮ ಕೆಲಸದ ವರದಿಯನ್ನು ಹೇಳಬೇಕು. ಹಾಗೂ ತಮ್ಮಿಂದ ಎಲ್ಲಾದರೂ ತಪ್ಪಾಗಿದ್ದರೆ ಅದನ್ನು ಕೂಡ ಅವಲೋಕನ ಸಭೆಯಲ್ಲಿ ಚರ್ಚಿಸುತ್ತಾರೆ. ಹೀಗೆ ಈ ಕಾರ್ಯಕ್ರಮ ಮುಗಿಯುವಾಗ 11.00 ಅಥವಾ 12.00 ಗಂಟೆ ಆಗುತ್ತದೆ. ಹೀಗೆ ಮಲಗುವಾಗ ಒಂದು ಲೋಟ ಖಾರದ ಕಷಾಯವನ್ನು ಕಡ್ಡಾಯ ಕುಡಿಯಬೇಕಿತ್ತು. ನಂತರ ಹೀಗೆ ದಿನನಿತ್ಯದ ಶ್ರಮದಾನ ಮುಂದುವರೆಯುತ್ತದೆ.

ಹೀಗೆ ಕ್ಯಾಂಪ್‌ನಲ್ಲಿ ಆಯೋಜಿಸಿದ್ದ ಕೆಸರುಗದ್ದೆ ಸ್ಪರ್ಧೆ ಇದು ಎಂದೆಂದೂ ಮರೆಯಲಾಗದ ಒಂದು ಸಿಹಿ ನೆನಪು. ಅದೇ ಊರಿನ ಕೃಷಿಕರ ಮನೆಯಲ್ಲಿ ಕೆಸರುಗದ್ದೆಯನ್ನು ಏರ್ಪಡಿಸಿದ್ದರು. ಅಲ್ಲಿ ತುಂಬಾ ಸ್ಪರ್ಧೆ ಏರ್ಪಡಿಸಿದ್ದರು. ಅದರಲ್ಲಿ ನಾನೂ ಕೂಡ ಭಾಗಿಯಾಗಿದ್ದೆ. ಇದರಂತೆಯೇ ಅಂದು ರಾತ್ರಿ ಭಾರತಜ್ಯೋತಿ ಕಾರ್ಯಕ್ರಮ ಕೂಡ ಇದ್ದಿತ್ತು. ಇವೆಲ್ಲವೂ ಕೂಡ ಒಂದು ಮರೆಯಲಾಗದ ಸಿಹಿ ನೆನಪು.

ಒಂದು ಸಂತಸದ ವಿಷಯ ಹೇಳುವುದಾದರೆ ನಮ್ಮ ಕ್ಯಾಂಪ್ ನಡೆದದ್ದು ಪ್ರಸ್ತುತ ಪಿ.ಪಿ.ಸಿ.ಯ ಪದವಿಪೂರ್ವ ಕಾಲೇಜಿನ ಕನ್ನಡ ವಿಭಾಗದ ಅಶ್ವತ್ ಭಾರದ್ವಾಜ್ ಸರ್‌ರವರ ಊರಾದ ಕಬ್ಬಿನಾಲೆಯಲ್ಲಿರುವ ಶ್ರೀ ಗೋಪಾಲಕೃಷ್ಣ ಸನ್ನಿಧಾನದಲ್ಲಿ.

ಒಟ್ಟಾರೆಯಾಗಿ ಆ ಕ್ಯಾಂಪ್‌ನ ದಿನಗಳನ್ನು ಹೇಳುತ್ತಾ ಹೋದರೆ ಒಂದು ಪುಸ್ತಕವನ್ನು ಬರೆಯಬಹುದು. ಕಳೆದುಹೋದ ಸಮಯ ಮತ್ತೆ ಬರುವುದಿಲ್ಲ ಎಂದು ಎಲ್ಲರಿಗೂ ತಿಳಿದಿದೆ. ಹಾಗೆಯೇ ಕ್ಯಾಂಪ್‌ನ ದಿನಗಳು ಮತ್ತೆ ಬಂದರೆ ಅದಕ್ಕಿಂತ ಸಂತಸ ಇನ್ನೊಂದಿಲ್ಲ. ಹಾಗೆಯೇ ಈ ರೀತಿಯ ಕ್ಯಾಂಪ್ ಏರ್ಪಟ್ಟಾಗ ನಮಗೆ ಎಲ್ಲರ ಪರಿಚಯ, ಒಳ್ಳೆಯ ಫ್ರೆಂಡ್ಸ್ ಎಲ್ಲರೂ ಸಿಗುತ್ತಾರೆ. ಹಾಗೂ ನಮ್ಮ ನಮ್ಮ ಪ್ರತಿಭೆಗಳನ್ನು ತೋರ್ಪಡಿಸಿಕೊಳ್ಳಲು ಸಿಗುವಂತಹ ಅವಕಾಶ ಇವೆಲ್ಲವನ್ನು ಉಪಯೋಗಿಸಿಕೊಳ್ಳಬೇಕು.

ನಮ್ಮ ಜೀವನದಲ್ಲಿ, ಅದರಲ್ಲೂ ವಿದ್ಯಾರ್ಥಿ ಜೀವನದಲ್ಲಿ ಹೀಗೆ ಬಂದ ಅವಕಾಶಗಳನ್ನು ಬಳಸಿಕೊಳ್ಳಿ ಎಂದು ಹೇಳಲು ಇಚ್ಛಿಸುತ್ತೇನೆ. ನನ್ನ ಈ ಲೇಖನದಲ್ಲಿ ಯಾರಿಗಾದರೂ ನೋವಾಗುವಂತೆ ಮಾತಾಡಿದರೆ ಕ್ಷಮಿಸಿ.

ಶ್ರಮ ಏವ ಜಯತೇ.

"ನಗುವು ಸಹಜದ ಧರ್ಮ
ನಗಿಸುವುದು ಪರಧರ್ಮ
ನಗುವಕೇಳುತ ನಗುವುದತಿಶಯದ ಧರ್ಮ
ನಗುವ ನಗಿಸುವ ನಗಿಸು ನಗುತ ಬಾಳುವ ವರವ
ಮಿಗೆ ನೀನು ಬೇಡಿಕೊಳ್ಳೊ – ಮಂಕುತಿಮ್ಮ

– ಡಿ.ವಿ.ಜಿ.

ಸರ್ದಾರ್ ವಲ್ಲಭಬಾಯಿ ಪಟೇಲ್

ಮನೋಜ್ ಎಂ. ಪ್ರಭು
ದ್ವಿತೀಯ ಬಿ.ಕಾಂ.

'ಉಕ್ಕಿನ ಮನುಷ್ಯ' ಎಂಬ ಖ್ಯಾತಿ ಪಡೆದ ಸರ್ದಾರ್ ವಲ್ಲಭಬಾಯಿ ಪಟೇಲರು 31 ಅಕ್ಟೋಬರ್ 1875ರಲ್ಲಿ ಗುಜರಾತಿನ ನಡಿಯಾಡ್ ಎಂಬಲ್ಲಿ ಓರ್ವ ರೈತರ ಕುಟುಂಬದಲ್ಲಿ ಜನಿಸಿದರು. ಇವರ ತಂದೆ ಝವೇರಿಬಾಯಿ ಮತ್ತು ತಾಯಿ ಲಾಡಬಾಯಿ. ಇದೊಂದು ಧಾರ್ಮಿಕ ಕುಟುಂಬವಾಗಿತ್ತು.

ತನ್ನ ಪ್ರಾಥಮಿಕ ಮತ್ತು ಪೌಢಶಿಕ್ಷಣವನ್ನು ನಡಿಯಾಡ್‌ನಲ್ಲಿ ಮುಗಿಸಿದರು. 1910ರಲ್ಲಿ ಇಂಗ್ಲೆಂಡಿಗೆ ತೆರಳಿ ಕಾನೂನು ಪದವಿ ಪಡೆದು ಬ್ಯಾರಿಸ್ಟರ್ ಆದರು ಮತ್ತು ಅಹಮದಾಬಾದ್‌ನಲ್ಲಿ ಸೇವೆ ಸಲ್ಲಿಸಿದರು. ರೈತರಿಗಾಗಿ ಮತ್ತು ಬಡಜನರಿಗಾಗಿ ಹೋರಾಟ ನಡೆಸಿದರು.

ಸರ್ದಾರ್ ವಲ್ಲಭಬಾಯಿ ಪಟೇಲರು ಭಾರತದ ಪ್ರಥಮ ಉಪಪ್ರಧಾನಿಯಾಗಿದ್ದರು. ಜವಹರಲಾಲ್ ನೆಹರು ಅವರ ಮಂತ್ರಿಮಂಡಲದಲ್ಲಿ ಗೃಹಖಾತೆಯ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಟೇಲರು ಮಹತ್ಮಾಗಾಂಧಿಯವರ ನೇತೃತ್ವದಲ್ಲಿ ಪ್ರಮುಖ ನಾಯಕರಾಗಿದ್ದರು.

ಭಾರತವು ಸ್ವಾತಂತ್ರ್ಯ ಗಳಿಸಿದ ನಂತರ ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳು ತೀವ್ರಗೊಂಡವು. ಇವೆಲ್ಲವುಗಳನ್ನು ಸಮರ್ಥವಾಗಿ ಎದುರಿಸಲು ಒಬ್ಬ ದಿಟ್ಟ ಪ್ರಭಾವಿ ಮುತ್ಸದ್ದಿ ರಾಜಕೀಯ ತಂತ್ರ ಪರಿಣಿತ ವ್ಯಕ್ತಿ ಹಾಗೂ ಯೋಗ್ಯ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲ ವ್ಯಕ್ತಿಯ ಅವಶ್ಯಕತೆ ಇತ್ತು. ಅಂಥ ದೃಢ ನಿರ್ಧಾರ ಹೊಂದಿದ ದೂರದರ್ಶಿತ್ವ ವ್ಯಕ್ತಿತ್ವದ ವ್ಯಕ್ತಿ ಪಟೇಲರಾಗಿದ್ದರು. ಸುಮಾರು 500 ಅರಸೊತ್ತಿಗೆಯ ರಾಜ್ಯಗಳು ಭಾರತದಲ್ಲಿ ಒಂದಾಗಿ ವಿಲೀನಗೊಳ್ಳಬೇಕಿತ್ತು. ಆದರೆ ಇವುಗಳಲ್ಲಿ ಕೆಲವರು ತೀವ್ರ ವಿರೋಧ ಒಡ್ಡಿದರು. ಅದರಲ್ಲಿಯೂ ವಿಶೇಷವಾಗಿ ಹೈದರಾಬಾದ್‌ನವರು ಸಮ್ಮತಿಸಲಿಲ್ಲ. ಈ ಸಮಸ್ಯೆಯನ್ನು ಎದುರಿಸುವುದು ಅಷ್ಟೇನೂ ಸುಲಭವಾಗಿರಲಿಲ್ಲ. ಆದರೆ ಪಟೇಲರು ಮಾತ್ರ ಈ ಸಮಸ್ಯೆಯನ್ನು ಅಷ್ಟೇ ಜಾಗರೂಕತೆಯಿಂದ, ಜಾಣ್ಮೆಯಿಂದ ಯಶಸ್ವಿಯಾಗಿ ನಿರ್ವಹಿಸಿದರು. ಕೆಲವೆಡೆ ಕಠಿಣತರ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯವಿತ್ತು. ಭಾಷಾವಾರು ವಿಂಗಡಣೆ ಸಹ ಅಷ್ಟೇ ಸೂಕ್ಷ್ಮವಾದ ಸಮಸ್ಯೆಯಾಗಿತ್ತು. ಇವರ ಪ್ರಬುದ್ಧ ಮಾರ್ಗದರ್ಶನದಲ್ಲಿ ಎಲ್ಲವನ್ನು ಸುಲಭವಾಗಿ ಎದುರಿಸುವಂತಾಯಿತು.

ಸರ್ದಾರ್ ವಲ್ಲಭಬಾಯಿ ಪಟೇಲರು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದರು. ಗಾಂಧಿ, ನೆಹರು ಮತ್ತು ಇತರ ಸ್ವಾತಂತ್ರ್ಯ ಸೇನಾನಿಗಳೊಂದಿಗೆ ಹೋರಾಟ ನಡೆಸಿದರು. ಇದಕ್ಕಾಗಿ ಹಲವಾರು ಬಾರಿ ಜೈಲುವಾಸವನ್ನು ಅನುಭವಿಸಿದರು. ಸ್ವಾತಂತ್ರ್ಯ ನಂತರ ಗೃಹಮಂತ್ರಿಯಾಗಿಯೂ ಉಪಪ್ರಧಾನಿಯಾಗಿಯೂ ಎಲ್ಲರ ಮೆಚ್ಚುಗೆ ಗಳಿಸುವಂತೆ ಕಾರ್ಯ ನಿರ್ವಹಿಸಿದರು. ಪಟೇಲ್ ಮತ್ತು ನೆಹರು ಮಧ್ಯೆ ಹಲವಾರು ಸೈದ್ಧಾಂತಿಕ ವಿಚಾರಗಳಲ್ಲಿ ಭಿನ್ನಮತಗಳಿದ್ದವು. ಗಾಂಧೀಜಿಯವರು ಅದನ್ನು ಸರಿಪಡಿಸಲು ಪ್ರಯತ್ನಿಸಿದರು.

ಪಟೇಲರು ಸ್ವತಃ ನಿರ್ಭಯ ವ್ಯಕ್ತಿತ್ವದವರಾಗಿದ್ದರು. ದೇಶದ ಮತ್ತು ಸಮಾಜದ ಹಿತದೃಷ್ಟಿಯಲ್ಲಿ ಇರುವ ಕಾರ್ಯಗಳನ್ನು ನಿರ್ದಾಕ್ಷಿಣ್ಯವಾಗಿ ಪೂರೈಸಿದರು. ತನ್ನ ಕೆಳಗಿನ ಅಧಿಕಾರಿಗಳಿಗೆ ಚೆನ್ನಾದ ಪ್ರೇರೇಪಣೆ ನೀಡಿ ಅವರು ನಿರ್ಭಯರಾಗಿ ಕಾರ್ಯನಿರ್ವಹಿಸುವಂತೆ ಮಾಡುತ್ತಿದ್ದರು ಮತ್ತು ಉಕ್ಕಿನ ಮನುಷ್ಯನೆನಿಸಿದರು. ಆದರೆ ದುರ್ದೈವವಶಾತ್ ಸ್ವಾತಂತ್ರ್ಯಾನಂತರದ ಸಮಸ್ಯೆಗಳನ್ನು ಹೋಗಲಾಡಿಸಲು ಪಟೇಲರು ದೀರ್ಘಕಾಲ ಬದುಕಲಿಲ್ಲ. ಅವರು ಡಿಸೆಂಬರ್ 15, 1950ರಲ್ಲಿ ಈಗಿನ ಮುಂಬಯಿಯಲ್ಲಿ ಹೃದಯಾಘಾತದಿಂದ ನಿಧನರಾದರು. ಅದ್ಭುತ ವ್ಯಕ್ತಿತ್ವದ ಮತ್ತು ಭಾರತಾಂಬೆಯ ಶೂರ ಪುತ್ರರಾದ ಪಟೇಲರ ಅಕಾಲಿಕ ಮರಣದಿಂದಾಗಿ ಇಡೀ ದೇಶವೇ ಶೋಕಸಾಗರದಲ್ಲಿ ಮುಳುಗಿತು. ಲಕ್ಷಾಂತರ ಜನರು ಪಟೇಲರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಅಂತಿಮ ನಮನ ಸಲ್ಲಿಸಿದರು.

ಪಟೇಲರ ಅಪ್ರತಿಮ ದೇಶಸೇವೆಗಾಗಿ ಭಾರತ ಸರ್ಕಾರವು ಅವರಿಗೆ ಭಾರತರತ್ನ ಪ್ರಶಸ್ತಿ ನೀಡಿದೆ. ಸರ್ದಾರ್ ಪಟೇಲರ ಸವಿನೆನಪಿಗಾಗಿ ಮತ್ತು ಅವರ ಸಾಧನೆಗಳನ್ನು ಚಿರಕಾಲ ನೆನಪಿಸುವುದಕ್ಕಾಗಿ ಶ್ರೀ ನರೇಂದ್ರ ಮೋದಿ ನೇತೃತ್ವದ ಭಾರತ ಸರ್ಕಾರವು ಪ್ರಪಂಚದಲ್ಲೇ ಅತ್ಯಂತ ಎತ್ತರವಾದ 182 ಮೀಟರ್ ಎತ್ತರದ ಉಕ್ಕಿನ ಪ್ರತಿಮೆಯನ್ನು ಗುಜರಾತಿನ ನಾಂದೋಡ್ ಸಮೀಪದ ಕೇವಾಡಿಯ ಎಂಬಲ್ಲಿ ನಿರ್ಮಿಸಿದೆ ಮತ್ತು ಇದರ ಸುತ್ತಮುತ್ತಲು ಇರುವ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಿ ಸುಂದರ ಗೊಳಿಸಿ ಒಂದು ಅದ್ಭುತ ಪ್ರವಾಸಿ ತಾಣವನ್ನಾಗಿ ಮಾಡಲಾಗಿದೆ. ನಿತ್ಯವೂ ಸಾವಿರಾರು ಜನರು ಪಟೇಲರ ಈ ಭವ್ಯ ಮೂರ್ತಿಯ ದರ್ಶನ ಪಡೆದು ಧನ್ಯತಾ ಭಾವವನ್ನು ಹೊಂದುತ್ತಿದ್ದಾರೆ.

ವಿದೇಶಿ ವ್ಯಾಮೋಹ ಮತ್ತು ಪ್ರತಿಭಾ ಪಲಾಯನ

ರಶ್ಮಿ
ಪ್ರಥಮ ಬಿ.ಬಿ.ಎ.

'ಇಂದಿನ ಮಕ್ಕಳೇ ಮುಂದಿನ ಜನಾಂಗ ' ಇಂದಿನ ಈ ಆಧುನಿಕ ಯುಗದಲ್ಲಿ ಈ ಮೇಲಿನ ಮಾತು ಬರೀ ವಾಕ್ಯವಾಗಿಯೇ ಉಳಿದಿದೆ ಹೊರತು ನನಸಾಗಲಿಲ್ಲ.

ಯಾವುದೇ ಒಂದು ದೇಶವಾಗಲಿ ಅದು ಅಭಿವೃದ್ಧಿ ಹೊಂದಬೇಕಾದರೆ ಆ ದೇಶದಲ್ಲಿರುವ ಪ್ರತಿಯೊಂದು ಜೀವರಾಶಿಯು ಬೆಂಬಲವನ್ನು ನೀಡಬೇಕಾದುದು ಅತ್ಯಗತ್ಯ. ಈಗ ನೋಡುದಾದ್ರೆ ನಮ್ಮ ದೇಶ. ಭಾರತವು ಒಂದು ಅಭಿವೃದ್ಧಿ ಹೊಂದುತ್ತಿರುವ ದೇಶ. ಅಭಿವೃದ್ಧಿಗೊಂಡ ದೇಶವಲ್ಲ.

ಇತ್ತೀಚಿನ ದಿನಗಳಲ್ಲಿ ಏನಾಗುತ್ತಿದೆ ಅಂದ್ರೆ, ನಮ್ಮ ಯುವಜನರಿಗೆ ನಮ್ಮ ದೇಶವೆನ್ನುವಂತಹದ್ದು ಬರೀ ವಿದ್ಯಾಭ್ಯಾಸಕ್ಕೆ ಸೀಮಿತ ಹೊರತು ನಮ್ಮ ದೇಶದಲ್ಲಿಯೇ ದುಡಿದು ತಿನ್ನಬೇಕೆಂಬ ಮನೋಭಾವ ಇರುವುದು ಸಾವಿರಕ್ಕೆ ಒಬ್ಬರಿಗೆ. ಇಂದಿನ ಈ ಪ್ರಪಂಚ ಹೇಗಿದೆ ಅಂತ ಅಂದ್ರೆ ನಮ್ಮ ದೇಶದಲ್ಲಿ ಓದಿ ಪರದೇಶ ಉದ್ಧಾರ ಮಾಡುವ ಕನಸು. ಈ ಮನೋಭಾವ ಯಾಕಂದ್ರೆ ಕೇವಲ ಕುರುಡು ಕಾಂಚಾಣಕ್ಕಾಗಿ. ನಮ್ಮ ಯುವಜನತೆಗೆ ಮನುಷ್ಯ ಸಂಬಂಧದ ಬೆಲೆಯೇ ಗೊತ್ತಿಲ್ಲ. ಕಾಗದದ ಚೂರಿಗೆ ಬಾಯಿ ಬಿಡುವ ಮನುಷ್ಯರಿವರು.

ನಿಜ ಹೇಳಬೇಕಂದ್ರೆ ನಾನ್ ಯಾರನ್ನು ದೂರುತ್ತಿಲ್ಲ. ಎಲ್ಲರೂ ಧನಲಕ್ಷ್ಮೀ ಆಡಿಸಿದಂತೆ ಆಡುವ ಕಾಲವಿದು. ಎಲ್ಲರಿಗೂ ಗೊತ್ತಿರುವಂತೆ ನಮ್ಮ ದೇಶದಲ್ಲಿ ವಿದ್ಯಾಭ್ಯಾಸಕ್ಕೆ ಇರುವ ಬೆಲೆ ಎಲ್ಲಿಯೂ ಇಲ್ಲ. ಆದ್ರೆ ಒಂದ್ ಮಾತ್ ಏನಂದ್ರೆ ನಾವು ಈ ದೇಶದಿಂದ ಹಲವಾರು ಪ್ರಯೋಜನಗಳನ್ನು ಪಡೆದಿರುತ್ತೇವೆ ಹಾಗೆಯೇ ಇದರ ಋಣಭಾರ ಅನ್ನುವಂತಹದ್ದು ನಮ್ಮ ಮೇಲೆ ಇದ್ದೇ ಇರುತ್ತದೆ ಎಂಬುದನ್ನು ನೆನಪಲ್ಲಿಟ್ಟುಕೊಳ್ಳಬೇಕು.

ನೋಡ್ರೀ, ಈಗ ಪ್ರಪಂಚ ಹೇಗಿದೆ ಗೊತ್ತಾ? ವಿದೇಶದಲ್ಲಿ ಹೋಟೆಲ್‌ನಲ್ಲಿ ಲೋಟ ತೊಳೆದರೂ ಅವನು ಗ್ರೇಟ್ ಅಂತ. ಯಾಕೆಂದ್ರೆ ಅದು ವಿದೇಶ ಅನ್ನುವ ಭಾವನೆ. ಅದೇ ಒಬ್ಬ ಊರಿನಲ್ಲಿ ಕ್ಯಾಂಟೀನ್ ಹಾಕೊಂಡ್ ಇದ್ರೆ ಜನರಿಂದ ಅವನು ತಾತ್ಸಾರಕ್ಕೆ ಒಳಗಾಗುತ್ತಾನೆ. ನಿಜ ಹೇಳಬೇಕಾದ್ರೆ ವಿದೇಶದಲ್ಲಿರುವವನಿಗಿಂತ ಈತ ಹೆಚ್ಚು ದುಡಿಮೆ ಮಾಡಬಲ್ಲ. ಅದ್ರೆ ನಮ್ಮ ಜನತೆ ವಿದೇಶ ವಿದೇಶ ಅಂತ ಯಾಕೆ ಸಾಯ್ತಾರೆ ಇನ್ನೂ ತಿಳಿದಿಲ್ಲ. ಈಗ ನೋಡ್ರಿ, ತಂದೆ–ತಾಯಿಯರಿಗೆ ಮಕ್ಕಳಂದ್ರೆ ಜೀವಾ, ಅವರೇ ಆಸ್ತಿ. ತಮ್ಮ ಮಗ ಅಥವಾ ಮಗಳನ್ನು ವಿದೇಶಕ್ಕೆ ದುಡಿಯಲು ಕಳುಹಿಸುತ್ತಾರೆ. ನಾನ್ ಇದನ್ನು ಒಂದು ಕಥೆ ರೂಪದಲ್ಲಿ ಬರಿತೆ. ನೋಡ್ರೀ ಒಂದು ಮಗು ಇಲ್ಲಿಂದ ಪರದೇಶಕ್ಕೆ ಹೋಗುವ ಮುನ್ನ ಅದರ ಗುಣ ನಡತೆ ಹೇಗಿತ್ತೋ ಹಾಗೆಯೇ ಮುಂದೆಯೂ ಇರುತ್ತದೆ ಎಂಬ ಗ್ಯಾರೆಂಟಿ ಏನಿಲ್ಲ. ಒಂದು ಹುಡುಗ ವಿದೇಶಕ್ಕೆ ಹೋಗಿ ಅಲ್ಲೇ ಒಂದು ಹುಡುಗಿಯನ್ನು ಪ್ರೀತಿಸಿ ಮದ್ವೆ ಆಗ್ತಾನೆ. ತಂದೆ, ತಾಯಿಗಳು ಇದ್ದು ಸತ್ತ ಹಾಗೇ. ಯಾಕೆಂದ್ರೆ ಅವನ ಮದ್ವೆಯ ವಿಷಯವೇ ಅವರಿಗೆ ತಿಳಿದಿರುವುದಿಲ್ಲ. ಈ ಕಡೆ ತಂದೆ ತಾಯಿ ಅವನನ್ನು ತುಂಬಾ ಕಷ್ಟದಲ್ಲಿ ಬೇಳಿಸಿರುತ್ತಾರೆ. ತುಂಬಾ ಬಡಕುಟುಂಬದವರಾಗಿರುತ್ತಾರೆ.

ನಂತರದ ದಿನಗಳಲ್ಲಿ ತಂದೆ ತಾಯಿಯರಿಗೆ ತಿಂಗಳಿಗೊಮ್ಮೆ ಕಳುಹಿಸುವ ಹಣವನ್ನೂ ಕೂಡ ಕಳುಹಿಸುವುದಿಲ್ಲ. ಸಾಲದವರ ಕಾಟ ತಾಳಲಾರದೆ ನಮ್ಮ ಪ್ರಾಣವನ್ನು ತಾವೇ ಕಳ್ಕೋತಾರೆ. ಅಲ್ಲಿಗೆ ಅವರ ಸಂಸಾರ ಛಿದ್ರ ಛಿದ್ರವಾಗುತ್ತದೆ.

ಆದ್ರೆ, ಒಂದು ಮಾತು. ಎಲ್ಲರೂ ಯಾಕೆ ವಿದೇಶ ಅಂದಾಕ್ಷಣ ಪ್ರಾಣಬಿಡುತ್ತಾರೋ ಗೊತ್ತಿಲ್ಲ. ನಮ್ಮ ದೇಶದಲ್ಲಿ ಇಲ್ಲದ್ದು ಅಲ್ಲಿ ಏನಿದೆ ಎಂಬ ಪ್ರಶ್ನೆಯನ್ನೂ ಯಾರೂ ಹಾಕಿಕೊಳ್ಳುವುದಿಲ್ಲ. ಹಾಕೊಂಡಿದ್ರೆ ನಾವ್ ಈ ವಿಷಯದ ಬಗ್ಗೆ ಪ್ರಬಂಧ ಬರೆಯುವ ಪ್ರಸಂಗವೇ ಬರುತ್ತಿರಲಿಲ್ಲ. ರೀ ದುಡ್ಡೆನ್ನುವಂಥದ್ದು ಇವತ್ತು ಬಂದು ನಾಳೆ ಹೋಗುವಂತಹದ್ದು. ಅದಕ್ಕೆ ಸ್ಥಿರತೆ ಎಂಬುವುದೇ ಇಲ್ಲ.

ಜಗತ್ತಿನಲ್ಲಿ ಎಲ್ಲರೂ ವಿದೇಶಿ ಪಲಾಯನ ಮಾಡ್ತಾರಂತ ನಾನ್ ಹೇಳಿಲ್ಲ. ಆದ್ರೆ ನಮ್ಮ ದೇಶದಲ್ಲಿಯೇ ದುಡಿದು ತಿನ್ನಬೇಕೆಂಬ ಮನೋಭಾವ ಇರುವವರೂ ಇದ್ದಾರೆ. ಮನುಷ್ಯನ ಮನಸ್ಸೆಂಬುವುದು ತುಂಬಾ ಚಂಚಲವಾದದ್ದು. ಈ ಕಾಲದಲ್ಲಿ ನಾನು ನಮ್ಮ ದೇಶದಲ್ಲೇ ಇದ್ದು ಏನಾದ್ರು ಸಾಧಿಸಬೇಕು ಅಂತಿದ್ದೆ. ಆದ್ರೆ ಮುಂದೆ ನಾನು ವಿದೇಶಿ ಪಲಾಯನ ಮಾಡಲ್ಲ ಅಂತ ದೃಢವಾಗಿ ಹೇಳಲು ಅಸಾಧ್ಯ.

ಈ ವಿದೇಶಿ ಪಲಾಯನ ಅನ್ನುವಂಥದ್ದು ದಿನೇ ದಿನೇ ಹೆಚ್ಚುತ್ತಲೇ ಇದೆ ಹೊರತು ಕ್ಷೀಣಿಸುತ್ತಿಲ್ಲ. ಯಾಕೆಂದ್ರೆ ನಮ್ಮಲ್ಲಿ ಒಗ್ಗಟ್ಟಿಲ್ಲ. ಎಲ್ಲರಲ್ಲೂ ಒಂದೇ ಮನೋಭಾವ ಬಂದ್ರೆ ಮಾತ್ರ ಸಾಧ್ಯ. ಒಂದು ಕೈಯಿಂದ ಚಪ್ಪಾಳೆ ತಟ್ಟಲು ಸಾಧ್ಯವಿಲ್ಲ. ಎರಡೂ ಕೈ ಸೇರಿದರೆ ಮಾತ್ರ ಸಾಧ್ಯ ಎನ್ನುತ್ತಾ ನನ್ನ ಮಾತಿಗೆ ಪೂರ್ಣವಿರಾಮ ನೀಡುತ್ತೇನೆ.

ಅಮ್ಮ

ನಿರ್ಮಲ
ಪ್ರಥಮ ಬಿ.ಬಿ.ಎ.

ಪ್ರತಿಯೊಬ್ಬ ಮಾನವ ಜೀವಿಗೆ ಮೊದಲನೆಯ ದೇವರು ಎಂದರೆ ಅದು ತಾಯಿ. ಅವಳ ಸ್ಥಾನವನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ. ಇನ್ನು ಕೆಲವರು ತಂದೆಯನ್ನೂ ಸಹ ನನ್ನ ದೇವರು ಎಂದು ಹೇಳುತ್ತಾರೆ. ಅದು ಸಹಜ. ಮಾನವರು ಎಂದ ಮೇಲೆ ಎಲ್ಲರ ಭಾವನೆಗಳು ಬೇರೆ ಬೇರೆಯಾಗಿರುವುದು ಸಹಜ. ಭೂಮಿಗೆ ಬರಲು ಕಾರಣೀಕರ್ತಳಾದ ನನ್ನ ಮಾತೆಗೆ ನಾನು ಚಿರಋಣಿ. ವೈಯಕ್ತಿಕವಾಗಿ ನನಗೆ ತಾಯಿ ಎಂದರೆ ಬರುವ ಒಂದೇ ಒಂದು ಪದ ಅದು ಕಾಮಧೇನು. ಆ ತಾಯಿ ಮಕ್ಕಳು ಬಯಸಿದ್ದನ್ನು ಎಷ್ಟು ಕಷ್ಟವಾದರೂ ಸಹ ಅದನ್ನು ಪೂರೈಸಲು ಹಪಹಪಿಸುತ್ತಾಳೆ. ತಾಯಿಯ ಪ್ರೀತಿಯೇ ವಿಭಿನ್ನ. ನನಗೆ ತಾಯಿಯ ಕುರಿತಾಗಿ ಹೇಳಲು ಪದಗಳನ್ನು ಹೇಗೆ ಬಳಸಬೇಕು ಎಂದು ತಿಳಿಯುತ್ತಿಲ್ಲ. ಏಕೆಂದರೆ ಅವಳನ್ನು ಬಣ್ಣಿಸಲು ಪದಗಳು ಸಾಕಾಗುವುದಿಲ್ಲ. ಒಂದು ಮಗು ತಾಯಿಯ ಗರ್ಭದಲ್ಲಿ ಹುಟ್ಟುವ ಮುಂಚೆ ದೇವರಲ್ಲಿ ಕೇಳುತ್ತದಂತೆ. ಓ ದೇವರೆ ಇಲ್ಲಿ ನೀವು ನನ್ನನ್ನು ನೋಡಿಕೊಳ್ಳುತ್ತೀರಿ. ಕಾಳಜಿ ವಹಿಸುತ್ತೀರಿ. ಆದರೆ ಭೂಲೋಕಕ್ಕೆ ಹೋದ ಮೇಲೆ ನನ್ನನ್ನು ಪ್ರೀತಿಯಿಂದ ನನ್ನ ಆರೈಕೆ ಮಾಡಲು ಯಾರಿದ್ದಾರೆ ಎಂದು ಕೇಳುತ್ತದೆ. ಆಗ ಭಗವಂತ ಹೇಳುತ್ತಾನೆ. ಮಗು ನಿನ್ನನ್ನು ನನಗಿಂತಲೂ ಹೆಚ್ಚಾಗಿ ನೋಡಿಕೊಳ್ಳಲು ಒಬ್ಬ ದೇವತೆಯನ್ನು ನಾನು ನೇಮಿಸಿದ್ದೇನೆ ಎಂದು. ಆ ದೇವತೆ ಬೇರೆ ಯಾರೂ ಅಲ್ಲ. ನಮಗೆಲ್ಲರಿಗೂ ಜನ್ಮ ಕೊಡುವ ನಮ್ಮ ತಾಯಂದಿರು. ಎಲ್ಲಾ ಭಾಷೆಗಳಲ್ಲಿ ಉಚ್ಚರಿಸಲ್ಪಡುವ ಒಂದೇ ಒಂದು ಪದ ಅದು ಅಮ್ಮ.

ನಿಜವಾಗಿಯೂ ತಾಯಿ ಒಬ್ಬ ದೇವತೆ. ಅಮ್ಮ ಎನ್ನುವ ಪದ ಮಾತ್ರ ಎಲ್ಲಾ ಭಾಷೆಗಳಲ್ಲಿ ಒಂದೇ ಪದದಿಂದ ಉಚ್ಚಾರವಾಗುತ್ತದೆ. ತಾಯಿ ಎಷ್ಟು ಕರುಣಾಮಯಿ. ಅದು ಹೇಳತೀರದು. ಅವಳ ಕಷ್ಟ ನೋವುಗಳನ್ನು ಮಕ್ಕಳ ನಲಿವಲ್ಲಿ ಮರೆಯುತ್ತಾಳೆ.

ವೈಯಕ್ತಿಕವಾಗಿ ನಾನು ನನ್ನ ತಾಯಿಯ ಬಗ್ಗೆ ಹೇಳುವುದಾದರೆ ಅವಳು ನನ್ನ ಸರ್ವಸ್ವ. ನಮ್ಮ ಏಳಿಗೆಗಾಗಿ ಅವಳು ಪಟ್ಟ ಶ್ರಮ ನನ್ನ ಜೀವನದಲ್ಲಿ ಮರೆಯಲು ಸಾಧ್ಯವಿಲ್ಲ. ಮನೆಗೆ ಉತ್ತಮ ಗೃಹಿಣಿಯಾಗಿ, ಪತಿಗೆ ಉತ್ತಮ ಸತಿಯಾಗಿ, ಕಷ್ಟದಲ್ಲಿಯೂ ತನ್ನ ಮಕ್ಕಳನ್ನು ಒಂದು ಉತ್ತಮ ಸ್ಥಾನಕ್ಕೆ

ಏರಿಸಬೇಕು, ಸಮಾಜದಲ್ಲಿ ಒಬ್ಬ ಹೆಸರಾಂತ ವ್ಯಕ್ತಿಯಾಗಬೇಕು ಎಂದು ಕನಸ್ಸನ್ನು ಕಂಡವಳು ನನ್ನ ಅಮ್ಮ. ಅವರು ಶ್ರಮಿಸುತ್ತಿರುವ ಪರಿ ನಾನು ಮರೆಯಲು ಸಾಧ್ಯವಿಲ್ಲ. ಮೊದಲನೆಯದಾಗಿ ನನ್ನ ತಾಯಿ ಅವಿದ್ಯಾವಂತೆ. ಆದರೂ ಅವರಲ್ಲಿರುವ ಸಾಮಾಜಿಕ ಜ್ಞಾನ ಅಪಾರ. ಎಲ್ಲರ ತಾಯಂದಿರು ಸಹ ತಮ್ಮ ಮಕ್ಕಳ ಒಳಿತಿಗಾಗಿ ಶ್ರಮಿಸುತ್ತಾರೆ.

ಈಗಿನ ಮುಂದುವರಿಯುತ್ತಿರುವ ಈ ದೇಶದಲ್ಲಿ ವಯಸ್ಸಾದ ತಂದೆ ತಾಯಿಯನ್ನು ತಮಗೇ ಒಂದು ಭಾರ ಎಂದು ಪರಿಗಣಿಸಿ ವೃದ್ಧಾಶ್ರಮಕ್ಕೆ ಕಳುಹಿಸುತ್ತಾರೆ. ಇದು ನಮ್ಮ ವಿದ್ಯಾವಂತ ಮಕ್ಕಳು ಮಾಡುವ ಘನಕಾರ್ಯ. ಇದೇ ತಂದೆ ತಾಯಿಗಳಿಗೆ ಕೊಡುವ ಗೌರವ. ವೃದ್ಧ ತಂದೆ–ತಾಯಿಗಳು ಪದೇ ಪದೇ ಕೇಳಿದ್ದನ್ನೇ ಕೇಳಿದರೆ, ಮಕ್ಕಳ ಉತ್ತರ ಹೇಗಿರುತ್ತದೆ ಎಂದರೆ ನಿಮಗೆ ಸುಮ್ಮನೆ ಇರಲು ಆಗುವುದಿಲ್ಲವೇ. ಕಿವಿ ಕೇಳದಿದ್ದರೆ ಸುಮ್ಮನಿರಿ ಎಂದು. ಅದೇ ಮಕ್ಕಳು ಚಿಕ್ಕವರಿರುವಾಗ ಅವರು ಮಾಡುವ ತಪ್ಪುಗಳನ್ನು ಅವರು ಕೇಳುವ ಪ್ರಶ್ನೆಗಳಿಗೆ ಕ್ಷಮಿಸಿ ಉತ್ತರಿಸಿ ಅವರನ್ನು ಸಮಾಜದಲ್ಲಿ ಒಬ್ಬ ವ್ಯಕ್ತಿಯನ್ನಾಗಿ ನಿಲ್ಲಿಸುತ್ತಾರೆ ತಂದೆ–ತಾಯಿಯರು. ಮಕ್ಕಳು ಯಾಕೆ ನಮಗೆ ಭಾರ ಎಂದು ಅವರನು ತಿಪ್ಪೆಯಲ್ಲಿ ಎಸೆದಿದ್ದರೆ ಅವರು ಸಮಾಜದ ಗಣ್ಯವ್ಯಕ್ತಿ ಆಗುವ ಬದಲು ಸಮಾಜದ ಭಿಕಾರಿ ಆಗುತ್ತಿದ್ದರು. ಆದರೆ ಮಕ್ಕಳು ಏನು ಮಾಡುತ್ತಿದ್ದಾರೆ. ತಂದೆ ತಾಯಿಯನ್ನೇ ವೃದ್ಧಾಪ್ಯದಲ್ಲಿ ಮಕ್ಕಳಿದ್ದೂ ಇಲ್ಲದ ಹಾಗೆ ಭಿಕಾರಿ ಮಾಡುತ್ತಿದ್ದಾರೆ. ಇದು ನಮ್ಮ ಸಮಾಜ ವ್ಯವಸ್ಥೆ.

ನಾನು ಬರೆಯಲು ಇಚ್ಛಿಸಿದ್ದು ತಾಯಿಯ ಬಗ್ಗೆ ಮುಂದೆ ನನಗೆ ಏನು ಬರೆಯಬೇಕು ಎಂದು ತಿಳಿಯುತ್ತಿಲ್ಲ. ಏಕೆಂದರೆ ಅವಳ ವರ್ಣನೆ ಮಾಡಲು ನನಗೆ ಅಸಾಧ್ಯ.

ತಾಯಿ ನಮಗೆ ದೇವರು ಕೊಟ್ಟ ವರ. ತಾಯಿಯ ಮೌಲ್ಯ ಏನು ಎಂದು ತಾಯಿ ಇಲ್ಲದವರಿಗೆ ತಿಳಿದಿರುತ್ತದೆ. ಇದ್ದವರು ಕಡೆಗಣಿಸುತ್ತಾರೆ.

ರಾಮ ರಾಮಾಯಣದಲ್ಲಿ ಒಂದು ಕಡೆ ಹೇಳುತ್ತಾನೆ. ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು. ಹಾಗಾಗಿ. ತಾಯಿಯನ್ನು ಹೆತ್ತ ಹೊತ್ತ ನಾಡನ್ನು ಯಾವತ್ತು ಮರೆಯಬಾರದು.

ಸ್ವಚ್ಛ ಭಾರತ

ಮೋನಿಷಾ
ಪ್ರಥಮ ಬಿ.ಬಿ.ಎ.

ಸ್ವಚ್ಛ ಭಾರತ ಗಾಂಧೀಜಿಯ ಬಹುದೊಡ್ಡ ಕನಸಾಗಿತ್ತು . ಈಗ ಇದನ್ನು ನನಸಾಗಿಸಲು ನಮ್ಮ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಮುಂದಾಗಿದ್ದಾರೆ. ಸ್ವಚ್ಛ ಎಂದರೆ ಕ್ಲೀನ್. ನಮ್ಮ ಸುತ್ತಮುತ್ತಲು ಸ್ವಚ್ಛವಾಗಿಡುದರಿಂದ ನಾವು ಆರೋಗ್ಯವಂತವಾಗಿಯೂ, ಸಂತೋಷದಿಂದಲೂ ಇರಲು ಸಾಧ್ಯ. ಸ್ವಚ್ಛ ಭಾರತ ಎನ್ನುವುದು ಕೇವಲ ಕನಸಾಗಿರಬಾರದು. ಇದನ್ನು ನಾವು ಪಾಲಿಸಬೇಕು. ಪ್ರತಿಯೊಬ್ಬರು ಇದನ್ನು ಪಾಲಿಸಿದರೆ ನಾವು ನಮ್ಮ ಭಾರತವನ್ನು ಸ್ವಚ್ಛವಾಗಿಡಬಹುದು. ಈಗ ಎಲ್ಲಾ ಪ್ರದೇಶಗಳಲ್ಲೂ, ರಾಜ್ಯದಲ್ಲಿಯೂ ಇದನ್ನು ಎಲ್ಲರೂ ಪಾಲಿಸುತ್ತಿದ್ದಾರೆ. ಪ್ಲಾಸ್ಟಿಕ್‌ಗಳನ್ನು ನಾವು ಮಿತಿವಾಗಿ ಬಳಸಿದರೆ ಎಷ್ಟೋ ಪ್ರಮಾಣದ ಮಾಲಿನ್ಯವನ್ನು ತಡೆಗಟ್ಟಬಹುದು. ಪ್ಲಾಸ್ಟಿಕ್‌ಗಳನ್ನು ಬಳಸುವುದನ್ನು ಅತಿಯಾಗಿ ಮಾಡಿದರೆ ಮುಂದೊಂದು ದಿನ ಬಹಳ ದೊಡ್ಡ ತೊಂದರೆಯನ್ನು ಎದುರಿಸಬೇಕಾಗುತ್ತದೆ. ಪ್ಲಾಸ್ಟಿಕ್ ಬಳಸಿದರೂ ಅದನ್ನು ಮಿತಿಯಾಗಿ ಬಳಸಬೇಕು. ಪ್ಲಾಸ್ಟಿಕ್ ಬಳಸಿದ್ದನ್ನು ಅಲ್ಲಲ್ಲಿ ಬಿಸಾಡಬಾರದು. ಇದರಿಂದ ಮಣ್ಣಿನ ಮಾಲಿನ್ಯ ಮತ್ತು ಪರಿಸರ ಮಾಲಿನ್ಯವಾಗುತ್ತದೆ. ಕೆಲವು ಕಡೆ ದನಗಳನ್ನು ಕಟ್ಟಿಹಾಕದೆ ಮೇಯಲು ಬಿಡುತ್ತಾರೆ. ಆಗ ಅವುಗಳು ಆಹಾರ ಅರಸಿಕೊಂಡು ಬಂದು ಒಂದು ಕಡೆ ರಾಶಿ ಹಾಕಿದ ಪ್ಲಾಸ್ಟಿಕ್‌ಗಳನ್ನು ತಿನ್ನುತ್ತದೆ. ಅವುಗಳ ಹೊಟ್ಟೆಯ ಒಳಗೆ ಸಂಗ್ರಹವಾಗುತ್ತಾ ಹೋಗಿ ಒಂದು ದಿನ ಅದು ಸಾವನಪ್ಪಬಹುದು. ಹಾಗಾಗ ನಾವು ಪ್ಲಾಸ್ಟಿಕ್‌ಗಳನ್ನು ಎಲ್ಲಿಯಾದರಲ್ಲಿ ಬಿಸಾಡಬಾರದು. ನಾವು ನಡೆದು ಬರುವ ದಾರಿಯಲ್ಲಿ ಎಲ್ಲಿಯಾದರೂ ನೋಡಿದರೆ ಅದನ್ನು ತಂದು

ಕಸದ ಬುಟ್ಟಿಗೆ ಹಾಕಬೇಕು. ಪ್ರತಿಯೊಬ್ಬರು ಹೀಗೆ ಮಾಡುವುದರಿಂದ ನಾವು ಪ್ಲಾಸ್ಟಿಕ್‌ನಿಂದಾಗುವ ಮಾಲಿನ್ಯವನ್ನು ತಡೆಗಟ್ಟಬಹುದು. ಪರಿಸರವನ್ನು ಸ್ವಚ್ಛವಾಗಿಡುವುದರಿಂದ ಶುದ್ಧಗಾಳಿಯನ್ನು ಸೇವಿಸಬಹುದು. ಈಗ ಸ್ವಚ್ಛತೆಯನ್ನು ಎಲ್ಲಾ ಕಡೆ ಪಾಲಿಸುತ್ತಿದ್ದಾರೆ. ಪ್ರತಿಯೊಂದು ಶಾಲೆ, ಬ್ಯಾಂಕು, ರಸ್ತೆ, ಹೀಗೆ ಮಾಡುವುದರಿಂದ ಇತರ ದೇಶದಂತೆಯೇ ಭಾರತವನ್ನು ಸ್ವಚ್ಛವಾಗಿಡಬಹುದು. ಕಸಗಳನ್ನು ಎಲ್ಲಿಯಾದರಲ್ಲಿ ಬಿಸಾಡದೇ ಅದನ್ನು ತೆಗೆದುಕೊಂಡು ಹೋಗಲು ಬರುವ ಗಾಡಿಗಳಲ್ಲಿ ಹಾಕಿದರೆ ಅವರು ಎಲ್ಲವನ್ನು ಸೇರಿಸಿ ರೀ ಸೈಕಲ್ ಮಾಡುತ್ತಾರೆ. ಸ್ವಚ್ಛಭಾರತ ಎನ್ನುವುದು ಪ್ರತಿಯೊಬ್ಬ ನಾಗರಿಕನ ಕನಸಾಗಬೇಕು.

ಸಾಮಾಜಿಕ ಜಾಲತಾಣಗಳು ಮತ್ತು ಯುವಪೀಳಿಗೆ

ಭವ್ಯ ಎಸ್ ರಾವ್
ಪ್ರಥಮ ಬಿ.ಬಿ.ಎ.

ನಾವು ಹಳ್ಳಿಯಲ್ಲಿದ್ದರೂ ದಿಲ್ಲಿಯವರೊಡನೆ ಸಂಪರ್ಕವನ್ನು ಸಾಧಿಸಿಕೊಳ್ಳಬಹುದು. ಅಂದರೆ ಈ ಸಾಮಾಜಿಕ ಜಾಲತಾಣಗಳು ಅಷ್ಟೊಂದು ಮುಂದುವದಿದೆಯಂದರೆ ಯಾವುದೇ ಮದುವೆ ಶುಭ ಸಮಾರಂಭಗಳಿಗೆ ಹೋಗಲಿ ಎಲ್ಲಿ ಹೋದರಲ್ಲಿ ಕೇಳಿಬರುವ ವಿಷಯಗಳು ಒಂದೇ. ನಿನ್ನ ವಾಟ್ಸ್‌ಪ್ ಡಿ.ಪಿ. ಚೆನ್ನಾಗಿತ್ತು. ನಿನ್ನ ಫೋಟೋಗಳನ್ನು ಮೊಬೈಲ್‌ನಲ್ಲಿ ನೋಡಿದೆ. ಅವರು ಬಂದ ಕಾರ್ಯವನ್ನೇ ಬಿಟ್ಟು ಮೊಬೈಲ್‌ನ ಗುಂಗಿನಲ್ಲಿರುತ್ತಾರೆ. ಎಷ್ಟೋ ವಿದ್ಯಾರ್ಥಿಗಳು ತಾವು ಮೊಬೈಲ್‌ನಲ್ಲಿ ಅಥವಾ ಯಾವುದೇ ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿ ಸಮಯ ವ್ಯರ್ಥ ಮಾಡುವುದರ ಬದಲು ಕಥೆ, ಕಾದಂಬರಿ ಅಥವಾ ಇನ್ಯಾವುದೋ ಜ್ಞಾನವನ್ನು ವೃದ್ಧಿ ಮಾಡುವ ಕಡೆಗೆ ತಮ್ಮ ಗಮನವನ್ನು ಹರಿಸಬೇಕು. ಈಗಿನ ಕಾಲ ಬದಲಾಗಿದೆ. ಮೊದಲಿನ ಕಾಲದಲ್ಲಿ ಹಿರಿಯರು ತಮ್ಮ ಮಕ್ಕಳಿಗೆ ವಧುವನ್ನೋ ವರನನ್ನೋ ಹುಡುಕಿ ಮದುವೆ ಮಾಡಿಸುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಅವರಿಗೆ ಬೇಕಾದ ಬಾಳ ಸಂಗಾತಿಯನ್ನು ಶಾದಿ ಡಾಟ್ ಕಾಮ್‌ಗಳ ಮೂಲಕ ಅವರೇ ಹುಡುಕಿಕೊಳ್ಳುತ್ತಾರೆ.

ಈಗಿನ ಕಾಲದಲ್ಲಿ ಮೊಬೈಲ್, ಲ್ಯಾಪ್‌ಟಾಪ್‌ಗಳ ಬಳಕೆ ಅತಿಯಾಗಿ ಮುಂದುವರಿದಿದ್ದರಿಂದ ಗುಬ್ಬಚ್ಚಿಗಳು ಅಳಿವಿನ ಅಂಚಿಗೆ ಬಂದಿದೆ. ಅಂದರೆ ಮೊಬೈಲ್ ಟವರ್‌ಗಳಲ್ಲಿ ತಮ್ಮ ಗೂಡನ್ನು ಕಟ್ಟಿಕೊಂಡಿರುವ ಗುಬ್ಬಿಗಳು ಯಾವುದಾದರೂ ವಿದ್ಯುತ್ ದೋಷಗಳಿಗೆ ಗುರಿಯಾಗಿ ಸಾವನ್ನಪ್ಪುತ್ತವೆ. ಮೊದಲಿನ ಕಾಲದಲ್ಲಿ ಬೆಳಿಗ್ಗೆ ಮನೆಯಲ್ಲಿ ಭಕ್ತಿಗೀತೆ, ಸಂಜೆ ಭಜನೆಗಳು ನಡೆಯುತ್ತಿದ್ದವು. ಆದರೆ ಈಗಿನ ಕಾಲದಲ್ಲಿ ಮೊಬೈಲುಗಳಿಂದಾಗಿ ಹಾಡುವವರು ಸಂಖ್ಯೆ ಹಾಗೇ ಜನಪದ ಹಾಡುಗಾರರು ನಶಿಸುತ್ತಿದ್ದಾರೆ. ಹೇಗೆ ಬ್ರಿಟಿಷರು ಭಾರತಕ್ಕೆ ಬಂದು ಭಾರತವನ್ನು ದೋಚಿದರೋ ಅದೇ ರೀತಿ ಈ ಮೊಬೈಲ್ ಹಾಗೂ ಇನ್ನಿತರ ಸಾಮಾಜಿಕ ಜಾಲತಾಣಗಳು ನಮ್ಮ ಜನಪದ ಹಾಡು, ಭಕ್ತಿಗೀತೆ, ಭಾವಗೀತೆಗಳ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಈ ಸಾಮಾಜಿಕ ಜಾಲತಾಣಗಳು ನಮ್ಮ ಈ ಹದಿಹರೆಯದ ಮಕ್ಕಳ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತಿವೆ. ಉದಾ: ಮೋವೋ ಚಾಲೆಂಜ್, ಕೀಕೀ ಡಾನ್ಸ್ ಇವುಗಳಿಂದಾಗಿ ಎಷ್ಟೋ ವಿದ್ಯಾರ್ಥಿಗಳು ತಮ್ಮ ಜೀವನವನ್ನೇ ಹಾಳು ಮಾಡಿಕೊಂಡಿದ್ದಾರೆ.

ಈಗಿನ ಕಾಲದಲ್ಲಿ ಸಾಮಾಜಿಕ ಜಾಲತಾಣಗಳು ಬೇಕು ನಿಜ. ಆದರೆ ಅದು ಎಷ್ಟುಬೇಕು ಹೇಗೆ ಬಳಸಬೇಕು ಎಂಬುದನ್ನು ವಿದ್ಯಾರ್ಥಿಗಳಾದ ನಾವು ಅರ್ಥ ಮಾಡಿಕೊಳ್ಳಬೇಕು.

ಅತಿಯಾದೊಡನೆ ಅಮೃತವೂ ವಿಷ ಎಂಬ ಮಾತಿದೆ. ಅದೇ ರೀತಿ ಸಾಮಾಜಿಕ ಜಾಲತಾಣಗಳು ಎಷ್ಟು ಬೇಕೋ ಅಷ್ಟೇ ಬಳಸುವುದು ಉತ್ತಮ.

ಅಂತರ್ಜಾಲದ ಆಗಮನ
ಪುಸ್ತಕಗಳ ನಿರ್ಗಮನ
ಜಗತ್ತಿನ ಆಧುನೀಕರಣ
ಹಾಳಾಗುತಿದೆ ಹದಿಹರೆಯದವರ ಜೀವನ

ಗೆಳೆತನ

ಲಿಶ್ಮಿತಾ
ಪ್ರಥಮ ಬಿ.ಬಿ.ಎ.

ಎಲ್ಲರ ಜೀವನದಲ್ಲಿ ಗೆಳೆತನ ಎಂಬುದು ಇರುತ್ತದೆ. ನಮ್ಮ ಸ್ನೇಹಿತರು ಯಾರು ಎಲ್ಲಿರುವರು ಎಂದು ಯಾರಿಗೂ ತಿಳಿದಿರುವುದಿಲ್ಲ. ಜೀವನ ಎಂಬ ಪ್ರಯಾಣದಲ್ಲಿ ಎಲ್ಲವು ಒಂದೊಂದು ರೀತಿಯಲ್ಲಿ ತಿಳಿಯುತ್ತಾ ಹೋಗುತ್ತದೆ. ಸಣ್ಣ ಮಕ್ಕಳಿರುವಾಗ ಅಂಗನವಾಡಿಯಲ್ಲಿ ಕೆಲವರು ಪರಿಚಯವಾಗಿ ಅದು ಗೆಳೆತನವಾಗುತ್ತದೆ. ಮುಂದೆ ಹೋದಂತೆ ಪ್ರಾಥಮಿಕ ಶಿಕ್ಷಣದಲ್ಲಿ ಹೋದ ಗೆಳೆಯರು ಗೆಳತಿಯರು ಸಿಗುತ್ತಾರೆ. ಅದರಲ್ಲಿ ಕೆಲವು ಸ್ನೇಹಿತರು ಲಾಭಕ್ಕಾಗಿ ಸ್ನೇಹದ ರೀತಿಯಲ್ಲಿ ಹತ್ತಿರವಾಗುತ್ತಾರೆ. ಇನ್ನೂ ಕೆಲವರು ಒಳ್ಳೆಯ ಸ್ನೇಹಕ್ಕಾಗಿ ಸ್ನೇಹ ಮಾಡುತ್ತಾರೆ. ಈ ದಿನಗಳಲ್ಲಿ ಸ್ನೇಹಗಳಿಗೆ ಪ್ರೀತಿಗಳಿಗೆ ಬೆಲೆ ಇಲ್ಲದಂತಾಗಿದೆ. ನಾವು ಕಷ್ಟದಲ್ಲಿ ಇರುವಾಗ ಯಾರು ನಮ್ಮ ಬಳಿ ಬಂದು ನಮ್ಮ ಕಷ್ಟದೊಂದಿಗೆ ಭಾಗಿ ಆಗುತ್ತಾರೊ ಅವರು ನಿಜವಾದ ಸ್ನೇಹಿತರು. ಅದೇ ರೀತಿ ಕೆಲವರು ಸ್ನೇಹಿತರು ನಮ್ಮ ಸಂತೋಷದ ಸಮಯದಲ್ಲಿ ಮಾತ್ರ ನಮ್ಮೊಂದಿಗೆ ಭಾಗಿಯಾಗಿರುತ್ತಾರೆ. ಆದರೆ ಯಾರು ಯಾವ ರೀತಿ ಇರುವರೆಂದು ತಿಳಿಯಲು ಅಸಾಧ್ಯ. ಕೆಲವು ಸಂದರ್ಭಗಳಿಗೆ ಸರಿಯಾಗಿ ಅವರ ಮುಖವಾಡಗಳು ಕಳಿಯುತ್ತದೆ. ಆಗ ನಮ್ಮ ನಿಜವಾದ ಸ್ನೇಹಿತರು ಯಾರು ಎಂದು ನಮಗೆ ತಿಳಿಯುತ್ತದೆ.

ನಿಜವಾದ ಸ್ನೇಹ ಯಾವತ್ತೂ ಕೂಡ ಮುಗಿಯುವುದಿಲ್ಲ. ಯಾರು ಏನೇ ಮಾಡಿದರು ಸ್ನೇಹ ನಿಲ್ಲುವುದಿಲ್ಲ. ಗೆಳೆತನ ಎಂದರೆ ಸಣ್ಣ ಪುಟ್ಟ ಮನಸ್ತಾಪಗಳು ಬಂದು ಹೋಗುತ್ತದೆ. ಅದನ್ನು ಸರಿಮಾಡಿಕೊಂಡು ಮತ್ತೆ ಒಂದಾಗಿರುತ್ತಾರೆ. ಗೆಳೆತನದಲ್ಲಿ ಸಣ್ಣ ಪುಟ್ಟ ಜಗಳಗಳು ಎಷ್ಟು ಖುಷಿಯಾಗಿರುತ್ತದೆ. ಆದರೆ ಆ ಕ್ಷಣದಲ್ಲಿ ಬೇಜಾರು ಆಗಿರುತ್ತದೆ. ನಂತರದ ದಿನಗಳಲ್ಲಿ ಆ ಕ್ಷಣಗಳನ್ನು ನೆನೆದು ಖುಷಿಪಡುತ್ತಾ ನಮ್ಮೊಂದಿಗೆ ಇರುವವರನ್ನೂ ಸಹ ಖುಷಿಪಡಿಸುತ್ತೇವೆ. ಆ ಕ್ಷಣಗಳು ಎಷ್ಟು ಸುಂದರವಾಗಿರುತ್ತದೆ. ಈ ಸ್ನೇಹ ಎಂಬುವುದು ಎಲ್ಲರ ಜೀವನದಲ್ಲಿಯೂ ಬರುತ್ತದೆ. ಅದು ನಿಜವಾದ ಸ್ನೇಹನು ಅಲ್ಲವೋ ಎನ್ನುವುದು ಬೇರೆ ವಿಷಯ. ಆದರೆ ಆ ಸ್ನೇಹದಲ್ಲಿ ಖುಷಿ ಇರುತ್ತದೆ. ನಂತರ ಜಗಳವಾಗಿ ಬೇರೆಯಾಗಿ ಹೊಸ ರೀತಿಯ ಸ್ನೇಹಿತರು ಸಿಗುತ್ತಾರೆ. ನನ್ನ ಜೀವನದಲ್ಲಿಯೂ ತುಂಬಾ ಸ್ನೇಹಿತರಿದ್ದಾರೆ. ಆದರೆ ಕೆಲವರು ಉಪಯೋಗವಿರುವಾಗ ಮಾತ್ರ ನನ್ನನ್ನು ನೆನಪಿಸಿಕೊಳ್ಳುತ್ತಾರೆ. ಇನ್ನೂ ಕೆಲವರು ನನ್ನ ಜೊತೆ ಯಾವತ್ತೂ ಇರುತ್ತಾರೆ. ನನ್ನ ಸ್ನೆಹದ ಮೇಲೆ ನನಗೆ ನಂಬಿಕೆ ಇದೆ. ಪ್ರಾಥಮಿಕ ಶಾಲೆಗಳಲ್ಲಿ ಪರಿಚಯವಾದ ನನ್ನ ಗೆಳತಿಯು ನನ್ನ ಜೊತೆ ಈಗಲೂ ಇದ್ದಾಳೆ. ಆದರೆ 8ನೇ ತರಗತಿಯಲ್ಲಿ ಬೇರೆ ಬೇರೆ ಶಾಲೆಗಳಿಗೆ ಹೋಗಿ ಅವಳ ಜೊತೆ ಸಂಪರ್ಕವಿರಲಿಲ್ಲ. ಅವರ ನಂಬರ್ ಕೂಡಾ ನನ್ನ ಬಳಿ ಇರಲಿಲ್ಲ. ನನ್ನ ನಂಬರ್ ಅವಳ ಬಳಿ ಇರಲಿಲ್ಲ. ಆದರೆ ಸ್ನೇಹ ಗೆಳೆತನ ನಮ್ಮ ಜೀವನದಲ್ಲಿ ಯಾರು ಇರಬೇಕು ಇರಬಾರದು ಎಂದು ದೇವರು ನಿರ್ಧರಿಸುತ್ತಾರೆ. ಅದೇ ರೀತಿ ಅವಳು ನನಗೆ ಮತ್ತೆ ಪಿ.ಯು.ಸಿ.ಯಲ್ಲಿ ಒಂದಾಗಿ ನಂಬರ್‌ಗಳನ್ನು ಎಕ್ಸ್‌ಚೇಂಜ್ ಮಾಡಿಕೊಂಡು ಈಗ ಸಂಪರ್ಕದಲ್ಲಿದ್ದೇವೆ. ಅದೇ ರೀತಿ ಇನ್ನೂ ಸ್ನೇಹಿತರು ನನ್ನ ಜೊತೆ ಪ್ರಾಥಮಿಕ ಶಾಲೆಯಲ್ಲಿ ಅವರ ಜೊತೆಗಿನ ಸ್ನೇಹ ಇನ್ನೂ ಹಾಗೇ ಇದೆ. ಆ ಸ್ನೇಹ ಅದೇ ರೀತಿ ಇರಲಿ ಎಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ. ಇನ್ನೂ ನಮ್ಮ ಜೀವನ ಸಾಗುತ್ತಿದ್ದಂತೆ ತುಂಬಾ ಸ್ನೇಹಿತರು ಬಂದು ಹೋಗುತ್ತಾರೆ. ಅದರೆ ಯಾವ ರೀತಿಯ ಗೆಳತಿಯರು ಗೆಳೆಯರು ಸಿಗುತ್ತಾರೆ ಎಂದು ತಿಳಿದಿಲ್ಲ. ನನ್ನ ಜೀವನದಲ್ಲಿ ಎಲ್ಲರಿಗಿಂತಲೂ ಮೊದಲು ನನ್ನ ಅಣ್ಣ ಮೊದಲನೆಯ ಸ್ನೇಹಿತ. ಅನಂತರ ಬೇರೆಯವರು.

ಏನೇ ಆಗಲಿ ಸ್ನೇಹಿತರು ಯಾವಾಗಲೂ ಎಂದಿಗೂ ಜೊತೆಯಾಗಿ ಖುಷಿಯಾಗಿ ಅವರ ಸ್ನೇಹ ಎಂದಿಗೂ ಹಾಗೇ ಇರಲಿ ಎಂದು ಈ ನಿಮ್ಮ ಸ್ನೇಹಿತೆಯ ಆಶ್ರಯ. I Love friendship Friendship forever.

ಮೊಬೈಲ್ ಬಳಕೆ

ರಕ್ಷಿತ
ಪ್ರಥಮ ಬಿ.ಎ.

ದೇಶದಲ್ಲಿ ತಂತ್ರಜ್ಞಾನವು ಮುಂದುವರಿಯುತ್ತಿದೆ. ಅಲ್ಲದೆ ಮೊಬೈಲ್ ಬಳಸುವವರ ಸಂಖ್ಯೆಯೂ ಹೆಚ್ಚಾಗಿದೆ. ತಂತ್ರಜ್ಞಾನ ಮುಂದುವರಿದ ಹಾಗೇ ಜನರು ಅದಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ಈಗ ಮೊಬೈಲ್ ಅನ್ನು ಪ್ರತಿಯೊಬ್ಬರೂ ಬಳಸುತ್ತಿದ್ದಾರೆ. ನಾವು ಮೊಬೈಲ್‌ನ್ನು ಮಿತವಾಗಿ ಬಳಸಬೇಕು. ಮೊಬೈಲ್‌ನಲ್ಲಿ ಉಪಯೋಗವಾಗುವಂತಹ ವಿಷಯಗಳು ಇರುತ್ತವೆ. ಅಲ್ಲದೆ ಇದು ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಸಾಮಾಜಿಕ ಜಾಲತಾಣಗಳು ತುಂಬಾ ವಿಸ್ತರಿಸುತ್ತಿದೆ. ನಾವು ಯಾವುದನ್ನು ಆರಿಸಿಕೊಳ್ಳಬೇಕು ಎಂಬುದು ನಮ್ಮ ಆಲೋಚನೆಗೆ ಬಿಟ್ಟಿದ್ದು. ಮೊಬೈಲ್ ಅನ್ನು ಹೆಚ್ಚು ಬಳಸುವುದರಿಂದ ಮನುಷ್ಯನ ಮೇಲೆ ಅಗಾಧ ಪರಿಣಾಮ ಉಂಟಾಗುತ್ತವೆ. ಅಲ್ಲದೆ ಈಗಿನ ಕಾಲದಲ್ಲಿ ಚಿಕ್ಕ ಮಕ್ಕಳ ಕೈಯಲ್ಲೂ ಮೊಬೈಲ್ ಇರುತ್ತದೆ. ಮೊಬೈಲ್‌ನಲ್ಲಿಯೇ ಆಟವಾಡಲಿಕ್ಕೆ ಇಷ್ಟಪಡುತ್ತಾರೆ. ಇದು ಮಕ್ಕಳ ಮೇಲೆ ಒತ್ತಡವನ್ನು ಹೆಚ್ಚಿಸುತ್ತವೆ. ಮೊಬೈಲ್‌ನಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು ಇರುತ್ತವೆ. ಶಿಕ್ಷಣ ಕ್ಷೇತ್ರಕ್ಕೆ ಮಾತ್ರ ಸೀಮಿತವಲ್ಲದೆ ಎಲ್ಲಾ ಕ್ಷೇತ್ರದಲ್ಲೂ ಇದರ ಉಪಯೋಗವಿದೆ. ದೇಶದಲ್ಲಿ ಮೊಬೈಲ್ ಬಳಸುವವರ ಸಂಖ್ಯೆ ಸಮೀಕ್ಷೆಯೊಂದರ ಮೂಲಕ ತಿಳಿಯಬಹುದು. ಮೊಬೈಲ್‌ನಲ್ಲಿ ಯಾವುದು ನಮಗೆ ಮುಖ್ಯವಾಗಿ, ಉಪಯೋಗಕ್ಕೆ ಬರುತ್ತದೋ ವಿಷಯಗಳನ್ನು ಆರಿಸಿಕೊಳ್ಳಬೇಕು.

ತಂತ್ರಜ್ಞಾನ ಮುಂದುವರಿಯುತ್ತಿರುವುದರಿಂದ ಮೊಬೈಲ್ ಬಳಸುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಮೊಬೈಲ್‌ನ್ನು ಮಿತವಾಗಿ ಬಳಸಬೇಕು. ಸಾಮಾಜಿಕ ಜಾಲತಾಣಗಳಲ್ಲದೆ, ಈಗ ಸೆಲ್ಫೀ ತೆಗೆಯುವುದು ಒಂದು ವಿಶೇಷವಾಗಿದೆ. ಎಲ್ಲೆಂದರಲ್ಲಿ ಈಗಿನ ಯುವಕ–ಯುವತಿಯರಿಗೆ ಸೆಲ್ಫೀ ತೆಗೆಯುವುದು ಮಾಮೂಲಿಯಾಗಿದೆ. ಈ ಸೆಲ್ಫೀಯಿಂದಾಗಿ ಅನೇಕ ಜನರು ಸಾವಿಗೀಡಾಗಿದ್ದಾರೆ. ಇದರಿಂದ ಜನರ ಪ್ರಾಣಕ್ಕೆ ಹಾನಿ ಆಗುತ್ತಿದೆ. ತಂತ್ರಜ್ಞಾನವು ಮುಂದುವರಿಯುತ್ತಿರುವ ಕಾರಣದಿಂದ ಹೊಸ ಹೊಸ ಆವಿಷ್ಕಾರಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಮಾರು ಹೋಗುತ್ತಿದ್ದಾರೆ. ಮೊಬೈಲ್‌ನಲ್ಲಿ ಯಾವುದನ್ನು ಆರಿಸಿಕೊಳ್ಳಬೇಕು ಎಂಬುದು ವ್ಯಕ್ತಿಯ ಆಲೋಚನೆಗೆ ಬಿಟ್ಟದ್ದು. ಒಟ್ಟಿನಲ್ಲಿ ಮೊಬೈಲ್ ಬಳಕೆಯೂ ಹೆಚ್ಚಾಗುತ್ತಿದೆ.

ಮೊಬೈಲ್ ಅನ್ನು ಬಳಸುವುದರಿಂದ ಆಗುವ ಅಪಾಯಗಳ ಬಗ್ಗೆ ಜನರಿಗೆ ಮಾಹಿತಿಯನ್ನು ನೀಡಬೇಕು. ಅಲ್ಲದೆ ವಿದ್ಯಾರ್ಥಿಗಳಿಗೂ ಈ ವಿಷಯ ತಿಳಿಸಬೇಕಿದೆ. ಶಾಲಾ ಕಾಲೇಜುಗಳಲ್ಲಿ ಮೊಬೈಲ್ ಬಳಕೆಯ ಬಗ್ಗೆ ಕಾರ್ಯಕ್ರಮಗಳು ನಡೆಯುತ್ತಿವೆ ಮತ್ತು ಮೊಬೈಲ್ ಬಳಕೆಯ ಬಗ್ಗೆ ಜಾಥಾಗಳು ನಡೆಯುತ್ತಿದೆ. ಮೊಬೈಲ್‌ನ್ನು ಯಾವ ರೀತಿ ಬಳಸಬೇಕು. ಅದನ್ನು ಹೆಚ್ಚು ಬಳಸುವುದರಿಂದ ಆಗುವ ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡುತ್ತಿದ್ದಾರೆ. ಮೊಬೈಲ್ ಅನ್ನು ಎಷ್ಟು ಕಡಿಮೆ ಬಳಸಬೇಕು ಅಷ್ಟೇ ಮೊಬೈಲ್ ಉತ್ತಮ. ಒಟ್ಟಿನಲ್ಲಿ ಮೊಬೈಲ್ ಅನ್ನು ಮಿತವಾಗಿ ಬಳಸಬೇಕು. ತಂತ್ರಜ್ಞಾನ ಬೆಳೆದ ಹಾಗೆ ಜನರು ಅದಕ್ಕೆ ಹೊಂದಿಕೊಂಡು ಹೋಗಬೇಕು.

"ಬದುಕು ಜಟಕಾಬಂಡಿ
ವಿಧಿಯದರ ಸಾಹೇಬ
ಕುದುರೆನೀನ್ ಅವನು ಪೇಳ್ದಂತೆ ಪಯಣಿಗರು
ಮದುವೆಗೋ ಮಸಣಕೊಹೋಗೆಂದ
ಕಡೆಗೋಡು
ಪದಕುಸಿಯೆ ನೆಲವಿಹುದು – ಮಂಕುತಿಮ್ಮ

– ಡಿ.ವಿ.ಜಿ.

ಜೀವನದಲ್ಲಿ ಯಶಸ್ಸು ಹೇಗೆ ಸಾಧಿಸಬೇಕು

ಭೀಮೇಶ
ಪ್ರಥಮ ಬಿ.ಎ.

ವಿದ್ಯಾರ್ಥಿ ಜೀವನ ಎಂದರೆ ಪರಿಶ್ರಮ. ನಾವು ಎಷ್ಟು ಕಷ್ಟಪಟ್ಟು ಓದುತ್ತೇವೆ ಮತ್ತು ವಿವಿಧ ಸ್ಪರ್ಧಾಸ್ಫೂರ್ತಿಯಂತಹ ಪುಸ್ತಕಗಳನ್ನು ಓದಿದರೆ ಯಶಸ್ಸು ನಿಜ. ನಮ್ಮ ಭಾರತಕ್ಕೆ ಬೇಕಾಗಿರುವುದು ಸ್ವಾಮೀ ವಿವೇಕಾನಂದರು ಹೇಳಿರುವ ಹಾಗೆ ಕಬ್ಬಿಣದಂತಹ ಮಾಂಸಗಳು ಉಕ್ಕಿನಂತಹ ನರಗಳು ಇದು ನಮಗೆ ಬೇಕು. ಇದು ಇದ್ದರೆ ಮೊದಲು ನಾವು ಯಾವುದೇ ಕಾರ್ಯದಲ್ಲಿ ಯಶಸ್ವಿಯಾಗಲು ಸಾಧ್ಯ.

ಒಬ್ಬ ವಿದ್ಯಾರ್ಥಿಗೆ ಯಾವುದೇ ಗುರಿ ಇದ್ದರೆ ಮುಂದೆ ಗುರಿ ಹಿಂದೆ ಗುರು ಇರಬೇಕು. ಅಂದಾಗ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ.

ಹಕ್ಕಿಯಂತೆ ಹಕ್ಕಿತರ ಹಾರಲಾಗದಿದ್ದರೂ ಓಡು? ಓಡಲಾಗದಿದ್ದರೆ ನಡೆ, ನಡೆಯಲಾಗದಿದ್ದರೆ ತೆವಳು ಆದರೆ ಜೀವನದಲ್ಲಿ ಗುರುಮುಟ್ಟುವ ತನಕ ಪರಿಶ್ರಮ ಮಾತ್ರ ಬಿಡಬೇಡ.

ಈಗ ನಾವು ಕಷ್ಟಪಟ್ಟರೆ ಮುಂದೆ ಸುಖವಾಗಿ ಜೀವಿಸಬಹುದು. ಗುರಿ ಇಲ್ಲದಿದ್ದರೇ ಅವನು ಸತ್ತಹಾಗೇ ಎಂಬಂತೆ ಜೀವನದಲ್ಲಿ ಕಷ್ಟ ಕಾರ್ಪಣ್ಯಗಳು ಸಹಜ. ಅವುಗಳನ್ನು ಮೆಟ್ಟಿ ಎದುರಿಸಿ ಗುರಿ ತಲುಪುವುದೇ ವಿದ್ಯಾರ್ಥಿಯ ನಿಜವಾದ ಲಕ್ಷಣ.

ಮೊದಲು ಮಾನವನಾಗು ನಂತರ ಏನು ಬೇಕಾದರೂ ಸಾಧನೆ ಮಾಡಬಹುದು ಎಂದು ವಿವೇಕಾನಂದರು ಹೇಳಿದ್ದಾರೆ.

ನಾನು ಸೆಕೆಂಡ್ ಪಿ.ಯು.ಸಿ. ಹೆಚ್ಚಿನ ಮಾರ್ಕ್ಸ್ ತೆಗೆಯಲಿಕ್ಕೆ ಕಾರಣ ನನ್ನ ಗುರುಗಳು ಆದ ಡಾ। ನಾಗರಾಜ್ ಮರೆಯಣ್ಣವರ್ ಗುರುಗಳು. ಎಲ್ಲರ ಮನಸ್ಸು ಅರ್ಥಮಾಡಿಕೊಂಡು ಜೀವನದಲ್ಲಿ ಅನುಭವದ ನುಡಿಗಳನ್ನು ಹೇಳುತ್ತಿದ್ದರು. ಆವಾಗ ನಾನು ಅವರ ಮಾತಿನಿಂದ ಓದಲೂ ಶುರುಮಾಡಿದೆ ಅವರಿಂದ ನನಗೆ ಹೆಚ್ಚಿಗೆ ಮಾರ್ಕ್ಸ್ ಬಂತು.

ಮನುಷ್ಯ ಜೀವನದಲ್ಲಿ ತ್ಯಾಗ ಸೇವೆ ಸಹನೆ ಪ್ರೀತಿ ಇದ್ದರೆ ಮಾತ್ರ ಯಶಸ್ಸು ಸಾಧಿಸಬಹುದು.

ನಾನು ಜೀವನದಲ್ಲಿ ಯಶಸ್ಸು (ಗೆದ್ದೇ ಗೆಲ್ಲುತ್ತೇನೆ) ಗಳಿಸುತ್ತೇನೆಂಬ ಆತ್ಮವಿಶ್ವಾಸ ನಮಗಿರಬೇಕು. ಸ್ಟೂಡೆಂಟ್ ಲೈಫ್ ಈಸ್ ಗೋಲ್ಡನ್ ಲೈಫ್ ಎನ್ನುವ ಹಾಗೆ ನಾವು ಸಿಕ್ಕ ಸಮಯವನ್ನು ವ್ಯರ್ಥ ಮಾಡದೇ ಒಳ್ಳೆಯ ಕಾರ್ಯಗಳಿಗೆ ಬಳಸಿಕೊಂಡರೆ ಯಶಸ್ಸು ಖಂಡಿತ ಬಂದೇ ಬರುತ್ತದೆ.

ಕುಟುಂಬ

ಸೌಂದರ್ಯ
ಪ್ರಥಮ ಬಿ.ಎ.

ಒಂದು ಮನೆಯಲ್ಲಿ ಅಜ್ಜ ಅಜ್ಜಿ ದೊಡ್ಡಪ್ಪ ಚಿಕ್ಕಪ್ಪ ಅಮ್ಮ ಅಪ್ಪ ಅಣ್ಣ ತಂಗಿ ಅಕ್ಕ ತಮ್ಮ ಹೀಗೆ ಅನೇಕರು ವಾಸಿಸುವ ಕಾಲ ಮೊದಲಾಗಿತ್ತು. ಆದರೆ ಇತ್ತೀಚೆಗೆ ಅದು ಕಡಿಮೆ ಆಗಿದೆ ಅಲ್ಲವೆ? ಮೊದಲೆಲ್ಲಾ ಮನೆತುಂಬಾ ಮಕ್ಕಳಿರಬೇಕು ಅಂತ ಹೇಳ್ತಾ ಇದ್ರು. ಆದ್ರೆ ಈಗ ಅದು ಕಡಿಮೆ ಆಗಿ ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ ಅನ್ನುವ ಕಾಲ ಆಗಿದೆ. ಕೂಡುಕುಟುಂಬದ ಮನೆಗಳಿಗೆ ಹೋದರೆ ಆ ಮನೆಯಲ್ಲಿ ಏನೋ ಒಂಥರಾ ಹಬ್ಬದ ವಾತಾವರಣ. ಅಲ್ಲಲ್ಲಿ ಮಕ್ಕಳ ಆಟಗಳು, ಹೆಂಗಸರು ಅಡುಗೆ ಮನೆಯಲ್ಲಿ ಕುಳಿತು ಕೆಲಸ ಮಾಡುತ್ತಾ ತಮಾಷೆ ಮಾಡುತ್ತಾ ಹರಟೆ ಹೊಡೆಯುವುದು. ಅಜ್ಜ–ಅಜ್ಜಿಯನ್ನು ಪ್ರೀತಿಯಿಂದ ನೋಡಿಕೊಳ್ಳುವುದು.ಇದನ್ನೆಲ್ಲಾ ನೋಡಿದ್ರೆ ತುಂಬಾ ಖುಷಿಯಾಗುತ್ತೆ. ಆದ್ರೆ ಬರುಬರುತ್ತಾ ಆ ಕಾಲವೇ ಹೊರಟ್ಹೋಗಿದೆ. ಈಗ ಟ್ರೆಂಡ್ ಎನ್ನೋ ಒಂದು ಪದ ಹೊಸ ಲೋಕಕ್ಕೆ ಎಲ್ಲರನ್ನು ಏಳೆದೋಯ್ತಾ ಇದೆ. ಮೊಬೈಲ್ ಅನ್ನುವ ಒಂದು ವಸ್ತು ಇದ್ದರೆ ಸಾಕು. ಚಿಕ್ಕವರಿಂದ ಹಿಡಿದು ವಯಸ್ಸಾದವರವರೆಗೂ ಬೆಳಿಗ್ಗೆ ಯಾವುದು ಮಧ್ಯಾಹ್ನ ಯಾವುದು ಎಂದು ಗೊತ್ತಾಗೋದಿಲ್ಲ. ಈಗಿನ ಕಾಲದ ಮಕ್ಕಳಿಗಂತೂ ತಮ್ಮ ಸಂಬಂಧಿಕರು ಯಾರು ಅಂತಾನೇ ಗೊತ್ತಿರೋದಿಲ್ಲ. ಕಾರಣ ಅವರು ಎಲ್ಲಿಗೂ ಹೋಗೋದಿಲ್ಲ.

ಸಂಬಂಧಿಕರ ಮನೆಯಲ್ಲಿ ಒಂದು ಮದುವೆ ಇದೆ ಬಾ ಅಂತ ಹೇಳಿದ್ರೆ ನೀನು ಹೋಗು ಅಮ್ಮ ನಾ ಮನೆಯಲ್ಲಿ ಇರ್ತೇನೆ, ಮನೆಯಲ್ಲಿ ಯಾರು ಇಲ್ಲ ಅಲ್ವಾ ಅಂತ ಹೇಳ್ತಾರೆ.

ಮೊದಲಿನ ಕಾಲದಲ್ಲಿ ಮನೆಯಿಂದ ಯಾರಾದರೂ ಹೊರಗಡೆ ಹೋಗಿ ಬರ್ತೇನೆ ಅಂತ ಹೇಳಿದ್ರೆ ಎಷ್ಟು ಬೇಗ ಬರ್ತಾರೋ ಅಂತ ಬಾಗಿಲಲ್ಲೆ ಕಾಯ್ತಾ ಇರ್ತಾರೆ. ಆದ್ರೆ ಈಗ ಎಷ್ಟು ಬೇಗ ಹೋಗ್ತಾರಪ್ಪಾ ಇವ್ರು ಅಂತಾ ಬಾಗಿಲು ಹಾಕೋಕೆ ಬಾಗಿಲು ಬಳಿ ನಿಂತಿರ್ತಾರೆ.

ಆಧುನಿಕ ಜಗತ್ತಿನಲ್ಲಿ ಈಗ ತಂದೆ ತಾಯಿಗೆ ಮಗು ಸಾಕು ಅನ್ನೋ ಹಾಗಾಗಿದೆ. ಇದೇ ರೀತಿ ಮುಂದುವರಿದರೆ ಈಗ ಹುಟ್ಟಿರೋ ಮಕ್ಕಳಿಗೆ ಮುಂದೆ ಹೋದ ಹಾಗೇ ದೊಡ್ಡಪ್ಪ ಚಿಕ್ಕಪ್ಪ ಅನ್ನೋ ಪದವೇ ಇರೋದಿಲ್ಲ, ಅಲ್ಲವೇ? ಅಜ್ಜ–ಅಜ್ಜಿ, ಮೊಮ್ಮಗ, ಮೊಮ್ಮಗಳು, ಅಪ್ಪ, ಅಮ್ಮ ಅಷ್ಟೆ. ಅಲ್ಲವೇ?

ಮತ್ತೆ ಮೊದಲಿನ ಕಾಲದಲ್ಲಿ ಮಕ್ಕಳು ಆಡುವ ರೀತಿ ಎಷ್ಟು ಚೆಂದ ಅಲ್ಲವೇ. ಕುಂಟೆಬಿಲ್ಲೆ, ಟಂಕಲ್, ಉಯ್ಯಾಲೆ, ಮರಕೋತಿ, ಹೀಗೆ ಹತ್ತು ಹಲವು ಆಟಗಳನ್ನು ಆಟ ಆಡುತ್ತಿದ್ದರು. ಆದ್ರೆ ಈಗಿನ ಮಕ್ಕಳು ಅಳಲು ಪ್ರಾರಂಭಿಸಿದರೆ ತಂದೆ ತಾಯಿಯದೇ ಒಂದು ಮೊಬೈಲ್ ತೆಗೆದು ಕೈಗೆ ಇಟ್ರೆ ಮುಗೀತು. ಮಗು ಅಲ್ಲಿ ಇರೋದು ಹೌದೋ ಅಲ್ವೋ ಅನ್ನೋದೆ ಅನುಮಾನವಾಗಿರುತ್ತೆ.

ಇದೇ ರೀತಿ ಮುಂದುವರಿದರೆ ಕೂಡುಕುಟುಂಬ ಅನ್ನೋ ಪದಾನೇ ಮರೆವೆವೇನೋ? ಮೊದಲೆಲ್ಲ ಸಂಸಾರ ಅಂದ್ರೆ ಜನ ಸಾಗರ. ಆದ್ರೆ ಈಗ ಮದುವೆ ಆಗಿ ಒಂದೇ ತಿಂಗಳಿಗೆ ಬೇರೆ ಮನೆ ಮಾಡುವ ಯೋಚನೆ. ಅಕಸ್ಮಾತ್ ಮನೆ ಮಾಡಿದ್ರೆ ಕೂಡ ಗಂಡ ಕೆಲಸಕ್ಕೆ ಹೆಂಡತಿ ಮನೆಯಲ್ಲಿ ಮಗು ಇದ್ರೆ ಅದನ್ನು ಶಾಲೆಗೆ ಕಳುಹಿಸಿದ್ರೆ ಯಾರಿಗೂ ಖುಷಿ ಇರೋದಿಲ್ಲ. ಒಂಟಿ ಅಂತ ಅನ್ನಿಸಿಬಿಡುತ್ತೆ.

ಅದೇ ಮೊದಲಿನ ಕಾಲದಲ್ಲಿ ಗಂಡು ಮಕ್ಕಳು ಕೆಲಸಕ್ಕೆ ಹೋದ್ರೆ, ಮನೆಯಲ್ಲಿ ಹೆಂಗಸರು ಮನೆಯಲ್ಲಿಯೇ ಇರ್ತಾರೆ. ಹಾಗೇ ಸಂಬಳವನ್ನು ತಂದೆಯ ಕೈಗೆ ಕೊಟ್ಟರೆ ಅವರೇ ಎಲ್ಲರಿಗೂ ಹಂಚುತ್ತಾರೆ. ನೆಮ್ಮದಿಯ ಜೀವನ.

ಬದುಕಿನಲ್ಲಿ ಇನ್ನೇನು ಬೇಕು. ಪ್ರೀತಿಯಿಂದ ನೋಡ್ಕೊಳ್ಳೊ ತಂದೆತಾಯಿಗಳು, ಹೆಂಡತಿ, ಮಕ್ಕಳು ಇದ್ದರೆ ಸುಖ ಶಾಂತಿ ನೆಮ್ಮದಿ ತಾನಾಗಿಯೇ ಬರುತ್ತದೆ. ಆದ್ರೆ ಮದುವೆ ಆಗಿ ಒಂದೇ ತಿಂಗಳಿಗೆ ಮನೆಬಿಟ್ಟು ಅತ್ತೆ–ಸೊಸೆ ಜಗಳ ಮಾಡ್ಕೊಂಡು ಕಿತ್ತಾಡ್ಕೊಂಡು ಹೋದ್ರೆ, ಒಬ್ಬರಿಗೂ ಸಹ ನೆಮ್ಮದಿ ಇರೋದಿಲ್ಲ.

ಪ್ರೀತಿ ಎಂಬ ಎರಡಕ್ಷರವು ನಮ್ಮಲ್ಲಿ ತುಂಬಿದ್ದರೆ. ಎಂತಹ ಕಷ್ಟವನ್ನು ಎದುರಿಸಬಹುದು. ಮೊದಲು ಮನುಷ್ಯ–ಮನುಷ್ಯರನ್ನು ಪ್ರೀತಿಸಬೇಕು. ಕೂಡುಕುಟುಂಬ ಅನ್ನೋ ಪದ ಒಡೆಯಬಾರದು. ಅತ್ತೆ–ಸೊಸೆ, ಅಮ್ಮ ಮಗಳ ಹಾಗೆ ಇದ್ದರೆ ಕೂಡುಕುಟುಂಬದಲ್ಲಿ ಬಿರುಕು ಬರೋದಿಲ್ಲ.

ಪ್ರೀತಿ, ಸ್ನೇಹ, ನಂಬಿಕೆ, ವಿಶ್ವಾಸ ನಮೆಲ್ಲರಲ್ಲಿ ಇರಲಿ.

ರಾಜಕೀಯ ಮತ್ತು ಯುವಜನತೆ

ಪಿ. ನಾಗೇಂದ್ರ ಮಧ್ಯಸ್ಥ
ಪ್ರಥಮ ಬಿ.ಎಸ್ಸಿ.

ನಮ್ಮ ದೇಶವು ಪ್ರಜಾಪ್ರಭುತ್ವವು ಹೊಂದಿದ ರಾಷ್ಟ್ರವಾಗಿದೆ. ಅಂದರೆ ಪ್ರಜೆಗಳಿಂದಲೇ ಆರಿಸಿದ ನಾಯಕನು ನಮ್ಮನ್ನು ಆಳುತ್ತಾನೆ. ಈ ಪ್ರಕ್ರಿಯೆಯೇ ರಾಜಕೀಯ ಎನ್ನಬಹುದು. ರಾಜಕೀಯ ಎಂಬ ವಿಷಯದಲ್ಲಿ ತಮ್ಮ ಸ್ವಂತ ಅಣ್ಣ–ತಮ್ಮ, ಅಪ್ಪ–ಮಗ, ಹೀಗೆ ಯಾವುದೇ ರೀತಿಯ ಸಂಬಂಧಗಳಿಗೆ ಅವಕಾಶವಿರುವುದಿಲ್ಲ.

ರಾಜಕೀಯ ಇಂದು ಯುವಜನತೆಯನ್ನು ತನ್ನ ಹತ್ತಿರ ಸೆಳೆಯುತ್ತಿದೆ. ಯುವಜನತೆಯು ತಮ್ಮ ಜೀವನವನ್ನು ಉಜ್ವಲವಾಗಿ ಮಾಡಿಕೊಳ್ಳಲು ಅಥವಾ ತಮ್ಮ ಜೀವನವನ್ನು ನಶಿಸಿ ಕೊಳ್ಳುವುದಕ್ಕೆ ಸಾಧ್ಯವಾಗುವುದು ಕೇವಲ ರಾಜಕೀಯದಿಂದ. ಈ ಪ್ರಸ್ತುತ ಯುಗದಲ್ಲಿ ರಾಜಕೀಯದ ಮೂಲಕ ಹಣವನ್ನು ಮಾಡಬಹುದೆಂಬುದು ಯುವ ಜನತೆ ನಂಬಿರುತ್ತಾರೆ. ಆದರೆ ಈ ನಂಬಿಕೆಗಳು ಸಮಯ, ಸಂದರ್ಭ ಹಾಗೂ ಹಿರಿಯ ನಾಯಕರುಗಳ ಮೇಲೆ ಅವಲಂಬಿತವಾಗಿರುತ್ತದೆ. ರಾಜಕೀಯವು ಮೂಲಕ ಹೆಸರು, ಹಾಗೂ ಜೀವನವನ್ನು ಉತ್ತಮವಾಗಿ ನಡೆಸಲು ಸಾಧ್ಯವಾಗುವ ಒಂದು ಉದ್ಯಮ ಎಂದರೆ ತಪ್ಪಾಗಲಾರದು. ಏಕೆಂದರೆ ಇಂದಿನ

ರಾಜಕೀಯದ ದಳಪತಿಗಳು ಕೇವಲ ಹಣವನ್ನು ಸಂಪಾದಿಸಿಕೊಳ್ಳುವುದರಲ್ಲೇ ನಿರತರಾಗಿರುತ್ತಾರೆ.

ಕೇವಲ ರಾಜಕೀಯವು ಯುವ ಜನತೆಯನ್ನು ಮಾತ್ರ ಆಕರ್ಷಿಸುತ್ತಿಲ್ಲ. ಬದಲಾಗಿ ಎಲ್ಲ ವರ್ಗದ ಜನರನ್ನು ತನ್ನತ್ತ ಸೆಳೆದುಕೊಳ್ಳುತ್ತಿದೆ. ರಾಜಕೀಯದ ಮೂಲಕ ಜನರಿಗೆ ಉಪಯೋಗವಾಗುವಂತಹ ಯೋಜನೆಗಳನ್ನು ಮಾಡಿದವರು ಕೂಡ ನಮ್ಮ ಕಣ್ಣ ಮುಂದೆ ಬದುಕುತ್ತಿದ್ದಾರೆ. ಅದೇ ಸಮಾಜದಲ್ಲಿ ರಾಜಕೀಯದ ದೆಸೆಯಿಂದ ಅನಾಚಾರವನ್ನು ಮಾಡಿ ತಮ್ಮ ಹೆಸರನ್ನು ತೆಗೆಸಿಕೊಂಡವರು ಕೂಡಾ ಬದುಕುತ್ತಿದ್ದಾರೆ. ಹಾಗಾಗಿ ರಾಜಕೀಯವು ಯುವಜನತೆಗೆ ತನ್ನ ಸಮಾಜವನ್ನು ಉಜ್ವಲವಾಗಿ ರೂಪುಗೊಳಿಸುವುದಕ್ಕೆ ನೆರವಾಗುತ್ತದೆ. ಒಮ್ಮೊಮ್ಮೆ ಅವುಗಳು ದುರುಪಯೋಗಕ್ಕೂ ಕಾರಣವಾಗುತ್ತದೆ ಎಂಬುದಕ್ಕೆ ಹಲವಾರು ಉದಾಹರಣೆಗಳು ನಮ್ಮ ಕಣ್ಣ ಮುಂದೆ ಇವೆ.

ರಾಜಕೀಯವು ಇಂದು ಉದ್ಯಮ ರೂಪವನ್ನು ಪಡೆದುಕೊಳ್ಳುವುದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಮೊದಲನೆಯದಾಗಿ ನಮ್ಮ ಭ್ರಷ್ಟ ನಾಯಕರುಗಳಾಗಿರುತ್ತಾರೆ. ಅವರು ತಮ್ಮ ಕುಟುಂಬವನ್ನು ಉದ್ಧಾರಮಾಡುವುದಕ್ಕೆ ರಾಜಕೀಯ ಜೀವನವನ್ನು ಬಳಸುತ್ತಾರೆ. ಹಾಗೆಯೇ ಕೆಲವರು ದೇಶದ ರೈತರ ಹಾಗೂ ಸರ್ವ ವರ್ಗದ ಜನರ ಏಳಿಗೆಗೆ ಪರಿಶ್ರಮಿಸುತ್ತಿರುತ್ತಾರೆ.

ರಾಜಕೀಯದಲ್ಲಿ ಹೆಸರು ಮಾಡುವವರು ಹಲವಾರು ಜನರಿದ್ದಾರೆ. ಹಾಗಾಗಿ ನಮ್ಮ ಯುವಜನತೆ ಒಳ್ಳೆಯ ಹೆಸರನ್ನು ಗಳಿಸಲು ಸಹ ರಾಜಕೀಯದ ದಾರಿಯನ್ನು ಹಿಡಿಯುತ್ತಾರೆ. ನಮ್ಮ ದೇಶವು ಹಲವಾರು ದಶಕಗಳಿಂದ ಯುವ ಜನತೆಯನ್ನು ಅತಿ ಹೆಚ್ಚು ಪ್ರಮಾಣದಲ್ಲಿ ಹೊಂದಿರುವ ರಾಷ್ಟ್ರಗಳಲ್ಲಿ ಒಂದು. ಹಾಗಾಗಿ ಯುವ ಜನತೆಯು ರಾಜಕೀಯದ ದಾಳವನ್ನು ಹಿಡಿದು ದೇಶದ ಅಭಿವೃದ್ಧಿಗಾಗಿ ಶ್ರಮಿಸಬೇಕಾಗುತ್ತದೆ.

ರಾಜಕೀಯದಲ್ಲಿ ಹಲವಾರು ಪಕ್ಷಗಳು ತಮ್ಮದೇ ಆದಂತಹ ಚಿಹ್ನೆ ಹಾಗೂ ಹೆಸರುಗಳಿಂದ ಗುರುತಿಸಿಕೊಂಡಿವೆ. ಹೀಗಾಗಿ ಯಾವುದೇ ಒಂದು ಪಕ್ಷವು ಅಧಿಕಾರ ಹಿಡಿಯಬೇಕಾದರೆ ಹಲವಾರು ಪಕ್ಷಗಳು ಒಟ್ಟಾಗಿ ಸರ್ಕಾರವನ್ನು ರಚಿಸಬೇಕಾಗುತ್ತದೆ. ಇದಕ್ಕೆ ನಾವು ಸಮ್ಮಿಶ್ರ ಸರಕಾರ ಎಂದು ಕರೆಯುತ್ತೇವೆ. ಆದರೆ ಇಂತಹ ಸರಕಾರದಲ್ಲಿನ ನಾಯಕರಿಗೆ ಬೇರೆ ಬೇರೆ ರೀತಿಯ ಅಪೇಕ್ಷೆಗಳಿರುತ್ತದೆ. ಹಾಗಾಗಿ ಇಂತಹ ಸರಕಾರವನ್ನು ಮುನ್ನಡೆಸುವ ನಾಯಕ ಮುಳ್ಳಿನ ಮಂಚದ ಮೇಲೆ ಕುಳಿತಂತೆ. ಆತನಿಗೆ ಯಾವ ನಾಯಕರನ್ನು ನೋಯಿಸದೆ ಎಲ್ಲರಿಗೂ ಸಮಾನ ಸ್ಥಾನಮಾನವನ್ನು ಕೊಡುವ ಪ್ರಯತ್ನವನ್ನು ಮಾಡಬೇಕಾಗುತ್ತದೆ.

ಯುವಜನತೆಯು ರಾಜಕೀಯದಿಂದ ಉಪಯೋಗ ಹಾಗೂ ದುರುಪಯೋಗ ಎರಡನ್ನು ಪಡೆದುಕೊಳ್ಳುತ್ತಿದೆ. ಹಾಗಾಗಿ ಯುವಜನತೆಯ ಮೊದಲು ಈ ದೇಶದ ಅಭಿವೃದ್ಧಿ ಹಾಗೂ ದೇಶವನ್ನು ಉತ್ತುಂಗ ಸ್ಥಾನಕ್ಕೇರಿಸುವ ನಿಟ್ಟಿನಲ್ಲಿ ದುಡಿದು ಸಮಾಜಕ್ಕೆ ಮಾದರಿಯಾಗಿ ಬಾಳಬೇಕು.

ಯುವ ಜನತೆಯು ರಾಜಕೀಯದ ದುರುಪಯೋಗದ ಮೊರೆಹೋಗಬಾರದು. ಈ ಅಸಂಖ್ಯ ಯುವಜನತೆಯನ್ನು ಮುನ್ನಡೆಸಲು ಒಬ್ಬ ಸಮರ್ಥ ನಾಯಕನ ದೇಶದ ಜನರ ನಾಡಿ ಮಿಡಿತವನ್ನು ಯುವಜನತೆ ಒಂದು ದೇಶವನ್ನು ಆಳುವ ಸಮರ್ಥ ನಾಯಕತ್ವದ ಆಯ್ಕೆ ಮಾಡಬೇಕು.

ಒಟ್ಟಿನಲ್ಲಿ ನಮ್ಮ ದೇಶದ ಅಭಿವೃದ್ಧಿಯ ಯುವಜನತೆಯ ಗುರಿಯಾಗಬೇಕು. ಅದು ರಾಜಕೀಯದ ಮೂಲಕ ನೆರವೇರಿಸಲು ಸಾಧ್ಯ.

"ಜಗವು ದೈವಾಧೀನ ಸೊಗಸುಕಂಡಿತು ಮನ
ಜಗಕೆ ದೋಷಂಗಳಿಲ್ಲವೇ ಘನ
ಬಗೆಯನರಿತರಿತ ಮನದ ತುದಿಯ ಜೋತಿಯ ಘನ
ಮಿಗಿಲಾಗಿಹುದು ನಿನ ನಿರ್ಮಿತದ ನಿರ್ಮಾ"

– ನಾಗಲಿಂಗ ಸ್ವಾಮಿ

ಆದರ್ಶ ಪುರುಷ ಸ್ವಾಮಿ ವಿವೇಕಾನಂದರು

(ಅಮೇರಿಕಾದಲ್ಲಿ ವಿವೇಕಾನಂದರು)

ಆಶಿಕಾ

ಪ್ರಥಮ ಬಿ.ಎಸ್ಸಿ.

ಅಂದು ಸ್ವಾಮಿ ವಿವೇಕಾನಂದರು ಅಮೇರಿಕಾದ ವೇದಿಕೆಯ ಮೇಲೆ ನಿಂತಾಗ ಭಾರತ ದೇಶ ಬ್ರಿಟಿಷರ ಗುಲಾಮತನದಲ್ಲಿತ್ತು. ದೇಶದ ಜನತೆ ಬ್ರಿಟಿಷರಿಂದ ಬೂಟಿನ ಏಟು ತಿನ್ನುತ್ತಿರುವ ಸಂದರ್ಭದಲ್ಲಿ ವಿವೇಕಾನಂದರು ಅಮೇರಿಕಾದ ವೇದಿಕೆಯಲ್ಲಿ ಕೇವಲ ಒಂದೇ ಒಂದು ವಾಕ್ಯ ಅಮೇರಿಕಾದ ನನ್ನ ಸಹೋದರ ಸಹೋದರಿಯರೇ ಅಂತ ಹೇಳಿದ ತಕ್ಷಣ 7000 ಜನರು 2 ನಿಮಿಷಗಳ ಕಾಲ ಚಪ್ಪಾಳೆ ಹೊಡೆದರು. ಇಂದು ನಾವು ಹಣಕೊಟ್ಟು ಕೂಡಾ ಈ ರೀತಿ 2 ನಿಮಿಷಗಳ ಕಾಲ ಚಪ್ಪಾಳೆ ಹೊಡೆಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಅವರು ಕೇವಲ ಯೋಚನೆ ಮಾಡಿದ್ದು ದೇಶಧರ್ಮದ ಬಗ್ಗೆ ಅಮೇರಿಕಾ ಏನು! ಇಡೀ ಜಗತ್ತೆ ವಿವೇಕಾನಂದರ ಕಾಲಬುಡದಲ್ಲಿ ಬಂದು ಬೀಳುವಂತೆ ಮಾಡುವ ಶಕ್ತಿ ಅವರಲ್ಲಿ ಇದ್ದಿತ್ತು.

ಸೆಪ್ಟೆಂಬರ್ 11 ಎಂದಾಗ ತಕ್ಷಣ ನೆನಪಾಗುವುದು ನಮಗೆ ಒಸಮಾಬಿನ್‌ಲಾಡನ್ ಅಮೇರಿಕಾದ ಡಬ್ಲೂಟಿಸಿ ಕಟ್ಟಡವನ್ನು ಉರುಳಿಸಿದ್ದು. ಆದರೆ ಅದೇ ಸೆಪ್ಟೆಂಬರ್ 11 1983ರಲ್ಲಿ ವಿವೇಕಾನಂದರು ಅಮೇರಿಕಾದಲ್ಲಿ ಸರ್ವಧರ್ಮ ಸಮ್ಮೇಳನದಲ್ಲಿ ಭಾರತ ಹಿಂದೂ ಧರ್ಮದ ಪರಿಚಯ ಮಾಡಿಕೊಟ್ಟರು. ವಿವೇಕಾನಂದರು ಸಮ್ಮೇಳನಕ್ಕೆ ಮೂರು ತಿಂಗಳು ಮೊದಲು ಅಮೇರಿಕಾದಲ್ಲಿ ನೆಲೆಸಿದ್ದರು. ಅವರು ಅಮೇರಿಕಾದ ಬೋಸ್ಟರ್ನ್ ನಗರಕ್ಕೆ ಹೋದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರ್ ರೈಟ್ ವಿವೇಕಾನಂದರನ್ನು ಮೊದಲು ಬರಲು ಒಪ್ಪದೆ ಅವರನ್ನು ನಿಲ್ಲುವಂತೆ ಹೇಳಿದರು. ನಂತರ ಅವರ ಜೊತೆ 10 ನಿಮಿಷಗಳ ಕಾಲ ಮಾತನಾಡಿ ಅವರು ವಿವೇಕಾನಂದರ ಹಿಂದೆ ಅವರ ಅನುಯಾಯಿಯಂತೆ ತಿರುಗಲು ಶುರುಮಾಡಿದರು. ಅಮೇರಿಕಾಕ್ಕೆ ಹೋದಾಗ ಅವರ ಬಳಿ ಪರಿಚಯ ಪತ್ರವನ್ನು ಬರೆದುಕೊಡಲು ಹೇಳಿದರು. ಅದಕ್ಕೆ ಪ್ರೊಫೆಸರ್ ರೈಟ್ ಅವರು ಸ್ವಾಮೀಜಿ ನೀವು ಯಾರು ಅಂತ ಕೇಳೋದು. ಒಂದೇ, ಸೂರ್ಯನಿಗೆ ಅಧಿಕಾರ ಏನು ಅಂತ ಕೇಳೋದು ಒಂದೇ ಎಂದು ಹೇಳಿದರು. ಹಾಗೆಯೇ ಅವರು ಪರಿಚಯ ಪತ್ರದಲ್ಲಿ ಬರೆದರು. ಅಮೇರಿಕಾದಲ್ಲಿ 400 ವರ್ಷಗಳಲ್ಲಿ ಇಂತಹ ವ್ಯಕ್ತಿ ತಿರುಗಾಡಿದ್ದಿಲ್ಲ. ಹಾಗೆಯೇ ಅಮೇರಿಕಾದ ಎಲ್ಲಾ ಬುದ್ಧಿವಂತರನ್ನು ಒಂದು ತಕ್ಕಡಿಗೆ ಹಾಕಿ ಕೂರಿಸಿದರೆ ಇವರ ತೂಕವೇ ಜಾಸ್ತಿ. ವಿವೇಕಾನಂದರು ಅಮೇರಿಕಾಗೆ ಹೋದಾಗ ಅಲ್ಲಿ ಅವರು ಭೋಗದಲ್ಲಿ ಮೈಮರೆತವರಲ್ಲ. ದೇಶದ ಪವಿತ್ರತೆಯನ್ನು ಕೊಂಡಾಡಿ ಮಹಾನ್ ಪುರುಷ. ದೇಶಕ್ಕಾಗಿ ಹೋರಾಡಿದ ಸುಭಾಶ್ಚಂದ್ರಭೋಸರು ಕೂಡಾ ವಿವೇಕಾನಂದರ ತತ್ವಗಳಿಂದ ಪ್ರೇರಿತರಾದರು. ನಿಜವಾದ ಬದುಕಿನ ಕುರಿತು ವಿವೇಕಾನಂದರು ಒಂದು ಮಾತು ಹೇಳುತ್ತಾರೆ. "May only lives May live far others. ಅಂದರೆ ಯಾರು ಇತರರಿಗೋಸ್ಕರ ಬದುಕುತ್ತಾರೋ ಅವರು ಮಾತ್ರ ಬದುಕುತ್ತಾರೆ". ಈಗಿನ ಯುವಪೀಳಿಗೆಗೆ ಸ್ವಾಮಿ ವಿವೇಕಾನಂದರು ಒಂದು ಆದರ್ಶ. ಅವರ ತತ್ವಗಳನ್ನು ನಾವು ಅನುಸರಿಸಬೇಕು.

"ಕುವರನಾದೊಡೆ

ಬಂದಗುಣವೇನದರಿಂದ

ಕುವರಿಯಾದೊಡೆ ಕುಂದೇನು

ಇವರಿರ್ವರೊಳೇಳ್ಗೆ

ಪಡೆದವರಿಂದ

ಸವನಿಪುದಿಹಪರ ಸೌಖ್ಯ "

– ಸಂಚಿ ಹೊನ್ನಮ್ಮ

ಯೋಧರನ್ನು ಗೌರವಿಸೋಣ.

ಶಾಂಭವಿ ವಿ. ಭಟ್ಟ
ಪ್ರಥಮ ಬಿ.ಎಸ್ಸಿ.

"ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಅರ್ಥಾತ್ ಹೆತ್ತ ತಾಯಿ. ಹೊತ್ತ ಭೂಮಿತಾಯಿ ಸ್ವರ್ಗಕ್ಕಿಂತಲೂ ಮಿಗಿಲು. ಈ ಎರಡೂ ಮಾತೆಯರ ರಕ್ಷಣೆಯು ನಮ್ಮ ಆದ್ಯ ಕರ್ತವ್ಯ. ನಮ್ಮ ಹೆತ್ತ ಮಾತೆಯ ರಕ್ಷಣೆಯನ್ನು ಹಲವರು ಮಾಡುತ್ತಾರೆ. ಆದರೆ ನಮ್ಮ ಈ ಭೂತಾಯಿ, ಭಾರತಾಂಬೆಯ ರಕ್ಷಣೆಗೆ ಮುಂದಾಗುವವರು ಕೆಲವರು. ಈ ಭೂಮಿಯೇ ಸರ್ವಸ್ವ. ದೇಶಸೇವೆಯೇ ಈಶಸೇವೆ. ದೇಶಕ್ಕಾಗಿ ಪ್ರಾಣವನ್ನು ತ್ಯಜಿಸುವುದೇ ಪರಮಧರ್ಮ ಎಂಬ ನಮ್ಮ ವೀರ ಯೋಧರ ದೇಶಭಕ್ತಿಯು ತಲುಪಲಸಾಧ್ಯವಾದದ್ದು. ಅವರ ರಕ್ತದ ಕಣಕಣದಲ್ಲಿಯೂ ದೇಶಭಕ್ತಿಯ ಬೀಜವಿದೆ. ಅದು ಅವರ ದೊಡ್ಡತನ.

ದೇಶದ ಮುಂದೆ ದೇಹ ಕಾಣದು. ನಮ್ಮ ವೀರ ಯೋಧರಿಗೆ, ಕೊರೆಯುವ ಛಳಿಯಿರಲಿ, ಉರಿ ಬಿಸಿಲಿರಲಿ ತಮ್ಮ ದೇಹವನ್ನು ಸವೆಸಿ ದೇಶದ ಗಡಿಯನ್ನು ಕಾಯುವವನೇ ನಿಜವಾದ ವೀರ. ಅವರನ್ನು ಗೌರವಿಸುವುದು ನಮ್ಮ ಕರ್ತವ್ಯ. ದೀಪ ಉರಿಯುವಾಗ ಹೇಗೆ ಬತ್ತಿಯು ತನ್ನನ್ನು ಸುಟ್ಟಿಕೊಳ್ಳುತ್ತಿದೆಯೋ, ಹಾಗೆಯೇ ಒಂದು ದೇಶದ ಅಭಿವೃದ್ಧಿ, ಅದರ ಪ್ರಜ್ವಲತೆಯ ಹಿಂದೆ ಉರಿಯುವ ದೀಪಗಳೇ ನಮ್ಮ ಯೋಧರು. ತ್ಯಾಗವೇ ನಮ್ಮ ಪರಮಧರ್ಮ ಎಂಬ ಅವರ ಮನಸ್ಥಿತಿಯು ಎಲ್ಲರಲ್ಲಿ ಮೂಡುವುದು ಅಸಾಧ್ಯ. ಆದರೆ ಅಂತಹ ಮನೋಭಾವವು ಕೆಲವರಲ್ಲಿ ಒಡಮೂಡಿದರೂ ಅದು ದೇಶದ ಉನ್ನತಿಗೆ ದಾರಿಯಾದಂತೆ.

"ಕರ್ಮಣ್ಯೇ ವಾಧಿಕಾರಸ್ತೆ ಮಾಫಲೇಶು ಕದಾಚನ" ಎಂಬ ಮಾತಿನಂತೆ ಅವರು ಮುಂದಿನ ಫಲದ ಬಗ್ಗೆ ಯೋಚಿಸಿದೇ ತಮ್ಮ ಕರ್ತವ್ಯವನ್ನು ಪೂರ್ಣಪ್ರಮಾಣದಲ್ಲಿ ಮಾಡುತ್ತಾರೆ. ದುರದೃಷ್ಟವಶಾತ್ ಇಂದಿಗೂ ಕೆಲವು ನಾಯಕರೆಸಿಕೊಳ್ಳುವವರ ರಾಜನೀತಿಕ ಸಂಚಿಗೆ ಈ ನಮ್ಮ ಯೋಧರು ಅಸು ನೀಗುತ್ತಿದ್ದಾರೆ. ಹಾಗಾದರೆ ಅವರ ಜೀವಕ್ಕೆ ಬೆಲೆಯೇ ಇಲ್ಲವೆ? ಅವರ ತ್ಯಾಗಕ್ಕೆ ನ್ಯಾಯವೇ ದೊರೆಯುತ್ತಿಲ್ಲ.

2016ರಲ್ಲಿ ಉರಿಯಲ್ಲಿ ನಡೆದ ಮಾರಣಾಂತಿಕ ಕೃತ್ಯದಲ್ಲಿ ಸುಮಾರು ಹದಿನೆಂಟು ವೀರರು ವೀರಮರಣ ಹೊಂದಿದರು. ಅಂದು ನಡೆದದ್ದೇ ಸರ್ಜಿಕಲ್ ಸ್ಟ್ರೈಕ್. ನಮ್ಮ ಭಾರತದ ಸೇನೆಯು ತನ್ನ ದಿಟ್ಟತನವನ್ನು ತೋರಿಸಿ ಸರಿಯಾದ ಉತ್ತರವನ್ನು ನೀಡಿತು. ಉರಿಯಲ್ಲಿ ಹಾಕಿದ ಬಾಂಬಿನ ಬೆಂಕಿಯಲ್ಲಿ ಉರಿದುಹೋದ ನಮ್ಮ ಸೋದರರಿಗೆ ಅಂದು ನ್ಯಾಯ ದೊರೆಯಿತು. ರಕ್ತಕ್ಕೆ ಬದಲಾಗಿ ರಕ್ತ, ಪ್ರಾಣಕ್ಕೆ ಬದಲಾಗಿ ಪ್ರಾಣ. ನಮ್ಮ ಯೋಧರಿಗೆ ತೊಂದರೆ ನೀಡಿದವರನ್ನು ಹುಡುಕಿ ಹುಡುಕಿ ಅವರ ಮನೆಯಂಗಳವ ಹೊಕ್ಕು ಪ್ರತೀಕಾರವನ್ನು ತೀರಿಸಿಕೊಂಡೆವು. ಆದರೆ ಇಂದು ಇನ್ನೊಂದು ಮಾರಣಾಂತಿಕ ಹಲ್ಲೆ ನಡೆದಿದೆ. 2019ರಲ್ಲಿ ಪುಲ್ವಾಮಾದಲ್ಲಿ ಘೋರ ಹತ್ಯಾಖಂಡವನ್ನು ಮಾಡಿದ ಪಾಪಿಗಳಿಗೆ ಸರಿಯಾದ ಶಾಸ್ತಿಯನ್ನು ಮಾಡಬೇಕಿತ್ತು. ಏರ್‌ಸ್ಟ್ರೈಕ್ ಮೂಲಕ ಅದೂ ಸಾಧ್ಯವಾಯಿತು.

ಏನೂ ತೊಂದರೆಯನ್ನು ಮಾಡದ ನಮ್ಮ ವೀರರನ್ನು ಕೊಂದ ಪಾಪಿಗಳನ್ನೂ ಮಟ್ಟಹಾಕಬೇಕು. ಅದೆಷ್ಟೋ ಮನೆಯ ದೀಪವು ಆರಿದೆ. ಎಷ್ಟೋ ತಂದೆ ತಾಯಿಯರು ತಮ್ಮ ಕುಲೋದ್ಧಾರಕನನ್ನು ಕಳೆದುಕೊಂಡಿದ್ದಾರೆ. ದೇಶವು ತನ್ನ ವೀರ ಪುತ್ರರನ್ನು ಕಳೆದುಕೊಂಡಿದೆ. ಇಡೀ ದೇಶವೇ ಶೋಕಿಸುತ್ತಿದೆ. ನಮ್ಮ ದೇಶಕ್ಕೆ ಸೂತಕವನ್ನು ತಾಗಿಸಿದವರು ಹಿಗ್ಗುತ್ತಿದ್ದಾರೆ. ಅವರ ಸಂಭ್ರಮ ಇನ್ನು ಕೆಲವೇ ಕೆಲವು ದಿನಗಳದ್ದು. ನಮ್ಮ ಭಾರತೀಯ ಸೈನಿಕರ ಶೋಕದ ಹಿಂದಿರುವ ಜ್ವಾಲೆ ಉರಿಯುತ್ತಿದೆ. ಅದು ಎಂದಿಗೆ ವಿಸ್ಫೋಟಗೊಳ್ಳುವುದೋ ಎಂಬುದು ಖಚಿತವಿಲ್ಲ. ಆದರೆ ಜವಾನರ ತ್ಯಾಗಕ್ಕೆ ಸರಿಯಾದ ನ್ಯಾಯವು ದೊರೆತೇ ದೊರೆಯುತ್ತದೆ.

ಆದರೆ ಈ ಸರಣಿಯಲ್ಲಿ ಬಲಿಯಾಗುತ್ತಿರುವ ವೀರರ ತ್ಯಾಗ, ಬಲಿದಾನವು ಅಸಾಧಾರಣವಾದದ್ದು. ಇದಕ್ಕೆ ಅಂತ್ಯವೇ ಇಲ್ಲವೆ? ನಮ್ಮ ವಿರುದ್ಧ ತಂತ್ರವನ್ನು ರಚಿಸುವವರ ಮನಸ್ಸಿನ ವಿಷವು ಕಡಿಮೆಯೇ ಆಗದೇ?

ಒಬ್ಬ ಯೋಧ ಶಹೀದನಾದಾಗ ಅವನನ್ನು ತಿರಂಗದಲ್ಲಿ ಸುತ್ತಿ ಗೌರವ ನೀಡುತ್ತಾರೆ. ಅಂತಹ ಪರಮ ಗೌರವವು ಬೇರೆ ಯಾವ ರಾಜಕೀಯ ನಾಯಕನಿಗೂ ದೊರೆಯದು. ದೇಶದ ಈ ಹೆಮ್ಮೆಯ ಪುತ್ರರನ್ನು ಗೌರವಿಸೋಣ, ಪ್ರೀತಿಸೋಣ. ನಾವೂ ಅವರಲ್ಲಿ ಒಬ್ಬರಾಗಲು ಪ್ರಯತ್ನಿಸೋಣ. ನಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳೋಣ.

"ತ್ಯಾಗವೇ ಪರಮಧರ್ಮ, ದೇಶಕ್ಕಾಗಿ ಮಾಡುವ ಪ್ರಾಣತ್ಯಾಗವೇ ಪರಮತ್ಯಾಗ"

ಜೈಹಿಂದ್.

ಬಾಲ್ಯ

ವಿದ್ಯಾ
ಪ್ರಥಮ ಬಿ.ಎಸ್ಸಿ.

ಸ್ನೇಹಿತರೆ. ಬಾಲ್ಯ ಈ ಪದವು ಎಷ್ಟು ಚಿಕ್ಕದಲ್ಲವೇ? ಆದರೆ ಇದು ವಿಶಾಲ ಅರ್ಥ. ವಿಶಾಲ ನೆನಪು. ವಿಶಾಲ ದಿನಗಳನ್ನು ಹೊಂದಿದೆ. ಬಾಲ್ಯದ ನೆನಪೆಂದರೆ ಜೀವನದಲ್ಲಿ ಮಾಸಲಾಗದ ದಿನಗಳು ಕಾಲ್ನಡಿಗೆಯ ಶಾಲೆ. ಮಧ್ಯಾಹ್ನದ ಬಿಸಿಯೂಟ, ಸಂಜೆಯ ಹೊತ್ತಿನ ಆಟ ಅಬ್ಬಬ್ಬಾ ಈಗ ನೆನಪಿಸಿಕೊಂಡರೆ ಕಾಲ ನೀನೇಕೆ ಮತ್ತೆ ಹಿಂದಿರುಗಬಾರದು? ಎಂದು ಅನಿಸುತ್ತಿದೆ. ಶಾಲೆಗೆ ಹೋಗುವಾಗ ನಮ್ಮ ಹಿಂದಿರುಗಬಾರದು? ಎಂದು ಅನಿಸುತ್ತಿದೆ. ಶಾಲೆಗೆ ಹೋಗುವಾಗ ನಮ್ಮ ಊರಿನವರದ್ದೇ ಒಂದು ಗುಂಪು. ಶಾಲೆ ತೆರೆಯುವ ಮೊದಲೇ ಶಾಲೆಯ ಎದುರು ಹಾಜರು. ಬೆಳಗ್ಗಿನ ಪ್ರಾರ್ಥನೆ ಓ ನನ್ನ ದೇವರೇ ನಾವೀಗ ಕಲಿಯುತ್ತಿರುವ ಪಾಠದ ಮೇಲೆ ನಿಮ್ಮ ಆಶೀರ್ವಾದವಿರಲಿ...ಅಬ್ಬಾ ಎಷ್ಟು ಸುಂದರವಾದ ಪ್ರಾರ್ಥನೆ. ಅದನ್ನು ಹೇಳುವುದೇ ಒಂದು ಮಜಾ.

ರಜೆ ಬಂದರಂತೂ ಎಲ್ಲದಿನ ಅಜ್ಜಿ ಮನೆಯಲ್ಲೇ ಜಾಂಡ ಹೂಡುತ್ತೇವೆ. ಅಜ್ಜಿಯ ಕೈರುಚಿ. ಅಜ್ಜನ ತಿರುಗಾಟ ಅಬ್ಬಬ್ಬಾ ಎಂತಹ ಮೋಜು ಎಂತಹ ಸಂತಸ. ಅಕ್ಕಪಕ್ಕದವರ ತೋಟಕ್ಕೆ ಕಳ್ಳರಂತೆ ನುಗ್ಗಿ ಮಾವಿನ ಮರ ಹತ್ತಿ ಮಾವು ಕೀಳುವುದು. ಪೇರಳೆ ಹೀಗೆ ಮಾಡುವ ತುಂಟಾಟ ಒಂದಾ ಎರಡಾ. ದ.ರಾ.ಬೇಂದ್ರೆಯವರು ನಮ್ಮ ಬಾಲ್ಯದ ದಿನಗಳನ್ನು ಬಾಲ್ಯದಲ್ಲೇ ಅನುಭವಿಸಬೇಕು. ತಡ ಮಾಡಿದರೆ ಮೃತ್ಯು ಬರಬಹುದು ಎಂದು ಬೆಳಗಿನ ಜಾವ ಎಂಬ ಕವಿತೆಯ ಮೂಲಕ ತಿಳಿಸಿದ್ದಾರೆ.

ಕುಂದಾಪ್ರ ಕನ್ನಡದಲ್ಲಿ ಅಜ್ಜ ಅಜ್ಜಿ ಒಂದು ಮಾತ್ ಹೇಳ್ತಾರೆ. ಮಕ್ಕಳ್ ಆರ್ ಅಡಿ ಬೆಳೆದ್ರ್ ಸಣ್ಣ ಬೆಣ್ಣೆಗಳ ಕಂಡಗ್ ಮಾಡ್ತೋ ಅಂದೇಳಿ ನಿಜ. ಆದರೆ ಬಾಲ್ಯದಷ್ಟು ಸಂತಸ ಏನು ಮಾಡಿದರೂ ಸಿಗುವುದಿಲ್ಲ.

ಬಾಲ್ಯದಲ್ಲಿ ಓದಿದ ಪಾಠವಂತೂ ಸದಾ ನೆನಪು. ಸಂಜೆಯಾಗುತ್ತಲೇ ಶಾಲೆಯ ಮೈದಾನದಲ್ಲಿ ಜಾಗವೇ ಇಲ್ಲ. ಎಲ್ಲಾ ಅವರವರ ಪಾಡಿನಲ್ಲಿ ಸಂತಸವಾಗಿ ಆಡುತ್ತಿರುತ್ತಾರೆ. ಗಾಳಿಕೋಲಿನ ಪೆಟ್ಟು ಅಬ್ಬಾ ಎನಿಸಿದರೆ ಭಯ ಆಗುತ್ತೆ. ಆದರೆ ಅದು ಗಾಳಿಕೋಲಿನಿಂದಾಗಿ ನಾವು ಕಲ್ಲಿನ ರೂಪ ಕಳೆದು ಶಿಲ್ಪಿಯಾಗಿದ್ದೇವೆ ಎಂದು ಹೇಳಿದರೂ ತಪ್ಪಾಗಲಾರದು.

ಮನೆಗೆ ಹೋಗುವಾಗವಂತೂ ದಾರಿಯಲ್ಲಿ ಸಿಕ್ಕ ಒಂದೂ ಹಣ್ಣು–ಕಾಯಿಗಳನ್ನು ಬಿಡುವುದಿಲ್ಲ. ಒಂದೊಂದು ಬಾರಿ ಅನಾಹುತ ಆದದ್ದು ಉಂಟು. ಶನಿವಾರ ಮಧ್ಯಾಹ್ನವಂತೂ ಎಲ್ಲರೂ ಕೈಯಲ್ಲೂ ಒಂದು ರೂಪಾಯಿ ಬಣ್ಣ ಬಣ್ಣದ ಪೆಪ್ಸಿ. ಹಳ್ಳಿಯ ದಾರಿಯಾದ್ದರಿಂದ ಆ ಕಡೆಯಿಂದ ಈ ಕಡೆ ಅಲೆದುಕೊಂಡೇ ಮನೆ ಸೇರುವುದು.

ಬಾಲ್ಯದಲ್ಲಿನ ಅಮ್ಮನ ಪೆಟ್ಟು, ಅಪ್ಪನ ಬೈಗುಳ ಅಜ್ಜಿಯ ಕಥೆ, ಬುದ್ಧಿವಾದ. ಇವೆಲ್ಲಾ ನಮ್ಮ ಬೆಳವಣಿಗೆಗೊಂದು ಉತ್ತಮ ಹಾದಿ. ಬೆಳೆವ ಸಿರಿ ಮೊಳಕೆಯಲ್ಲಿಯೆ. ನಮ್ಮ ಈ ಬಾಲ್ಯದ ಅಡಿಪಾಯವೇ ಸುಂದರ ಜೀವನಕ್ಕೊಂದು ದಾರಿ.

ಆದರೂ ಈ ಬಾಲ್ಯ ಕಳೆದುಹೋದಮೇಲೆ ಮತ್ತೆ ಆ ಕಡೆ ಹೋಗೋಣವೆಂದರೆ ಅದು ಸಾಧ್ಯವೇ ಇಲ್ಲ. ದೇವರು ಪ್ರತ್ಯಕ್ಷವಾಗಿ ನಿನಗೇನು ವರಬೇಕು ಎಂದು ಕೇಳಿದಾಗ ನಾನಂತೂ ಬಾಲ್ಯ ಎಂದೇ ಕೇಳುತ್ತೇನೆ. ನೀವು ಅದನ್ನೇ ಕೇಳ್ತಿರಲ್ವಾ ಸ್ನೇಹಿತರೆ?

ಪರಿಸರ

ಜಯಾ
ಪ್ರಥಮ ಬಿ.ಎಸ್ಸಿ.

ನಮ್ಮ ಸುತ್ತಮುತ್ತಲಿನ ಗಿಡ–ಮರಗಳು ವಾತಾವರಣಗಳಿಂದ ತುಂಬಿರುವುದು. ಪರಿಸರದಲ್ಲಿ ಸುಂದರವಾದ ವಾತಾವರಣಗಳಿರುತ್ತವೆ. ಪರಿಸರದಲ್ಲಿ ಇತ್ತೀಚಿನ ದಿನಗಳಲ್ಲಿ ಪರಿಸರವು ನಾಶವಾಗುತ್ತದೆ. ಪರಿಸರದಲ್ಲಿ, ಕರ್ಕಶ ಶಬ್ದಗಳು, ಹೊಗೆಗಳು ಜಾಸ್ತಿಯಾಗುತ್ತಿದೆ. ಪರಿಸರದಲ್ಲಿ ಹಲವಾರು ಜಾತಿಯ ಮರಗಳಿವೆ. ಆದರೆ ಇಂದು ಮಾನವ ತನ್ನ ಸ್ವಾರ್ಥಕ್ಕಾಗಿ ಮರಗಳನ್ನು ನಾಶಮಾಡುತ್ತಿದ್ದಾನೆ. ಇದರಿಂದ ಪರಿಸರವು ಒಂದು ಭೂಮಿಗಳಾಗಿ ಪರಿಸರದಲ್ಲಿರುವ ಪ್ರಾಣಿಗಳು, ನಾಡಿನತ್ತ ಹೆಜ್ಜೆಯಿಡುತ್ತದೆ. ಇದರಿಂದ ಕ್ರೂರಪ್ರಾಣಿಗಳು ದ್ವೇಷದಿಂದ ಮಾನವರ ಮೇಲೆ ದಾಳಿ ಮಾಡುತ್ತದೆ ಮತ್ತು ಬೇಸಾಯಗಳನ್ನು ನಾಶಮಾಡುತ್ತಿದೆ.

ಪರಿಸರದಲ್ಲಿ ನಾವು ಗಿಡಮರಗಳನ್ನು ರಕ್ಷಿಸಬೇಕು. ನಮ್ಮ ಸುತ್ತಮುತ್ತಲ ಗಿಡಗಳನ್ನು ನೆಟ್ಟು ಪರಿಸರವನ್ನು ರಕ್ಷಿಸಬೇಕು. ಪರಿಸರದಲ್ಲಿ ಮಣ್ಣಿನಮಾಲಿನ್ಯ, ಜಲಮಾಲಿನ್ಯ, ವಾಯುಮಾಲಿನ್ಯ ಇವುಗಳಿಂದ ಪರಿಸರವು ಹಾಳುಗೆಡುತ್ತದೆ. ಅದರಿಂದ ನಾವು ಆದಷ್ಟು ಪರಿಸರಗಳನ್ನು ಶುಚಿಯಾಗಿಟ್ಟುಕೊಳ್ಳಬೇಕು. ಪ್ಲಾಸ್ಟಿಕ್ ಬಳಕೆಗಳನ್ನು ಆದಷ್ಟು ಕಡಿಮೆ ಮಾಡುವುದರಿಂದ ಮಣ್ಣಿನ ರಕ್ಷಣೆ ಮಾಡಬಹುದು. ಮರಗಳನ್ನು ಕಡಿದರೆ ಮಳೆಗಳು ಬರದಾಗಿ ಬರಗಾಲ ಪರಿಸ್ಥಿತಿಯನ್ನು ಅನುಭವಿಸಬೇಕಾಗುತ್ತದೆ. ಈಗಾಗಲೇ ಬೇಸಾಯ ಮಾಡುವ ರೈತರು ಕಡಿಮೆಯಾಗಿದ್ದಾರೆ. ಬರಗಾಲ ಉಂಟಾದರೆ ಬೇಸಾಯ ಮಾಡಲು ಕಷ್ಟವಾಗುತ್ತದೆ. ಇದರಿಂದ ಬಡ ರೈತರು ತಮ್ಮ ಹೊಟ್ಟೆಗಾಗಿ ಕಷ್ಟಪಡಬೇಕಾಗುತ್ತದೆ. ಅದರಿಂದ ನಾವು ಆದಷ್ಟು ಗಿಡ–ಮರಗಳನ್ನು ರಕ್ಷಿಸಬೇಕು. ಮಳೆಗಾಲದಲ್ಲಿ ನಾವು ಅಡ್ಡದಿಮೆಗಳನ್ನು ಮಾಡುವುದರಿಂದ ಮಣ್ಣಿನ ಸವಕಳಿಯನ್ನು ತಡೆಗಟ್ಟಬಹುದು.

ದನಕರುಗಳು ಮೇಯುವುದರಿಂದ ಭೂಮಿಯು ಬರಡಾಗಿ ಮಳೆಗಾಲದಲ್ಲಿ ಮಣ್ಣು ಕೊಚ್ಚಿಕೊಂಡು ಹೋಗುತ್ತದೆ. ಪರಿಸರವು ಹಚ್ಚ–ಹಸಿರುಗಳಿಂದ ಕಂಗೊಳಿಸುತ್ತಿದ್ದರೆ ಅದನ್ನು ನೋಡಲು ನಮಗೆ ಖುಷಿಯಾಗುತ್ತೆ. ನದಿಯ ತೀರಗಳ ಹತ್ತಿರ ಸಂಜೆಯ ಹೊತ್ತು ಹೋದಾಗಲಂತೂ ತಂಪಾದ ಗಾಳಿಯು ಬೀಸುತಿರಲು, ಹಕ್ಕಿಗಳ ಕಲರವ ಇವುಗಳನ್ನು ಅನುಭವಿಸಲು ಮನಸ್ಸಿಗೆ ನೆಮ್ಮದಿ ನೀಡುತ್ತದೆ.

ಪರಿಸರದಲ್ಲಿ ಗಿಡಮರಗಳನ್ನು ನಮಗೆ ಆಮ್ಲಜನಕ ನೀಡುತ್ತದೆ. ಪ್ರಾಣಿ ಪಕ್ಷಿಗಳಿಗೆ ಆಹಾರಗಳನ್ನು ಹಣ್ಣುಗಳನ್ನು ನೀಡುತ್ತದೆ.

"ಹಸಿರು ಬೆಳೆಸಿ ನಾಡು ಉಳಿಸಿ" "ಹಸಿರೇ ಉಸಿರು"

ಬಾಲ್ಯದ ಚುರುಮುರಿ

ವಿದ್ಯಾಭಾರತಿ
ಪ್ರಥಮ ಬಿ.ಎಸ್ಸಿ.

ನಮಗೆ ಬಾಲ್ಯ ಎಂದ ತಕ್ಷಣ ಅಮ್ಮನ ಮುದ್ದು ಬೈಗುಳ ಒಂದೆರಡು ಏಟು ನಮ್ಮ ತರಲೆ, ತುಂಟತನಗಳು ನೆನಪಿಗೆ ಬರುತ್ತದೆ.

ಮೊದಲು ನಾನು ಎರಡನೇ ತರಗತಿಯಲ್ಲಿ ಇರಬೇಕಾದರೆ ನನಗೆ ಒಬ್ಬ ಪುಟ್ಟ ತಮ್ಮ ಅವನನ್ನು ಕರೆದುಕೊಂಡು ಅಂಗಡಿಗೆ ರೋಡಿನಲ್ಲಿ ನಡೆದುಕೊಂಡು ಹೋದದ್ದು. ಅಮ್ಮನ ಹತ್ತಿರ ಪುಸ್ತಕ ಬೇಕು 5 ರೂ. ಕೊಡ ಎಂದು ಕೇಳಿದಾಗ ಅಮ್ಮ ನಾವು ಆಟವಾಡುತ್ತಿದ್ದೇವೆ ಎಂದು ಎಣಿಸಿ ಕೊಟ್ಟಿದ್ದರು.

ಆದರೆ ನಾವು ಸೀದಾ ಪೇಟೆಗೆ ಹೋಗಿದ್ದು, ಅಂದು ಅಮ್ಮ ನಮ್ಮನ್ನು ಎಲ್ಲಾ ಕಡೆ ಹುಡುಕಿದ್ದರೂ ಕೊನೆಗೆ ನಾವು ಸಿಕ್ಕಿದ್ದಾಗ ಅಮ್ಮನ ಕೈಯಲ್ಲಿ ತಿಂದ ಪೆಟ್ಟು ಇನ್ನು ಮರೆತುಹೋಗಿಲ್ಲ.

ಇದಾದ ಮೇಲೆ ನಾನು 6ನೇ ತರಗತಿಯಲ್ಲಿ ತಮ್ಮ 3ನೇ ತರಗತಿಯಲ್ಲಿ ಮತ್ತೆ ನಮ್ಮ ಪಕ್ಕದ ಮನೆ ಹುಡುಗರು ಅವರು ಅಣ್ಣ ತಂಗಿ. ನಾವು ಇಷ್ಟು ಜನ ಮನೆಲಿ ಹೇಳದೆ. ನಮ್ಮ

ಪಕ್ಕದ ಮನೆ Construction ಆಗುತ್ತಿತ್ತು. ಆಗ ಅಲ್ಲಿಗೆ ಆಡ ಆಡಲಿಕ್ಕೆ ಹೋಗುತ್ತಿದ್ದೀವಿ. ಆ ಮನೆ ಪಕ್ಕ ಒಂದು ಟ್ಯಾಂಕಿ ಇತ್ತು. ನಮ್ಮ ಮೊದಲನೆ ಆಟ ಏನೆಂದರೆ, ಅದು Slab ಮನೆ ಆಗಿತ್ತು. ನಾವು ಒಬ್ಬರಾದ ಮೇಲೆ ಒಬ್ಬರು ಆ First floor ಇಂದ ಕೆಳಗೆ ಇದ್ದ ಹೊಗೆ ರಾಶಿಗೆ ಹಾರುವುದು. ಅದೇ ನಮಗೆ ಒಂಥರ ಖುಷಿ ಆಟ.

ಅದಾದ ಮೇಲೆ ನಾವು ನಾಲ್ಕು ಜನ ಟ್ಯಾಂಕ್ ಬಳಿ ಹೋದೆವು. ಅನುಷಾ ಅಂತ ನನ್ನ Friend ಹೆಸರು. ಅವಳು ನನಗೆ ನೀರು ಹಾರಿಸಿದ್ದು ಅಂತ ನಾನು ಅವಳಿಗೆ ಹಾರಿಸಲಿಕ್ಕೆ ಹೋಗಿ ಕಾಲು ಜಾರಿ ಟ್ಯಾಂಕಿಗೆ ಬಿದ್ದೆ. ಟ್ಯಾಂಕಿ ಎಷ್ಟು ಆಳ ಇತ್ತು ಅಂತ ಗೊತ್ತಿಲ್ಲ. ಆದರೆ ನಾನು ಮುಳುಗಿದ್ದೆ. ಆ ಕ್ಷಣ ನಾನು ಇವತ್ತು ಸತ್ತೆ. ಇನ್ನೂ ಅಮ್ಮ, ಅಪ್ಪ, ತಮ್ಮನ ಮುಖ ನೋಡಲ್ಲ ಎಂದೆಣಿಸಿದ್ದೆ. ಹೇಗೋ ಅವರು ಮೂರು ಜನ ಮೇಲೆತ್ತಿದ್ದರು. ಆಗ ಗೊತ್ತಾಗಿದ್ದು ಜೀವದ ಬೆಲೆ ಇಂದಿಗೂ ನಾನು ಈ ವಿಷಯವನ್ನು ಮನೇಲಿ ಹೇಳಲೇ ಇಲ್ಲ.

ನನ್ನ ಬಾಲ್ಯದಲ್ಲಿ ಅತಿ ಬೇಸರವಾದ ಸಂಗತಿ ಎಂದರೆ ನಾನು 9ನೇ ತರಗತಿಯಲ್ಲಿದ್ದಾಗ. ತಾಲೂಕು ಚೆಸ್ Competition ನಲ್ಲಿ ಫಸ್ಟ್ ಬಂದು ಜಿಲ್ಲೆಗೆ ಆಯ್ಕೆ ಆದೆ. ನಮ್ಮ Head master ಅಪ್ಪ ಜೊತೆ ಹೋಗು. Singles ಆಡಲಿಕ್ಕೆ ಇಲ್ಲ group ಎಂದು ತಿಳಿಯಿತು. ಹಾಗೆ ವಾಪಸ್ಸು ಬಂದದ್ದು. ನನಗೆ ಅಪ್ಪನನ್ನು ನೆನಸಿ ಬೇಜಾರಾದದ್ದು. ಅಲ್ಲಿ ತನಕ ನನ್ನೊಟ್ಟಿಗೆ ಸುಮ್ಮನೆ ಬಂದರಲ್ಲ ಎಂದು.

ದೇವರಿಗೆ ನನ್ನ ಮೇಲೆ ಕೋಪಾ ತುಂಬಾ ಇದೆ ಎಂದು ಯಾವತ್ತು ಗೊತ್ತಾದದ್ದು ಎಂದರೆ ಒಮ್ಮೆ ನಾನು ಮತ್ತು ನನ್ನ Friend ಬಸ್ಸನಲ್ಲಿ ಹೋಗಬೇಕಾಗಿತ್ತು. ಆಗ ನನಗೆ Journey ಅಂದರೆ ಆಗುತ್ತಿರಲಿಲ್ಲ. ಅದಕ್ಕೆ ಉಗ್ರನರಸಿಂಹ Please seat ಕೊಡ್ಸು ಅಂತ ಕೇಳಿದ್ದೆ.

ಆದರೆ ಪುಣ್ಯಾತ್ಮ ಸೀಟು ಸಾಯ್ಲಿ ನಿಲ್ಲಲಿಕ್ಕೂ ಜಾಗ ಇಲ್ಲ. ನಾನು ನಿಂತಿದ್ದು ಬಸ್ಸಿನ ಲಾಸ್ಟ್ ಮೆಟ್ಟಿಲಿನಲ್ಲಿ.

ಆದರೆ ನಾನು ಮಾತ್ರ ದೇವರಿಗೆ ನನ್ನ ಮೇಲೆ ತುಂಬಾ ಪ್ರೀತಿ ಅಂದುಕೊಂಡೆ ಯಾಕಂದ್ರೆ ಒಳ್ಳೆಯ Air conditioner place ಅಲ್ಲಿ ನಿಲ್ಲಿಸಿದ್ದ.

ಇದು ನಮ್ಮ ದೇಶ

ಪವಿತ್ರ
ಪ್ರಥಮ ಬಿ.ಎಸ್ಸಿ. ಎ.

ಹಿಂದೊಂದು ಕಾಲ...ಸಿರಿ ಸಮೃದ್ಧಿಗಳೇ ತುಂಬಿ ತುಳುಕುತ್ತಿದ್ದ ನಾಡು ನಮ್ಮದು. ರಾಜ ಮಹಾರಾಜರುಗಳು ದರ್ಪದಿಂದ ಮೆರೆದ ದೇಶ ನಮ್ಮದು. ಭಾರತ...ಹೆಸರು ಕೇಳುವಾಗಲೇ ಎಲ್ಲಾ ನಿಬ್ಬೆರಗಾಗಿ ನಿಲ್ಲ ಬೇಕಾದಂತಹ ದೇಶ. ಸಕಲ ಮೂಲಗಳಿಂದಲೂ ಸಮೃದ್ಧ ನಾಡು. ನಮ್ಮ ಭಾರತ. ನ್ಯಾಯ ನೀತಿಗೆ ಶ್ರೀ ರಾಮನ ಆದರ್ಶವಾದರೆ, ಸತ್ಯಕ್ಕೆ ಸತ್ಯಹರಿಶ್ಚಂದ್ರ , ದಾನಕ್ಕೆ ಕರ್ಣರಂತಹ ಆದರ್ಶವನ್ನಿಟ್ಟು ಮೆರೆದ ನಾಡು ನಮ್ಮದು. ಭಾರತ ಮಾತೆ ಸೌಭಾಗ್ಯವತಿಯಾಗಿ ಕಂಗೊಳಿಸುತ್ತಿದ್ದ ಕಾಲ ಅದು. ಹಸಿರ ಸೀರೆಯನ್ನೇ ಹೊದ್ದು ಲಜ್ಜೆಯಿಂದ ಕಾಣುತ್ತಿದ್ದವಳು ನಮ್ಮ ಭಾರತಾಂಬೆ. ಅದು ನಮ್ಮ ಭಾರತ ದೇಶ.

ಆದರೆ ಇಂದು.....

ನಿಸ್ವಾರ್ಥಿಗಳ ಬೀಡಲ್ಲ ಇದು. ಸ್ವಾರ್ಥಿಗಳ ತವರೂರು. ಎಲ್ಲಾ ತಮ್ಮ ಕಲ್ಪನೆಯೆಂಬ ಸ್ವಾರ್ಥದ ಹುಚ್ಚುಕುದುರೆಯ ಹಿಂದೆ ಹುಚ್ಚರಂತೆ ಓಡುತ್ತಿರುವವರು. ಮಾನವೀಯತೆ ಆಧುನಿಕತೆಯ ಹಿಂದೆ ಮೂಲೆಗುಂಪಾಗಿದೆ. ಮೌಲ್ಯಾಧಾರಿತ ಜೀವನ ಮಣ್ಣಿನಾಳದಲ್ಲೆಲ್ಲೋ ಅವಿತು ಅಟ್ಟಹಾಸ ಮಾಡುತ್ತಿದೆ. ಅಲ್ಲ ಎನ್ನುವವರು ಯಾರಾದರೂ ಇದ್ದರೆ ಅದು ನನ್ನ ಸೌಭಾಗ್ಯವೇ ಸರಿ. ಇನ್ನು ದೇಶದ ರಾಜಕಾರಣ ಸ್ಥಿತಿಯನ್ನು ನೋಡಿದರೆ ಮರುಕ ಹುಟ್ಟಿಸುವಂತದ್ದು ಎಂದರೆ ಅದು ತಪ್ಪಾಗಲಿಕ್ಕಿಲ್ಲ. ರಾಜಕೀಯ ಎಂದರೆ ಪ್ರಜಾಪ್ರಭುತ್ವ ನಮ್ಮ ದೇಶದಲ್ಲಿ ಆದರೆ ಇಂದು ಅದು ರಾಜಕಾರಣಿಗಳ ಸ್ವಾರ್ಥಯುತ ಕ್ಷೇತ್ರ. ದೇಶವನ್ನು ಮುನ್ನಡೆಸಬೇಕಾದ

ನಾಯಕರು, ತಮ್ಮ ತಮ್ಮಲ್ಲೇ ಕಲಾಪಗಳನ್ನು ಮಾಡಿಕೊಳ್ಳುತ್ತಾ ಕಾಲಹರಣ ಮಾಡುತ್ತಿದ್ದಾರೆ. ದೇಶವನ್ನು ತಮ್ಮ ಸ್ವಾರ್ಥದಿಂದಲೇ ಆಳುತ್ತಿದ್ದಾರೆ. ರಾಜಕಾರಣ ಬರೀ ಹೊಲಸು ಎನ್ನುವಂತಹ ಕೊಳಕು ಕ್ಷೇತ್ರವಾಗಿದೆ.

ತಮ್ಮಲ್ಲೇ ಮಾನವೀಯತೆ ಸಾವನ್ನಪ್ಪಿದಾಗ, ಇನ್ನು ಪ್ರಜೆಗಳ ಸ್ಥಿತಿಯಾದರು ಹೇಗೆ ಸುಧಾರಿಸಿತು. ಮೌಲ್ಯಗಳು ಮರಣಹೊಂದಿ ಮಣ್ಣಾದಾಗ ಯಾರು ತಾನೇ ಮಾನವನಾಗುತ್ತಾನೆ. ನೀ ಏನಾದರು ಆಗು ಮೊದಲು ಮಾನವನಾಗು. ಆದರೆ ಇಂದು ನಡೆಯುತ್ತಿರುವುದೇನು. ದೇಶವನ್ನು ಒಳ್ಳೆಯ ಮಾರ್ಗದಲ್ಲಿ ಕೊಂಡೊಯ್ಯಬೇಕಾದವರು ಕೊಳ್ಳೆಹೊಡೆಯಲು ಪ್ರಾರಂಭಿಸಿದಾಗ ಸನ್ಮಾರ್ಗ ಹಾಗಿರಲಿ, ದಾರಿಯಲ್ಲಿ ಸಾಗುವುದೇ ಅನುಮಾನ.

ರಾಜಕೀಯ ಸತ್ತು ಮಲಗಿದೋ ಹೊದ್ದು ಮಲಗಿದೋ ಗೊತ್ತಿಲ್ಲ. ಅಂತು ಕಣ್ಮುಚ್ಚಿರುವುದು ಮಾತ್ರ ನಿಜ. ಇಂತಹುದರ ಮಧ್ಯೆಯು ಸ್ವಲ್ಪ ಮುಂದೆ ಬರಲು ಪ್ರಯತ್ನಿಸುತ್ತಿರುವ ರಾಷ್ಟ್ರ. ಅದಕ್ಕೆ ಎಷ್ಟೂ ವರ್ಷವಾದರು "ಮುಂದುವರೆಯುತ್ತಿರುವ ದೇಶ" ನಮ್ಮದು. ಇಂತಹವರ ಮಧ್ಯೆ ದೇಶ ಕಾಯುವ ನಮ್ಮ ಯೋಧರಿಗೆ ನಮ್ಮ ಮನದಾಳದ ನಮನಗಳು. ಸಾವಿರ ಸವಾಲುಗಳ ಸರಮಾಲೆ ಎದುರಿಸಿದರು ದೇಶಕ್ಕೆ ಪ್ರಾಣ ನೀಡಲು ತಯಾರಿರುವ ಪ್ರಜೆಗಳಿರುವುದು ನನ್ನ ಹೆಮ್ಮೆಯ ದೇಶ. ಇವರ ಭಾರತಾಂಬೆಯ ಹೆಮ್ಮೆಯ ಕುವರರು.

ಇದು ನನ್ನ ದೇಶ....

"ಒಬ್ಬ ಉತ್ತಮ ಶಿಕ್ಷಕ ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಸಮಾಜಕ್ಕೂಮಾದರಿಯಾಗಿರಬೇಕು. ನಿಜವಾಧ ಗುರು ತಮ್ಮ ಶಿಷ್ಯರಲ್ಲಿ ಜಾತಿ... ಮತ, ಧರ್ಮ, ಲಿಂಗತಾರತಮ್ಯ ಮಾಡಲಾರ. ಸರ್ವರನ್ನೂ ಒಂದೇ ಮಾನದಂಡವನ್ನಿಟ್ಟು ನೋಡುತ್ತಾನೆ. ವಿದ್ಯಾರ್ಥಿಗಳನ್ನು ತನ್ನ ಮಕ್ಕಳಂತೆ ಪ್ರೀತಿಸುವ ಶಿಕ್ಷಕ ಅಥವಾ ಶಿಕ್ಷಕಿಗೆ ವಾತ್ಸಲ್ಯ ಪೂರ್ಣವಾದ ಮಾತೃಹೃದಯವಿರಬೇಕು. ವಿದ್ಯಾರ್ಥಿ ತಪ್ಪು ಮಾಡಿದಾಗ ತಪ್ಪಿಗೆ ಶಿಕ್ಷೆ ಇರಲೇಬೇಕು. ತನಗೆ ಸಿಕ್ಕಿದ ಶಿಷ್ಯನೆನ್ನುವ ಕಲ್ಲನ್ನು ತಿದ್ದಿ, ತೀಡಿ ಒಂದು ಆಕಾರಕ್ಕೆ ತಂದು ಸುಂದರ ಶಿಲ್ಪವಾಗಿಸುವವನೇ ನಿಜವಾದ ಗುರು"

– ಸಂಗ್ರಹ

ಮಲ್ಪೆ: ಪ್ರವಾಸೋದ್ಯಮ ಕೇಂದ್ರ

ರಮ್ಯಾ ಕುಂದರ್
ತೃತೀಯ ಬಿ.ಎ.

ಅರಿಕೆ

ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರ ಉಡುಪಿಯಿಂದ ಕೇವಲ 6 ಕಿ.ಮೀ. ದೂರದಲ್ಲಿರುವ ಒಂದು ಸುಂದರ ಸಮುದ್ರತೀರದ ಪಟ್ಟಣ ಮಲ್ಪೆ. ಇದುವೇ ಸಹಜ, ಸುಂದರ ಹಾಗೂ ಸರ್ವಋತು ಬಂದರು. ಕರ್ನಾಟಕ ಕರಾವಳಿಯ ಪ್ರಮುಖ ಬಂದರು ಮತ್ತು ಪ್ರಮುಖ ಮೀನುಗಾರಿಕೆ ಬಂದರು.

ಅಲ್ಲದೆ ಇದು ಉದ್ಯಾವರ ನದಿಯ ದಂಡೆಯ ಮೇಲೆ ಇರುವುದರಿಂದ ಬೆರಗುಗೊಳಿಸುವಷ್ಟು ಸುಂದರವಾದ ಸ್ಥಳ. ಇದು ಉಡುಪಿಯ ಉಪನಗರ ಮಲ್ಪೆ ಪಟ್ಟಣವು ಹೆಚ್ಚಾಗಿ ಮೊಗವೀರ ಮೀನುಗಾರ ಸಮುದಾಯದ ನೆಲೆಗಳೊಂದಿಗೆ ಸಂಬಂಧಿಸಿದೆ.

ಮಲ್ಪೆ ಬೀಚ್ ಮೀನುಗಾರಿಕೆಯ ಹಡಗು ತಾಣ ತಂಪಾದ ಗಾಳಿ. ಜೊತೆಗೆ ಸಣ್ಣ ಅಲೆಗಳು ಬೀಚ್‌ನ ಅಂದವನ್ನು ಇಮ್ಮಡಿಗೊಳಿಸುತ್ತದೆ. ಹಾಗೂ ಸಮುದ್ರ ತೀರವನ್ನು ರುದ್ರರಮಣೀಯ ಸ್ಥಳ ಎಂಬುದಾಗಿಯೂ ಕರೆಯಬಹುದಾಗಿದೆ. ಮತ್ತೆ ಮತ್ತೆ ಸೆಳೆಯುವ ಸಮುದ್ರದ ಅಲೆಗಳು ಪ್ರವಾಸಿಗರನ್ನು ತನ್ನೆಡೆಗೆ ಮತ್ತೆ ಮತ್ತೆ ಆಕರ್ಷಿಸುತ್ತದೆ. ಪ್ರವಾಸಿಗರು ಅತೀ ಹೆಚ್ಚು ನೋಡಲು ಇಷ್ಟಪಡುವ ಸ್ಥಳವೆಂದರೆ ಮಲ್ಪೆ ಬೀಚ್ ಈ ಬೀಚ್ ಚೊಕ್ಕಟ್ಟಿನ ವಾತಾವರಣ ಹಾಗೂ ಸಣ್ಣಪುಟ್ಟ ಅಂಗಡಿಗಳಲ್ಲಿ ದೊರೆಯುವ ರುಚಿಕರವಾದ ಸ್ಥಳೀಯ ತಿನಿಸುಗಳಿಂದಾಗಿ ಪ್ರಸಿದ್ಧ. ಈ ಬೀಚ್‌ನಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ನಿರಂತರವಾಗಿ ನಡೆಯುತ್ತವೆ. ಬೀಚ್ ನೋಡಲು ಬರುವ ಪ್ರವಾಸಿಗರ ಸಂಖ್ಯೆ ಇತ್ತೀಚೆಗೆ ಹೆಚ್ಚಿದೆ.

ಸಮುದ್ರದಲ್ಲಿನ ಅಲೆಗಳನ್ನು ನೋಡು ನಿಂತರೆ ಸಮುದ್ರದ ಅಲೆಗಳ ಹೊಯ್ದಾಟದ ನಡುವೆ ಸಿಲುಕಿದ ಮರಳು, ದಡಕ್ಕೆ ಬಂದು ಅಪ್ಪಳಿಸಿದ ತೆರೆಗಳಿಂದ ಉಂಟಾದ ಸ್ವಚ್ಛವಾದ ಮರಳು ತೀರವನ್ನು ನೋಡುತ್ತಿದ್ದಂತೆಯೇ ನಮ್ಮೊಳಗಿನ ಹೊಯ್ದಾಟವೆಲ್ಲ ಮರೆತು ಹೋಗುವುದು. ಅದರ ಬೆನ್ನಲ್ಲಿಯೇ ಮೂಡಿಬಂದಂತಹ ಹೆದ್ದೆರೆಯು ಬಂದು ನೊರೆ ನೊರೆಯಾಗಿ ಅಪ್ಪಳಿಸುವುದು. ಈ ಅಲೆಗಳ ಏರಿಳಿತದಿಂದ ನಾವು ನಮ್ಮ ಜೀವನದಲ್ಲಿ ಘಟಿಸುವ ಸತ್ಯವನ್ನು ಕಂಡುಕೊಳ್ಳಬಹುದಾಗಿದೆ.

ಕಡಲಿನ ಅಲೆಗಳ ಏರಿಳಿತವು ಕಡಲ ಅಂತರಂಗದ ಅಭಿವ್ಯಕ್ತಿ ಎಂಬಂತೆ ತೋರುತ್ತದೆ. ಆಯಾಸವಿಲ್ಲದ ಅಲೆಗಳ ಏರಿಳಿತ ಮನುಷ್ಯನಿಗೆ ಸದಾ ಬಂದು ಪಾಠ.

ನೊರೆನೊರೆಯಾಗಿ ತೆರೆತೆರೆಯಾಗಿ ಸಂಪೂರ್ಣವಾಗಿ ಭೂಮಿತಾಯಿಯನ್ನು, ಆವರಿಸಿಕೊಳ್ಳುವ ಈ ಸಮುದ್ರದ ರೀತಿಯೇ ಅನನ್ಯವಾದುದು ಈ ತೆರೆಗಳಲ್ಲಿ ಕಣ್ಣ ದೃಷ್ಟಿಯನ್ನು ನೆಟ್ಟು ನೋಡುತ್ತಿದ್ದರೆ ಸಮಯ ಕಳೆದುದರ ಬಗ್ಗೆ ಗೋಚರವೇ ಆಗುವುದಿಲ್ಲ.

ಮಲ್ಪೆ ಪಟ್ಟಣ ಮಲ್ಪೆ ಪ್ರದೇಶದ ಪರಿಚಯ:

ಮತ್ಸ್ಯ ಕೈಗಾರಿಕೆಯನ್ನು ಹೊರತುಪಡಿಸಿ ಹೆಂಚು ತಯಾರಿಕೆ ಹಾಗೂ ತೆಂಗು ಕೃಷಿ ಮಲ್ಪೆಯ ಪ್ರಮುಖ ಕಸುಬುಗಳು. ಈ ಸ್ಥಳವು ತನ್ನ ನೆಲೆ ಹಾಗೂ ಬೌಗೋಳಿಕ ವೈಶಿಷ್ಟ್ಯತೆಗಳಿಂದ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇದರಿಂದಲೇ ಪ್ರವಾಸೋದ್ಯಮ ಇಲಾಖೆಯು ಸಮಗ್ರ ಅಭಿವೃದ್ಧಿ ಹೊಂದುತ್ತಲಿದೆ. ತುಳು ಕೊಂಕಣಿ ಮತ್ತು ಕನ್ನಡ ಮಲ್ಪೆಯ ಪ್ರಮುಖ ಭಾಷೆಗಳಾಗಿವೆ. ಮಲ್ಪೆಯ ಸುತ್ತಮುತ್ತ ಹಲವು ಬೀಚ್ ರೆಸಾರ್ಟ್‌ಗಳನ್ನು ಕಾಣಬಹುದು. ಇವು ಪ್ರವಾಸಿಗರ ಅಗತ್ಯಗಳನ್ನು ನಿವಾರಿಸುತ್ತವೆ. ಮಲ್ಪೆಯು ಉಡುಪಿಯ ಒಂದು ಉಪನಗರವೂ ಹೌದು. ನಿಮಗೆ ಉಳಿದುಕೊಳ್ಳಲು ಇರುವ ಹಲವು ಆಯ್ಕೆಗಳಿಂದ ಸರಿಯಾದದ್ದನ್ನು ಆರಿಸಬಹುದು. "ದಿ ಪ್ಯಾರಾಡೈಸ್ ಬೀಚ್ ರೆಸಾರ್ಟ್, ದಿ ಮಲ್ಪೆ ಬೀಚ್ ರೆಸಾರ್ಟ್ ಹಾಗೂ ದಿ ಪಾಮ್‌ಗ್ರೂವ್ ಬೀಚ್ ರೆಸಾರ್ಟ್‌ನ ಇಂತಹ ಕೆಲವು ತಂಗುದಾಣಗಳು ಇಲ್ಲಿವೆ. ಮಲ್ಪೆಯು ಮೊಗವೀರ ಜನಸಂಖ್ಯೆಯ ಕೇಂದ್ರವಾಗಿದೆ ಹಾಗೂ ಭಾರತದ ಕರಾವಳಿ ಪ್ರದೇಶಗಳಲ್ಲಿ ಪ್ರವಾಸಿಗರಿಗೆ ಪ್ರಪ್ರಥಮವಾಗಿ ಉಚಿತ ವೈಫೈ ಸೇವೆಯನ್ನು ಒದಗಿಸುವ ಪ್ರವಾಸಿ ಬೀಚ್ ಆಗಿದೆ.

ಮಲ್ಪೆಬೀಚ್‌ನ ಪ್ರಮುಖ ಮನೋರಂಜನಾ ಘಟಕ

ಕುದುರೆ ಸವಾರಿ, ಒಂಟೆ ಸವಾರಿ, ಮರಳಿನಲ್ಲಿ ಬೈಕ್ ಚಲಾವಣೆ, ಪ್ಯಾರ್‌ಸೈಲಿಂಗ್, ಜೈಸಿ, ಬಂಜಿ ಜಂಪ್, ಬೋಟ್ ಸವಾರಿ, ಕ್ರಿಕೆಟ್, ಆಟಗಾರರಿಗೆ ಸಮುದ್ರದಡದ ಸಮೀಪ ಕ್ರಿಕೆಟ್ ನೆಟ್ ಅಂಕಣವನ್ನು ರಚಿಸಲಾಗಿದೆ.

ಇನ್ನಿತರ ಮನೋರಂಜನಾ ಆಟಗಳು ಮಕ್ಕಳಿಗಾಗಿ ಹಾಗೂ ವಯಸ್ಕರಿಗಾಗಿ ವ್ಯವಸ್ಥಿತವಾಗಿದೆ.

ಮೂಲ ಸೌಕರ್ಯಗಳೊಂದಿಗೆ ಆಕರ್ಷಿಸುತ್ತಿರುವ ಮಲ್ಪೆಯ ಪ್ರವಾಸಿ ತಾಣ

ಪ್ರವಾಸಿಗರಿಗೆ ಸಮುದ್ರ ದಡದಲ್ಲಿ ವಿಹರಿಸಲು 12 ಛತ್ರಿಯ ಆಕಾರದ ಹಟ್‌ಗಳನ್ನು ನಿರ್ಮಿಸಲಾಗಿದೆ. ಹಾಗೂ 20 ಶಾಶ್ವತ ಬೆಂಚುಗಳನ್ನು ಕಲ್ಲಿನಿಂದ ನಿರ್ಮಿಸಲಾಗಿದೆ. ಮನೋರಂಜನೆಗೆ ಪೂರಕವಾಗಿ ಹಲವಾರು ರೀತಿಯ ಆಟೋಟಗಳನ್ನು ಕಾಣಬಹುದಾಗಿದೆ. ಎಲ್ಲಾ ರೀತಿಯ ಪ್ರವಾಸಿ ವಾಹನಗಳ ನಿಲುಗಡೆಗಾಗಿ ಸ್ಥಳಾವಕಾಶಗಳಿವೆ.

ಪ್ರವಾಸಿಗರಿಗಾಗಿ ಉಚಿತ ವೈಫೈ ವ್ಯವಸ್ಥೆಯನ್ನು ಹೊಂದಿದ ಪ್ರಪ್ರಥಮ ಬೀಚ್ ಎಂದು ಮಲ್ಪೆ ಬೀಚ್ ಹೆಗ್ಗಳಿಕೆಯನ್ನು ಹೊಂದಿದೆ.

ಮೂಲ ಸೌಕರ್ಯಗಳಲ್ಲಿ ಮುಖ್ಯವಾಗಿ ಶೌಚಾಲಯ ಹಾಗೂ ಸ್ನಾನಗ್ರಹದ ವ್ಯವಸ್ಥೆಗಳಿವೆ. ಹಾಗೆಯೇ ಪ್ರವಾಸಿಗರಿಗೆ ಉಳಿದುಕೊಳ್ಳಲು ಅಥಿತಿ ಗ್ರಹದ ವ್ಯವಸ್ಥೆಯೂ ಇದೆ. ಹಾಗೂ ಪ್ರವಾಸಿಗರ ಸ್ವತ್ತುಗಳ ರಕ್ಷಣೆಗಾಗಿ ಲಗೇಜ್ ರೂಮ್‌ನ ವ್ಯವಸ್ಥೆಯಿದೆ.

ಪ್ರವಾಸಿಗರ ಸುರಕ್ಷತೆ ಹಾಗೂ ರಕ್ಷಣೆಯ ದೃಷ್ಟಿಯಿಂದ ಬೀಚ್‌ನಲ್ಲಿ 5 ಜನ ಲೈಫ್ ಗಾರ್ಡುಗಳನ್ನು ನಿಯೋಜಿಸಲಾಗಿದೆ ಹಾಗೆಯೇ ಅಂಬುಲೆನ್ಸ್ ವ್ಯವಸ್ಥೆಯೂ ಇದೆ.

ಅಪರಾಧಗಳಿಗೆ ಸಂಬಂಧಿಸಿದಂತೆ ಹಾಗೂ ಅಪರಾಧ ಪತ್ತೆಗೆ ಸಿಸಿ ಕ್ಯಾಮರಗಳನ್ನು ಮಲ್ಪೆ ಬೀಚ್‌ನಲ್ಲಿ ಅಳವಡಿಸಲಾಗಿದೆ.

ಬೀಚ್‌ನ ಸ್ವಚ್ಛತೆಯನ್ನು ದೃಷ್ಟಿಯಿಂದ 75 ಲಕ್ಷರೂ. ವೆಚ್ಚದ ಕಸಸ್ವಚ್ಛ ಮಾಡುವ ಟ್ರಾಕ್ಟರ್ ಅನ್ನು ಬಳಸಲಾಗಿದೆ. ಬೀಚ್‌ನಲ್ಲಿರುವ ಪೋಲೀಸರು ಪ್ರವಾಸಿಗರಿಗೆ ಸಮುದ್ರದ ಅಳಕ್ಕೆ ಇಳಿಯದಂತೆ ಮುನ್ನೆಚ್ಚರಿಕೆ ಹಾಗೂ ಸೂಚನೆಗಳನ್ನು ನೀಡುತ್ತಾರೆ.

ಸೈಂಟ್ ಮೇರೀಸ್

ಮಲ್ಪೆಯ ಬಳಿ ಇರುವ 4 ದ್ವೀಪಗಳಾದ
ಸೈಂಟ್ ಮೇರೀಸ್ ದ್ವೀಪ
ಉತ್ತರ ದೀಪ
ದರಿಯಾ ಬಹಾದೂರ್ ಗಡ್
ದಕ್ಷಿಣ ದೀಪ

ಇವುಗಳಲ್ಲಿ ಸೈಂಟ್‌ಮೆರಿಸ್ ದ್ವೀಪವು ಹೆಸರುವಾಸಿಯಾಗಿದೆ. ಸೈಂಟ್ ಮೇರೀಸ್ ದ್ವೀಪವು ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ಮಲ್ಪೆಯ ಸಮುದ್ರ ಕಿನಾರೆಯಿಂದ 4 ಕಿ.ಮೀ. ದೂರದಲ್ಲಿದೆ.

ಇತಿಹಾಸ

ಇದರ ಮೊದಲ ಹೆಸರು ತೋನ್ಸೆಪಾರ್. ಇತಿಹಾಸದ ಪ್ರಕಾರ 1897ರಲ್ಲಿ ಪೋರ್ಚುಗೀಸ್ ಶೋಧಕ ವಾಸ್ಕೊಡಗಾಮ ಯೂರೋಪಿನಿಂದ ಭಾರತದ ಕಡೆಗೆ ಸಾಗರ ಮಾರ್ಗದಲ್ಲಿ ಪ್ರಯಾಣಿಸುವಾಗ ಈ ದ್ವೀಪದಲ್ಲಿ ಇಳಿದನೆಂದು ಹಾಗೂ ಅಲ್ಲಿ ಯೇಸುಕ್ರಿಸ್ತನ ಚಿನ್ಹೆ (ಕ್ರಾಸ್)ಯನ್ನು ನೆಟ್ಟು ಇಲ್ ಪಾಡ್‌ರೋನ್ ದಿ ಸಂತ ಮರಿಯ ಅಂದರೆ ತಾಯಿ ಮೇರಿಗಾಗಿ ಸಮರ್ಪಿಸಿದ ತಾಣ ಎಂಬುವುದಾಗಿ ಹೆಸರಿಟ್ಟ ಎಂದು ನಂಬಲಾಗಿದೆ. ಆದುದರಿಂದಾಗಿ ಈ ದ್ವೀಪವು ಸೈಂಟ್ ಮೇರಿಸ್ ದ್ವೀಪ ಎಂಬುವುದಾಗಿ ಹೆಸರನ್ನು ಪಡೆದಿದೆ ಎನ್ನಲಾಗಿದೆ.

ಕರ್ನಾಟಕದಾದ್ಯಂತ ಸಂತಮೇರಿಯ ದ್ವೀಪವು ಕೊಕನಟ್ ದ್ವೀಪ ಎಂಬುವುದಾಗಿ ಹೆಸರುವಾಸಿಯಾಗಿದ್ದು ಹಾಗೆಯೇ ಈ ದ್ವೀಪಕ್ಕೆ ನಾರಿಕೇಳಿ ದ್ವೀಪ ತೋನ್ಸೆಪಾರ್ ಹಾಗೂ ಅಸ್ರೆ ಎಂಬ ಹೆಸರುಗಳನ್ನು ಹೊಂದಿದೆ.

ಭಾರತದಲ್ಲಿರುವ 26 ಭೂಗರ್ಭಶಾಸ್ತ್ರದ ಸ್ಮಾರಕಗಳಲ್ಲಿ ಸೈಂಟ್‌ಮೇರೀಸ್ ಒಂದಾಗಿದ್ದು ಪೋರ್ಚುಗೀಸ್ ಯಾತ್ರಿಕ. ವಾಸ್ಕೋಡಗಾಮನು ಕೇರಳದ ಕಪ್ಪಾಡ್ ಎಂಬ ಪ್ರದೇಶವನ್ನು

ತಲುಪುವ ಮುಂಚೆಯೇ ಇಲ್ಲಿ ಇಳಿದಿದ್ದನು. ಪ್ರಸ್ತುತ ದ್ವೀಪವು ಯಾವುದೇ ಕಟ್ಟಡಗಳಿಲ್ಲದೆ ನಿರ್ಜನವಾಗಿದ್ದು ಅನನ್ಯವಾದ ಕಾಲೊಮ್ನಾರ್ ಬಾಲೆಸ್ಟಿಕ್ ಲಾವಾ ರಚನೆಯನ್ನು ಹೊಂದಿದೆ.

ಹಾಗೆಯೇ ಉತ್ತರದ ದ್ವೀಪ ಬಸಾಲ್ ರಯೋಡೆ ಸೈಟ್ ವರ್ಗದ ಶಿಲೆಗಳಿಂದ ರಚನೆಯಾಗಿದ್ದು ಷಡ್ಭು ಜಾಕೃತಿಯ ಶಿಲೆಗಳ ಸಮಾಸವಾಗಿದೆ. ಈ ಬಗೆಯ ಸುಂದರ ಷಡ್ಭುಜಾಕೃತಿಯ ಶಿಲೆರಚನೆಗಳು ದೇಶದಲ್ಲಿ ಇವು ಏಕಮಾತ್ರ ಎನ್ನಲಾಗಿದೆ. ದ್ವೀಪದ ವಿಸ್ತಾರವು ಸುಮಾರು 500 ಮೀ. (1.640 ಅಡಿ) ಉದ್ದವಾಗಿದ್ದು ಅಗಲವು 100 ಮೀ. ಇದೆ.

ದ್ವೀಪದ ತುಂಬೆಲ್ಲಾ ತೆಂಗಿನ ಮರಗಳಿವೆ. ಇಲ್ಲಿ ಮನುಷ್ಯರ ನೆಲೆ ಇಲ್ಲ. ಪ್ರವಾಸದ ಉದ್ದೇಶದಿಂದ ಪ್ರವಾಸಿಗರು ಭೇಟಿ ನೀಡುತ್ತಾರೆ. ದ್ವೀಪಕ್ಕೆ ಭೇಟಿ ನೀಡಲು ಮಾರಿಸ್ ಹಡಗಿನ ವ್ಯವಸ್ಥೆ ಇದೆ. ಪ್ರವಾಸಿಗರೊಬ್ಬರಿಗೆ ದ್ವೀಪಕ್ಕೆ ತೆರಳಲು 250 ರೂ. ದರ ನಿಗದಿಗೊಳಿಸಲಾಗಿದೆ. ಪ್ರವಾಸಿಗರ ಸುರಕ್ಷತೆಗಾಗಿ 5 ಲೈಫ್ ಗಾರ್ಡ್‌ಗಳನ್ನು ನಿಯೋಜಿಸಲಾಗಿದೆ.

ಮಲ್ಪೆಯ ಅಭಿವೃದ್ಧಿಯ ಬಗ್ಗೆ ಕ್ರಮ ಕೈಗೊಳ್ಳುವವರು:

ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ
ಮಲ್ಪೆ ಬೀಚ್ ಅಭಿವೃದ್ಧಿ ಸಮಿತಿ
ನಿರ್ಮಿತಿ ಕೇಂದ್ರ
ಜಿಲ್ಲಾಧಿಕಾರಿ
ಮೊಗವೀರ ಯುವಕ ಸಂಘ ಮಲ್ಪೆ
ಜೀ. ಶಂಕರ್ ಫ್ಯಾಮಿಲಿ ಟ್ರಸ್ಟ್ ಮಲ್ಪೆ

ಸೀವಾಕ್ ವೇ ಪಾಯಿಂಟ್

ಸೀವಾಕ್ ವೇ ಪಾಯಿಂಟ್ 450 ಮೀ. ಉದ್ದ 8 ಅಡಿ ಅಗಲವಿದ್ದು 63.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ 32 ಲೈಟುಗಳನ್ನು ಅಳವಡಿಸಿದ್ದು 2 ಗೋಡೆಯ ಬದಿಗೆ ಹೂವಿನ ಕುಂಡಗಳ ಅಳವಡಿಕೆ ಇನ್ನಷ್ಟು ಸೌಂದರ್ಯ ಹಬ್ಬಿಸಿದೆ ಇನ್ನಷ್ಟು ಭದ್ರತೆಯ ವ್ಯವಸ್ಥೆಯ ಸಲಹೆ ವ್ಯಕ್ತವಾಗಿದೆ.

350 ಮೀ. ಹಾದಿಯ ನಡುವೆ ಕಲಾವಿದ ಪುರುಷೋತ್ತಮ ಅಡ್ವೆ ನಿರ್ಮಿಸಿದ ಸಿಮೆಂಟ್ ಶಿಲ್ಪ ಕಲಾಕೃತಿಯಲ್ಲಿ (ಗುಪ್ತಗಾರೆ ಸಕೋ) ಬೆಸ್ತ ಮೀನುಗಾರಿಕೆ ನಿಟ್ಟಿನಲ್ಲಿ ಕಡಲಿನತ್ತ ಮುಖಮಾಡಿದವರೆ ಮಡದಿ ಬಟ್ಟೆಯಲ್ಲಿ ಮೀನು ಹೊತ್ತು ದಡದತ್ತ ಮುಖ ಮಾಡಿದ್ದಾಳೆ. ಹಿಂದಿನಿಂದ ಅಮ್ಮನ ಸೆರಗು ಹಿಡಿದುಕೊಂಡ ಮಗ ಬೆನ್ನ ಮೇಲೆ ಚೀಲ ಹಾಕಿ ಶಾಲೆಯತ್ತ ಮುಖ ಮಾಡಿದ್ದಾನೆ.

ಸೀವಾಕ್ ವೇ ಪಾಯಿಂಟ್‌ನ ತುತ್ತತುದಿಗೆ ತೆರಳಿದರೆ ಟೈಟಾನ್ ಹಡಗಿನ ಮುಂಬದಿಯ ಅಂಚನ್ನು ಏರಿ ಕಡಲಿನಿಂದ ಬೀಸುವ ತಂಗಾಳಿಗೆ ಪ್ರವಾಸಿಗರು ಹೆಜ್ಜೆ ಮೇಲೆ ಹೆಜ್ಜೆಯನ್ನು ಇಟ್ಟು 6 ಲಕ್ಷಣಗಳನ್ನು ಸವಿ ನೆನಪಾಗಿಸಿಕೊಳ್ಳಬಹುದೇ ಹೊರತು ಕೆಲ ಸಾಹಸಗಳಿಗೆ ಮುಂದಾಗಿ ಅಪಾಯವನ್ನು ತಂದೊಡ್ಡಿಕೊಳ್ಳಬಾರದು. ರಾಜ್ಯದಲ್ಲಿಯೇ ಮೊದಲ ಬಾರಿಗೆ ರೂಪಿತ ಸೀವಾಕ್ ವೇ ಪಾಯಿಂಟ್ ಸಂಜೆ ಸೂರ್ಯನ ವೇಳೆಯಲ್ಲಿ ಸೂರ್ಯಾಸ್ತವನ್ನು ಕಣ್ತುಂಬಿ ಕೊಳ್ಳಲು ಪ್ರವಾಸಿಗರು ಹವಣಿಸುತ್ತಾರೆ.

ಕಡಲಿನಲ್ಲಿ ಕೆಲ ಡಾಲ್ಫಿನ್‌ಗಳಿದ್ದು ಆಹಾರ ಒದಗಿಸಿದರೆ ಖಾಯಂ ಗಿರಾಕಿಗಳಾಗಿ ಪ್ರವಾಸಿಗರ ಕೇಂದ್ರಬಿಂದುವಾಗಲಿದೆ.

ಉಪಸಂಹಾರ

ಮಲ್ಪೆಯನ್ನು ರುದ್ರರಮಣೀಯ ಪ್ರವಾಸಿ ತಾಣ ಎಂಬುವುದಾಗಿ ವರ್ಣಿಸಬಹುದಾಗಿದೆ. ಪ್ರಸ್ತುತ ಪ್ರವಾಸಿ ತಾಣವು ಸೌಕರ್ಯಗಳನ್ನು ಹೊಂದಿದ್ದರೂ ಸಹಾ ಕೆಲವು ಕುಂದು ಕೊರತೆಗಳನ್ನು ತನ್ನ ಬಿಡಲಿಲ್ಲ ಇರಿಸಿಕೊಂಡಿದೆ.

ಎಷ್ಟೇ ಮುನ್ನೆಚ್ಚರಿಕೆ ನೀಡಿದರೂ ಪ್ರವಾಸಿಗರು ಸಮುದ್ರದಲ್ಲಿ ಈಜಾಡಲು ಮುನ್ನುಗ್ಗುತ್ತಾರೆ. ಇದರಿಂದಾಗಿ ಅಪಾಯ ಸಂಭವಿಸುತ್ತದೆ ಹಾಗೂ ಎಷ್ಟೇ ಸೌಲಭ್ಯಗಳಿಲ್ಲದ್ದರೂ ಕೂಡ ಪ್ರವಾಸಿಗರೂ ಕೆಲವೊಮ್ಮೆ ದುರುಪಯೋಗ ಪಡಿಸಿಕೊಳ್ಳುತ್ತಾರೆ.

ಇದರ ಬಗ್ಗೆ ಪ್ರವಾಸಿಗರೇ ಮುನ್ನೆಚ್ಚರಿಕೆ ನಿಗಾವಹಿಸಬೇಕು. ಸರ್ಕಾರದ ವತಿಯಿಂದ ಅನುಷ್ಠಾನಗೊಳ್ಳುವಂತಹ ಕ್ರಮಗಳು ಸರಿಯಾದ ರೀತಿಯಲ್ಲಿ ಪ್ರವಾಸಿಗರಿಗೆ ಅನುಕೂಲವಾಗುವಂತೆ ದೊರೆಯಬೇಕಾಗಿದೆ.

ಭೂತಾರಾಧನೆ

ಗ್ಯಾಬ್ರಿಯಲ್ ಬಂಗೇರ, ರಕ್ಷಣ್
ತೃತೀಯ ಬಿ.ಎ.

ಭಾರತದ ಅನೇಕ ಜಾನಪದ ಆರಾಧನಾ ಪರಂಪರೆಗಳಲ್ಲಿ ತುಳುನಾಡಿನ ಭೂತಾರಾಧನೆ ಕೂಡ ಒಂದು. ಇದನ್ನು ದೈವಾರಾಧನೆ ಎಂದು ಕರೆಯುತ್ತಾರೆ. ಭೂತಾರಾಧನೆ ಬಹಳ ಪ್ರಾಚೀನವಾದ ಆರಾಧನಾ ಸಂಪ್ರದಾಯವೆಂದು ಎಲ್ಲಾ ಸಂಶೋಧಕರು ಒಪ್ಪಿಕೊಳ್ಳುತ್ತಾರೆ. ದಕ್ಷಿಣ ಕನ್ನಡದ ಭೂತಾರಾಧನೆಯನ್ನು ಕೆಲವರು ಮೊಹೆಂಜೊದಾರೋ ಹರಪ್ಪಾ ಸಂಸ್ಕೃತಿಗಳ ಛಾಯ ಎಂದರೆ ಇನ್ನು ಕೆಲವರು ಸುಮೇರಿಯನ್ ಸಂಸ್ಕೃತಿಯದ್ದು ಎಂದು ಹೇಳಿದ್ದಾರೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಭೂತಾರಾಧನೆಯನ್ನು ತುಳುನಾಡಿನ ಜನರು ಭಕ್ತಿಯಿಂದ ಇಂದಿಗೂ ಆಚರಿಸಿಕೊಂಡು ಬಂದಿರುತ್ತಾರೆ.

ತುಳುನಾಡಿನ ಜನರು ತಮ್ಮ ಜೀವನದಲ್ಲಿ ಬರುವ ದುಃಖ ಕಷ್ಟ ಮತ್ತು ದುಷ್ಟ ಶಕ್ತಿಗಳಿಂದ ಬರುವ ಸಮಸ್ಯೆಗಳಿಂದ ತಮ್ಮನ್ನು ರಕ್ಷಿಸುವಂತೆ ದೈವಗಳಲ್ಲಿ ಪ್ರಾರ್ಥಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ದೈವಾರಾಧನೆಯು ಇಲ್ಲಿನ ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿದೆ. ಇಂದಿನ ಆಧುನಿಕ ಜಗತ್ತಿನಲ್ಲಿ ಜನರು ಎಷ್ಟೇ ಮುಂದುವರೆದರೂ ತುಳುನಾಡಿನ ಜನರು ಮಾತ್ರ ದೈವಾರಾಧನೆಯನ್ನು ಎಂದಿಗೂ ಮೀರಿ ಹೋಗುವುದಿಲ್ಲ.

ಸುಮಾರು 1450ರಲ್ಲಿ ದೊರೆತ ನಂದಳಿಕೆ ಶಾಸನವೊಂದರಲ್ಲಿ ಭೂತದ ಉಲ್ಲೇಖ ಕಾಣಸಿಗುತ್ತದೆ. ಕ್ರಿ.ಶ. 1556 ಬಾರ್ಕೂರು ಶಾಸನದಲ್ಲಿ ಬೊಬ್ಬರ್ಯನಿಗೆ ಕೊಟ್ಟಿಗೆ ಕಟ್ಟಿಸಿದ ಉಲ್ಲೇಖವಿದೆ. 1559ರ ಶಾಸನದಲ್ಲಿ ವಿಟ್ಲದ ಅರಸನಾದ ಪೊಂಬ ಹೆಗ್ಗಡೆಯವರು ಮಲೆರಾಯ ಭೂತಕ್ಕೆ ಉಂಬಳಿ ಬಿಟ್ಟ ಉಲ್ಲೇಖವಿದೆ. ಬೊಬ್ಬರ್ಯ ಪಾಡ್ದನದಲ್ಲಿ ಹಡಗು ಅಪಘಾತದಿಂದ ಮಡಿದ ಮುಸಲ್ಮಾನ ವೀರನೊಬ್ಬನು ದೈವತ್ವವನ್ನು ಪಡೆದ ಕಥೆಯಿದೆ. ಕ್ರಿಸ್ತಪೂರ್ವ ಒಂದನೇ ಶತಮಾನಕ್ಕೆ ಸೇರಿದವನೆಂದು ನಂಬಲಾದ ಬಾರ್ಕೂರಿನ ಅರಸ ಭೂತಾಳಪಾಂಡ್ಯನು ಹಡಗೊಂದನ್ನು ನಿರ್ಮಿಸಿ ಅದನ್ನು ಸಮುದ್ರಕ್ಕಿಳಿಯಲು ಸಾಧ್ಯವಾಗದಿದ್ದಾಗ ಕುಂಡೋದರ ಎಂಬ ಭೂತ ನರಳುವುದು ಕೇಳಿತು ಎಂಬ ಕಥೆಯೊಂದು ತುಳುನಾಡಿನಲ್ಲಿ ಪ್ರಸಿದ್ಧವಾಗಿದೆ. ಭೂತಾರಾಧನೆ ದಕ್ಷಿಣ ಕನ್ನಡ ಜಿಲ್ಲೆಯ ಒಂದು ವಿಶಿಷ್ಟ ಸಂಸ್ಕೃತಿಯನ್ನೇ ಒದಗಿಸಿದೆ. ಜನರು ತಮ್ಮ ಬದುಕಿನ ಒಳಿತು ಕೆಡುಕುಗಳಿಗೆ ದೈವ ಭೂತಗಳೇ ಕಾರಣವೆಂದು ನಂಬಿ ಅವುಗಳಿಗೆ ವರ್ಷಾವಧಿ ಪೂಜೆ ಹರಕೆಗಳನ್ನು ಸಲ್ಲಿಸುತ್ತಾರೆ. ತುಳುನಾಡಿನ ಅಪ್ರತಿಮ ವೀರರೆನಿಸಿಕೊಂಡ ಕೋಟಿ–ಚೆನ್ನಯ್ಯರ ಚರಿತ್ರೆಯನ್ನು ಸಾರುವ ಪಾಡ್ದನಗಳಿವೆ. ಉಡುಪಿ ತಾಲೂಕನ್ನು ಒಳಗೊಂಡಂತೆ ಜಿಲ್ಲೆಯ ಹಲವು ಕಡೆಗಳಲ್ಲಿ ಸ್ಥಾಪಿತವಾದ ಗರೋಡಿಗಳಲ್ಲಿ ಅವರ ಸ್ಮರಣೆ ಉಂಟು ಮಾಡುವ ಬೈದರ್ಕಳ ನೇಮ ನಡೆಯುತ್ತವೆ. ಭೂತನೆಲೆಯ ಸ್ಥಳವನ್ನು ಭೂತಸ್ಥಾನ ಎಂದು ಕರೆಯುತ್ತಾರೆ. ಭೂತಸ್ಥಾನಕ್ಕೆ ಅಲೆಪೆ, ಗರಡಿ, ಭೂತದ ಕೊಟ್ಟಿಗೆ ಎಂಬ ಹೆಸರುಗಳಿವೆ. ಇವು ಸಾಮಾನ್ಯವಾಗಿ 3.5ಮೀ ಉದ್ದ 2.5ಮೀ ಅಗಲ 3.5ಮೀ ಎತ್ತರದ ಸಾಧಾರಣದ ಗುಡಿಗಳಿರುತ್ತವೆ. ಭೂತಸ್ಥಾನದಲ್ಲಿ ಕಂಡುಬರುವ ಹುಲಿ, ಹರಿವಿ, ಕೋಣ ಎತ್ತು ಮೊದಲಾದ ವಿಗ್ರಹಗಳನ್ನು ಭೂತವಾಹನಗಳಾಗಿ ಉಪಯೋಗಿಸುವುದು, ಜೊತೆಗೆ ಅವನ್ನೂ ಭೂತಗಳ ಪರಿವಾರವೆಂದು ಪೂಜಿಸುವುದು ಉಂಟು. ಹೀಗೆ ಪೂಜಿಸುವಾಗ ಭೂತದ ಬಳಿ ಒಂದು ಕತ್ತಿ, ಕಂಚಿನ ಕಳಸದಲ್ಲಿ ನೀರು ದೀಪ ಇಟ್ಟಿರುತ್ತಾರೆ. ಪೂಜೆ ರೀತಿಯಲ್ಲಿ ಆಯಾ ಭೂತದ ಹಾವಭಾವಕ್ಕೆ ಅನುಗುಣವಾಗಿ ಕುಣಿತದ ಮೂಲಕ ಪೂಜೆಯಾಗುತ್ತದೆ. ಭೂತವನ್ನು ಪ್ರತಿನಿಧಿಸುವ ವ್ಯಕ್ತಿಯನ್ನು ಪಾತ್ರಿ ಎನ್ನುತ್ತಾರೆ. ಒಂದೊಂದು ಭೂತಕ್ಕೂ ಅದಕ್ಕೊಪ್ಪುವ ಅಲಂಕಾರ, ವೇಷ, ಮುಖವರ್ಣಿಕೆ ಇರುತ್ತವೆ. ಮೈಗೆ ಕೆಂಪು ಬಟ್ಟೆ ನಡುವಿಗೆ ನೆರಿಗೆಯುಳ್ಳ ಲಂಗ, ತಲೆಗೆ ಕಿರೀಟ (ಅಣಿ) ಕಾಲಿಗೆ ಗಗ್ಗರ, ಎದೆಗೆ ಕಂಚಿನ ರಕ್ಷೆ, ಕಿವಿಗೆ ಮತ್ತು ಹಣೆಗೆ ಅಲಂಕಾರ ಇರುತ್ತವೆ. ಭೂತಾರಾಧನೆಯು ಕೆಲವೊಮ್ಮೆ ಸಾರ್ವಜನಿಕವಾಗಿಯೂ ಕೆಲವೊಮ್ಮೆ ಮನೆಯಲ್ಲಿಯೂ ನಡೆಯುತ್ತವೆ. ಭತ್ತ, ಅಕ್ಕಿ, ಭತ್ತದ ಅರಳು, ಎಳನೀರು, ತೆಂಗಿನಕಾಯಿ, ಅಡಿಕೆ,

ಹೊಂಬಾಳೆ, ತೆಂಗಿನಗರಿ ಇವು ಭೂತಾರಾಧನೆಯ ಮುಖ್ಯ ವಸ್ತುಗಳು. ಭೂತವು ಒಬ್ಬ ವ್ಯಕ್ತಿಯು ಮೂಲಕ ಕಾಣಿಸಿಕೊಳ್ಳಬೇಕಾದರೆ ಅದಕ್ಕೆ ಕಾಲ ಮತ್ತು ಪರಿಸರದ ನಿಯಮವಿರುತ್ತದೆ. ಭೂತಾರಾಧನೆಯ ಸಾರ್ವಜನಿಕ ಪ್ರದರ್ಶನವು ಹೆಚ್ಚಾಗಿ ರಾತ್ರಿಯ ವೇಳೆ ನಡೆಯುತ್ತವೆ. ಮಂದ ಬೆಳಕು, ಕತ್ತಲೆಯ ಹಿನ್ನೆಲೆ, ನಿದ್ದೆಗೆಟ್ಟು ನೋಡುವ ಜನರು ಗದ್ದೆಯಂತಹ ಬಯಲು ಪ್ರವೇಶ ಮುಂತಾದ ಅಂಶಗಳು ಭೂತಾರಾಧನೆಗೆ ಒಂದು ಬಗೆಯ ಅಪಾರತೆಯನ್ನು ತಂದುಕೊಟ್ಟು ಹೊಸ ಜಗತ್ತನ್ನು ಕಟ್ಟಿಕೊಡುತ್ತವೆ.

ಉಡುಪಿ ತಾಲೂಕಿನಲ್ಲಿ ಮನೆ ದೇವರಂತೆಯೇ ಕುಟುಂಬ ನಂಬಿಕೊಂಡು ಬಂದ ಭೂತಗಳಿರುತ್ತವೆ. ಅವುಗಳಿಗೆ ವಾರ್ಷಿಕವಾಗಿ ಅಗೆಲು ಕೊಡಬೇಕು ಇಲ್ಲಿ ಭೂತಗಳಿಗೆ ಅಡಿಗೆ ಮಾಡಿ ಬಡಿಸುವುದು ಮುಖ್ಯ. ಕುಟುಂಬದವರೆಲ್ಲಾ ಆ ದಿನ ಸೇರುತ್ತಾರೆ. ಭೂತಕ್ಕೆ ಕೋಳಿ ಕೊಡುತ್ತಾರೆ. ಇದಕ್ಕೆ ಜಕಣಿ (ಯಕ್ಷಿಣಿ) ಎಂದು ಕರೆಯುವರು. ಭೂತಾಲಯಗಳ ಜಾತ್ರೆಯನ್ನು ಆಯನ ಎಂದು ಕರೆಯುತ್ತಾರೆ. ಭೂತಗಳಿಗೆ ಪ್ರತ್ಯೇಕ ಅಗೆಲು, ತಂಬಿಲ ಕೋಲ (ವಾರ್ಷಿಕ ಹರಕೆ) ಇತ್ಯಾದಿ ಮಾಡುವುದರೊಂದಿಗೆ ಸಾರ್ವಜನಿಕವಾಗಿ ಭೂತಾಲಯಗಳಲ್ಲಿ ನೇಮ ಜರಗುತ್ತವೆ. ಮಂಗಳೂರಿನ ಗರೋಡಿ, ಮಣಿಕಲ್ಲಿನ ಅಬ್ಬಗದಾರಗ ಗರೋಡಿ ಮತ್ತು ಗುಂಡ್ಮಿಯ ಗೂಳಿ ಗರೋಡಿಯಲ್ಲಿ ನಡೆಯುವ ಬ್ರಹ್ಮಬೈದರ್ಕಳ ನೇಮ ಉಡುಪಿ ಜಿಲ್ಲೆಯಲ್ಲೇ ಪ್ರಸಿದ್ಧವಾದುದು.

ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಭೂತಾರಾಧನೆಯನ್ನು ಜನರು ಭಕ್ತಿ ಶ್ರದ್ಧೆಯಿಂದ ಇಂದಿಗೂ ಅರ್ಪಣೆಯನ್ನು ಮಾಡಿಕೊಂಡು ಬಂದಿರುವುದರಿಂದ ತುಳುನಾಡಿನ ಆಚರಣೆಗಳು ಇಂದು ಜೀವಂತವಾಗಿವೆ. ಇಂದಿನ ನಮ್ಮ ತಲೆಮಾರಿಗೆ ಹಿರಿಯರು ಕೊಟ್ಟ ನಿಧಿಯಾಗಿದೆ. ಅದನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ.

ಕುಂಭಮೇಳ

ಆಕಾಶ್ ಎಸ್. ಕೈಕಿನಿ
ತೃತೀಯ ಬಿ.ಕಾಂ.

ಕುಂಭಮೇಳ ಹಿಂದೂ ಧರ್ಮದ ಒಂದು ಸಾಮೂಹಿಕ ತೀರ್ಥಯಾತ್ರೆ. ಕುಂಭ ಮೇಳವನ್ನು ನಾಲ್ಕು ವರ್ಷಗಳಿಗೊಮ್ಮೆ ಆಚರಿಸಲಾಗುತ್ತದೆ. ಅರ್ಧ ಕುಂಭಮೇಳವನ್ನು ಆರು ವರ್ಷಗಳಿಗೊಮ್ಮೆ ಹರಿದ್ವಾರ ಮತ್ತು ಪ್ರಯಾಗದಲ್ಲಿ ಆಚರಿಸಲಾಗುತ್ತದೆ. ಪೂರ್ಣಕುಂಭ ಹನ್ನೆರಡು ವರ್ಷಗಳಿಗೊಮ್ಮೆ ಹರಿದ್ವಾರ, ಉಜ್ಜೈನಿ ಹಾಗೂ ನಾಸಿಕ ಸ್ಥಳಗಳಲ್ಲಿ ಆಚರಿಸಲಾಗುತ್ತದೆ. ಮಹಾಕುಂಭ ಮೇಳ 12 ಪೂರ್ಣ ಕುಂಭಮೇಳಗಳ ನಂತರ ಅಂದರೆ 144 ವರ್ಷಗಳಿಗೊಮ್ಮೆ ಅಲಹಾಬಾದ್‌ನಲ್ಲಿ ಆಚರಿಸಲಾಗುತ್ತದೆ.

ಕುಂಭ ಮೇಳದ ಹಿನ್ನೆಲೆಯು ಅತ್ಯಂತ ಪ್ರಮುಖವಾದದ್ದು. ಕುಂಭ ರಾಶಿ ಮಾಸ ಜ್ಯೋತಿಷ್ಯ ಚಿಹ್ನೆಯ ಪ್ರಕಾರ ನಡೆದ ಉತ್ಸವ ಕುರುಹುಮೇಳ ಎಂಬ ಹೆಸರಿನಿಂದಲೂ ಈ ಹೆಸರು ಬಂದಿದೆ. ದೇವತೆಗಳು ಮತ್ತು ರಾಕ್ಷಸರು ಮಡಕೆಯನ್ನು ಪಡೆಯಲು ಹೋರಾಡಿದ ಸನ್ನಿವೇಶ ನೆನಪಿಗೆ ಬರುತ್ತದೆ. ಕುಂಭವನ್ನು ಪಡೆದು ಸೇವಿಸಿದವರಿಗೆ ಅಮರತ್ವ ಸಿಗುವುದು ಈ ಮೇಳದ ಸಂಕೇತ– ಕುಂಭವನ್ನು ತೆಗೆದುಕೊಂಡ ನಂತರ ಅದರಿಂದ ನಾಲ್ಕು ಸ್ಥಾನಗಳಲ್ಲಿ ಅಮೃತದ ಹನಿಗಳನ್ನು ಚೆಲ್ಲಿದ ಮೇರೆಗೆ ಕುಂಭಮೇಳವನ್ನು ನಡೆಸಲಾಗಿದೆ ಎಂಬುದು ಕರ್ಣಾಕರ್ಣಿಕೆಯಾಗಿ ಬಂದ ಐತಿಹ್ಯ. ಕುಂಭಮೇಳದ ಸಮಯದಲ್ಲಿ ಪ್ರಯಾಗ್‌ರಾಜ್‌ನಲ್ಲಿ ನಡೆಯುವ ಐತಿಹಾಸಿಕ ಕುಂಭಮೇಳದಲ್ಲಿ ಅಖಾಡಗಳು ಪ್ರಮುಖವಾಗಿವೆ. ವಿವಿಧ ಅಖಾಡಗಳಿಗೆ ಸೇರಿದ ಸಾವಿರಾರು ಭೈರಾಗಿಗಳು ಪ್ರಯಾಗರಾಜ್‌ನಲ್ಲಿ ಮೇಳೈಸಿ ಗಂಗಾನದಿ ದಡದಲ್ಲಿ ಬಿಡಾರ ಹೂಡುತ್ತಾರೆ.

ಪ್ರಯಾಗದಲ್ಲಿ ನಡೆದಿರುವ 2013ನೇ ಸಾಲಿನ ಮಹಾಕುಂಭ ಮೇಳ ಸಂಕ್ರಾಂತಿ ದಿನ ಜನವರಿ 14ರಂದು ಆರಂಭಗೊಂಡರೂ ಜನವರಿ 27 ರಂದು ಫೆಬ್ರವರಿ 25ರ ತನಕ ಕೆಲವು ಶುಭದಿನಗಳನ್ನು ಪವಿತ್ರ ಸ್ನಾನಕ್ಕಾಗಿ

ಗುರುತಿಸಲಾಗಿದೆ.

ಭೂಗ್ರಹದ ಅತಿ ದೊಡ್ಡ ಮೇಳ, ಜಗತ್ತಿನ ಯಾವ ಮೇಳದಲ್ಲೂ ಕಾಣದಷ್ಟು ಜನರನ್ನು ಈ ಮೇಳವು ಆಕರ್ಷಿಸುತ್ತದೆ. ಅಷ್ಟು ಜನರು ಒಂದು ಕಡೆ ಏಕತಾ ಭಾವದಿಂದ ಈ ಮೇಳವನ್ನು ಸವಿಯುತ್ತಾರೆ. ಸುಮಾರು 55 ದಿನಗಳ ಕಾಲ ನಡೆಯುವ ಈ ಮಹಾಮೇಳ ವಿಶ್ವದ ಅತಿದೊಡ್ಡ ಧಾರ್ಮಿಕ ಮೇಳವಾಗಿದೆ. ಸುಮಾರು 100 ಮಿಲಿಯನ್‌ಗೂ ಅಧಿಕ ಜನರು ಈ ಮೇಳದಲ್ಲಿ ಭಾಗವಹಿಸುವ ನಿರೀಕ್ಷೆಯಿರುತ್ತದೆ. ಈ ಮೇಳವು ಶಿವರಾತ್ರಿಯ ದಿನದಂದು ಸಂಪನ್ನಗೊಳ್ಳಲಿದೆ. ಸಾವಿರಾರು ಸಾಧುಗಳು ವಿದೇಶಿಯರು ಈ ಮೇಳದಲ್ಲಿ ಭಾಗವಹಿಸುತ್ತಾರೆ.

ಆನೆ ಮೇಲೆ ಸಾಧುಗಳ ಮೆರವಣಿಗೆ....ವಿವಿಧ ಸ್ನಾನಘಟ್ಟಗಳಲ್ಲಿ ಮುಳುಗೇಳುವ ನಾಗಾ ಸಾಧುಗಳನ್ನು ನೋಡಲು ಅನೇಕರು ಭಯಮಿಶ್ರಿತ ಕುತೂಹಲದಿಂದ ಮುಗಿಬೀಳುವುದು ಸಾಮಾನ್ಯ ಸಂಗತಿಯಾಗಿದೆ. ಪವಿತ್ರ ಗಂಗೆಗೆ ಪ್ರತಿದಿನ ಆರತಿ ಎತ್ತಿ ಪೂಜೆ ಸಲ್ಲಿಸುತ್ತಿರುವ ಅರ್ಚಕರು ಪ್ರಮುಖ ಧಾರ್ಮಿಕ ಮುಖಂಡರ ಚಲನವಲನ ಭದ್ರತೆ ನಿಗಾವಹಿಸಲು ಜಿಪಿಎಸ್ ಬಳಸಲಾಗುತ್ತದೆ. ಇಸ್ರೋ ದೂರ ಸಂವೇದಿ ಕೇಂದ್ರದ ಮೂಲಕ ಪ್ರತಿ ಪ್ರವಾಸಿಗರ ಮೇಲೆ ಹದ್ದಿನಕಣ್ಣು ಸಾಧ್ಯವಾಗುತ್ತದೆ.

ಒಂದು ದೊಡ್ಡ ಉತ್ಸವವಾದ ಕುಂಭಮೇಳ. ದೇಶದ ನಾಲ್ಕು ಸ್ಥಳಗಳಲ್ಲಿ ಇದನ್ನು ಗ್ರಹ ರಾಶಿಗಳ ಲೆಕ್ಕದ ಆಧಾರದ ಮೇಲೆ ಪ್ರತಿ 12 ವರ್ಷಗಳಿಗೊಮ್ಮೆ ಆಚರಿಸಲಾಗುತ್ತದೆ. ಪ್ರತಿಸ್ಥಳಗಳಲ್ಲಿ ಕುಂಭವು ಆಚರಿಸಿದಾಗ ಸಾಧು ಸಂತರ ಮಹಾದಂಡವೆ ಹರಿದು ಬರುತ್ತದೆ ಹಾಗೂ ಆ ಸ್ಥಳಗಳ ಕಳೆಯ ಒಂದು ರೀತಿ ಬದಲಾಗಿ ಹೆಚ್ಚಿನ ಉತ್ಸಾಹ ಪಡೆಯುತ್ತದೆ. ಹೀಗೆ ಕುಂಭಮೇಳವು ಮುಂದುವರಿಯುತ್ತದೆ. ಈ ಕುಂಭವನ್ನು ನೋಡಲು ನಾನಾ ಕಡೆಯಿಂದ ಜನ ಬಂದು ಈ ಹಿಂದೂಧರ್ಮದ ಏಕತೆಯನ್ನು ಸಾರುತ್ತಾರೆ.

ಬಾರಕೂರು ಆಳುಪೋತ್ಸವದ ಒಂದು ಸುಂದರ ನೋಟ

ಆಕಾಶ್ ಎಸ್. ಕೈಕನಿ
ತೃತೀಯ ಬಿ.ಕಾಂ.

ಬಾರಕೂರು ಎಂದಾಕ್ಷಣ ಭಾಸವಾಗುದೆಂದರೆ ತುಳುನಾಡ ರಾಜಧಾನಿ ದೇವಾಲಯಗಳ ಬೀಡು. ಮತ್ತು ಭೂತಾಳ ಪಾಂಡ್ಯ ಆಳಿದ ಗತಕಾಲದ ವೈಭವ, ಒಂದೊಂದು ಶಿಲ್ಪಕಲೆಯು ಇತಿಹಾಸದ ಕಾಲದ ಘಟನೆಗಳನ್ನು ನೆನಪಿಸುತ್ತದೆ. ಅಂತಹ ಬಾರಕೂರಿನ ವೈಭವವನ್ನು ಬರೆಯಲು ಪುಟಗಳೇ ಸಾಲದು. ಅದೇ ಬಾರಕೂರಿಗೆ 2019ನೇ ವರ್ಷವು ಒಂದು ವಿಶಿಷ್ಟವಾದ ಸೊಬಗನ್ನು ನೀಡಿದೆ. ಇದಕ್ಕೆ ಕಾರಣ ಬಾರಕೂರಿನಲ್ಲಿ ನಡೆದ ಆಳುಪೋತ್ಸವ. ಈ ಆಳುಪೋತ್ಸವವನ್ನು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಶ್ರೀಮತಿ ಜಯಮಾಲಾ ಬನ್ನಿ ಮಹಾಕಾಳಿ ದೇವಸ್ಥಾನದ ಮುಂಭಾಗದಲ್ಲಿ ಹೆರಿಟೇಜ್ ವಾಕ್ ಆಂಡ್ರಾಯಿಡ್ ಆಪ್‌ನ್ ಮೂಲಕ ಉದ್ಘಾಟನೆ ಮಾಡಿದರು. ಶ್ರೀ ಪಂಚಲಿಂಗೇಶ್ವರ ಸಿಂಹಾಸನ ಗುಡ್ಡೆಯಿಂದ ಆರಂಭವಾದ ವೈವಿಧ್ಯಮಯ ಮೆರವಣಿಗೆ, ವಿವಿಧ ಚಂಡೆವಾದನಗಳು, ಗೊಂಬೆಯಾಟ, ಕೀಲುಕುದುರೆ ಹಾಗೂ ತುಳುನಾಡಿನ ಸೊಬಗು ಮತ್ತು ಶ್ರೀ ದೇವರ ಪಲ್ಲಕ್ಕಿಯೊಂದಿಗೆ ವಿವಿಧ ಜನಪದ ನೃತ್ಯಗಳೊಂದಿಗೆ ಮುಂದುವರಿಯಿತು.

ಇತಿಹಾಸ ಪ್ರಸಿದ್ಧ. ಬಾರಕೂರು ಕೋಟೆಯು ರಮಣೀಯವಾಗಿ ಕಂಗೊಳಿಸುತ್ತಿತ್ತು. ದ್ವಾರದ ಮುಂಭಾಗದಲ್ಲಿ ಸುಂದರವಾದ ಕೆತ್ತನೆಯ ಜೊತೆಗೆ ಯಕ್ಷಗಾನ ಕಲಾಕೃತಿಯು ಎಲ್ಲರ ಗಮನ ಸೆಳೆಯಿತು. ಹೀಗೆ ಹೋದಂತೆ ಮತ್ತೊಂದು ಆಕರ್ಷಣಾಮಯವಾದ ರಂಗಮಂಟಪ, ಭೂತಾಳ ಪಾಂಡ್ಯನ ವರ್ಣನೆಯನ್ನು ಸಾರುತ್ತಿತ್ತು. ಈ ರಂಗಮಂಟಪವನ್ನು ನೋಡಲು ಎರಡು ಕಣ್ಣು ಸಾಲದು. ಗೋಡೆಯ ಮೇಲೆ ವಿವಿಧ ವರ್ಣಚಿತ್ತಾರಗಳು ಕಂಗೊಳಿಸುತ್ತಿತ್ತು. ಇಲ್ಲಿ ಆಳುಪರು ತುಂಬಾ ಕಾಲದಿಂದ ಆಳಿದ್ದಾರೆ ಎಂದು ಹೇಳಲಾಗುತ್ತದೆ. ಇದೇ ಸುಸಂದರ್ಭದಲ್ಲಿ ವಿವಿಧ ಬಗೆಯ ಶಾಸನಗಳು, ಹಿಂದಿನ ಕಾಲದ ಅರೆಯುವ ಕಲ್ಲು, ಬೀಸುವ ಕಲ್ಲು ಹಾಗೂ

ಧಾನ್ಯ ಕುಟ್ಟುವ ಕಲ್ಲುಗಳು ಪತ್ತೆಯಾದವು. ಬಾರಕೂರಿನ ಕೋಟೆಯ ಒಳಗಿರುವ ರಾಣಿಯರ ಸ್ನಾನದ ಕೆರೆ ತುಂಬಾ ಮೆರುಗನ್ನು ಕೊಟ್ಟಿತು. ಹಾಗೂ ಕುದುರೆ ಹಾಗೂ ಆನೆಯನ್ನು ಕಟ್ಟುವ ಚಿತ್ರ ವಿಚಿತ್ರರವಾದ ಶಾಸನಗಳು ಕಾಣಸಿಕ್ಕವು.

ಹಾಗೆಯೇ ಫಲಪುಷ್ಪ ಪ್ರದರ್ಶನವು ಮೈಜುಮ್ಮೆನಿಸುವಂತೆ ವೈವಿಧ್ಯಮಯ ಚಿತ್ತಾರಗಳಿಂದ ಆಳುಪೋತ್ಸವದ ಸೊಬಗನ್ನು ಹೆಚ್ಚಿಸಿತು. ವಿವಿಧ ಬಗೆಯ ಹೂಗಳು, ಹೂಗಳಿಂದ ಮಾಡಿದ ಆನೆ, ಚಿಟ್ಟೆ, ಶಿವಲಿಂಗ, ನಾನಾ ರೀತಿಯ ವ್ಯಂಗ್ಯ ಚಿತ್ರಗಳು, ಹೂವಿನಿಂದ ಮಾಡಿದ ಮೀನುಗಳು, ವಿವಿಧ ಬಗೆಯಲ್ಲಿ ಕಂಗೊಳಿಸುವ ಪುಷ್ಪಗಳು ಉತ್ಸವದ ನವಿರನ್ನು ಹೆಚ್ಚಿಸಿತು. ಸಿರಿಧಾನ್ಯದಿಂದ ಮಾಡಿದ ಗೋಪಾಲಕೃಷ್ಣನನ್ನು ಹಿರಿಯರಿಂದ ಹಿಡಿದು ಸಣ್ಣ–ಸಣ್ಣ ಪುಟಾಣಿ ಮಕ್ಕಳಿಗೆ ಸಂತಸವನ್ನು ತಂದಿತು. ವಿವಿಧ ಫಲಗಳು, ಕಾಳಮೆಣಸು, ಮರಗೆಣಸು, ಮಟ್ಟುಗುಳ್ಳ, ವಿವಿಧ ತರಕಾರಿಗಳನ್ನು ಫಲಗಳನ್ನು ಇಡಲಾಗಿತ್ತು. ಹಿಂದಿನ ಕಾಲದ ದೈವಗಳು, ಎತ್ತಿನಗಾಡಿ, ವೈವಿಧ್ಯಮಯ ಕಾರ್ಯಕ್ರಮ, ಕತ್ತಲೆ ಬಸದಿಯ ದೀಪಾರಾಧನೆ, ಪ್ರತಿಯೊಂದು ದೇಗುಲಗಳಲ್ಲಿ ವಿಶಿಷ್ಟ ಪೂಜೆಯು ನಡೆಯಿತು.

ಹಾಗೆಯೇ ಅಂತಿಮವಾಗಿ ರೈತನ ಮನೆಯ ಸೊಬಗು ಎಲ್ಲರನ್ನೂ ರೋಮಾಂಚನಗೊಳಿಸಿತು, 3 ದಿನಗಳ ಕಾಲ ನಡೆದ ಈ ಉತ್ಸವವು ಬಹಳ ವಿಜೃಂಭಣೆಯಾಗಿ ನಡೆಯಿತು. ಅಂತಿಮವಾಗಿ ಇತಿಹಾಸ ಪ್ರಸಿದ್ಧ ಸೋಮೇಶ್ವರ ದೇವಸ್ಥಾನದಲ್ಲಿ ವಿಶಿಷ್ಟ ಪೂಜೆ, ರಾತ್ರಿ ತೆಪ್ಪೋತ್ಸವ, ಗಂಗಾ ಆರತಿಯು ಮೂಡುಕೇರಿಯ ಪುಷ್ಕರಣಿಯಲ್ಲಿ ಅದ್ದೂರಿಯಾಗಿ ಎಲ್ಲರನ್ನು ರೋಮಾಂಚನಗೊಳಿಸಿ, ಬಾರಕೂರಿನ ವೈಭವದ ಕಲೆ, ಸಂಪ್ರದಾಯ, ಸಾಂಪ್ರದಾಯಿಕ ಮನೆಗಳ ವೈಭವ, ಶಿಲ್ಪಕಲೆ, ನಾನಾ ರೀತಿಯ ವಿಷಯವನ್ನು ಜನರಿಗೆ ಸಾರಿ ಈ ಆಳುಪೋತ್ಸವವು ವಿಜೃಂಭಣೆಯಾಗಿ ಕೊನೆಗೊಂಡಿತು.

ಸಹಸ್ರಲಿಂಗ

ದಿವ್ಯಾ
ದ್ವಿತೀಯ ಬಿ.ಕಾಂ. ಎ

ಕರ್ನಾಟಕದ ಕಾಶ್ಮೀರವೆಂದೇ ಪ್ರಸಿದ್ಧಿ ಪಡೆದಿರುವ ಸದಾ ಹಸಿರಿನಿಂದ ಕಂಗೊಳಿಸುತ್ತ ಅದ್ಭುತ ಜೀವ ವೈವಿಧ್ಯತೆಯನ್ನು ಹೊಂದಿರುವ ಸುಂದರ ಜಿಲ್ಲೆ ಉತ್ತರಕನ್ನಡ. ಮುರ್ಡೇಶ್ವರ, ಗೋಕರ್ಣ, ಸಾತೊಡ್ಡಿ ಫಾಲ್ಸ್, ಶ್ರೀ ಮಾರಿಕಾಂಬಾ ದೇವಸ್ಥಾನ, ಶಿರಸಿ, ಉಂಚಳ್ಳಿ, ಮಾಗೋಡ ಜಲಪಾತ, ಕವಳೆಗುಹೆಗಳು, ಭುವನಗಿರಿಯ ಭುವನೇಶ್ವರಿ ಮಂದಿರ. ಹೀಗೆ ಅನೇಕ ಪುಣ್ಯಕ್ಷೇತ್ರಗಳು, ಪ್ರವಾಸಿ ತಾಣಗಳು ಇಲ್ಲಿ ಹೇರಳವಾಗಿ ಕಾಣಸಿಗುತ್ತದೆ. ಪ್ರಕೃತಿ ಪ್ರಿಯರಿಗಂತೂ ಇಲ್ಲಿ ಪ್ರತಿದಿನವೂ ಹಬ್ಬವೇ ಸರಿ. ಇವುಗಳ ಸಾಲಿಗೆ ಸೇರುವ ಇನ್ನೊಂದು ಸುಂದರ ಪುಣ್ಯಕ್ಷೇತ್ರ ಸಹಸ್ರಲಿಂಗ. ಹೆಸರೇ ಸೂಚಿಸುವಂತೆ ಇದು ಸಹಸ್ರ ಲಿಂಗಗಳನ್ನು ಒಳಗೊಂಡ ಪ್ರವಾಸಿತಾಣ.

ಶಿರಸಿತಾಲೂಕಿನಿಂದ ಯಲ್ಲಾಪುರ ಮಾರ್ಗವಾಗಿ 14 ಕಿ.ಮೀ. ದಟ್ಟ ಕಾನನದ ನಡುವೆ ಹರಿವ ಶಾಲ್ಮಲಾ ನದಿಯ ತಟದಲ್ಲಿದೆ ಈ ಸಹಸ್ರಲಿಂಗ. ಮಳೆಗಾಲವು ಕೊನೆಯಾಗುತ್ತಿದ್ದಂತೆ ಇಲ್ಲಿಗೆ ಭೇಟಿ ನೀಡಬಹುದು. ಮಳೆಗಾಲದಲ್ಲಿ ನದಿಯು ತುಂಬುವ ಕಾರಣ, ನದಿಯ ಮಧ್ಯದಲ್ಲಿರುವ ಶಿವಲಿಂಗಗಳನ್ನು ಗುರುತಿಸುವುದು ಸ್ವಲ್ಪ ಕಷ್ಟಕರವೆನಿಸುತ್ತದೆ. ಮಳೆಗಾಲದ ನಂತರ ನದಿಯ ನೀರು ಇಳಿಯುವುದರಿಂದ ಸುತ್ತಲೂ ಇರುವ ಶಿವಲಿಂಗಗಳನ್ನು ಕಣ್ತುಂಬಿಕೊಳ್ಳಬಹುದು.

ಈ ಕ್ಷೇತ್ರದ ಬಗ್ಗೆ ಇತಿಹಾಸವನ್ನು ತಿಳಿಯಲು ಇಲ್ಲಿಯ ಜನರನ್ನು ಕೇಳಿದಾಗ ಅವರು ಬಗೆ ಬಗೆಯ ಕಥೆಗಳನ್ನು ಹೇಳುತ್ತಾರೆ. ಹಿಂದೆ ಕದಂಬ ವಂಶದ ಆಳ್ವಿಕೆಯ ಸಂದರ್ಭದಲ್ಲಿ ಸೋದೆಯ ಅರಸರು ಸಾಮಂತರಾಗಿದ್ದರು. ಸೋದೆಯ ಅರಸಪ್ಪ ನಾಯಕ ಎಂಬ ರಾಜನಿಗೆ ಮಕ್ಕಳಾಗದಿರಲು, ಸಾವಿರ ಶಿವಲಿಂಗಗಳನ್ನು ಕೆತ್ತಿಸುತ್ತೇನೆ, ತನಗೆ ಮಕ್ಕಳಾಗಲಿ ಎಂಬ ಹರಕೆ ಹೊತ್ತು ಅಭಿಷೇಕ ಪ್ರಿಯನಾದ ಶಿವನ ಸಾವಿರ ಅಂಗಗಳನ್ನು ಶಾಲ್ಮಲಾ ನದಿಯ ತೀರದಲ್ಲಿ ಕೆತ್ತಿಸಿದನು. ನಂತರ ಆತನಿಗೆ ಮಕ್ಕಳಾದವು ಎಂಬ ಕಥೆಯು ಕೇಳಿಬರುತ್ತದೆ.

ಇತಿಹಾಸ ತಜ್ಞರು ಈ ಕ್ಷೇತ್ರವನ್ನು ನೋಡಿ ಇದೊಂದು ಕಲಾಶಾಲೆಯಾಗಿತ್ತು ಎಂಬುದಾಗಿಯೂ ಹೇಳುತ್ತಾರೆ. ಇನ್ನು ಸಹಸ್ರಲಿಂಗದ ಸುತ್ತ 16 ಕಿ.ಮೀ. ವ್ಯಾಪ್ತಿಯಲ್ಲಿ ನದಿ ತೀರದಲ್ಲಿ ಲಿಂಗಗಳು ಕಾಣಸಿಗುತ್ತದೆ. ನದಿಯ ರಭಸಕ್ಕೆ ಲಿಂಗಗಳು ತೇಲಿ ಬಂದಿರಬಹುದೆಂದು ಊಹಿಸುತ್ತಾರೆ. ಪ್ರತಿಯೊಂದು ಶಿವಲಿಂಗಕ್ಕೆ ಮುಖಮಾಡಿ ನೋಡುತ್ತಿರುವ ಬಸವನ ಮೂರ್ತಿಗಳನ್ನೂ ಕಾಣುವುದು ಇನ್ನೊಂದು ವಿಶೇಷ. ಮಹಾಶಿವರಾತ್ರಿಯಂದು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಕ್ಷೇತ್ರಕ್ಕೆ ಬರುತ್ತಾರೆ. ತಮಗಿಷ್ಟವಾದ ಶಿವಲಿಂಗಕ್ಕೆ ತಾವೇ ಪೂಜೆ ಮಾಡುತ್ತಾರೆ. ಇತರ ದಿನಗಳಲ್ಲಿ ಪ್ರವಾಸಿಗರ ಸಂಖ್ಯೆ ಕಡಿಮೆ. ಹತ್ತಿರದಲ್ಲಿಯೇ ಒಂದು ಸುಂದರವಾದ ತೂಗು ಸೇತುವೆಯನ್ನೂ ನಿರ್ಮಿಸಿದ್ದಾರೆ. ತಿಳಿಸಂಜೆಯ ಹೊತ್ತಿನಲ್ಲಿ ಜುಳು ಜುಳು ಹರಿವ ನದಿಯ ನೀರಿನ ನಿನಾದದ ಜೊತೆ ಸುತ್ತಲಿನ ಪರಿಸರವನ್ನು ನೋಡುವ ಆನಂದವೇ ಸೊಬಗು.

ಸಹಸ್ರಲಿಂಗಕ್ಕೆ ಪ್ರಯಾಣ ಮಾಡುವುದು ಕೂಡ ತುಂಬಾ ಸುಲಭ. ಶಿರಸಿಯಿಂದ ಯಲ್ಲಾಪುರ ಮಾರ್ಗವಾಗಿ ಹದಿನಾಲ್ಕು ಕಿ.ಮೀ. ದೂರದ ಹುಳಗೋಳದಿಂದ ಕೇವಲ ಒಂದು ಕಿ.ಮೀ.ಗೆ ಸಹಸ್ರಲಿಂಗವನ್ನು ಕಾಣಬಹುದು. ಜನ ದಟ್ಟಣೆಯಿಲ್ಲ, ವಾಹನ ದಟ್ಟಣೆಯೂ ಇಲ್ಲ. ಸುಂದರವಾದ ಪ್ರಕೃತಿಯ ಸೌಂದರ್ಯವನ್ನು ಸವಿಯಲು ಒಮ್ಮೆ ಸಹಸ್ರಲಿಂಗಕ್ಕೆ ಭೇಟಿ ಕೊಡಿ.

ತುಳುನಾಡು

ಅಕ್ಷತಾ ಬಿ.
ಪ್ರಥಮ ಬಿ.ಎ.

ತುಳುನಾಡು ಎನ್ನುವುದು ಭೂತಾರಾಧನೆಗೆ ವಿಶೇಷವಾಗಿ ಪ್ರಸಿದ್ಧಿ ಹೊಂದಿದೆ. ನಮ್ಮ ತುಳುನಾಡಿನಲ್ಲಿ ಅನೇಕ ವೈಶಿಷ್ಟ್ಯಗಳಿವೆ. ಅವುಗಳೆಂದರೆ ಕೋಲ, ನಾಟಿ ಮಾಡುವುದು ಪಾರದನಾ ಗೀತೆಗಳು, ಯಕ್ಷಗಾನ, ಮೀನುಗಳನ್ನು ಹಿಡಿಯುವುದು ಮುಂತಾದವು. ತುಳುನಾಡು ಎಂದಾಕ್ಷಣ ನೆನಪಿಗೆ ಬರುವುದು ಕರಾವಳಿ ತೀರಗಳು. ಈ ತೀರಗಳನ್ನು ನಾವು ಹೆಚ್ಚಾಗಿ ಉಡುಪಿ, ಮಂಗಳೂರುಗಳಲ್ಲಿ ಕಾಣುತ್ತೇವೆ.

ತುಳುನಾಡು ಇಲ್ಲಿ ನಾವು ಹೆಚ್ಚಾಗಿ ತುಳು ಭಾಷೆಯನ್ನಾಡುವ ಪ್ರದೇಶಗಳು ಮತ್ತು ಜನರನ್ನು ಕಾಣುತ್ತೇವೆ. ಇಲ್ಲಿನ ಮುಖ್ಯ ವೃತ್ತಿ ಎಂದರೆ ಮೀನುಗಾರಿಕೆ ಇದಕ್ಕೆ ಕಾರಣ ಇಲ್ಲಿರುವ ಕರಾವಳಿ ಪ್ರದೇಶಗಳು. ಉಡುಪಿಯಲ್ಲಿ ಅಷ್ಟಮಠಗಳನ್ನು ಕಾಣಬಹುದು. ಕರಾವಳಿ ತೀರಗಳೆಂದರೆ ನಮಗೆ ಕಣ್ಣಿಗೆ ಕಾಣುವಂಥದ್ದು ಮಲ್ಪೆ, ಕಾಪು, ಪಡುಬಿದ್ರೆಯಲ್ಲಿರುವಂತಹ (ಬೀಚ್‌ಗಳು) ಸಮುದ್ರ ದಡಗಳು.

ತುಳುನಾಡಿನ ಈ ಸಮುದ್ರ ಕಿನಾರೆಗಳು ಸಂಜೆಯ ವೇಳೆಗೆ ನೆಮ್ಮದಿಯ ತಾಣಗಳಾಗಿ ನಮಗೆ ನೆಮ್ಮದಿಯನ್ನು ನೀಡುತ್ತದೆ. ಅಲೆಗಳ ಓಟಗಳು, ಅಲ್ಲಿನ ಜನರ ಸಂತೋಷದ ಆಟಗಳು ನಮ್ಮ ಮನಸ್ಸಿಗೆ ಮುದವನ್ನು ನೀಡುತ್ತದೆ.

ಹೀಗೆ ತುಳುನಾಡಿನಲ್ಲಿ ಅದೆಷ್ಟೋ ಹಿನ್ನೆಲೆಗಳು, ವೈವಿಧ್ಯಗಳು ಇವೆ. ಈ ಮಣ್ಣಿನ ಭೂತಾರಾಧನೆ ವಿಶೇಷ. ಇಂತಹ ಆರಾಧನೆ ನಾವೆಲ್ಲೂ ಕಾಣಲು ಸಾಧ್ಯವಿಲ್ಲ. ಇಲ್ಲಿ ನಾವು ಬಬ್ಬುಸ್ವಾಮಿ, ಕೊರಗಜ್ಜ, ತನ್ನಿ–ಮಾನಿಗ, ಕೋಟಿಚೆನ್ನಯ್ಯ ನಂತಹವರ ಕಾರ್ನಿಕದ ಕತೆಯನ್ನು ಮತ್ತು ಅವರ ದೇವರಾಧನೆಯನ್ನು ಕಾಣುತ್ತೇವೆ. ಇಲ್ಲಿ ಅನೇಕ ದೈವಗಳ ಆರಾಧನೆಯನ್ನೂ ಕಾಣಬಹುದು. ವರ್ತೆ–ಪಂಜುರ್ಲಿ, ಧೂಮಾವತಿ, ಕಲ್ಲುಕುಟಿಕ, ಹೀಗೆ ಅನೇಕ ದೇವರುಗಳನ್ನು ಈ ನಾಡಿನಲ್ಲಿ ವಿಶೇಷ ಹಿನ್ನೆಲೆಯಲ್ಲಿ ಆರಾಧನೆ ಮಾಡುವುದು ವಿಶಿಷ್ಟ. ಹೀಗೆ ಈ ತುಳುನಾಡು ದೇವಸ್ಥಾನಗಳ ನಾಡೆಂದೇ ಪ್ರಸಿದ್ಧಿ ಹೊಂದಿದೆ. ಈ ತುಳುವ ನಾಡಿನಲ್ಲಿ ಅದೆಷ್ಟೋ ನಾಟಕ ರಂಗಗಳಿಂದ ಮೇಲ್ಬಂದು, ಸಿನಿಮಾಗಳ ಮೂಲಕ ತುಳುನಾಡಿನ ಹಿರಿಮೆಯ ಬಗ್ಗೆ ತಿಳಿಸುವ ತುಳುವರು ಇದ್ದಾರೆ. ಕನ್ನಡದಲ್ಲಿ ಬಂದ ರಂಗೀತರಂಗ ಈ ಸಿನಿಮಾ ಉದಾಹರಣೆಯಾಗಿದೆ. ಇಲ್ಲಿ ನಾವು ಪ್ರಮುಖವಾಗಿ ಯಕ್ಷಗಾನಗಳನ್ನು ಕಾಣುತ್ತೇವೆ. ಅನೇಕ ಯಕ್ಷಗಾನ ಕೇಂದ್ರಗಳನ್ನೂ ಕಾಣುತ್ತೇವೆ.

ಈ ನಮ್ಮ ನಾಡಿನಲ್ಲಿ ಎಲ್ಲಾ ಭಾಷೆಯ ಜನರಿದ್ದಾರೆ

ಹಾಗೂ ಈ ತುಳುನಾಡಿನಲ್ಲಿ ನಾವು ಕಾಣುವಂತಹ ಮಹತ್ವಪೂರ್ಣ ಪೂಜೆ ನಾಗಾರಾಧನೆ. ಇದು ಈ ನಾಡಿನ ಶ್ರೀ ಕೃಷ್ಣಜನ್ಮಾಷ್ಟಮಿ, ಗಣೇಶ ಚತುರ್ಥಿ, ನಾಗಪಂಚಮಿ ಹೀಗೆ ಹಬ್ಬಗಳ ಸುರಿಮಾಲೆಯನ್ನು ವಿಜೃಂಭಣೆಯಿಂದ ಆಚರಿಸುವುದು ವಿಶೇಷ. ಈ ಹಬ್ಬಗಳಂದು ಮನೆಗಳಲ್ಲಿ ತುಳುನಾಡಿನ ವಿಶೇಷ. ಮೂಡೆ, ಚಿಲುಮೆದಡ್ಡೆ ಹೀಗೆ ಮುಂತಾದ ವಿಶೇಷ ಅಡುಗೆಗಳನ್ನು ಕಾಣುತ್ತೇವೆ. ಕರಾವಳಿಗಳಲ್ಲಿ ಮೀನುಗಳು ಹೇರಳವಾಗಿ ದೊರೆಯುತ್ತವೆ. ಈ ಮೀನುಗಳ ಸಾಲಿನಲ್ಲಿ ಪ್ರಮುಖವು ಬಂಗುಡೆ, ಭೂತಾಯಿ, ಅಂಜಲ್ ಹೀಗೆ ಮತ್ಸ್ಯಲೋಕವನ್ನೇ ಮೀನುಮಾರುಕಟ್ಟೆಯಲ್ಲಿ ಕಾಣಬಹುದಾಗಿದೆ. ಇದನ್ನು ಈ ಪ್ರದೇಶದ ಜನರು ಆಹಾರವಾಗಿ ಸೇವಿಸುತ್ತಾರೆ.

ಅಂದು ಹೆಚ್ಚಾಗಿ ಇಲ್ಲಿ ಕೆಸರುಗದ್ದೆ ಕಂಬಳಗಳು, ಕೋಳಿಕಾಳಗದಂತಹ ಕ್ರೀಡೆಗಳನ್ನು ಕಾಣುತ್ತಿದ್ದೆವು. ಇಂದು ಇವೆಲ್ಲ ಕಣ್ಮರೆಯಾಗುತ್ತಿದೆ. ಹೀಗೆ ಈ ತುಳುವರು ಆಟಿ ಅಮವಾಸ್ಯೆಯಂದು ಪಾಲೆ ಮರ ಎನ್ನುವ ಮರದ ಕೆತ್ತೆಯಿಂದ ತಯಾರಿಸಿದ ಕಹಿಯನ್ನು ಕುಡಿಯುವ ಪದ್ಧತಿಗಳು ಇಂದೂ ಇವೆ. ಇವು ನಮ್ಮ ದೇಹಕ್ಕೆ ಒಳ್ಳೆಯದು. ಅದನ್ನು ಕುಡಿದು ಮೆತ್ತೆಯ ಅನ್ನವನ್ನು ತಿನ್ನುವುದು ರೂಢಿಯಲ್ಲಿದೆ. ಈ ಅನುಭವವು ವಿಶೇಷವಾಗಿರುತ್ತದೆ. ಈ ನಮ್ಮ ತುಳುನಾಡು ಸಂಸ್ಕೃತಿಯಾಗಿ ಎಷ್ಟು ವಿಶಿಷ್ಟವೋ ಹಾಗೆಯೇ ಜ್ಞಾನದ ವಿಷಯದಲ್ಲಿಯೂ ಮೊದಲನೆಯ ಸ್ಥಾನದಲ್ಲಿದೆ. ಹಿಂದೆಯೂ, ಇಂದೂ, ಮುಂದೆಂದಿಗೂ ಹೀಗೆ ಹೇಳಿದಷ್ಟು ನಮ್ಮ ಈ ತುಳುನಾಡಿನ ವೈಭವದ ವರ್ಣನೆ ಮುಗಿಯದು. ಜೈ ತುಳುನಾಡ್.

ಒಗಟುಗಳು

ಸಂಗ್ರಹ– ನವ್ಯ ಅಂಚನ್
ದ್ವಿತೀಯ ಬಿ.ಕಾಂ.

1. ಕೊರಳಲ್ಲಿ ಕಪ್ಪುಂಟು ಶಿವನಲ್ಲ
   ತಲೆಯ ಮೇಲೆ ಕಿರೀಟವುಂಟು ರಾಜನಲ್ಲ
   ಮೈತುಂಬಾ ಸಾವಿರ ಕಣ್ಣುಂಟು ಇಂದ್ರನಲ್ಲ
   ನಾನು ಯಾರು?

   ಉತ್ತರ: ನವಿಲು

2. ಅಣ್ಣ ಅಂದರೆ ದೂರ ಹೋಗ್ತಾವೆ
   ತಮ್ಮ ಅಂದರೆ ಹತ್ತಿರ ಬರ್ತಾವೆ

   ಉತ್ತರ: ತುಟಿಗಳು

3. ಹತ್ತುತಾ ಕೆಂಪು
   ಆರುತಾ ಕಪ್ಪು
   ಅದರ ಮಿತ್ರನ ಮಗನ ಒಡೆಯನ ವೈರಿಯ
   ಹೆಂಡತಿಯ ಹೆಸರೇನು?

   ಉತ್ತರ: ಮಂಡೋದರಿ

4. ಹೊಟ್ಟೆಯ ಮೇಲೆ ಹೊಟ್ಟೆ

   ಉತ್ತರ: ಬೀಸುವ ಕಲ್ಲು

5. ಊರೆಲ್ಲಾ ಸುತ್ತುತ್ತೆ ಮೂಲೇಲಿ ಬಂದು ಕೂರುತ್ತೆ

   ಉತ್ತರ: ಪೊರಕೆ

6. ಮುಪ್ಪಿನ ಮುದುಕಿಗೆ ಮುತ್ತಿನ ಕಿರೀಟ

   ಉತ್ತರ: ಮುಸುಕಿನ ಜೋಳ

7. ಅಂಗೈಯಗಲ ಗದ್ದೆ
   ಗದ್ದೆಗೆ ನೀರು
   ನೀರಿಗೆ ಬೇರು
   ಬೇರಿಗೆ ಬೆಂಕಿ

   ಉತ್ತರ: ದೀಪ

8. ಜುಟ್ಟುಂಟು ಪೂಜಾರಿಯಲ್ಲ
   ಮೂರು ಕಣ್ಣುಂಟು ಮುಕ್ಕಣ್ಣನಲ್ಲ
   ನೀರು ಉಂಟು ನದಿಯಲ್ಲ

   ಉತ್ತರ: ತೆಂಗಿನಕಾಯಿ

ಗಾದೆಮಾತು

ಸಂಗ್ರಹ: ನವ್ಯ ಅಂಚನ್
ದ್ವಿತೀಯ ಬಿ.ಕಾಂ.

1. ವೇದ ಸುಳ್ಳದರೂ ಗಾದೆ ಸುಳ್ಳಾಗದು
2. ಹಿತ್ತಲ ಗಿಡ ಮದ್ದಲ್ಲ.
3. ಕೈ ಕೆಸರಾದರೆ ಬಾಯಿ ಮೊಸರು
4. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?
5. ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡನಂತೆ
6. ಕಾರ್ಯವಾಸಿ ಕತ್ತೆ ಕಾಲು ಹಿಡಿ
7. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು
8. ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರೀಲಿ ಕೊಡೆ ಹಿಡಿದನಂತೆ
9. ಮದುವೆ ಆಗೋ ಬ್ರಾಹ್ಮಣ ಅಂದರೆ ನೀನೇ ನನ್ನ ಹೆಂಡತಿ ಅಂದನಂತೆ
10. ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡಿದ ಅಂತೆ
11. ಹೊಟ್ಟೆ ತುಂಬಿದವರಿಗೆ ಹುಗ್ಗಿ ಮುಳ್ಳು
12. ಕಂಡರೆ ಸೇರದವನಿಗೆ ಉಂಡರೆ ಸೇರಿತೇ?
13. ಯಾರದ್ದೋ ಹೆಸರು, ಯಾರದ್ದೋ ಬಸಿರು
14. ಕುರಿ ಕಾಯೋದಕ್ಕೆ ತೋಳವನ್ನು ಕಳಿಸಿದರಂತೆ
15. ಬೀಸೋ ದೊಣ್ಣೆ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು
16. ಹನಿ ಹನಿ ಕೂಡಿದರೆ ಹಳ್ಳ ತೆನೆ ತೆನೆ ಕೂಡಿದರ ಬಳ್ಳ
17. ಶಕ್ತಿಗಿಂತ ಯುಕ್ತಿ ಮೇಲು
18. ಈಸಬೇಕು ಇದ್ದು ಜಯಿಸಬೇಕು
19. ಬೆಳೆಯುವ ಪೈರು ಮೊಳಕೆಯಲ್ಲಿ
20. ಧರ್ಮಕ್ಕೆ ದಟ್ಟಿ ಕೊಟ್ಟರೆ ಹಿತ್ತಲಲ್ಲಿ ಮಣ ಹಾಕಿದರಂತೆ
21. ಆರುವ ದೀಪಕ್ಕೆ ಕಾಂತಿ ಹೆಚ್ಚು
22. ನೆಂಟರು ದೂರ ಇರಬೇಕು, ನೀರು ಹತ್ತಿರ ಇರಬೇಕು
23. ಊರಿಗೆ ಅರಸನಾದರೂ ತಾಯಿಗೆ ಮಗ
24. ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ
25. ದೂರದ ಬೆಟ್ಟ ನುಣ್ಣಗೆ
26. ಕೂಸು ಹುಟ್ಟುವುದಕ್ಕಿಂತ ಮೊದಲೇ ಕುಲಾವಿ ಹೊಲಿಸಿದರಂತೆ

ತುಳುನಾಡಿನ ಕಂಬಳ

ಶ್ರೀಗುರು
ಪ್ರಥಮ ಬಿ.ಎಸ್ಸಿ.

ತುಳುನಾಡು ಎನ್ನುವಾಗ ನೆನಪಾಗುವುದು ಉದ್ದನೆಯ ಕರಾವಳಿ, ಹಚ್ಚಹಸಿರಿನ ಮರ–ಗಿಡಗಳು ಹಾಗೂ ಇಲ್ಲಿನ ಸಂಸ್ಕೃತಿಗಳು. ಪರಶುರಾಮ ಸೃಷ್ಟಿಯ ಈ ಸುಂದರ ನಾಡು ಅದೆಷ್ಟು ಪ್ರಾಚೀನ ಸಂಸ್ಕೃತಿಗಳನ್ನು ಒಳಗೊಂಡಂತ ಪುಣ್ಯಭೂಮಿ. ಕೋಲ, ನೇಮ, ತಂಬಿಲ, ನಾಗದರ್ಶನ, ಕೋಳಿ ಅಂಕ, ಕಂಬಳ, ಭೂತಾರಾಧನೆ, ಯಕ್ಷಗಾನ ಮುಂತಾದ ಕಲೆಗಳನ್ನು ಜೀವಂತವಾಗಿರಿಸಿ ಉಳಿಸಿ, ಬೆಳೆಸಿ ಬಂದಂತ ಪುಣ್ಯಭೂಮಿ. ಪಂಚ ದ್ರಾವಿಡ ಭಾಷೆಗಳಲ್ಲಿ ಸ್ಥಾನ ಪಡೆದ ತುಳುಭಾಷೆ ಕರಾವಳಿ ಜನತೆಯ ಆಡುಭಾಷೆ. ಇಲ್ಲಿನ ಮೂಲ ಉದ್ಯೋಗ. ಮೀನುಗಾರಿಕೆ.

ಕಂಬಳ:

ಪರಶುರಾಮ ಸೃಷ್ಟಿ, ನಾಗನ ನಡೆ, ಪಂಚವರ್ಣದ ಮಣ್ಣು ಇರುವ ಈ ತುಳುನಾಡಿನಲ್ಲಿ, ತುಳುನಾಡ ಮಕ್ಕಳು ಕೆಸರಲ್ಲಿ, ಕೋಣಗಳೊಡನೆ ಆಡುವ ಆಟ. ತುಳುನಾಡಿನ ಜನಪದ ಕ್ರೀಡೆಯೆಂದೆ ಬಿಂಬಿತವಾಗಿರುವ ಇದು ಸಾಕಷ್ಟು ವರ್ಷಗಳ ಹಿಂದೆ ನಡೆದು ಬಂದಿರುವಂತಹ ಪುಣ್ಯ ಭೂಮಿಯ ಕೆಚ್ಚೆದೆಯ ಆಟ. ಕಂಬಳದಲ್ಲಿ 2 ವಿಧದ ಕಂಬಳಗಳನ್ನು ಕಾಣಬಹುದು. ಒಂದು ಹರಕೆಯ (ದೇವರ ಕಂಬಳ) ಇನ್ನೊಂದು ಜೋಡುಕೆರೆ ಕಂಬಳ (ಸ್ಪರ್ಧೆ)

ತುಳುನಾಡಿನಲ್ಲಿ 25ಕ್ಕೂ ಹೆಚ್ಚು ಜೋಡುಕೆರೆ ಕಂಬಳ ಕೂಟಗಳಿದ್ದು, 30ಕ್ಕೂ ಅಧಿಕ ಹರಕೆಯ ಕಂಬಳಗಳು ನಡೆಯುತ್ತದೆ. ಜೋಡುಕೆರೆ ಕಂಬಳದಲ್ಲಿ ಕೋಣಗಳ ಓಟವನ್ನು ನೋಡುವುದೇ ಒಂದು ಸಂತಸ. ಈ ಜೋಡುಕೆರೆ ಕಂಬಳದಲ್ಲಿ ಮುಖ್ಯವಾಗಿ ಎರಡು ಕೆರೆಗಳು ಇರುತ್ತಾವೆ. ತುಳುನಾಡಿನ ಪ್ರಸಿದ್ಧ ಜೋಡುಕೆರೆಗಳು. ಕೋಟಿ–ಚೆನ್ನಯ, ಜಯ–ವಿಜಯ, ಸೂರ್ಯ–ಚಂದ್ರ, ಕಾಂತಬಾರೆ–ಬೂದಬಾರೆ, ಅಣ್ಣ–ತಮ್ಮ, ಸಂಕು ಪೂಂಜ– ದೇವು ಪೂಂಜ ಮೊದಲಾದವು.

ಈ ಕಂಬಳದಲ್ಲಿ ತುಳುನಾಡಿನ ಯುವಕರು ಆ ಕೋಣವನ್ನು ಓಡಿಸುವಾಗ ರಟ್ಟುವಂತಹ ಕೆಸರನ್ನು ಎದೆಗೆ ಕಟ್ಟಿಸಿ, ಕೋಣಗ ಹಿಂದೆ ಬರಿಗಾಲಲ್ಲಿ ಓಡಿ 150 ಮೀ. ಕೆರೆಯನ್ನು ಕೇವಲ 10.56 ಸೆಕೆಂಡ್‌ಗಳಲ್ಲಿ ಮುಗಿಸಿ ನಮ್ಮ ಕಂಬಳವೂ ಯಾವ ಕ್ರೀಡೆಗಿಂತ ಕಮ್ಮಿ ಇಲ್ಲ ಎಂದು ಸಾಬೀತು ಪಡಿಸಿದ್ದಾರೆ.

ತುಳುನಾಡಿನಲ್ಲಿ ಅದೆಷ್ಟೋ ಕಂಬಳ ಯಜಮಾನರು, ಕಂಬಳ ಅಭಿಮಾನಿಗಳು ಇದ್ದಾರೆ. ಅದಕ್ಕೆ ಲೆಕ್ಕ ಇಲ್ಲ. ಈ ಕಂಬಳ ಕೂಟದಲ್ಲಿ ಹೆಸರು ಮಾಡಿದ ಕೆಲವು ಕೋಣಗಳ ಹೆಸರು

* ಪೊಯ್ಯಟ್ಟು ನಾಗರಾಜ
* ರಾಕೆಟ್ ಮೋಡ
* ಕುಟ್ಟಿ
* ಬೋಳದ ಬೊಳ್ಳ
* ಇರುವೈಲು ತಾಟೆ–ಬೊಟ್ಟಿಮಾರ್
* ಕಾರ್ಕಳದ ಮುಖೇಶ

ಹೀಗೆ ಸಾಕಷ್ಟು ಕೋಣಗಳು, ಕಂಬಳಾಭಿಮಾನಿಗಳನ್ನು ರಂಜಿಸುತ್ತಾ ಬಂದಿವೆ.

ಪ್ರಾಣಿದಯಾ ಸಂಘದವರು ಪ್ರಾಣಿ ಹಿಂಸೆ ನೆಪದಲ್ಲಿ ಈ ಕ್ರೀಡೆಯನ್ನು ನಿಷೇಧಿಸಲು ಹೊರಟಾಗ ತುಳುನಾಡಿನ ಮಕ್ಕಳು ಅದನ್ನು ತಡೆದು ಉಳಿಸಿ ಈಗ ಪುನಃ ಅದನ್ನು ಬೆಳೆಸುತ್ತಿದ್ದಾರೆ.

ಕಂಬಳದ ಕೋಣಗಳನ್ನು ಸಾಕುವ ವಿಧಾನ ನೋಡಿದರೆ ಯಾರು ಅದನ್ನು ಪ್ರಾಣಿ ಹಿಂಸೆ ಎನ್ನಲು ಸಾಧ್ಯವಿಲ್ಲ. ಒಂದು ಕೋಣಕ್ಕೆ ದಿನಕ್ಕೆ ರೂ. 1000 ಖರ್ಚು ಮಾಡುತ್ತಿರುವ ಅದೆಷ್ಟು ಕಂಬಳದ ಯಜಮಾನರಿದ್ದಾರೆ.

ಇತ್ತೀಚೆಗೆ ಸಾವನ್ನಪ್ಪಿದ ಮೋಡ ಎಂಬ ಕೋಣದ ಅಂತ್ಯ ಸಂಸ್ಕಾರ ಮಾಡಿದ ನಂದಳಿಕೆ ಶ್ರೀಕಾಂತ್ ಭಟ್‌ರ ಆ ಕಂಬಳದ ಮೇಲಿನ ಪ್ರೀತಿಯನ್ನು ನಾವು ನೋಡಬಹುದು. 250ಕ್ಕೂ ಹೆಚ್ಚು ಕಂಬಳಾಭಿಮಾನಿಗಳ ಎದುರಿನಲ್ಲಿ ಶಾಸ್ತ್ರಬದ್ಧವಾಗಿ ಅದರ ಅಂತ್ಯಕ್ರಿಯೆನ್ನು ನಡೆಸಿದ ರೀತಿ ನಿಜಕ್ಕೂ ಯಾವ ಮನುಷ್ಯನಿಗೆ ಕೂಡ ಸಿಗದು.

ಹೀಗೆ ಕಂಬಳದ ಬಗ್ಗೆ ಮಾತನಾಡಲು ಹೋದರೆ ಅದಕ್ಕೆ ಕೊನೆಯೇ ಇಲ್ಲ. **"ಕಂಬಳ ಉಳಿಸಿ" " ಕಂಬಳ ಬೆಳೆಸಿ"**

ಜೈ ತುಳುನಾಡು.

ಹೆಬ್ರಿ– ಒಂದು ಪರಿಚಯ

ರಚಿತಾ
ದ್ವಿತೀಯ ಬಿ.ಕಾಂ.

ನನ್ನ ಊರು ಹೆಬ್ರಿ. ಈ ಹೆಬ್ರಿ ಎಂಬ ಊರಿನ ಹೆಸರು ಬರಲು ಒಂದು ಕಾರಣವಿದೆ. ಎಲ್ಲಾ ಊರಿನ ಹೆಸರಿನ ಹಿಂದೆ ಒಂದು ಹಿನ್ನಲೆ ಇರುತ್ತದೆ. ಹಾಗೆಯೇ ಹೆಬ್ರಿ ಎಂಬ ಊರಿನ ಹೆಸರಿನ ಹಿಂದೆ ಒಂದು ಹಿನ್ನಲೆ ಇದೆ. ಮೊದಲು ರಾಜಮಹಾರಾಜರು ನಮ್ಮ ಊರಿನಲ್ಲಿ ವಾಸಿಸುತ್ತಿದ್ದರು. ಅದರಲ್ಲಿ ಎರಡು ವಿಭಾಗ ಎದ್ದಿತ್ತು. ನಮ್ಮ ಊರಿನಲ್ಲಿ ಒಂದು ಕೆರೆ ಇದೆ. ಆ ಕೆರೆ ಆಗಲು ಕಾರಣವೇನೆಂದರೆ ಅದು ನಿಜವಾಗಿ ಮೊದಲು ಕೆರೆ ಆಗಿರಲಿಲ್ಲ. ಅಲ್ಲಿ ಹಲವಾರು ಬಾವಿಗಳು ಇದ್ದವು. ಆ ಬಾವಿಯ ಒಳಗೆ ಮನೆಗಳಿದ್ದವು. ಆ ಮನೆಗಳು ರಾಜಮಹಾರಾಜರದ್ದಾಗಿತ್ತು. ಆ ಬಾವಿಯ, ಮನೆಯ ಒಳಗೆ ಚಿನ್ನಗಳು ಕೂಡಿಡುತ್ತಿದ್ದರು. ಹಾಗೆಯೇ ಒಂದು ದಿನ ಒಬ್ಬ ಮಹಾರಾಜ ಭೇರಿಯನ್ನು ಬಾರಿಸುತ್ತಿದ್ದನು. ಇದ್ದನ್ನು ಕೇಳಿದ ಇನ್ನೊಬ್ಬ ಮಹಾರಾಜ ಈ ಶಬ್ದ ಎಲ್ಲಿಂದ ಬರುತ್ತಿದೆ ಎಂದು ಹುಡುಕಲು ಆರಂಭಿಸಿದ. ಭೇರಿಯ ಶಬ್ದ ಸುಮಾರು 1 ಕಿಲೋಮೀಟರ್ ರವರೆಗೂ ಕೇಳುತ್ತದೆ. ಆದ್ದರಿಂದ ಆ ಮಹಾರಾಜನಿಗೆ ಆ ಶಬ್ದವನ್ನು ಕೇಳಿ ರಗಳೆ ಆಗುತ್ತಿತ್ತು. ಆ ಮಹಾರಾಜ ನಮ್ಮನ್ನು ಹುಡುಕುತ್ತಿದ್ದಾರೆ ಎಂದು ಇನ್ನೊಬ್ಬ ಮಹಾರಾಜನಿಗೆ ಸುದ್ದಿ ತಿಳಿಯಿತು. ಅವರು ಆಯುಧಗಳನ್ನು

ನೋಡಿ ಈ ಮಹಾರಾಜರು ಅದಕ್ಕೆ ಹೆದರಿ ಭೇರಿಯನ್ನು ಏನು ಮಾಡುವುದೆಂದು ಗೊತ್ತಾಗದೆ ಬಾವಿಗೆ ಎಸೆದರು. ಬಾವಿಯಲ್ಲಿ ಮೊದಲೇ ಚಿನ್ನವನ್ನು ಕೂಡಿ ಇಟ್ಟು ತುಂಬಿ ಹೋಗಿದೆ. ಅದರಲ್ಲೂ ಭೇರಿಯನ್ನು ಎಸೆದು ಅದು ತುಂಬಿ ತುಳುಕುತ್ತಿತ್ತು. ವರ್ಷಕ್ಕೊಮ್ಮೆ ಸೋಣಾರ್ತಿ ಎಂದು ನಮ್ಮ ಊರಿನಲ್ಲಿ ಪೂಜೆ ನಡೆಯುತ್ತದೆ. ಸೋಣಾರ್ತಿ ಎಂದರೆ ಕತ್ತಲಿನಲ್ಲಿ ದೀಪವನ್ನೆಲ್ಲಾ ಹಚ್ಚಿ ಕೇವಲ ಬೆಳಕಲ್ಲೆ ದೇವರಿಗೆ 1 ಗಂಟೆಯ ಕಾಲ ಮಹಾಪೂಜೆ ಮಾಡುವುದು. ಹಾಗಾಗಿ ಹೆಬ್ಬೇರಿ ಎಂದು ಇದ್ದ ಹೆಸರು ಹೆಬ್ರಿ ಎಂದು ಈ ಆಗಿದೆ. ಈಗ ಸೋಣಾರ್ತಿ ಪೂಜೆಯಲ್ಲಿ ಯಂತ್ರದ ಮೂಲಕ ಭೇರಿಯನ್ನು ಬಾರಿಸುತ್ತಾರೆ. ಆ ಕೆರೆಯಲ್ಲಿ ಪ್ರತಿವರ್ಷವು ಒಬ್ಬರು ಸಾವಿಗೀಡಾಗುತ್ತಾರೆ. ಅದರಲ್ಲೂ ನನ್ನ ಅಜ್ಜ ಒಬ್ಬರು. ಆ ಕೆರೆಯ ಪಕ್ಕ ಅಶ್ವತ್ಥ ಮರವೊಂದಿದೆ. ವರ್ಷಕ್ಕೊಮ್ಮೆ ಕೆಟ್ಟ ಅಮವಾಸ್ಯೆ ಒಂದು ಬರುತ್ತದೆ. ಅದು ಗಣೇಶ ಚತುರ್ಥಿ ಹಬ್ಬದ ಒಂದು ವಾರ ಹಿಂದೆ ಆ ಅಮವಾಸ್ಯೆ ಬರುತ್ತದೆ. ಆ ಅಮವಾಸ್ಯೆಯಂದು ಯಾರಾದರೂ ಆ ಅಶ್ವತ್ಥ ಮರ ಪಕ್ಕ ಹೋದರೆ ಅಥವಾ ಕೆರೆಯ ಪಕ್ಕ ಹೋದರೆ ಸಾವಿಗೀಡಾಗುತ್ತಾರೆ, ಸಾವನಪ್ಪುತ್ತಾರೆ. ನನ್ನ ಅಜ್ಜನ ಮೊದಲು ಒಬ್ಬ ಡಾಕ್ಟರ್ ಮಗನು ಈಜಾಡಲು ಹೋಗಿ ಸಾವನ್ನಪ್ಪಿದ್ದಾನೆ. ಇದು ವಿಪರ್ಯಾಸವೋ ಅಥವಾ ದುರಾದೃಷ್ಟವೋ ಅಥವಾ ಮೂಢನಂಬಿಕೆಯೋ ತಿಳಿಯದು. ಗಣಪತಿ ಮೂರ್ತಿಯನ್ನು ಕೂಡ ಅದೇ ಕೆರೆಗೆ ಬಿಡುತ್ತಾರೆ. ನಾನು ಗಾಂಧಿನಗರ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಮೀಡಿಯಮ್ 4ನೇ ತರಗತಿಯವರೆಗೂ ಕಲಿತೆ. ತದನಂತರ 5 ರಿಂದ 12ನೇ ತರಗತಿಯವರೆಗೂ ಹೆಬ್ರಿಯ ಎಸ್. ಆರ್. ಪಿ. ಯು. ಕಾಲೇಜಿನಲ್ಲಿ ಕಲಿತೆ. ನಾನು ಛದ್ಮವೇಷದಲ್ಲಿ ನಾನು ತುಂಬಾ ಪರಿಣಿತಳಾಗಿದ್ದೆನು (Expert) ಆದ ಕಾರಣ ಎಲ್ಲಾ ಶಿಕ್ಷಕರು ನನಗೆ ಛದ್ಮವೇಶದಲ್ಲಿ ಭಾಗವಹಿಸಲು ಒತ್ತಾಯ ಮಾಡುತ್ತಿದ್ದರು. ಪ್ರತಿಭಾ ಕಾರಂಜಿಯಲ್ಲೂ ನನಗೆ ಬಹುಮಾನ ಸಿಕ್ಕಿತು. ಒಂದರಿಂದ (1ರಿಂದ 12) ರವರೆಗೂ ನಾನು ಛದ್ಮವೇಶದಲ್ಲಿ ಭಾಗವಹಿಸಿ ಬಹುಮಾನ ಗಳಿಸಿದೆನು. ನಾನು Cultural programme ಗೆ ಜಾಸ್ತಿ (ಹೆಚ್ಚು) ಭಾಗವಹಿಸುತ್ತಿದ್ದೆನು. ಆದ ಕಾರಣ ಅದರಲ್ಲಿ ಹೆಚ್ಚು ಹೆಚ್ಚು ಪ್ರಶಸ್ತಿ (ಬಹುಮಾನ)ವನ್ನು ಗಳಿಸಿಕೊಳ್ಳುತ್ತಿದ್ದೆನು. ಪ್ರಬಂಧ ಸ್ಪರ್ಧೆ, ಚಿತ್ರಕಲಾಸ್ಪರ್ಧೆ, ಛದ್ಮವೇಷ ಸ್ಪರ್ಧೆ, ಕಸೂತಿ ಎಲ್ಲದರಲ್ಲೂ ಭಾಗವಹಿಸಿದ್ದೇನೆ. ಒಂದರಿಂದ ನಾಲ್ಕನೇ ತರಗತಿಯವರೆಗೂ ಎಲ್ಲಾ Cultural Events ಗೆ ಸೇರುತ್ತಿದ್ದನು. ರಜೆ ಸಿಕ್ಕಿದರೆ ಸಾಕು ಅಭ್ಯಾಸವಿಲ್ಲ. ಮ್ಯಾಟ್, ಹ್ಯಾಂಗಿಗ್ಸ್, ಬಳೆ, ದೀಪ, ಟೀ ಕಪ್, ಸರ, ಬ್ರಾಸ್ಲೆಟ್ ಎಲ್ಲವನ್ನು ಮಾಡಿದ್ದೇನೆ. (ವೇಸ್ಟ್ ಬೊಟಲ್) ಹೆಚ್ಚು ಕಸೂತಿಯಲ್ಲಿ ಆಸಕ್ತಿ ಹೊಂದಿದವಳು. ನನ್ನ ನೆಚ್ಚಿನ ಪ್ರೇಕ್ಷಣೀಯ ಸ್ಥಳ "ಕೂಡ್ಲು ಫಾಲ್ಸ್" ಹಾಗೂ "ಜೋಗ್ ಫಾಲ್ಸ್" ಹಾಗೂ ನಮ್ಮ ಊರಿನಲ್ಲಿ ಎರಡು ಪ್ರೇಕ್ಷಣೀಯ ಸ್ಥಳ ಇವೆ. ಒಂದು "ಜೋಮ್ಲುತೀರ್ಥ ಹಾಗೂ ಇಪ್ಪುಡ್ಲು ಫಾಲ್ಸ್--> ನಿಸರ್ಗಧಾಮ. ನಮ್ಮದು ಚಿಕ್ಕ ಊರು ಆದರೂ ದೊಡ್ಡ ಹೆಸರನ್ನು ಪಡೆದ ಊರು. ನಮ್ಮ ಊರು ಹೆಬ್ರಿ ಎಂದು ಹೇಳಲು ನನಗೆ ತುಂಬಾ ಹೆಮ್ಮೆ ಆಗುತ್ತದೆ. ದೇವಸ್ಥಾನಗಳು ನಮ್ಮ ಊರಿನಲ್ಲಿ ಹಲವಾರು ಇದೆ. ಉದಾಹರಣೆಗೆ ಅನಂತ ಪದ್ಮನಾಭ ದೇವಸ್ಥಾನ, ಅರ್ಧನಾರೀಶ್ವರ ದೇವಸ್ಥಾನ, ರಾಘವೇಂದ್ರ ದೇವಸ್ಥಾನ ಇತ್ಯಾದಿ.

"ಗೌರವಿಸು ಜೀವನವ ಗೌಅರವಿಸು ಚೇತನವ
ಆರದೋ ಜಗವೆಂದು ಭೇದವೆಣಿಸದಿರು
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ

– ಡಿ.ವಿ.ಜಿ

ನಮ್ಮೂರು ಕೆರಾಡಿ

ಭರತ್ ಕೊಠಾರಿ
ದ್ವಿತೀಯ ಬಿ.ಕಾಂ.

ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ ಅಂದರೆ ಹೆತ್ತ ತಾಯಿ ಹೊತ್ತನಾಡು ಸ್ವರ್ಗಕ್ಕಿಂತಲೂ ಮಿಗಿಲು. ಈ ನಾಣ್ನುಡಿಯನ್ನು ಕೇಳುತ್ತಿದ್ದರೆ ಮೈರೋಮಾಂಚನಗೊಳ್ಳುತ್ತದೆ.

ಕೊಡಚಾದ್ರಿಯ ತಪ್ಪಲಿನ ಕುಂದಾಪುರ ತಾಲೂಕಿನ ಕೆರಾಡಿ ಎಂಬ ಸುಂದರ ಊರು ನನ್ನೂರು. ಕೆರಾಡಿ ತಾಲೂಕು ಕೇಂದ್ರದಿಂದ ಸುಮಾರು 40 ಕಿ.ಮೀ. ದೂರದಲ್ಲಿದೆ ಕೆರಾಡಿ ಗ್ರಾಮ ಅಭಿವೃದ್ಧಿಯಲ್ಲಿ ತುಂಬಾ ಹಿಂದಿ ಉಳಿದದ್ದು ದುರಾದೃಷ್ಟವೇ ಸರಿ. ಕೆರಾಡಿ ಮೂಕಾಂಬಿಕಾ ಅಭಯಾರಣ್ಯಕ್ಕೆ ಒಳಪಟ್ಟಿದೆ. ಕೆರಾಡಿ ಪ್ರಾಕೃತಿಕವಾಗಿ ತುಂಬಾ ಸುಂದಾರವಾಗಿದ್ದು, ಇಲ್ಲಿಯ ಅರಣ್ಯದಲ್ಲಿ ಮ್ಯಾಂಗನಿಸ್ ನಿಕ್ಷೇಪ ಇದೆ ಎಂದು ತಿಳಿದು ಬಂದಿದೆ. ಆದರೆ ಇಲ್ಲಿ ವಿದ್ಯುತ್ ರಸ್ತೆ ಹಾಗೂ ಮೂಲಭೂತ ವ್ಯವಸ್ಥೆಯನ್ನು ಜನರಿಗೆ ತಲುಪಿಸುವಲ್ಲಿ ಹಿಂದೆ ಬಿದ್ದಿದ್ದು, ಇಲ್ಲಿಯ ಜನ ಚುನಾವಣೆಯ ಸಮಯದಲ್ಲಿ ರಾಜಕೀಯ ನಾಯಕರ ಚದುರಂಗದಾಟಕ್ಕೆ ಬಲಿಯಾಗುತ್ತಿದ್ದಾರೆ.

ಶಾಲೆ:

ಕೆರಾಡಿ ಗ್ರಾಮದ ಮುಖ್ಯ ಕೇಂದ್ರವಾಗಿದ್ದು ಇಲ್ಲಿ ಒಂದು ಹಿರಿಯ ಪ್ರಾಥಮಿಕ ಶಾಲೆ ಇದೆ. ಅದು ನಾನು ಕಲಿತ ಶಾಲೆ, ನಾನು ಬಾಲ್ಯದಲ್ಲಿ ಆಟ ಆಡಿದ ಶಾಲೆ, ನನ್ನನ್ನು ವಿದ್ಯಾರ್ಥಿಯನ್ನಾಗಿ ರೂಪಿಸುವಲ್ಲಿ ಅಡಿಪಾಯವೇ ಆ ಶಾಲೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಆ ಶಾಲೆ ಪ್ರಾರಂಭವಾಗಿತ್ತು ಎಂದು ಹೇಳಲು ಬಹಳ ಹೆಮ್ಮೆ ಆಗುತ್ತದೆ. ಬಹಳಷ್ಟು ಜನ ಸಾಧಕರನ್ನು ಅದು ನಾಡಿಗೆ ನೀಡಿದ ಶಾಲೆ.

ದೇವಾಲಯ:

ನನ್ನೂರನ್ನ ಬಹುಷ ದೇವಾಲಯಗಳ ನಾಡು ಎಂದು ಕರೆಯಬಹುದು. ಏಕೆಂದರೆ ನನ್ನೂರಿನಲ್ಲಿ ಇರುವ ದೇವಾಲಯಗಳ ಸಂಖ್ಯೆ ಲೆಕ್ಕವಿಲ್ಲದಷ್ಟು. ದುರ್ಗಾಪರಮೇಶ್ವರಿ ದೇವಾಲಯ, ಕೇಶವನಾಥೇಶ್ವರ ದೇವಾಲಯ, ವರಸಿದ್ಧಿ ವಿನಾಯಕ ದೇವಸ್ಥಾನ ಇತ್ಯಾದಿ ಮತ್ತು ತುಂಬಾ ದೈವದ ಗುಡಿಗಳನ್ನು ನೋಡಬಹುದು. ಈ ದೇವಾಲಯಗಳಲ್ಲಿ ವರ್ಷಂಪ್ರತಿ ಉತ್ಸವಾದಿಗಳು ನಡೆಯುತ್ತದೆ.

ಪ್ರೇಕ್ಷಣೀಯ ಸ್ಥಳ:

ನನ್ನೂರು ಪ್ರವಾಸಕ್ಕೆ ಹೇಳಿ ಮಾಡಿಸಿದ ಜಾಗ. ಆದರೆ ಸರ್ಕಾರದ ನಿರ್ಲಕ್ಷ್ಯದಿಂದ ಹಿಂದೆ ಬಿದ್ದಿದೆ. ನನ್ನೂರಿನಿಂದ 4 ಕಿ.ಮೀ. ಕಾಡಿನಲ್ಲಿ ಸಾಗಿದರೆ ಮೂಡುಗಲ್ಲು ಎಂಬ ಪ್ರದೇಶ ಸಿಗುತ್ತದೆ. ಅಲ್ಲಿ ಗುಹೆಯಲ್ಲಿ ಕೇಶವನಾಥೇಶ್ವರನ ಉದ್ಭವ ಲಿಂಗವಿದೆ. ಗುಹೆಯಲ್ಲಿ 50 ಮೀಟರ್ ಮುಂದೆ ಸಾಗಿದರೆ ಕೇಶವನಾಥೇಶ್ವರನ ದರ್ಶನ ಸಿಗುತ್ತದೆ. ಗುಹೆಯಲ್ಲಿ ವರ್ಷಪೂರ್ತಿ ನೀರು ಇರುತ್ತದೆ. ಮೀನುಗಳು ಭಕ್ತರ ಕಾಲಿಗೆ ಕಚಗುಳಿ ಇಟ್ಟಾಗ ಮೈ ರೋಮಾಂಚನಗೊಳ್ಳುತ್ತದೆ. ಇಲ್ಲಿಗೆ ಬ್ರಿಟಿಷ್ ಅಧಿಕಾರಿ ಲಾರ್ಡ್ ಕರ್ಜನ್ ಭೇಟಿ ನೀಡಿದ್ದಾನೆ ಎನ್ನುತಾರೆ. ಆದರೆ ಇಲ್ಲಿಗೆ ಹೋಗುವ ರಸ್ತೆ ಮಾರ್ಗದುರ್ಗಮವಾಗಿದ್ದು ವಿದ್ಯುತ್ ಸಂಪರ್ಕವಿಲ್ಲದೆ ಇರುವುದರಿಂದ ಅಲ್ಲಿಯ ಜನ ಊರುಬಿಟ್ಟು ಬೇರೆ ಕಡೆ ತೆರಳುತ್ತಿರುವುದು ತುಂಬಾ ವಿಷಾದದ ಸಂಗತಿ.

ಕಲೆ– ಸಾಹಿತ್ಯ:

ನನ್ನೂರಿನಲ್ಲಿ ಯಕ್ಷಗಾನ, ಭಜನೆ, ಕೋಲ, ಸಾವಿರ ಕಣ್ಣಿನ ವಸಂತ ಮುಂತಾದವು ನಡೆಯುತ್ತಿರುತ್ತದೆ.

ಕನ್ನಡ ಚಲನಚಿತ್ರರಂಗಕ್ಕೆ ಪ್ರಸಿದ್ಧ ವಟ, ನಿರ್ದೇಶಕ ರಿಷಬ್ ಶೆಟ್ಟಿಯನ್ನು ನೀಡಿದ ಹಿರಿಮೆ ಕೆರಾಡಿಯದ್ದು. ಇಲ್ಲಿಯ ಕುಡುಬಿ ಜನಾಂಗದ ಹೋಳಿಹಬ್ಬ ನೋಡಲು ತುಂಬಾ ಸಂತೋಷ ಕೊಡುತ್ತದೆ.

ನಮ್ಮೂರಿನ ದೇವಾಲಯ

ಸ್ವಾತಿ
ಪ್ರಥಮ ಬಿ.ಎಸ್ಸಿ.

ಶಿರಿಯಾರ ಗ್ರಾಮದ ಒಳಗಡೆ ಇರುವ ಒಂದು ಪುಟ್ಟ ಊರು ಪಡುಮುಂಡು ಇದು ಸುತ್ತಲೂ ನೀರಿನಿಂದ ಆವೃತವಾಗಿ ಮಧ್ಯದಲ್ಲಿ ಇರುವಂತಹ ಒಂದು ಸಣ್ಣ ಪ್ರದೇಶ. ಈ ಊರಿನಲ್ಲಿರುವ ಒಂದು ವಿಶೇಷತೆ ಏನೆಂದರೆ ಅಲ್ಲಿ ಒಂದು ದೇವಾಲಯವಿದೆ. ಅದು ಎಲ್ಲಾ ಕಡೆ ಅಂದರೆ ಸುತ್ತಲೂ ಹಾಗೂ ಅಲ್ಲಲ್ಲಿ ಕಲ್ಲುಬಂಡೆಯಿಂದ ಆವರಿಸಿದೆ. ಅದರ ಒಳಗಡೆ ಒಂದು ಪುಟ್ಟ ಗುಹೆಯಂತೆ ಇದೆ. ಅದರಲ್ಲಿ ಮೂರು ಮೂರ್ತಿಗಳು ಉದ್ಭವಗೊಂಡಿದೆ. ಇದು ಅತೀ ಪುರಾತನ ದೇವಾಲಯ. ಆ ಮೂರ್ತಿಗಳು ಶಿವ, ಪಾರ್ವತಿ, ಗಜಮುಖ ಆ ದೇವಾಲಯಕ್ಕೆ ಹಲವಾರು ವರುಷಗಳ ಇತಿಹಾಸವಿದೆ.

ಈ ದೇವಾಲಯವು ಶ್ರೀ ಕಲ್ಲುಗಣಪತಿ ದೇವಸ್ಥಾನ ಎಂದೇ ಎಲ್ಲಡೆ ಪ್ರಸಿದ್ಧಿ ಹೊಂದಿದೆ. ಹಾಗೂ ಈ ನಮ್ಮ ಊರಿನ ದೇವಾಲಯದಲ್ಲಿ ಬೇರೆ ಬೇರೆ ಚಿಕ್ಕ ಪುಟ್ಟ ಗುಹೆಗಳಿವೆ. ಅಲ್ಲಿ ಹಿಂದಿನ ಕಾಲದಲ್ಲಿ ಮಹಾನ್ ಋಷಿಗಳು ತಪಸ್ಸು ಮಾಡುತ್ತಿದ್ದರಂತೆ. ಅಲ್ಲಿ ಈ ಹಿಂದೆ ಹುಲಿಗಳ ಆವಾಸ ಸ್ಥಾನ ಆಗಿತ್ತು. ಆದರೆ ಅಲ್ಲಿಯ ವಿಶೇಷತೆ ಎಂದರೆ ಆ ಹುಲಿಗಳು ಅಲ್ಲಿರುವ ಯಾರಿಗೂ ಕೂಡ ತೊಂದರೆಗಳನ್ನು ಕೊಡುತ್ತಿರಲಿಲ್ಲ. ಹಾಗೂ ಕೆಲವೊಬ್ಬ ಶಿಲ್ಪಿಗಳಿಂದ ಆ ದೇವಾಲಯವನ್ನು ಚೆನ್ನಾಗಿ ಕೆತ್ತನೆ ಮಾಡಿದ್ದಾರೆ. ಈ ದೇವರುಗಳು ನಂಬಿದವರನ್ನು ಕೈ ಬಿಡುವುದಿಲ್ಲ. ಹಿಂದೆ ರಾಜರುಗಳು ಇಲ್ಲಿ ಒಂದು ಮಹಾನ್ ಪೂಜೆ ಪುನಸ್ಕಾರಗಳನ್ನು ಕೊಡುತ್ತಿದ್ದರು ಎಂದು ನಮ್ಮ ಅಜ್ಜಿ ನನಗೆ ಹೇಳಿದ್ದರು.

ಇತ್ತೀಚಿನ ದಿನಗಳಲ್ಲಿ ಆ ದೇವಾಲಯವು ಒಂದು ವಿಶಿಷ್ಟ ರೀತಿಯ ಪ್ರೇಕ್ಷಣೀಯ ಸ್ಥಳವಾಗಿದೆ. ಇಲ್ಲಿ ಬೇರೆ ಬೇರೆ ಊರು ಕೆಲವೊಂದು ದೊಡ್ಡ ದೊಡ್ಡ ಪಟ್ಟಣದಿಂದ ಜನರು ಆಗಮಿಸುತ್ತಿದ್ದಾರೆ. ಹಾಗೂ ಅಲ್ಲಿ ಕೆಲವೊಂದು Film Shooting ಎಲ್ಲಾ ಏರ್ಪಟ್ಟಿದ್ದಿತು. ನಮ್ಮ ಮನಸ್ಸು ನೆಮ್ಮದಿಯಿಂದ ಹಾಗೂ ಶಾಂತವಾಗಿರಲು ಈ ದೇವಾಲಯಕ್ಕೆ ಬೇಟಿ ನೀಡಬೇಕು.

ಇನ್ನೊಂದು ವಿಶೇಷತೆ ಎಂದರೆ ಈ ದೇವಾಲಯದಲ್ಲಿ ಸುಮಾರು ಮಳೆಗಾಲದಲ್ಲಿ ಸಮಯದಲ್ಲಿ ಸೋಣೆ ಆರತಿ ಆರಂಭವಾಗುತ್ತದೆ. ಅದು ಚೌತಿ ಸಮಯದಲ್ಲಿ ಮುಗಿಯುತ್ತದೆ ಹಾಗೂ ಮೂಡುಗಣಪತಿ, ಮಂಗಳಾರತಿ, ರಂಗಪೂಜೆ ಹೀಗೆ ಕೆಲವೊಂದು ಪೂಜೆಗಳು ಏರ್ಪಡುತ್ತಿದೆ. ಹಾಗೂ ಈಗ ಸಂಕ್ರಾಂತಿ ಸಮಯದಲ್ಲಿ ದೇವಾಲಯವನ್ನು ಹೂವಿನಿಂದ ಅಲಂಕರಿಸುತ್ತಾರೆ. ಹೀಗೆ ಶಿವರಾತ್ರಿ ಮುಂತಾದ ರೀತಿಯ ವಿಶಿಷ್ಟ ದಿನದಲ್ಲಿ ಕೆಲವೊಂದು ಭಜನೆ ನೃತ್ಯ, ಸಂಗೀತ ಹೀಗೆ ಕೆಲವೊಂದು ಕಾರ್ಯಕ್ರಮಗಳು ಏರ್ಪಡುತ್ತದೆ.

ಒಟ್ಟಾರೆಯಾಗಿ ನಾನು ಆ ಊರಿನಲ್ಲಿ ಹುಟ್ಟಿರೋದು ನನ್ನ ಪುಣ್ಯ ಎಂದೇ ಹೇಳಬಹುದು. ಹೀಗೆ ಹೇಳುತ್ತಾ ಹೋದರೆ ತುಂಬಾ ವಿಷಯಗಳು ಬರುತ್ತದೆ. ಆದರೆ ನಾನು ಇದನ್ನು ಇಲ್ಲಿ ಮುಗಿಸಲು ಇಷ್ಟಪಡುತ್ತೇನೆ.

"ಸತ್ಯ ಶಿವ ಸುಂದರದ ಸಚ್ಚಿದಾನಂದನದ
ಭಿತ್ತಿಯಲಿ ಬಣ್ಣ ಬಣ್ಣದ ಜೀವಚಿತ್ರ
ನಿತ್ಯ ನೀನದ ನೆನೆದು ಚಿತ್ರದಲಿ ಮನವಿರಿಸೆ
ವೃತ್ತಿ ತನ್ಮಯವಹುದೋ – ಮಂಕುತಿಮ್ಮ

– ಡಿ.ವಿ.ಜಿ.

ನನ್ನ ಊರು ಸೂರಾಲು

ರಶ್ಮಿತಾ
ಪ್ರಥಮ ಬಿ.ಎಸ್ಸಿ.

ಭಾರತ ದೇಶದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳು, ಇತಿಹಾಸ ಹೊಂದಿರುವ ದೇವಾಲಯಗಳು ಮುಂತಾದವುಗಳನ್ನೆಲ್ಲ ಕಾಣಬಹುದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಇಷ್ಟವಾದ ಸ್ಥಳಗಳಿಗೆ ಹೋಗುವ ಆಸೆಗಳನ್ನು ಹೊಂದಿರುತ್ತಾನೆ. ನನಗೂ ಅಂತಹ ಆಸೆಗಳು, ಭಯಕೆಗಳಿವೆ. ಆದರೂ ಎಷ್ಟೇ ಸ್ಥಳ ಸುತ್ತಿದರೂ ನನ್ನ ಊರಿನಲ್ಲಿರುವಾಗ ಸಿಗುವ ನೆಮ್ಮದಿ ಎಲ್ಲೂ ಸಿಗಲಿಲ್ಲ.

ಇಷ್ಟೆಲ್ಲ ವಿವರಣೆ ನೀಡುವಾಗ ನಿಮಗೂ ನನ್ನ ಊರ ಬಗ್ಗೆ ತಿಳಿಯುವ ಆಸೆ ಉಂಟಾಗಬಹುದು. ನನಗೆ ತಿಳಿದಷ್ಟು ನನ್ನ ಊರ ಬಗ್ಗೆ ಹೇಳುವ ಪ್ರಯತ್ನ ಮಾಡುತ್ತೇನೆ.

'ಸೂರಾಲು' ನನ್ನ ಊರು. ನಾ ಮೆಚ್ಚಿದ ಊರು. ಎಲ್ಲಾ ಊರುಗಳಂತೆ ನನ್ನ ಊರು ಸಹ ಒಂದು ಪುಟ್ಟ ಹಳ್ಳಿ. ಆದರೆ ಈಗ ಒಂದಿಷ್ಟು ಅಭಿವೃದ್ಧಿ ಕಾಣುತ್ತಿದೆ ಎನ್ನುವುದು. ಖುಷಿಯ ಸಂಗತಿ. ಸೂರಾಲು ಉಡುಪಿ ಜಿಲ್ಲೆಯಲ್ಲಿದೆ. ಎಲ್ಲಿ ನೋಡಿದರಲ್ಲಿ ಹೊಲ–ಗದ್ದೆಗಳು ತೋಟಗಳು ಕಾಣಸಿಗುತ್ತವೆ. ಊರಿಗೆ ಆಗಮಿಸುವಾಗ ಮೊದಲು ದೇವಸ್ಥಾನ ಕಾಣಿಸುತ್ತಿದೆ. ಶ್ರೀ ಮಹಾಲಿಂಗೇಶ್ವರ ನೆಲೆ ನಿಂತಿರುವ ಜಾಗ. ಅವನ ಜೊತೆಯಲ್ಲೇ ಅವನ ಪತ್ನಿ ಪಾರ್ವತಿ ಶಿವನ ದೇಗುಲದ ಎದುರಿನ ಕಟ್ಟೆಯಲ್ಲಿ ನೆಲೆ ನಿಂತಿದ್ದಾಳೆ. ಸೂರಾಲು ದೇವಸ್ಥಾನಕ್ಕೆ ಸುಮಾರು ಶತಮಾನಗಳ ಇತಿಹಾಸವಿದೆ. ದೇಗುಲದ ಒಳಭಾಗದ ಶಿಲೆಗಳಲ್ಲಿ ಹಿಂದಿನ ಅನೇಕ ಲಿಪಿಗಳನ್ನು ಕಾಣಬಹುದು.

ಇಷ್ಟೇ ಅಲ್ಲದೆ ನಮ್ಮೂರಿಗೆ ಹೆಮ್ಮೆ ಎನ್ನುವಂತೆ ಅರಮನೆಯೂ ಸಹ ನಮ್ಮೂರಿನಲ್ಲಿದೆ. ಕರ್ನಾಟಕದಲ್ಲಿ ಇರುವ ಕೆಲವೇ ಕೆಲವು ಅರಮನೆಗಳ ಸಾಲಿನಲ್ಲಿ ನಮ್ಮೂರ ಅರಮನೆ ಸಹ ಸೇರಿರುವುದು ನಮ್ಮ ಹೆಮ್ಮೆ ಅಲ್ಲವೆ. ರಾಜರ ಒಡೆತನದಲ್ಲಿದ್ದ ಅರಮನೆಯನ್ನು ಈಗ ಒಡೆಯರ್ ಆಳುತ್ತಿದ್ದಾರೆ. ಆದರೆ ದುರಾದೃಷ್ಟ ಅರಮನೆ ಕೀಣಿಸುತ್ತಿದೆ. ಸರ್ಕಾರದ ನೆರವಿನಿಂದ ಅರಮನೆಯ ಜೀರ್ಣೋದ್ಧಾರ ಕೆಲಸ ಕೂಡ ಭರದಿಂದ ಸಾಗುತ್ತಿದೆ. ನನಗೂ ಒಂದು ಆಸೆ ಮೈಸೂರು ಅರಮನೆಯಂತೆ ನಮ್ಮ ಊರಿನ ಅರಮನೆಯೂ ಕೂಡ ಐತಿಹಾಸಿಕ ತಾಣವಾಗಬೇಕೆನ್ನುವುದು.

ಅನೇಕ ಸಿನಿಮಾ, ಧಾರಾವಾಹಿಗಳ ಚಿತ್ರೀಕರಣ ಸಹ ನಮ್ಮೂರಿನಲ್ಲಾಗಿದೆ. ಇನ್ನು ನಮ್ಮೂರಿನ ಜನರ ಬಗ್ಗೆ ಹೇಳುವುದಾದರೆ ಕುಂದಾಪುರ ಕನ್ನಡ ಭಾಷೆಯಲ್ಲಿ ನಿಮ್ಮನ್ನು ಸ್ವಾಗತಿಸುವ ಸಹೃದಯವಂತರು.

ನಾನು ಹೆಮ್ಮೆಯಿಂದ ಹೇಳಿಕೊಳ್ಳುವ ಇನ್ನೊಂದು ವಿಷಯ ನಮ್ಮೂರ ಶಾಲೆ. ಸುಮಾರು 100 ವರ್ಷಗಳ ಇತಿಹಾಸ. ನನ್ನ ವಿದ್ಯಾಭ್ಯಾಸ ಸಹ ಅದೇ ಶಾಲೆಯಲ್ಲಿ ಆರಂಭಗೊಂಡದ್ದು. ಆದ್ದರಿಂದ ಒಂದು ಸ್ವಲ್ಪ ಹೆಮ್ಮೆಯಿಂದ ಹೇಳುವಷ್ಟು ಖುಷಿ. ಅತ್ಯುತ್ತಮ ಶಿಕ್ಷಣ, ಬಿಸಿ ಊಟ ಇದ್ಯಾವುದಕ್ಕೂ ಕಡಿಮೆ ಇಲ್ಲ.

ಆದರೆ ನನ್ನ ಮಟ್ಟಿಗೆ ನನ್ನೂರು ಇನ್ನು ಸ್ವಲ್ಪ ಅಭಿವೃದ್ಧಿ ಕಾಣಬೇಕು. ಹಾಗಂತ ಸ್ವಂತಿಕೆ ಕಳೆದುಕೊಳ್ಳುವಷ್ಟಲ್ಲ.

ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವ ಗಾದೆ ಮಾತಿನಂತೆ ಇವಳು ತನ್ನ ಊರನ್ನ ಹೊಗಳಿಕೊಳ್ಳುತ್ತಿದ್ದಾಳೆ ಎಂದರೂ ಪರವಾಗಿಲ್ಲ. ನನಗೆ ನನ್ನ ಊರೇ ಸುಂದರ. ಇದು ನನ್ನ ಊರಿನ ಚಿಕ್ಕ ಪರಿಚಯ. ಇಷ್ಟೇ ಅಲ್ಲಿ ನನ್ನೂರ ಬಗ್ಗೆ ಕೇಳುವುದಕ್ಕೆ ಶುರುಮಾಡಿದರೆ ಅದೆಷ್ಟೂ ಪುಸ್ತಕ ಪ್ರಕಟಗೊಳ್ಳಬಹುದು.

ಮೈನಾಹಕ್ಕಿ

ಸ್ವಾತಿ ಗುರುಪ್ರಸಾದ್
ಪ್ರಥಮ ಬಿ.ಎಸ್ಸಿ.

ಕಂದುಮೈಬಣ್ಣ, ಕಣ್ಣಿನ ಸುತ್ತ ಹಾಗೂ ಕಾಲುಗಳು ಕಡು ಹಳದಿ ಬಣ್ಣದಿಂದ ಕಂಗೊಳಿಸುವ ಗೊರಂಖ ಹಕ್ಕಿಗೆ ಆಂಗ್ಲಭಾಷೆಯಲ್ಲಿ ಜಂಗಲ್ ಮೈನಾ ಎಂದೂ ಕರೆಯುತ್ತಾರೆ. ಇದರಲ್ಲಿ ಅನೇಕ ಪ್ರಭೇದಗಳಿದ್ದು, ಇತ್ತೀಚಿನ ವರ್ಷಗಳಲ್ಲಿ ಹಕ್ಕಿಯ ಸಂತತಿ ಗಣನೀಯವಾಗಿ ಕಡಿಮೆಯಾಗಿದೆ.

ಹುಳು ಹುಪ್ಪಟೆಗಳನ್ನು ಮಾತ್ರ ಭಕ್ಷಿಸುವ ಇದು ದನವನ್ನು ಮೇಯಲು ಬಿಟ್ಟರೆ ಸಾಕು ಗುಂಪಾಗಿ ಬಂದು ದನಗಳ ಮೇಲೆಯೇ ಕುಳಿತು ಉಣ್ಣೆಗಳನ್ನು ಹೆಕ್ಕಿ ತಿನ್ನುತ್ತದೆ. ಹಳ್ಳಿಯ ಕಡೆ ಕಾಣಸಿಗುತ್ತಿದ್ದ ಈ ಹಕ್ಕಿ ಕಳೆದ 5 ವರ್ಷಗಳಿಂದ ಕಣ್ಣಿಗೆ ಕಾಣುತ್ತಿಲ್ಲ.

ಸಾಮಾನ್ಯ ಮೈನಾ ಜಾತಿಗೆ ಸೇರಿದ ಗೊರಂಖ ಹೆಚ್ಚಾಗಿ ಕಾಡು ಅಥವಾ ಸಣ್ಣ ಕಾಡುಗಳ ಮಧ್ಯೆ ವಾಸ ಮಾಡುತ್ತದೆ. ಇದು ಗೂಡು ಕಟ್ಟುವುದಿಲ್ಲ. ಮರದ ಪೊಟರೆಯಲ್ಲಿ ಇದರ ವಾಸ. ಅಲ್ಲೇ ಸಂತಾನೋತ್ಪತ್ತಿ ಮಾಡುತ್ತದೆ. ಹುಳ, ಕ್ರಿಮಿಕೀಟಗಳೆ ಇದರ ಪ್ರಮುಖ ಆಹಾರವಾಗಿದೆ. ಒಂಟಿಯಾಗಿ ಕಾಣಿಸಿಕೊಳ್ಳದ ಇದು ಒಂದೋ ಜತೆ ಹಕ್ಕಿ ಅಥವಾ ಗುಂಪಾಗಿ ಕಾಣಿಸಿಗುತ್ತದೆ. ತನ್ನ ಆಹಾರವನ್ನು ಹುಡುಕಿಕೊಂಡು ಪಟ್ಟಣ ಪ್ರದೇಶಕ್ಕೆ ಬರುವ ಇವು ಹೆಚ್ಚಾಗಿ ದನಗಳ ಬಳಿಯೆ ಇರುತ್ತವೆ. ದನಗಳ ಮೇಲಿರುವ ಉಣ್ಣೆಯನ್ನು ಹೆಕ್ಕಿ ತಿನ್ನುವ ಈ ಹಕ್ಕಿ ದನದ ಸಗಣಿಯನ್ನು ತಿನ್ನುತ್ತದೆ ಎಂದು ಗೊತ್ತಿರುವ ಹಿರಿಯರು ಹೇಳುತ್ತಾರೆ.

ಕ್ರಿಮಿನಾಶಕದಿಂದ ಸಂತಾನ ನಾಶ:

ತೋಟ, ಗದ್ದೆಗಳಿಗೆ ಕ್ರಿಮಿನಾಶಕವನ್ನು ಸಿಂಪಡಣೆ ಮಾಡುವ ಕಾರಣ ಕ್ರಿಮಿಗಳು ಸತ್ತು ಹೋಗುತ್ತದೆ. ವಿಷ ಸಿಂಪಡಣೆ ಪರಿಣಾಮ ಸತ್ತಿರುವ ಕ್ರಿಮಿ ಕೀಟಗಳನ್ನು ತಿನ್ನುತ್ತಿದ್ದ ಗೊರಂಖ ಸಾಯದೇ ಇದ್ದರೂ ಕಾಲಕ್ರಮೇಣ ಅವುಗಳ ಸಂತತಿ ಉತ್ಪತ್ತಿಯಾಗದೆ ಅವುಗಳು ವಿನಾಶದ ಅಂಚಿಗೆ ತಲುಪಿದೆ. ಹಕ್ಕಿಗಳ ದೇಹದಲ್ಲಿ ವಿಷಕಾರಿ ಅಂಶಗಳು ಸೇರಿಕೊಂಡು ಸಂತಾನೋತ್ಪತ್ತಿ ಆಗುತ್ತಿಲ್ಲ ಎಂಬ ಅಭಿಪ್ರಾಯವಿದೆ. ಕಾಡಿನ ನಾಶದಿಂದ ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದ ಇವು ಬೇರೆ ಊರಿಗೆ ಪಲಾಯನ ಮಾಡಿರುವ ಸಾಧ್ಯತೆಯೂ ಇದೆ.

ನಂದನವನದ ಪಕ್ಷಿಗಳು

ಕೀರ್ತಿರಾಜ್ ಹೆಚ್.
ಮೊಗೇರ–ಪ್ರಥಮ ಬಿ.ಎಸ್ಸಿ.

ಸೌಂದರ್ಯಕ್ಕೆ ಇನ್ನೊಂದು ಹೆಸರು ನಂದನವನದ ಪಕ್ಷಿಗಳು. ಇತರ ಎಲ್ಲಾ ಪಕ್ಷಿಗಳಿಗಿಂತ ಸುಂದರ ಎಂಬ ಖ್ಯಾತಿ ಗಳಿಸಿದೆ. ಹೀಗಾಗಿ ಇವನ್ನು ಬರ್ಡ್ಸ್ ಆಫ್ ಪ್ಯಾರಡೈಸ್ ಎಂದು ಕರೆಯುತ್ತಾರೆ. ಇವು ಪ್ಯಾರಡೈಸ್ ಇಡೀ ಕುಟುಂಬಕ್ಕೆ ಸೇರಿದ ಪಕ್ಷಿಗಳಾಗಿವೆ. ಗಂಡು ಹಕ್ಕಿಗಳು ಬಣ್ಣ ಬಣ್ಣದ ಗರಿಗಳ ಜೋಡನೆ ಮತ್ತು ಪುಕ್ಕಗಳು, ಗುಚ್ಛಕ್ಕೆ ಹೆಸರುವಾಸಿ. ನಸುಗೆಂಪು, ಹಳದಿ, ಬಿಳಿ, ಹಸುರು ನೀಲಿ ಬಣ್ಣದ ಗರಿಗಳಿಂದ ಕಂಗೊಳಿಸುತ್ತವೆ. ಗಂಡು ಹಕ್ಕಿಯು ಬಾಲದಲ್ಲಿ ಪತಾಕೆಯಂತಹ ಉದ್ದನೆಯ ಜುಟ್ಟು ಇರುತ್ತವೆ. ಆದರೆ ಹೆಣ್ಣು ಹಕ್ಕಿಗಳ ತಲೆ ಬೋಳಾಗಿದ್ದು ಆಕರ್ಷಣೀಯವಲ್ಲದ ಬಣ್ಣ ಹೊಂದಿರುತ್ತವೆ. ಬರ್ಡ್ಸ್ ಆಫ್ ಪ್ಯಾರಡೈಸ್‌ಗಳಲ್ಲಿ ಹೆಣ್ಣಿಗಿಂತ ಗಂಡೇ ಸುಂದರ.

ಹೆಸರು ಬಂದಿದ್ದು ಹೇಗೆ?

16ನೇ ಶತಮಾನದಲ್ಲಿ ಈ ಪಕ್ಷಿಯನ್ನು ವಿಕ್ಟೋರಿಯಾ ಹಡಗಿನ ಮೂಲಕ ಯುರೋಪಿಗೆ ತರಲಾಯಿತು. ಈ ಹಕ್ಕಿಯು ಸೌಂದರ್ಯ ಮತ್ತು ಆಕರ್ಷಕ ಬಣ್ಣಕ್ಕೆ ಮರುಳಾದ ಅಲ್ಲಿನ ಜನರು ಈ ಹಕ್ಕಿಗೆ ಬರ್ಡ್ಸ್ ಆಫ್ ಪ್ಯಾರಡೈಸ್ ಎಂದು ಹೆಸರಿಟ್ಟರು.

ಮಳೆಕಾಡುಗಳಲ್ಲಿ ವಾಸ

ಪ್ಯಾರಡೈಸ್ ಸಮೂಹದಲ್ಲಿ ಸುಮಾರು 42 ಪ್ರಭೇದಗಳಿವೆ.

ನ್ಯೂಗಿನಿವೊಂದರಲ್ಲಿಯೇ 35 ಪ್ರಭೇದಗಳು, ಕಾಣಸಿಗುತ್ತವೆ. ಉಳಿದವು ಪೂರ್ವ ಇಂಡೋನೆಷ್ಯಾ, ಟೋರೆನ್ ಜಲಸಂಧಿಯ ದ್ವೀಪಗಳು, ಪಪುವಾ ನ್ಯೂಗಿಸಿ ಮತ್ತು ಆಸ್ಟ್ರೇಲಿಯಾದ ವಾಯುವ್ಯ ಭಾಗದಲ್ಲಿ ಕಂಡುಬರುತ್ತವೆ. ಇವು 15 ಸೆಂಟಿಮೀಟರ್‌ನಿಂದ ಒಂದು ಮೀಟರ್‌ವರೆಗೆ ಉದ್ದವಿರುತ್ತವೆ. ಉಷ್ಣವಲಯದ ಮಳೆಕಾಡು ಮತ್ತು ಮಲೆನಾಡಿನ ಗುಡ್ಡಬೆಟ್ಟಗಳಲ್ಲಿ ಮಾತ್ರ ಇವು ಕಾಣಸಿಗುತ್ತವೆ.

ಬಣ್ಣದ ಗರಿಗೆ ಭಾರೀ ಬೇಡಿಕೆ

ನ್ಯೂಗಿನಿ ನಿವಾಸಿಗಳ ಸಾಂಸ್ಕೃತಿಕ ಬದುಕಿನಲ್ಲಿಯೂ ಈ ಹಕ್ಕಿಗೆ ಮಹತ್ವದ ಸ್ಥಾನ ಕಲ್ಪಿಸಲಾಗಿದೆ. ಕಳೆದ 2000 ವರ್ಷಗಳಿಂದ ಪ್ಯಾರಡೈಸ್ ಹಕ್ಕಿಯ ಚರ್ಮ ಮತ್ತು ಗರಿಗಳ ಮಾರಾಟ ನಡೆಯುತ್ತದೆ.

ಹೆಣ್ಣನ್ನು ಆಕರ್ಷಿಸಲು ನೃತ್ಯ

ಬರ್ಡ್ಸ್ ಆಫ್ ಪ್ಯಾರಡೈಸ್ ಹೆಚ್ಚಾಗಿ ಒಬ್ಬೊಂಟಿಯಾಗಿಯೇ ಜೀವನ ಸಾಗಿಸುತ್ತದೆ. ಸಂತಾನೋತ್ಪತ್ತಿಯ ಸಮಯದಲ್ಲಿ ಮಾತ್ರ ಒಂದಾಗುತ್ತದೆ. ಗಂಡು ಹಕ್ಕಿ ತನ್ನ ಆಕರ್ಷಕ ಗರಿಗಳನ್ನು ಪ್ರದರ್ಶಿಸಿ ನೃತ್ಯ ಮಾಡುವ ಮೂಲಕ ಹೆಣ್ಣನ್ನು ಒಲಿಸಿಕೊಳುತ್ತದೆ.

ಅಳಿವಿನ ಅಂಚಿನಲ್ಲಿದೆ

ಬರ್ಡ್ಸ್ ಆಫ್ ಪ್ಯಾರಡೈಸ್‌ಗೆ ನೈಸರ್ಗಿಕವಾಗಿ ಹೆಚ್ಚಿನ ವೈರಿಗಳಿಲ್ಲ. ಆದರೆ, ಮಾನವರ ನಿರಂತರ ಬೇಟೆ ಮತ್ತು ಅರಣ್ಯ ನಾಶದಿಂದ ಇವು ಕಂಗೆಟ್ಟಿವೆ. ಅತ್ಯಾಕರ್ಷಕ ಗರಿಗಳಿಂದ ಕೂಡಿದ ನಂದನವನದ ಪಕ್ಷಿಗಳ ಹಲವು ಪ್ರಭೇದಗಳು ಇಂದು ಅಳಿವಿನ ಅಂಚಿನಲ್ಲಿವೆ.

ರಾಜಹಂಸ

ಆಶಿಕಾ
ಪ್ರಥಮ ಬಿ.ಎಸ್ಸಿ.

ರಾಜಹಂಸ ಬಹುಎತ್ತರದ ಈ ಪಕ್ಷಿಗಳು ನೋಡಲು ಅತ್ಯಾಕರ್ಷಕ. ಉದ್ದ ಕುತ್ತಿಗೆ ಹೊಂದಿದ್ದು, ಕುತ್ತಿಗೆಯನ್ನು ನೀರಿನ ಆಳಕ್ಕೆ ಹಾಕಿ ಮೀನನ್ನು ಹಿಡಿಯುವ ದೃಶ್ಯ ರಮಣೀಯ. ರೆಕ್ಕೆ ಬಿಚ್ಚಿದಾಗ ಗೋಚರಿಸುವ ಕೆಂಗುಲಾಬಿ ಬಣ್ಣಕ್ಕೆ ಮನಸೋಲದವರೇ ಇಲ್ಲ. ಒಮ್ಮೆಗೇ ಈ ಪಕ್ಷಿಗಳು ಹಿಂಡಿನಲ್ಲಿ ಗರಿ ಬಿಚ್ಚಿ ಹಾರಿದಾಗ ಕಾಣುವ ಗುಲಾಬಿ ವರ್ಣದ ಸೌಂದರ್ಯ ಬಣ್ಣಿಸಲಾಸಾಧ್ಯ.

ರಾಜಹಂಸವು ಉದ್ದವಾದ ಕುತ್ತಿಗೆಯನ್ನು, ಅಂಟಿಕೊಳ್ಳುವ ಕಾಲುಗಳು ಹಾಗೂ ಗುಲಾಬಿ ಅಥವಾ ಕೆಂಪು ಗರಿಗಳನ್ನು ಹೊಂದಿರುತ್ತವೆ. ರಾಜಹಂಸದ ಗುಲಾಬಿ ಅಥವಾ ಕೆಂಪು ಬಣ್ಣವು ಸಸ್ಯ ಪ್ಲಾಂಕ್ಟನ್ ಆಹಾರದಲ್ಲಿರುವ ಕ್ಯಾರೊಟಿ ನಾಯ್ಡ್‌ಗಳಿಂದ ಬರುತ್ತವೆ. ಅಮೇರಿಕಾದ ರಾಜಹಂಸವು ತಮ್ಮ ಆಹಾರದಲ್ಲಿರುವ ಬೀಟಾ ಕ್ಯಾರೋಟಿನ್ ಲಭ್ಯತೆಯಿಂದ ಪ್ರಕಾಶಮಾನವಾದ ಕೆಂಪು ಬಣ್ಣದ್ದಾಗಿರುತ್ತವೆ. ಕೆಲವು ಗುಲಾಬಿ ಬಣ್ಣದಲ್ಲಿ ಕಂಡು ಬರುತ್ತವೆ.

ಇವುಗಳು ಉಪ್ಪುನೀರಿನ ಸಿಗಡಿ, ನೀಲಿ ಹಸಿರು ಪಾಚಿಗಳು ಮತ್ತು ಲಾರ್ವಗಳು, ಸಣ್ಣ ಕೀಟಗಳು, ಮೃದ್ವಂಗಿಗಗಳು, ಕಂಟಕ ಚರ್ಮಿಗಳನ್ನು ತಿಂದು ಬದುಕುತ್ತವೆ. ಆಹಾರ ಪದಾರ್ಥಗಳ ಫಿಲ್ಟರಿಂಗ್ ಲ್ಯಾಮೆಲ್ಲ ಎಂಬ ಕೂದಲವುಳ್ಳ ರಚನೆಯು ಆಹಾರವನ್ನು ತಿನ್ನಲು ಸಹಕರಿಸುತ್ತದೆ.

ಗುಜರಾತ್‌ನಲ್ಲಿ ಗೋಚರಿಸುತ್ತಿದ್ದ ರಾಜಹಂಸ ಪಕ್ಷಿಗಳು ಇದೀಗ ಸ್ಥಳ ಬದಲಾಯಿಸಿ ಕೃಷ್ಣಾ ನದಿಯ ಹಿನ್ನೀರು ಪ್ರದೇಶವನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಂಡಿವೆ. ಮಳೆಗಾಲದಲ್ಲಿ ನೀರು ಹೆಚ್ಚಿದರೂ ರಾಜಹಂಸ ಪಕ್ಷಿಗಳ ಕಲರವ ಮಾತ್ರ ಅಲ್ಲಿ ಕೆಳಿಬರುತ್ತದೆ. ರಾಹಹಂಸವು ಇದೇ ಮೊದಲನೆ ಬಾರಿಗೆ ಜುಲೈನಲ್ಲೂ ಸಹ ಆಲಮಟ್ಟಿಯಲ್ಲಿ ಕಂಡುಬಂದಿತ್ತು. ರಾಜಹಂಸ ಪಕ್ಷಿಗಳು ನವೆಂಬರ್‌ನಿಂದ ಎಪ್ರಿಲ್‌ವರೆಗೂ ಮಾತ್ರ ಹಿನ್ನೀರಿನ ಹಳೆ ಆಲಮಟ್ಟಿ, ಚೀನಾಳ, ಚಿಮ್ಮಲಗಿ, ಕೋಲಾರ, ಬಾಗಲಕೋಟೆ ಬಳಿಯ ಹೆರಕಲ್ ಹತ್ತಿರ ಹೆಚ್ಚಾಗಿ ಕಾಣಸಿಗುತ್ತಿದ್ದವು. ಆದರೆ ಈ ಬಾರಿ ಆಲಮಟ್ಟಿ ಹಿನ್ನೀರಿನಿಂದ ಪಾರ್ವತಿ ಕಟ್ಟಾ ಸೇತುವೆಯ ಸಮೀಪ ಸಹ ರಾಜಹಂಸದ ಹಿಂಡು ಗೋಚರಿಸಿರುವುದು ಗಮನಾರ್ಹ.

ಕೊಕ್ಕರೆ

ಸ್ವಾತಿ
ಪ್ರಥಮ ಬಿ.ಎಸ್ಸಿ.

ಕೊಕ್ಕರೆಗಳು ಈ ನಮ್ಮ ಸುಂದರ ಪ್ರಕೃತಿಯ ಒಂದು ಭಾಗ. ಅವುಗಳು ನಮ್ಮಂತೆಯೇ ಭೂಮಿಯಲ್ಲಿ ಜೀವಿಸುತ್ತವೆ ಹಾಗೂ ಅವುಗಳನ್ನು ನೋಡುವುದು ತುಂಬಾ ಚೆನ್ನಾಗಿರುತ್ತದೆ. ಆದರೆ ಕಾಲದಲ್ಲಿ ಕೊಕ್ಕರೆಯಂತಹ ಕೆಲವು ಪಕ್ಷಿಗಳು ನೋಡಲು ಸ್ವಲ್ಪ ಕಡಿಮೆ ಸಿಗುತ್ತದೆ.

ಈ ಕೊಕ್ಕರೆಗೆ ಬೇರೆ ಬೇರೆ ಪ್ರದೇಶದಲ್ಲಿ ಬೆಳ್ಳಕ್ಕಿ ಎಂದೂ ಕರೆಯುತ್ತಾರೆ. ಇದು ಕಾಗೆಯಷ್ಟು ದೊಡ್ಡದಾದ ಆದರೆ ದೇಹದಷ್ಟೇ ಉದ್ದ ಕಾಲುಗಳೂ, ಕುತ್ತಿಗೆಯೂ ಇರುವ ನೀರು ಹಕ್ಕಿಯಾಗಿದೆ. ಇದು 350–550 ಗ್ರಾಂನಷ್ಟು ತೂಕ ಹೊಂದಿದೆ ಹಾಗೂ ಇದರ ಉದ್ದ ಸುಮರು 55–65 ಸೆ.ಮೀ ಇದ್ದು ರೆಕ್ಕೆ ಬಿಡಿಸಿದಾಗ 88–106 ಸೆ.ಮೀ. ಅಗಲ ಇರುತ್ತದೆ. ಇದು ಅಚ್ಚ ಬಿಳಿ ಬಣ್ಣದ ಪುಕ್ಕ. ಕಪ್ಪಗಿನ ಉದ್ದನೆಯ ಕಾಲು ಹಳದಿ ಬಣ್ಣದ ಪಾದ ಮತ್ತು ಕಪ್ಪು ನೀಳವಾದ ಕೊಕ್ಕು ಇದು ಈ ಹಕ್ಕಿಯ ದೈಹಿಕ ಲಕ್ಷಣವಾಗಿದೆ.

ಈ ಕೊಕ್ಕರೆಯ ಸಂತಾನೋತ್ಪತ್ತಿಯ ಕಾಲದಲ್ಲಿ, ಕತ್ತಿನ ಹಿಂಭಾಗ ಎರಡು ಉದ್ದನೆಯ ಪುಕ್ಕ ಹಾಗೂ ಎದೆ ಮತ್ತು ಬೆನ್ನಿನಲ್ಲಿ ಚಾಮರದಂತಹ ನವಿರಾದ ಪಾರದರ್ಶಕ ಪುಕ್ಕಗಳು ಕಾಣಿಸಿಕೊಳ್ಳುತ್ತದೆ. ಕಣ್ಣು ಮತ್ತು ಕೊಕ್ಕಿನ ಮಧ್ಯದ ಪುಕ್ಕವಿಲ್ಲದ ಚರ್ಮ ಭಾಗ ಕೆಂಪು ಅಥವಾ ನೀಲಿ ಬಣ್ಣ ತಳಿಯುತ್ತದೆ. ಮರಿ ಹಕ್ಕಿಗಳು ಸಾಮಾನ್ಯವಾಗಿ ವಯಸ್ಕ ಹಕ್ಕಿಗಳಂತೆಯೇ ಇರುತ್ತದೆ.

ಕೊಕ್ಕರೆಗಳು ಶಾಂತ ಸ್ವಭಾವದ ಹಕ್ಕಿಗಳಾದರೂ ಗೊಂದಲಗೊಂಡಾಗ ತಮ್ಮ ಹಿಂಡಿನಲ್ಲಿ ಕರ್ಕಶವಾಗಿ ಗದ್ದಲವೆಬ್ಬಿಸುತ್ತದೆ.

ಈ ಹಕ್ಕಿಯು ಯುರೋಪ್, ಏಷಿಯಾ, ಆಸ್ಟ್ರೇಲಿಯಾದ ಉಷ್ಣವಲಯದ ಒಳನಾಡಿನ ಹಾಗೂ ಕರಾವಳಿಯ ಜವುಗು ಪ್ರದೇಶ ಇವುಗಳ ಬೀಡು ಯುರೋಪಿನಲ್ಲಿ ನೆಲೆ ಬಿಟ್ಟಿರುವ ಕೊಕ್ಕರೆಗಳು ಚಳಿಗಾಲದಲ್ಲಿ ಆಫ್ರಿಕಾ ಅಥವಾ ಪಶ್ಚಿಮ ಏಷಿಯಾದ ಖಂಡಗಳಿಗೆ ವಲಸೆ ಹೋಗುತ್ತದೆ. ಮರಿ ಮಾಡಿದ ಕಾಲದ ನಂತರ ಉತ್ತರದೆಡೆಗೆ ಪ್ರಯಾಣ ಬೆಳೆಸುವುದು ಇವುಗಳ ಹರವು ಹೆಚ್ಚಲು ಕಾರಣ.

ಇತ್ತೀಚೆನ ದಿನಗಳಲ್ಲಿ ಕೊಕ್ಕರೆಯು ನಾವಿರುವಂತಹ ರೀತಿಯ ಮಲೆನಾಡಿನ ಪ್ರದೇಶವನ್ನು ಬಿಟ್ಟು ಬೇರೆ ಹೊಸ ಪ್ರಪಂಚದವರೆಗೂ ತನ್ನ ವ್ಯಾಪ್ತಿ ವಿಸ್ತರಿಸಿದೆ. ಇವರ ಬಗ್ಗೆ ಸಿಗುವ ಮೊದಲ ದಾಖಲೆ ಎಪ್ರಿಲ್ 1954ರಲ್ಲಿ Barbados ನಲ್ಲಿ ಕಾಣಿಸಿದ್ದು, ಅಲ್ಲಿಯ ದ್ವೀಪಗಳಲ್ಲಿ 1994ರಿಂದ ಮರಿ ಮಾಡಲು ಆರಂಭಿಸಿದೆ. ದಕ್ಷಿಣದಲ್ಲಿ Surinam ಮತ್ತು Brazil ನಿಂದ ಹಿಡಿದು ಉತ್ತರದ Newfinland ಮತ್ತು Quebec ವರೆಗೂ ಇವುಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬರುತ್ತಿವೆ. ಉತ್ತರ ಅಮೇರಿಕದ ಪೂರ್ವ ಕರಾವಳಿಯಿಂದ ಉತ್ತರದೆಡೆಗೆ ತನ್ನ ಪ್ರಯಾಣವನ್ನು ಬೆಳೆಸಿಕೊಂಡಿರುತ್ತದೆ.

ಮರದ ಕೊಂಬೆ, ಪೊದೆಗಳಲ್ಲಿ ಕಸಕಡ್ಡಿಗಳಿಂದ ಗೂಡು ಕಟ್ಟಿಕೊಳ್ಳುವ ಕೊಕ್ಕರೆಗಳು ಇತರ ಉದ್ದ ಕಾಲಿನ ನೀರು ಹಕ್ಕಿಗಳ ಜೊತೆ ಗುಂಪುಗುಂಪಾಗಿ ನೆಲೆಸುತ್ತವೆ. Capa Verdo ದ್ವೀಪಗಳಂತಹ ಪ್ರದೇಶಗಳಲ್ಲಿ ಕೋಡುಗಲ್ಲಿನ ಇಳಿಜಾರು ಭಾಗಗಳಲ್ಲಿ ಗೂಡು ಕಟ್ಟಿಕೊಳ್ಳುತ್ತದೆ. ಗೂಡಿನ ಸುತ್ತಲಿನ 3–4 ಮೀಟರ್ ವ್ಯಾಪ್ತಿ ಪ್ರದೇಶವನ್ನು ಗಡಿಯಾಗಿ ಪರಿಗಣಿಸಿ ಶತ್ರುಗಳಿಂದ ರಕ್ಷಿಸಿಕೊಳ್ಳುತ್ತದೆ. ಹೆಣ್ಣು ಕೊಕ್ಕರೆ ಒಮ್ಮೆ 3–5 ಮೊಟ್ಟೆ ಇಟ್ಟು, 21–25 ದಿನಗಳವರೆಗೆ ಕಾವುಕೊಟ್ಟು ಮರಿ ಮಾಡುತ್ತದೆ. ವಿಶೇಷವಾಗಿ ಹೇಳಬೇಕೆಂದರೆ ಇದರ ಮೊಟ್ಟೆಯು ನೋಡಲು ಸುಂದರವಾಗಿರುವುದು ಹಾಗೂ ಇದು ಮಂದವಾದ ಹಸಿರು ನೀಲಿ ಬಣ್ಣದಿಂದ ಕೂಡಿರುತ್ತದೆ.

ಈ ಕೊಕ್ಕರೆಯು ತನ್ನ ಆಹಾರಕ್ಕಾಗಿ ನಾಲೆಯ ಬದುಗಳಲ್ಲಿ,

ಕೆಸರುಗದ್ದೆಗಳಲ್ಲಿ, ಕೆರೆಗಳ ತೆಳು ನೀರಿನಲ್ಲಿ ಹಾಗೂ ಕೆಲವು ಉಳುಮೆ ಮಾಡುವ ಕೃಷಿ ಭೂಮಿಗಳಲ್ಲಿ ಕಪ್ಪೆ, ಏಡಿ, ಮೀನುಗಳು, ಸೀಗಡಿ, ಕೆಲವು ಹುಳು ಹಿಡಿದು ಇವುಗಳನ್ನು ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತದೆ.

ಒಂದು ಕಾಲದಲ್ಲಿ ಯುರೋಪಿನ ಶ್ರೀಮಂತರು ಕೊಕ್ಕರೆಯ ಪುಕ್ಕಗಳನ್ನು ಟೋಪಿಗಳಿಗೆ ಅಲಂಕಾರವಾಗಿ ಸಿಕ್ಕಿಸಿಕೊಳ್ಳುತ್ತಿದ್ದರು. ಹೀಗೆ ದೊಡ್ಡ ಪ್ರಮಾಣದಲ್ಲಿ ಅದರ ಪುಕ್ಕಗಳನ್ನು ಟೋಪಿಗಳಿಗೆ ಬಳಸುತ್ತಿದ್ದರಿಂದ ಅವರ ಹತ್ಯೆ ಹೆಚ್ಚಿನ ಪ್ರಮಾಣದಲ್ಲಿ ಆಯಿತು. ಇದು ಬ್ರಿಟನ್ನಿನಲ್ಲಿ ಈ ಹಕ್ಕಿಗಳ ಸಂರಕ್ಷಣೆಗೆಂದೇ Royal Society for the protection of Birds ಸಂಸ್ಥೆಯ ಉಗಮಕ್ಕೆ ಪ್ರಚೋದನೆಯನ್ನು ನೀಡಿತು. ನಾವು ಕೊಕ್ಕರೆಯಂತಹ ಕೆಲವು ಹಕ್ಕಿಗಳನ್ನು ಸಂರಕ್ಷಿಸಬೇಕು. ಅವುಗಳನ್ನು ನಾವು ಅಳಿವಿನಂಚಿನಿಂದ ಕಾಪಾಡಬೇಕು.

ಗುಬ್ಬಚ್ಚಿ

ನಿಶಾ ನಾಯ್ಕ
ಪ್ರಥಮ ಬಿ.ಎಸ್ಸಿ.

ಗುಬ್ಬಚ್ಚಿ ಎಲ್ಲೆಲ್ಲೂ ಕಣ್ಣಿಗೆ ಬೀಳುವ ಒಂದು ಹಕ್ಕಿ. ಇದು ಜನರ ಮಧ್ಯೆ ವಾಸಿಸಬಯಸುತ್ತದೆ. ಗುಬ್ಬಚ್ಚಿಗಳು ಯಾವಾಗಲು ಜೋಡಿಯಾಗಿರುತ್ತದೆ. ಇತರ ಪಕ್ಷಿಗಳಿಗಿಂತ ಗುಬ್ಬಿ ನಮಗೆ ಹೆಚ್ಚು ಪರಿಚಿತ.

ಗುಬ್ಬಚ್ಚಿಯು ಧಾನ್ಯಗಳನ್ನು, ಹುಳು ಹುಪ್ಪಟೆ ಮತ್ತು ಗಿಡದ ಎಳೆ ಕುಡಿಗಳನ್ನು ತಿನ್ನುತ್ತದೆ. ಬೇಯಿಸಿದ ಆಹಾರ ಸಹ ಅದಕ್ಕೆ ತುಂಬ ಇಷ್ಟ. ಗುಬ್ಬಿ ಕಿಟಕಿಯ ಅಡಿಭಾಗ, ಬಾಗಿಲಿನ ಮೇಲ್ಬಾಗ, ಆಲ್ಮಿರಾ, ಮನೆಯ ಮೂಲೆಗಳು ಹೀಗೆ ಎಲ್ಲಿ ಜಾಗ ಸಿಕ್ಕರೆ ಅಲ್ಲಿ ಗೂಡು ಕಟ್ಟುತ್ತದೆ. ಗೋಡೆಗಳಲ್ಲಿರುವ ರಂಧ್ರಗಳು, ಮಾಡುಗಳಲ್ಲಿ ಗುಬ್ಬಿ ಗೂಡು ಕಟ್ಟಿಕೊಳ್ಳುತ್ತದೆ. ತಾಯಿ ಗುಬ್ಬಿ ನಸು ಹಸಿರು ಮಿಶ್ರಿತ ಬಿಳಿ ಬಣ್ಣದ ಮೂರು ಅಥವ ನಾಲ್ಕು ಮೊಟ್ಟೆಗಳನ್ನು ಇಡುತ್ತದೆ. ಗುಬ್ಬಚ್ಚಿ ಒಂದು ವರುಷದಲ್ಲಿ ಅನೇಕ ಬಾರಿ ಮೊಟ್ಟೆಗಳನ್ನು ಇಟ್ಟು, ತನ್ನ ಸಂತಾನವನ್ನು ಬೆಳೆಸಿಕೊಳ್ಳುತ್ತದೆ.

ಕಾಂಕ್ರೀಟ್ ಕಾಡು, ಸೇತುವೆಗಳು, ಮೆಟ್ರೊ, ವಾಣಿಜ್ಯ ಸಂಕೀರ್ಣ, ಗೂಡು ಕಟ್ಟಲು ಜಾಗವಿಲ್ಲದ ಗಗನ ಚುಂಬಿ ಕಟ್ಟಡ ಎಂದು ಅಭಿವೃದ್ಧಿಯತ್ತ ಸಾಗುತ್ತಿರುವ ನಾವು ಕಾಗೆ, ಗುಬ್ಬಚ್ಚಿಗಳ ಆವಾಸಸ್ಥಾನವಾಗಿದ್ದ ಗಿಡಗಳನ್ನು ಕಡಿಯುತ್ತಿದ್ದೇವೆ. ಗೂಡು ಕಟ್ಟಲು ಪಕ್ಷಿಗಳಿಗೆ ಸ್ಥಳವಿಲ್ಲ. ಬೆಚ್ಚನೆಯ ಗೂಡಿಗೆ ನೆರವಾಗುತ್ತಿದ್ದ ಹಂಚಿನ ಮನೆ, ಅಟ್ಟ, ಫೋಟೋ ಹಿಂಬದಿ, ಗಿಡಗಳು ಹಾಗೂ ಸಾಂಪ್ರದಾಯಿಕ ಮನೆಗಳು ಇಲ್ಲವಾಗಿ ಆಹಾರ ನಿವಾಸ ಎರಡೂ ಕ್ಷೀಣವಾಗಿ ಗುಬ್ಬಿ ಸಂತತಿ ನಶಿಸುತ್ತಿದೆ. ಈ ನಾಶ ಪ್ರಾಣಿ, ಪಕ್ಷಿ ಸಂಕುಲಕ್ಕೇ ಅಲ್ಲ ನಮಗೂ ಅಪಾಯಕಾರಿ.

"ಮಗುವಾಗಿ ಬೊಂಬೆಗೆಂದತ್ತು
ಪಿರಿಯರ ಕಾಡಿ
ಜಗದುಣಿಸುಗಳನುಂಡು
ಬೆಳೆದವಂತಾನೆ
ಮಗುಗಳನು ಬೆಳೆಸುತ್ತ
ಮನೆಯನಾಳುವವೋಲು
ಜಗನಾಳ್ವನು ಜಾಣ – ಮಂಕುತಿಮ್ಮ

– ಡಿ.ವಿ.ಜಿ

ಚಿಂವ್ ಚಿಂವ್ ಗುಬ್ಬಚ್ಚಿ ಕಣ್ಣಿಗೆಕೋ ಕಾಣದಮ್ಮ

ಶ್ರೇಯಾ
ಪ್ರಥಮ ಬಿ.ಎಸ್ಸಿ.

ಒಂದು ಕಾಲದಲ್ಲಿ ಬಹುತೇಕ ಹಳ್ಳಿ ಮನೆಗಳಲ್ಲಿ ಬೆಳಗ್ಗಿನ ಅಲಾರ್ಮ್ ಎಂದರೆ ಗುಬ್ಬಚ್ಚಿಗಳ ಚಿಲಿಪಿಲಿಯೇ ಸಂಗ್ರಹಿಸಿಟ್ಟ ಭತ್ತದ ಒಣಹುಲ್ಲುಗಳ ತೆನೆಯಲ್ಲಿ ಅಲ್ಲಲ್ಲಿ ಸಿಗುವ ಭತ್ತಗಳನ್ನು ಹುಡುಕುತ್ತ ಸಂಸಾರ ಸಮೇತ ಸುಪ್ರಭಾತ ಹಾಡುವುದು ಗುಬ್ಬಚ್ಚಿಗಳ ದಿನಚರಿಯ ಮೊದಲ ಕೆಲಸ. ಹೆಣ್ಣು ಗುಬ್ಬಿಯ ಗರ್ಭದಲ್ಲಿ ಪುಟ್ಟದೊಂದು ಗುಬ್ಬಚ್ಚಿ ಮೊಳೆಯುತ್ತಿದೆ ಎಂದು ತಿಳಿಯುತ್ತಿದ್ದಂತೆಯೇ ಅವುಗಳ ತಯಾರಿ ಶುರು. ಗಂಡು ಗುಬ್ಬಿಗಂತೂ ಆಗ ಎಲ್ಲಿಲ್ಲದ ಕೆಲಸ: ಒಂದೊಂದೆ ಹುಲ್ಲುಕಡ್ಡಿಗಳನ್ನು ಆರಿಸಿ ತಂದು ಗೂಡನ್ನು ಜೋಪಾನ ಮಾಡುವುದೇನು...ಕಾಳುಕಡ್ಡಿ ಸಂಗ್ರಹಿಸುವುದೇನು. ಆ ಸಂಭ್ರಮ ಅವಕ್ಕೆ ಗೊತ್ತು ಮೊಟ್ಟೆಗೆ ಸರದಿಯಂತೆ ಕಾವು ಕೊಡುವ ಜೋಡಿ! ಮನೆಯೊಡತಿ ಅಕ್ಕರೆಯಿಂದ ಹಾಕಿದ ಅಕ್ಕಿ ಕಾಳುಗಳನ್ನೆಲ್ಲ ತನ್ನ ಪುಟ್ಟ ಕೊಕ್ಕಲ್ಲಿ ಆರಿಸಿಕೊಂಡು ಗೂಡಲ್ಲಿ ರಚ್ಚೆ ಹಿಡಿದ ಮರಿಗಳ ಬಾಯಿಗೆ ಗುಟುಕಿಡುವ ಪರಿ. ಆಹಾ ಅದನ್ನು ನೋಡಿಯೇ ಆನಂದಿಸಬೇಕು. ಆದರೆ ಆ ಮಧುರ ಕ್ಷಣಗಳು ಇನ್ನು ಮರೀಚಿಕೆ ಮಾತ್ರವಾ...? ಮನುಷ್ಯನ ಸಹವಾಸದಲ್ಲೇ ಬದುಕುತ್ತಿದ್ದ ಮನೆಗುಬ್ಬಿಗಳು ಈ ಮನುಷ್ಯರ ಸಹವಾಸವೇ ಸಾಕು ಎಂದು ಹಳ್ಳಿಮನೆ ಬಿಟ್ಟು ಪಟ್ಟಣ ಸೇರಿದ್ದಾವಾ? ಹಾಗೇನೂ ಇಲ್ಲ ಎಂದಾದರೆ ಇದ್ದ ಗುಬ್ಬಿಗಳೆಲ್ಲ ಎಲ್ಲಿ ಹೋದವು? ಅಳಿವಿನಂಚಿಗೆ ಸರಿಯುತ್ತಿರುವ ಮನೆಗುಬ್ಬಿಗಳನ್ನು ರಕ್ಷಿಸಿ ಎಂದು ಕೂಗಿ ಹೇಳುವುದಕ್ಕಾಗಿ ಇಂದು ವಿಶ್ವ ಮನೆಗುಬ್ಬಿಗಳ ಅಂದರೆ ದಿನವನ್ನು ಮಾ. 20ರಂದು ಗುಬ್ಬಿಗಳ ಸಂತತಿಯನ್ನು ರಕ್ಷಿಸುವುದಕ್ಕೆ ಪಣತೊಡಲಾಗಿದೆ. ಆದರೆ ಇತ್ತೀಚೆಗೆ ಹಳ್ಳಿ ಮನೆಗಳು ಥಾರಸಿಯಾಗಿ ಬದಲಾಗಿದ್ದು, ಮೊಬೈಲ್ ತರಂಗಗಳು ಗುಬ್ಬಚ್ಚಿಯ ಜೀವಕ್ಕೆ ಸಂಚಕಾರ ಎಂಬ ಆತಂಕ ಮುಂತಾದವೆಲ್ಲ ಸೇರಿ ಮುದ್ದು ಗುಬ್ಬಚ್ಚಿಗಳು ಕಣ್ಣಿಗೆ ಕಾಣದಂತೆ ಮಾಯವಾಗಿವೆ.

ಲೀಫ್ ಬರ್ಡ್

ನವ್ಯ
ಪ್ರಥಮ ಬಿ.ಎಸ್ಸಿ.

ಲೀಫ್ ಬರ್ಡ್ಸ್ ಗಾತ್ರವು 14ರಿಂದ 21 ಸೆಂ.ಮೀ. (5.5–8.3 ಇಂಚು ಮತ್ತು 15ರಿಂದ 48ಗ್ರಾಂ (0.53–1.69ಔನ್ಸ್) ತೂಕದಿಂದ ಇರುತ್ತದೆ. ಅದು ಬುಲ್ಬುಲ್ಗಳನ್ನು ಹೋಲುತ್ತದೆ. ಆದರೆ ಆ ಗುಂಪಿನ ಬಣ್ಣವು ದ್ರಾಕ್ಷಿ ಬಣ್ಣದಲ್ಲಿರುತ್ತದೆ. ಆದರೆ ಲೀಫ್ ಬರ್ಡ್ಸ್ ಪ್ರಕಾಶಮಾನವಾಗಿ ಸುತ್ತುವರಿಯಲ್ಪಟ್ಟಿರುತ್ತವೆ. ದೇಹದ ಮೇಲೆ ಪ್ರಧಾನ ಹಸಿರು ತಮ್ಮ ಸಾಮಾನ್ಯ ಹೆಸರನ್ನು ಹೆಚ್ಚಿಸುತ್ತದೆ. ಮಾನವನ ಕಿವಿಗೆ, ಅದರ ಹಾಡುಗಳು ಮಧುರವಾಗಿವೆ ಮತ್ತು ಅವುಗಳ ಹಲವಾರು ಜಾತಿಗಳು ಉತ್ತಮ ಅನುಕರಣೆಗಳಾಗಿವೆ. ಈ ಕರೆಗಳಲ್ಲಿ ಸೀಟಿಗಳು ಮತ್ತು ಚಟ್ಟರ್ಗಳು ಸೆರಿವೆ. ಬುಲ್ಬುಲ್ಗಳಂತೆಯೆ, ಎಲೆಫರ್ಡ್ಗಳು ನಿರ್ವಹಿಸಿದಾಗ ಅನೇಕ ದೇಹದ ಗರಿಗಳನ್ನು ಬಿಡುತ್ತವೆ. ಇದು ಪರಭಕ್ಷಕಗಳನ್ನು, ವಿಶೇವಾಗಿ ಹಾವುಗಳನ್ನು ಗೊಂದಲಗೊಳಿಸಬಹುದು.

ಲೀಫ್ ಬರ್ಡ್ಸ್ ಯಾವಾಗಲೂ ಮರಗಳು ಮತ್ತು ಪೊದೆಗಳಲ್ಲಿ ಕಂಡುಬರುತ್ತವೆ. ಸುವರ್ಣ–ಮುಂಭಾಗದ ಲೀಪ್ಬರ್ಡ್ ಮತ್ತು ಜೆರ್ಡಾನ್ನ ಲೀಫ್ ಬರ್ಡ್ ಹೊರತುಪಡಿಸಿ ಅತ್ಯಂತ ಹರಿದ್ವರ್ಣ ಕಾಡುಗಳಿಗೆ ಸೀಮಿತವಾದ ಮಳೆಕಾಡು ಕಾಡುಗಳಲ್ಲಿ ವಾಸಿಸುತ್ತವೆ, ಮತ್ತು ಕಿತ್ತಳೆ–ಹೊಟ್ಟೆಯ ಎಲೆಗಳ ಹಕ್ಕಿಗಳಲ್ಲಿ ಎಲೆಯುದುರುವ ಕಾಡುಗಳಲ್ಲಿ ಕಂಡುಬರುತ್ತವೆ. ಅವು ಭಾರತೀಯ ಉಪಖಂಡ ಮತ್ತು ಆಗ್ನೇಯ ಏಷ್ಯಾದಲ್ಲಿ ಎಲ್ಲಾ ವಿಶಾಲವಾದ ಅರಣ್ಯ ಪ್ರದೇಶಗಳನ್ನು ಆಕ್ರಮಿಸುತ್ತದೆ.

ಲೀಫ್ಬರ್ಡ್ಸ್ ಸಾಮಾನ್ಯವಾಗಿ ಕೀಟಗಳನ್ನು ಮತ್ತು ಕೆಲವು ಹಣ್ಣು ಮತ್ತು ಮಕರಂದಗಳನ್ನು ತಿನ್ನುತ್ತವೆ. ಕೊಂಬೆಯ ಉದ್ದಕ್ಕೂ ಚಲಿಸುವ ಮೂಲಕ ಬೇಟೆಯನ್ನು ಹುಡುಕಲಾಗುತ್ತದೆ ಮತ್ತು ಕೊಯ್ದು ಹಾಕಲಾಗುತ್ತದೆ. ಅವು ಬೇಟೆಯನ್ನು ಪಡೆದುಕೊಳ್ಳಲು ಹೂವರ್–ಗ್ಲೀನಿಂಗ್ಸ್ ಸಹ ಸಹಕಾರಿ ಮತ್ತು ಕಾಡಿನ ತಳದವರೆಗೂ ಮುಂದುವರಿಯುತ್ತವೆ.

ದಾಂಡೇಲಿಯ ಹಾರ್ನ್‌ಬಿಲ್

ಪವಿತ್ರ ರಾವ್
ಪ್ರಥಮ ಬಿ.ಎಸ್ಸಿ.

ಜಗತ್ತಿನಾದ್ಯಂತ ಸುಮಾರು 96 ಜಾತಿಯ ಹಾಗೂ ಭಾರತದಲ್ಲಿ 9 ಜಾತಿಯ ಹಾರ್ನ್‌ಬಿಲ್‌ಗಳು ಇವೆ. ದಾಂಡೇಲಿಯಲ್ಲಿ 4 ಪ್ರಭೇದದ ಹಾರ್ನ್‌ಬಿಲ್‌ಗಳನ್ನು ನೋಡಬಹುದು. ಮಲಬಾರ್ ಪೈಡ್ ಹಾರ್ನ್‌ಬಿಲ್ ದಾಂಡೇಲಿಯಲ್ಲಿ ವಿಫುಲವಾಗಿ ಕಾಣಸಿಗುತ್ತದೆ. ಮಾರ್ಚ್ 1984ರಲ್ಲಿ 58 ಪಕ್ಷಿಗಳ ಹಿಂಡೊಂದನ್ನು ದಾಖಲಿಸಲಾಗಿತ್ತು. ಫೆಬ್ರವರಿ 2007ರಲ್ಲಿ 82 ಪಕ್ಷಿಗಳ ಹಿಂಡು ಕಾಣಲ್ಪಟ್ಟಿದೆ. ಆದುದರಿಂದ ದಾಂಡೇಲಿಯು ಹಾರ್ನ್‌ಬಿಲ್ ಪಕ್ಷಿಗಳ ನಂದನವನ ಎಂದು ಹೇಳಬಹುದು. ಗ್ರೇಟ್ ಹಾರ್ನ್‌ಬಿಲ್ ದೀರ್ಘಕಾಲದವರೆಗೆ ಜೀವಿಸುವ ಪಕ್ಷಿಯಾಗಿದ್ದು, ಸೆರೆಯಲ್ಲಿ (ಪಂಜರದಲ್ಲಿ) 50 ವರ್ಷಗಳವರೆಗೆ ಬದುಕುಳಿಯುತ್ತದೆ. ಎತ್ತರ ಪ್ರದೇಶಗಳಲ್ಲಿರುವ ಅನೇಕ ವರ್ಷಗಳಿಂದ ದಟ್ಟವಾಗಿ ಬೆಳೆದ ಅರಣ್ಯಗಳು ಇವುಗಳ ಅವಾಸಸ್ಥಾನವಾಗಿವೆ. ಇವು ಅನೇಕ ಚಿಕ್ಕ ಹಾರ್ನ್‌ಬಿಲ್‌ಗಳಂತಿರದೆ, ಕಾಡಿನ ವಿಸ್ತಾರವಾದ ಹರವಿಗೆ ಅವಲಂಬಿಸಿರುವಂತೆ ಕಂಡುಬರುತ್ತದೆ.

ಹಾರ್ನ್‌ಬಿಲ್ ಪಕ್ಷಿಗಳು ಸಾಮಾನ್ಯವಾಗಿ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ದೊಡ್ಡ ಮರಗಳ ಪೊಟರೆಗಳಲ್ಲಿ ಮರಿ ಮಾಡುವವು. ಗೂಡು ಕಟ್ಟುವ ಪರಿ ಇನ್ನೂ ವಿಚಿತ್ರ. ಮೊಟ್ಟೆಯನ್ನಿಡುವ ಸಮಯ ಬಂದಾಗ, ಹೆಣ್ಣು ಹಕ್ಕಿಯನ್ನು ಒಂದು ಮರದ ಪೊಟರೆಯಲ್ಲಿ ಕುಳ್ಳರಿಸಿ, ಗಂಡು ಹಕ್ಕಿಯು ಮಣ್ಣು ಹಿಕ್ಕೆ ಮತ್ತು ಜೊಲ್ಲನ್ನು ಮಿಶ್ರಣ ಮಾಡಿ ಹೆಣ್ಣು ಹಕ್ಕಿಯು ಕೊಕ್ಕು ಮಾತ್ರವೇ ಹೊರಬರುವಷ್ಟು ಜಾಗವನ್ನು ಬಿಟ್ಟು ಪೊಟರೆಯ ಉಳಿದ ಭಾಗವನ್ನು ಮುಚ್ಚಿ, ಅಲ್ಲಿಂದ ಮೊಟ್ಟೆಯೊಡೆದು, ಮರಿಗಳು ದೊಡ್ಡದಾಗುವವರೆಗೂ, ಇಡೀ ಸಂಸಾರಕ್ಕೆ ಆಹಾರ ಒದಗಿಸುವ ಭಾರವನ್ನು ತಾನೇ ಹೊರುತ್ತದೆ. ಈ ಸಮಯದಲ್ಲಿ ಹಕ್ಕಿಗೆ ಅಪಾಯ ಸಂಭವಿದರೆ, ಸಂತಾನಾಭಿವೃದ್ಧಿ ಕಾಲದಲ್ಲಿ ಅವು ಹೆಚ್ಚಾಗಿ ಶಬ್ದ ಮಾಡುತ್ತವೆ. ಅವುಗಳು ದೊಡ್ಡ ದನಿಯಲ್ಲಿ ಹಾಡುತ್ತವೆ. ಈ ಕರೆಗಳು ಸೆಕೆಂಡಿಗೊಂದು ಬಾರಿ ಗಂಡು ಪಕ್ಷಿ ಕಾಕ್ ಎಂದು ದೊಡ್ಡ ದನಿಯಲ್ಲಿ ಕೂಗುವುದರೊಂದಿಗೆ ಪ್ರಾರಂಭವಾಗುತ್ತದೆ.

ಆವಾಸ ಸ್ಥಾನದ ಕೊರತೆಯಿಂದಾಗಿ ಮತ್ತು ಕೆಲವು ಪ್ರದೇಶಗಳಲ್ಲಿ ಇವುಗಳನ್ನು ಬೇಟೆಯಾಡುವುದರಿಂದಾಗಿ ಗ್ರೇಟ್ ಹಾರ್ನ್‌ಬಿಲ್‌ಗಳನ್ನು ಅಪಾಯದ ಅಂಚಿನಲ್ಲಿರುವ ಪಕ್ಷಿಜಾತಿಗಳ IUCN ಕೆಂಪು ಪಟ್ಟಿಗೆ ಸೇರಿಸಿದ್ದು, ಹತ್ತಿರದ ಭವಿಷ್ಯದಲ್ಲಿ ಅಳಿದುಹೋಗುವ ಅಪಾಯದಲ್ಲಿದೆ ಎಂದು ನಿರ್ಣಯಿಸಲಾಗಿದೆ. ವಿಶ್ರಮಿಸುವ ಸ್ಥಳಗಳನ್ನು ನಿಯಮಿತವಾಗಿ ಬಳಸಲಾಗುತ್ತದೆ. ವಿಶ್ರಮಿಸುವಾಗ ಅವುಗಳ ಕುತ್ತಿಗೆಯನ್ನು ಹಿಂದಕ್ಕೆ ಎಳೆದುಕೊಂಡು, ಕೊಕ್ಕನ್ನು ಮೇಲಕ್ಕೆ ಕೋನಾಕೃತಿಯಲ್ಲಿ ಚಾಚುತ್ತವೆ. ಸ್ವಲ್ಪ ಎಲೆಗಳಿರುವಂತಹ ಅತ್ಯಂತ ಎತ್ತರದಲ್ಲಿರುವ ಕೊಂಬೆಯನ್ನು ಪಕ್ಷಿಗಳು ಆಯ್ದುಕೊಳ್ಳುತ್ತವೆ. ಅವು ಕೊಂಬೆಗಳಲ್ಲಿ ನೆಗೆಯುತ್ತಾ ಮುಂದೆ ಸಾಗಿ ಕೀಟಗಳು, ಗೂಡಿನಲ್ಲಿರುವ ಮರಿಹಕ್ಕಿಗಳು, ಸಣ್ಣ ಹಲ್ಲಿಗಳನ್ನು ಹುಡುಕುತ್ತಾ, ತೊಗಟೆಗಳನ್ನು ಹರಿದು ಪರೀಕ್ಷಿಸುತ್ತವೆ. ಇವುಗಳನ್ನು ಪಶ್ಚಿಮಘಟ್ಟದಲ್ಲಿ ಬೇಟೆ ಹಕ್ಕಿಗಳೆಂದು ಪರಿಗಣಿಸಲಾಗಿದೆ. ಈ ಹಕ್ಕಿಗಳು ವಿನಾಶದಂಚಿನಲ್ಲಿವೆ, ಎತ್ತರದ ದಟ್ಟ ಕಾಡಿನ ಆರೋಗ್ಯದ ಲಕ್ಷಣವಾದ ಈ ಹಕ್ಕಿಗಳನ್ನು ಉಳಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯ.

ನವರಂಗ ಪಕ್ಷಿ

ಜಯಾ ಪಟಗಾರ
ಪ್ರಥಮ ಬಿ.ಎಸ್ಸಿ.

ನವರಂಗಗಳು ಉಜ್ವಲ ಬಣ್ಣಗಳ್ಳುಳ್ಳ ಗಿಡ್ಡ ಕತ್ತಿನ ಪಕ್ಷಿಗಳು. ಇವು ಗಟ್ಟಿಯಾದ ತುಸು ಬಾಗಿದ ಕೊಕ್ಕನ್ನೂ ಮತ್ತು ನೀಳವಾದ ಬಲಿಷ್ಟ ಕಾಲುಗಳನ್ನೂ ಹೊಂದಿರುತ್ತದೆ. ಇವುಗಳಿಗೆ ಎದೆ ಮತ್ತು ಹೊಟ್ಟೆ ಕಂದು ಹಳದಿ ಬಣ್ಣವನ್ನು ಹೊಂದಿದ್ದು, ರೆಕ್ಕೆಯು ಹಸಿರು ಬಣ್ಣವನ್ನು ಹೊಂದಿರುತ್ತದೆ. ಕಣ್ಣಿನಿಂದ ಕತ್ತಿನ ಮೇಲ್ಭಾಗದವರೆಗೆ ಕಪ್ಪು ಪಟ್ಟಿ ಇರುತ್ತದೆ. ಕತ್ತಿನ ಮುಂಭಾಗದಲ್ಲಿ ಬಿಳಿ ಬಣ್ಣವಿರುತ್ತದೆ. ನೆತ್ತಿಯಲ್ಲಿ ಕಪ್ಪು ಬಣ್ಣವಿರುತ್ತದೆ. ಬಾಲದ ಕೆಳಭಾಗದಲ್ಲಿ ರಕ್ತಗೆಂಪು ಬಣ್ಣವಿರುತ್ತದೆ. ಹಾರುವಾಗ ರೆಕ್ಕೆಗಳ ತುದಿಯಲ್ಲಿ ಬಿಳಿ ಮಚ್ಚೆಗಳು ಸ್ಪಷ್ಟವಾಗಿ ಕಾಣುತ್ತವೆ.

ಒಂಟಿಯಾಗಿ ಓಡಾಡುವ ಈ ಪಕ್ಷಿಗಳು, ಹೆಚ್ಚಿನದಾಗಿ ದಟ್ಟ ಪೊದೆಗಳಿರುವಡೆ ಕಂಡು ಬರುತ್ತವೆ. ಪೊದೆಗಳ ಕೆಳಗೆ ತರಗತಿಗಳನ್ನು ಎತ್ತಿಹಾಕುತ್ತಾ ಅದರಡಿ ಹುದುಗಿರುವ ಕೀಟಗಳನ್ನು ಹಿಡಿಯುತ್ತಿರುತ್ತವೆ. ದೇಹಕ್ಕೆ ಆಕಾರಕ್ಕೆ ಹೋಲಿಸಿದರೆ ಉದ್ದವೆನಿಸಲು ಕಾಲುಗಳನ್ನು ಹೊಂದಿರುವ ಇವು ಹಾರುವುದಕ್ಕಿಂತ ನೆಲದಲ್ಲಿ ಓಡಾಡುವುದೇ ಹೆಚ್ಚು.

ಇವು ಜೂನ್‌ನಿಂದ ಆಗಸ್ಟ್‌ವರೆಗೆ ಸಂತಾನೋತ್ಪತ್ತಿ ನಡೆಸುತ್ತವೆ. ನೆಲದ ಮೇಲೆ ಅಥವಾ ತಗ್ಗಿನ ಗಿಡಗಳ ಮೇಲೆ ಒಣಹುಲ್ಲು, ಕಡ್ಡಿಗಳನ್ನು ಬಳಸಿ ಗೂಡುಪಟ್ಟಿ, ತಿಳಿನೀಲಿ ಚುಕ್ಕೆಗಳಿರುವ ಬಿಳಿಯ 4 ರಿಂದ 5 ಮೊಟ್ಟೆಗಳನ್ನಿಟ್ಟು ಮರಿಮಾಡುತ್ತದೆ. ಇವು ಕ್ರಿಮಿಕೀಟಗಳು ಮತ್ತು ಮರಿಹುಳುಗಳನ್ನು ಆಹಾರವಾಗಿ ಸೇವಿಸುತ್ತವೆ.

ಪೇಂಟೆಡ್ ಬಂಟಿಂಗ್

ಸಮೃದ್ಧಿ ಎಂ.ಕೆ.
ಪ್ರಥಮ ಬಿ.ಎಸ್ಸಿ.

ಬಣ್ಣಿತ ಬಂಟಿಂಗ್ (ಪ್ಯಾಸೆಂನಾ ಸಿರಿಸ್) ಎಂಬುದು ಕಾಡಿನಲ್ಲಿರುವ ಪಕ್ಷಿ ಪ್ರಭೇದವಾಗಿದೆ. ಇದು ಉತ್ತರ ಅಮೇರಿಕಾಕ್ಕೆ ಸ್ಥಳೀಯವಾಗಿದೆ. ಪುರುಷ ಬಣ್ಣವನ್ನು ಬಂಟಿಂಗ್ ಮಾಡುವಿಕೆಯ ಕಾರಣದಿಂದ ಸಾಮಾನ್ಯವಾಗಿ ಉತ್ತರ ಅಮೇರಿಕಾದಲ್ಲಿನ ಅತ್ಯಂತ ಸುಂದರವಾದ ಹಕ್ಕಿ ಎಂದು ವರ್ಣಿಸಲಾಗುತ್ತದೆ ಮತ್ತು ಇವನ್ನು ಅನಪೇಕ್ಷಿತ, ಅಥವಾ ಸಮವಿಲ್ಲದ ಎಂದು ಅಡ್ಡ ಹೆಸರಿಸಲಾಗುತ್ತದೆ. ಇದರ ಬಣ್ಣಗಳು ಗಾಢ ನೀಲ ತಲೆ, ಹಸಿರು ಬೆನ್ನಿನ, ಕೆಂಪು ರಂಪ್ ಮತ್ತು ಅಂಡಪಾರ್ಟ್ಸ್ ಗುರುತಿಸಲು ಬಹಳ ಸುಲಭವಾಗಿರಿಸುತ್ತದೆ. ಆದರೆ ಇದು ಹಾಡುವ ಸಂದರ್ಭದಲ್ಲಿಯೂ ಸಹ ಎಲೆಗೊಂಚಲುಗಳಲ್ಲಿ ಆವರಿಸಿರುವ ಕಾರಣ ಗುರುತಿಸಲು ಕಷ್ಟವಾಗುತ್ತದೆ. ವರ್ಣಮಯ ಬಂಟಿಂಗ್ಗಳು ನಾಚಿಕೊಳ್ಳುತ್ತವೆ, ರಹಸ್ಯವಾಗಿರುತ್ತವೆ ಮತ್ತು ಮಾನವ ಕಣ್ಣಿಗೆ ಗಮನ ಹರಿಸಲು ಕಷ್ಟವಾಗುತ್ತದೆ. ಬಂಟಿಂಗ್ ನಿಯಮಿತವಾಗಿ ದೊಡ್ಡ ಪ್ರಮಾಣದಲ್ಲಿ ಹುಲ್ಲು ಬೀಜಗಳನ್ನು ತಿನ್ನುತ್ತದೆ.

ವಯಸ್ಕರ ಚಿತ್ರಣದ ಬಂಟಿಂಗ್ಗಳು 12–14 ಸೆಂ.ಮೀ. (4.7–5.5) ಇಂಚು ಉದ್ದವನ್ನು ಅಳೆಯಬಹುದು. ರೆಕ್ಕೆಗಳ ಉದ್ದಕ್ಕೂ (21–23 ಸೆಂ.ಮೀ.) 8.3–9.1 ಇಂಚು ಮತ್ತು 13–19 ಗ್ರಾಂ. (0.46–0.67 ಔನ್ಸ್) ತೂಗುತ್ತದೆ. ಇವರ ಸಂಖ್ಯೆ 4.5 ಮಿಲಿಯನ್ ಹಾಗೂ ಇವರ ಸಂಖ್ಯೆ ಕಡಿಮೆಯಾಗುತ್ತಿದೆ. ಇದು ಪೊದೆಗಳಲ್ಲಿ ಕಂಡುಬರುತ್ತದೆ, ಮರುಭೂಮಿ ಅಂಚುಗಳು riparian ಪೊದೆಗಳು, ಪೊದೆಗಳು ಮತ್ತು ಬ್ರಷ್ ಪ್ರದೇಶಗಳಲ್ಲಿ ಕಂಡುಬರುತ್ತದೆ.

ಉತ್ತರ ಕಾರ್ಡಿನಲ್

ಪೂಜಾ ಆರ್ ಸುವರ್ಣ
ಪ್ರಥಮ ಬಿ.ಎಸ್ಸಿ.

ಉತ್ತರ ಕಾರ್ಡಿನಲ್ (ಕಾರ್ಡಿನಲ್ ಕಾರ್ಡಿನಲ್) ಕುಲದಲ್ಲಿನ ಒಂದು ಪಕ್ಷಿಯಾಗಿದೆ ಕಾರ್ಡಿನಲ್; ಇದು ಆಡು ಮಾತಿನಲ್ಲಿ ರೆಡ್ಬರ್ಡ್, ಸಾಮಾನ್ಯ ಕಾರ್ಡಿನಲ್ ಅಥವಾ ಕಾರ್ಡಿನಲ್ ಹಿಂದಿನ (ಇದು 1985ಕ್ಕಿಂತ ಮುಂಚೆ ಅದರ ಹೆಸರು ಎಂದು ಕರೆಯಲಾಗುತ್ತದೆ. ದಕ್ಷಿಣ ಕೆನಡಾದಲ್ಲಿ, ಮೈನೆದಿಂದ ಟೆಕ್ಸಾಸ್ ಮತ್ತು ಮೆಕ್ಸಿಕೊ, ಬೆಲೀಜ್ ಮತ್ತು ಗ್ವಾಟೆಮಾಲಾಗಳ ಮೂಲಕ ಪೂರ್ವ ಯುನೈಟೆಡ್ ಸ್ಟೇಟ್ಸ್ ವ್ಯಾಪ್ತಿಯಲ್ಲಿ ಇದು ಕಂಡು ಬರುತ್ತದೆ. ಅದರ ಆವಾಸಸ್ಥಾನವು ಕಾಡುಗಳು, ತೋಟಗಳು, ಪೊದೆಗಳು ಮತ್ತು ತೇವ ಪ್ರದೇಶಗಳನ್ನು ಒಳಗೊಂಡಿವೆ.

ಉತ್ತರ ಕಾರ್ಡಿನಲ್ 21–23 ಸೆಂ.ಮೀ. (8.3–9.1 ಇನ್) ಉದ್ದವಿರುವ ಒಂದು ಮಧ್ಯಮ ಗಾತ್ರದ ಹಾಡಿಬರ್ಡ್ ಆಗಿದೆ. ಇದು ತಲೆಗೆ ವಿಶಿಷ್ಟ ಚಿಹ್ನೆ ಮತ್ತು ಮುಖದ ಮೇಲೆ ಮುಖವಾಡವನ್ನು ಹೊಂದಿರುತ್ತದೆ ಮತ್ತು ಅದು ಹೆಣ್ಣು, ಗಂಡು ಬೂದು ಬಣ್ಣದಲ್ಲಿ ಕಪ್ಪು, ಗಂಡು ರೋಮಾಂಚಕ ಕೆಂಪು ಬಣ್ಣದ್ದಾಗಿದ್ದು, ಹೆಣ್ಣು ಕೆಂಪು ಮತ್ತು ಆಲಿವ್ ಬಣ್ಣವಾಗಿದೆ. ಉತ್ತರ ಕಾರ್ಡಿನಲ್ ಮುಖ್ಯವಾಗಿ ಕಣಜವಾಗಿರುತ್ತದೆ, ಆದರೆ ಕೀಟಗಳು ಮತ್ತು ಹಣ್ಣನ್ನು ತಿನ್ನುತ್ತದೆ. ಪುರುಷನು ಭೂಪ್ರದೇಶದಲ್ಲಿ ನರ್ತಿಸುತ್ತದೆ. ಹಾಡನ್ನು, ತನ್ನ ಪ್ರದೇಶವನ್ನು ಗುರುತಿಸುತ್ತದೆ. ಪ್ರಣಯದ ಸಮಯದಲ್ಲಿ, ಗಂಡು ಹೆಣ್ಣು ಕೊಕ್ಕಿನಿಂದ ಬೀಜವನ್ನು ತಿನ್ನುತ್ತದೆ. ಮೂರರಿಂದ ನಾಲ್ಕು ಮೊಟ್ಟೆಗಳನ್ನು ಹಿಡಿದಿಟ್ಟುಕೊಳ್ಳುತ್ತದೆ ಮತ್ತು ಪ್ರತಿವರ್ಷ ಎರಡರಿಂದ ನಾಲ್ಕು ಬಾರಿ ಉತ್ಪಾದಿಸಲಾಗುತ್ತದೆ. ಇದನ್ನು ಒಮ್ಮೆ ಸಾಕು ಪಕ್ಷಿ ಎಂದು ಪರಿಗಣಿಸಲಾಗಿತ್ತು ಆದರೆ 1918ರ ಮೈಗ್ರೇಟರಿ ಬರ್ಡ್ ಟ್ರೀಟಿ ಆಕ್ಟ್ನಿಂದ ಪಂಜರ ಹಕ್ಕಿಯಾಗಿ ಅದರ ಮಾರಾಟವನ್ನು ಯುನೈಟೆಡ್ ಸ್ಟೇಟ್ಸ್ನಲ್ಲಿ ನಿಷೇಧಿಸಲಾಯಿತು.

ಇವಿ

ನಮ್ರತ
ಪ್ರಥಮ ಬಿ.ಎಸಿ.

ಮಧು ಹೀರುವ ಪುಟ್ಟ ಹಕ್ಕಿ ಇವಿ, ಹವಾಯಿ ದ್ವೀಪಗಳ ನಿವಾಸಿ. ಇದರ ಗಾಢ ಕೆಂಪು ವರ್ಣ ಮತ್ತು ಕರ್ಕಶ ಕೂಗು ಹವಾಯಿಯ ಜನರಿಗೆ ಚಿರ ಪರಿಚಿತವಾಗಿದೆ.

ಪೂರ್ಣ ಬೆಳೆದ ಇವಿ ಗಾಢ ಕೆಂಪು ಬಣ್ಣದ್ದಾಗಿದ್ದು, ಇದರ ರೆಕ್ಕೆಗಳು ಮತ್ತು ಬಾಲ ಕಪ್ಪಾಗಿರುತ್ತದೆ. ಗಿಡಗಳ ಹಸುರು ಹಿನ್ನಲೆಯಲ್ಲಿ ಆಕರ್ಷಕವಾಗಿ ಕಾಣಿಸುತ್ತದೆ. ಹೂಗಳ ಮಧು ಹೀರಲು ಅನುಕೂಲವಾಗುವಂತೆ ಇದರ ಕೊಕ್ಕು ಸಪೂರ ಮತ್ತು ಉದ್ದವಾಗಿದ್ದು, ಕೊನೆಯಲ್ಲಿ ಡೊಂಕಾಗಿರುತ್ತದೆ.

ಎಳೆಯ ಇವಿಗಳ ಮೈಯಲ್ಲಿ ಬಂಗಾರದ ಬಣ್ಣದ ಗರಿಗಳು ಮತ್ತು ಚುಕ್ಕೆಗಳಿದ್ದು, ಕೊಕ್ಕು ಬಿಳಿಯಾಗಿರುತ್ತದೆ. ಇವಿ, ಹಮ್ಮಿಂಗ್ ಬರ್ಡ್ನಂತೆ ರೆಕ್ಕೆ ಬಡಿಯುತ್ತ ಹೂಗಳ ಮುಂದೆ ಗಾಳಿಯಲ್ಲಿ ಸ್ಥಿರವಾಗಿ ನಿಂತು, ಮಧು ಹೀರುತ್ತದೆ.

ಇವಿಯ ಕೂಗು ಕರ್ಕಶವಾಗಿರುತ್ತದೆ. ಇದು ಕೆಲವೊಮ್ಮೆ ಸಿಳ್ಳಿನಂತೆ ಕೇಳಿದರೆ ಕೆಲವೊಮ್ಮೆ ಎರಡು ಬಲೂನುಗಳನ್ನು ಕಚಕಚ ಉಜ್ಜಿದಂತೆ, ತುಕ್ಕು ಹಿಡಿದ ಕೀಲನ್ನು ತಿರುಗಿಸಿದಂತೆ ಕೇಳಿಸುತ್ತದೆ.

ಹೂಗಳ ಮಧು ಇವಿಯ ಮುಖ್ಯ ಆಹಾರ. ಇದು ಪುಟ್ಟ ಹುಳಹುಪ್ಪಟೆಗಳನ್ನು ತಿನ್ನುತ್ತದೆ. ಇವಿ ಕುಟುಂಬ ಜೀವಿ. ಸಂಸಾರ ಹೂಡುವಾಗ ಗಂಡು ಹಕ್ಕಿ ಎಲೆ, ನಾರು ಮತ್ತು ಗರಿಗಳಿಂದ ಚಮಚೆಯಾಕೃತಿಯ ಪುಟ್ಟ ಗೂಡುಗಳನ್ನು ಕಟ್ಟುತ್ತದೆ. ಈ ಗೂಡುಗಳಲ್ಲಿ ಹೆಣ್ಣುಹಕ್ಕಿ ಎರಡು ಅಥವಾ ಮೂರು ಮೊಟ್ಟೆಗಳನ್ನು ಇಟ್ಟು ಕಾವು ಕೊಡುತ್ತದೆ. ಈ ಮೊಟ್ಟೆಗಳು 14 ದಿನಗಳಲ್ಲಿ ಒಡೆದು ಮರಿಗಳು ಹೊರಬರುತ್ತದೆ. ಆಗ ತಾನೇ ಹುಟ್ಟಿದ ಮರಿಗಳು ಹಳದಿ–ಹಸುರು ಬಣ್ಣದ್ದಾಗಿದ್ದು, ಗರಿಗಳಲ್ಲಿ ಕಂದು–ಕಿತ್ತಳೆ ಛಾಯೆ ಇರುತ್ತದೆ. ಸುಮಾರು 24 ದಿನಗಳಲ್ಲಿ ಮರಿಗಳು ಬಲಿತು ಗೂಡಿನಿಂದ ಹೊರಗೆ ಹಾರುತ್ತವೆ. ಒಂದೆರಡು ವಾರಗಳ ಬಳಿಕ ಕೆಂಪು ಗರಿಗಳು ಹುಟ್ಟುತ್ತವೆ.

ಮ್ಯಾಂಡರಿನ್ ಬಾತುಕೋಳಿ

ಸಿಂಚನ ಆರ್ ಬಾಯರ್
ಪ್ರಥಮ ಬಿ.ಎಸ್ಸಿ.

ಚೀನಾ, ರಷ್ಯಾ, ಜಪಾನ್ ದೇಶಗಳ ಪೂರ್ವ ಭಾಗದಲ್ಲಿ ಹೆಚ್ಚಾಗಿರುವ ಬಾತುಕೋಳಿ. ಕಾಡಿನಲ್ಲಿರುವ ಕೆರೆ ತೊರೆಗಳ ಬಳಿ ವಾಸಿಸುತ್ತದೆ. ತುಂಬಾ ಸುಂದರ ರೂಪ ಪಡೆದಿರುವ ಇವು ಈಗ ಜಗತ್ತಿನಾದ್ಯಂತ ಪಕ್ಷಿಪ್ರಿಯರ ಪ್ರೀತಿಯ ಸಾಕು ಪಕ್ಷಿಗಳಾಗಿವೆ. ಗಂಡು ಮತ್ತು ಹೆಣ್ಣು ಮ್ಯಾಂಡರಿನ್ ಬಾತುಕೋಳಿಗಳು ಒಂದೇ ಆಕಾರ, ಗಾತ್ರವಾಗಿದ್ದರೂ ಬಣ್ಣದಲ್ಲಿ ಬಹಳ ವ್ಯತ್ಯಾಸವಿದೆ. ಹೆಣ್ಣು ಹಕ್ಕಿಗೆ ಬೂದು ಬಣ್ಣದ ದೇಹ, ಹೊಟ್ಟೆ ಭಾಗದಲ್ಲಿ ಬಿಳಿ ಚುಕ್ಕಿಗಳಿವೆ. ಗಂಡು ಹಕ್ಕಿಯ ದೇಹದಲ್ಲಿ ರೆಕ್ಕೆಗಳು ಮತ್ತು ಕೊಕ್ಕಿನ ಅಕ್ಕಪಕ್ಕದಲ್ಲಿರುವ ಗಡ್ಡ ತಾಮ್ರವರ್ಣವಾಗಿದೆ. ನೇರಳೆ ಬಣ್ಣದ ಎದೆಯ ಭಾಗವಿದೆ. ಕಪ್ಪು ಕಣ್ಣುಗಳ ಸುತ್ತಲೂ ಬಿಳಿ ಬಣ್ಣವಿದೆ. ಕಂದು, ಹೊಳೆವ ನೀಲಿ, ನೇರಳೆ ಹಸಿರು ಬಣ್ಣಗಳಿಂದ ಕೂಡಿದ ಉದ್ದನೆಯ ಜುಟ್ಟು ತಲೆಯ ಮೇಲಿನಿಂದ ಇಳಿದು ಕತ್ತನ್ನು ಆವರಿಸಿದೆ. ಗಂಡು ಹಕ್ಕಿಯು ತನ್ನ ಇಂತಹ ಸುಂದರ ರೂಪದಿಂದ ಸಂತಾನೋತ್ಪತ್ತಿ ಸಮಯದಲ್ಲಿ ಹೆಣ್ಣನ್ನು ಆಕರ್ಷಿಸುತ್ತದೆ. ಹೆಣ್ಣು ಹಕ್ಕಿಯು ಮರಗಳಲ್ಲಿ ಕಟ್ಟಿದ ಗೂಡಿನಲ್ಲಿ ಮೊಟ್ಟೆಗಳನ್ನು ಇಟ್ಟು ಕಾವುಕೊಟ್ಟು ಮರಿ ಮಾಡುತ್ತದೆ. ಹೊರಬರುವ ಮರಿಗಳು ಮರವನ್ನಿಳಿದು ತಾಯಿಯನ್ನು ಅನುಸರಿಸಿ ಆಹಾರ ಹುಡುಕಿ ತಿನ್ನಬಲ್ಲವು. ವಿವಿಧ ಬೀಜಗಳು, ಜಲಸಸ್ಯಗಳು, ಕೀಟಗಳು, ಬಸವನ ಹುಳು, ಚಿಕ್ಕಪುಟ್ಟ ಮೀನುಗಳು ಇವುಗಳ ಆಹಾರವಾಗಿವೆ.

ಆದರೆ ರಂಗುರಂಗಿನ ಮೈ, ಗರಿ, ಕೊಕ್ಕಿನಿಂದ ಮನಸೆಳೆಯುವ ಈ ಪುಟ್ಟ ಬಾತು ಕೇವಲ 40–41 ಸೆಂ.ಮೀ. ಉದ್ದವಿರುತ್ತದೆ. ಕಿತ್ತಳೆ ರಂಗಿನ ಗರಿಗಳು ದೋಣಿಯ ಹಾಯಿಯಂತೆ ಅಂಟಿಕೊಂಡಿರುತ್ತದೆ. ಹೆಣ್ಣು ಮ್ಯಾಂಡರಿನ್ ಬಾತು 10–12 ಮೊಟ್ಟೆಗಳನ್ನಿಡುತ್ತದೆ. ಗಂಡು ಮತ್ತು ಹೆಣ್ಣು ಪಕ್ಷಿಗಳು ಜೀವನ ಪರ್ಯಂತ ಜೊತೆಗಿರುವುದೇ ವಿಶೇಷ.

ಅಮೂರ್ ಫಾಲ್ಕನ್ – ಕೆಂಪು ಕಾಲಿನ ಚಾಣ

ನಿಖಿತಾ
ಪ್ರಥಮ ಬಿ.ಎಸ್ಸಿ.

ಸೈಬೀರಿಯಾದ ಅಮೂರಲ್ಯಾಂಡ್ ಇವುಗಳ ಮೂಲಸ್ಥಾನ. ಆ ಕಾರಣದಿಂದಲೇ ಅಮೂರ್ ಫಾಲ್ಕನ್ ಎನ್ನುವ ಹೆಸರನ್ನು ಪಡೆದಿವೆ. ಅಲ್ಲಿನ ಅತಿಯಾದ ಚಳಿಯ ವಾತಾವರಣದಿಂದ ಬೆಚ್ಚಗಿನ ಸ್ಥಳ ಹುಡುಕುತ್ತ ಭಾರತದ ಅರಬ್ಬಿ ಸಮುದ್ರದ ಮಾರ್ಗವಾಗಿ ಇವು ದಕ್ಷಿಣ ಆಫ್ರಿಕಾಗೆ ಹಾದುಹೋಗುತ್ತದೆ. ಈ ಪ್ರಯಾಣದಲ್ಲಿ ಬರೋಬ್ಬರಿ 2 ಲಕ್ಷ 20 ಸಾವಿರ ಕಿ.ಮೀ. ದೂರ ಕ್ರಮಿಸುತ್ತವೆ! ಇದು ಪಕ್ಷಿಲೋಕದಲ್ಲೇ ಅಪರೂಪದ ಪಯಣ. ಪಕ್ಷಿಯೊಂದು ಅತಿಹೆಚ್ಚು ಪಯಣಿಸುವ ದಾಖಲೆಗಳಲ್ಲೂ ಒಂದಾಗಿದೆ. ಇವುಗಳ ವೈಜ್ಞಾನಿಕ ಹೆಸರು Falco anrensis.

ನಾಗಾಲ್ಯಾಂಡ್‌ನ ವೋಖಾ ಜಿಲ್ಲೆ ಇವುಗಳ ಪಾಲಿಗೆ ಭಾರತದ ಹೆಬ್ಬಾಗಿಲು. ಈ ಜಿಲ್ಲೆಯನ್ನು ಇವುಗಳ ಎರಡನೆಯ ಮನೆಯೆಂದೇ ವ್ಯಾಖ್ಯಾನಿಸಲಾಗುತ್ತದೆ. ಅಂದ ಹಾಗೆ ಮಂಗೋಲಿಯಾದಿಂದ ಭಾರತದ ನಾಗಾಲ್ಯಾಂಡ್‌ಗಿರುವ 5600 ಕಿ.ಮೀ. ದೂರ ಪಯಣಿಸಲು ಇವು ತೆಗೆದುಕೊಳ್ಳುವ ಸಮಯ 5 ದಿನಗಳು ಮಾತ್ರ. ಈ ಅಮೂರ ಗಿಡುಗಗಳು ತೂಗುವುದು. ಕೇವಲ 150 ಗ್ರಾಂನಷ್ಟಾದರೂ ತಮ್ಮ ದೇಹ ರಚನೆ ಮೀರುವಂತಹ ಸಾಮರ್ಥ್ಯ ಪ್ರದರ್ಶಿಸುತ್ತವೆ. ಇಷ್ಟು ದೂರದ ಪಯಣಕ್ಕೂ ಮುನ್ನ ಇವು ತಮ್ಮ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ತೂಕ ಏರಿಸಿಕೊಳ್ಳುವುದು ವಿಶೇಷ. ಅಮೂರ ಗಿಡುಗಗಳ ಪಯಣದ ಹಾದಿ ಅಷ್ಟೊಂದು ಸುಲಭದ್ದೇನಲ್ಲ. ಸಾವಿರೋಪಾದಿಯಲ್ಲಿ ಗುಂಪಿನಲ್ಲಿ ಪಯಣಿಸುವ ಇವುಗಳನ್ನು ಈ ಮೊದಲು ನಾಗಾಲ್ಯಾಂಡ್‌ನ ವೋಖಾ ಮತ್ತು ಟ್ಯಾಮೆಂಗ್ಲೊಂಗ್ ಜಿಲ್ಲೆಗಳ ಮಾರಣಹೋಮವೇ ನಡೆಯುತ್ತಿತ್ತು. ಗಿಡುಗಗಳ ಹತ್ಯೆಯನ್ನು ಕಾನೂನು ರೀತ್ಯ ನಿಷೇಧಿಸಲಾಗಿದ್ದರೂ ಸಮರ್ಪಕವಾಗಿ

ಜಾರಿಗೊಳಿಸಿರಲಿಲ್ಲ. ಇದನ್ನಂತ ಪಕ್ಷಿಪ್ರೇಮಿಗಳು ಹಾಗೂ ಯುವ ಸಮೂಹ ಒಂದು ರೀತಿಯ ಚಳವಳಿಯನ್ನೇ ನಡೆಸಿದರು. ಈ ಕಾರ್ಯಕ್ಕೆ ಬಾಂಬೆ ನ್ಯಾಚುರಲ್ ಹೆಸ್ಟಾರಿಕಲ್ ಸೊಸೈಟಿಯಂತಹ ಸಂಸ್ಥೆಗಳು ಕೈ ಜೋಡಿಸಿದವು. ಇಂಥ ಸಂಘಟಿತ ಪ್ರಯತ್ನದಿಂದಾಗಿ ಅಲ್ಲಿನ ಪರಿಸ್ಥಿತಿ ಈಗ ಬಹಳಷ್ಟು ಸುಧಾರಿಸಿದೆ. ಬೇಟೆಯಾಡುತ್ತಿದ್ದ ಕೈಗಳೀಗ ರಕ್ಷಣೆಗೆ ಮುಂದಾಗಿವೆ. ಕೇಂದ್ರ ಸರ್ಕಾರವೂ ಇದನ್ನು ಗುರುತಿಸಿ ಅಮೂರ ಉಳಿಸಿ ಅಭಿಯಾನಕ್ಕೆ ಸಾಥ್ ನೀಡಿದೆ. ಸಾರ್ವಜನಿಕರಲ್ಲಿ ಅರಿವನ್ನು ಹೆಚ್ಚಿಸಲು ಅಮೂರ ನೃತ್ಯ ಹಬ್ಬಗಳಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಪ್ರಯತ್ನಿಸುತ್ತಿದೆ. ಈ ಅಮೂರಗಳು ಹೆಚ್ಚಾಗಿ ಕಾಣಸಿಗುವ ಡೊಯಾಂಗ್ ಕೆರೆಯ ಸುತ್ತಲಿನ ಪ್ರದೇಶವನ್ನು ಇಕೋ ಟೂರಿಸಂ ತಾಣವಾಗಿ ಬೆಳೆಸುವತ್ತ ಸರ್ಕಾರ ಕಾರ್ಯೋನ್ಮುಖವಾಗಿದೆ. ಇಷ್ಟಕ್ಕೂ ಸಾವಿರದ ಗುಂಪಲ್ಲಿ ಪಯಣಿಸುವ ಇವು ಒಮ್ಮೊಮ್ಮೆ ಅಪರಿಚಿತ ಸ್ಥಳಗಳಲ್ಲೂ ಕಂಡುಬರುತ್ತವೆ. ಪಕ್ಷಿತಜ್ಞರ ಅಭಿಪ್ರಾಯದಂತೆ. ಈ ಪಕ್ಷಿಗಳು ಮುಖ್ಯ ಗುಂಪಿನಿಂದ ಬೇರ್ಪಡುವ ಚಿಕ್ಕ ತಂಡಗಳಾಗಿದ್ದು, ಮಾರ್ಗಮಧ್ಯೆ ವಿರಮಿಸಿ ಪುನಃ ಗುಂಪನ್ನು ಸೇರಿಕೊಳ್ಳುತ್ತವೆ. ಸಂರಕ್ಷಣೆಯ ಫಲದಿಂದ ಸಂಖ್ಯೆಯಲ್ಲಿ ಹೆಚ್ಚಳವಾದುದರಿಂದ ಸಹಜವಾಗಿಯೇ ಅಲ್ಲಲ್ಲಿ ಕಾಣಸಿಗುತ್ತದೆ.

ಕೋಗಿಲೆ

ಹೆಚ್. ಎನ್. ನಾಗಲಕ್ಷ್ಮಿ
ಪ್ರಥಮ ಬಿ.ಎಸ್ಸಿ.

ಶಾಸ್ತ್ರೀಯವಾಗಿ ಹೇಳುವುದಾದರೆ ಪಕ್ಷಿಯೆಂದರೆ ರೆಕ್ಕೆಯುಳ್ಳ ದ್ವಿಪಾದ. ಸಾಮಾನ್ಯ ದೃಷ್ಟಿಯಲ್ಲಿ ಹಾರಾಟ ಹಕ್ಕಿಯ ವಿಶೇಷ ಗುಣ. ಪಕ್ಷಿಗಳು ಬಿಸಿರಕ್ತವುಳ್ಳ ಕಶೇರುಕ ಪ್ರಾಣಿಗಳು; ಸಸ್ತನಿಗಳೂ ಪಕ್ಷಿಗಳೂ ಉರಗಗಳಿಂದ ಉಗಮಿಸಿದವು. ಪಕ್ಷಿವರ್ಗ ಉರಜಾತಿಯ ಪೂರ್ವಜಳಿಂದ ಉದ್ಭವಿಸಿದೆಯೆಂಬುದಕ್ಕೆ ಆಧಾರ ಈ ಎರಡು ಗುಂಪುಗಳ ಅಸ್ಥಿಪಂಜರದ ಹೋಲಿಕೆಯಿಂದ ದೊರೆಯುತ್ತದೆ. ಹಕ್ಕಿಯ ದೇಹದ ಮೇಲೆ ಹೊದಿಕೆಯಂತಿರುವ ಗರಿಗಳಿಂದಾಗಿ ಒಂದೇ ಸಮವಾದ ಉಷ್ಣತೆ ಇರುವಂತಾಗಿದೆ. ಈ ಉಷ್ಣತೆ ಸ್ತನಿಗಳಿಗಿಂತ ಹೆಚ್ಚು, ಅಂದರೆ ಸುಮಾರು 39 ಡಿ.ಸೆ ರಿಂದ 45 ಡಿ.ಸೆ. ಗರಿಗಳ ರಚನೆ ಮತ್ತು ಜೋಡಣಾವಿನ್ಯಾಸ ಬೇರೆ ಬೇರೆ ಗುಂಪುಗಳ ಜೀವನ ರೀತಿಯನ್ನು ಪ್ರತಿಬಿಂಬಿಸುತ್ತವೆ. ಹಕ್ಕಿಗಳಲ್ಲಿ ಗರಿಗಳ ಬೆಳವಣಿಗೆ ಮೈಮೇಲಿನ ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಸೀಮಿತಗೊಂಡಿದೆ; ಈ ಜಾಗಗಳಲ್ಲಿ ಹುಟ್ಟಿದ ಗರಿಗಳು ಅಕ್ಕಪಕ್ಕಗಳಿಗೆ ಪಸರಿಸಿ ಗರಿರಹಿತ ಪ್ರದೇಶಗಳನ್ನು ಮುಚ್ಚುತ್ತವೆ, ಪಕ್ಷಿಗಳ ವರ್ಗೀಕರಣದಲ್ಲಿ ಗರಿಗಳ ಉತ್ಪತ್ತಿ ಪ್ರದೇಶಗಳ ಅಧ್ಯಯನ ಮುಖ್ಯವಾದದ್ದು. ಗರಿಗಳು ಮೂರು ತರಹ.

ಕೋಗಿಲೆ ಕುಕುಲಿಡೆ ಕುಟುಂಬಕ್ಕೆ ಸೇರಿರುವ ಒಂದು ಪಕ್ಷಿ. ಕೋಗಿಲೆ ಸಾಮಾನ್ಯವಾಗಿ ಕಾಗೆಯ ಗೂಡಲ್ಲಿ ಮೊಟ್ಟೆ ಇಡುತ್ತದೆ. ಅದು ಬೆಳೆದಂತೆ ತನ್ನ ಕಂಠದಿಂದ ಹಾಡಲು ಶುರು ಮಾಡಿದಾಗ ಅದರ ನಿಜ ಸ್ವರೂಪ ಕಾಗೆಗೆ ತಿಳಿದು ಅದನ್ನು ತನ್ನ ಗೂಡಿನಿದ ಹೊರ ತಳ್ಳುತ್ತದೆ.

ಕೋಗಿಲೆಗಳು ಸಾಮಾನ್ಯವಾಗಿ ಮಧ್ಯಮ ಗಾತ್ರದ ತೆಳು ಪಕ್ಷಿಗಳು. ಕೆಲವು ವಲಸೆ ಜಾತಿಗಳು ಇವೆ. ಕೋಗಿಲೆಗಳು ಆಹಾರವಾಗಿ ಕೀಟಗಳನ್ನು ಕ್ರಿಮಿಕೀಟಗಳ ಮರಿಗಳನ್ನು ಮತ್ತು ವಿವಿಧ ಇತರ ಪ್ರಾಣಿಗಳನ್ನು ತಿನ್ನುತ್ತವೆ. ಜೊತೆಗೆ ಹಣ್ಣುಗಳನ್ನು ತಿನ್ನುತ್ತವೆ. ಸಾವಿರಾರು ವರ್ಷಗಳಿಂದ ಮಾನವ ಸಂಸ್ಕೃತಿಯಲ್ಲಿ ಕೋಗಿಲೆಗಳು ಪಾತ್ರವು ಮಾತ್ರ ಗ್ರೀಕ್ ಪುರಾಣದ ದೇವತೆ ಹೇರಾ ಆಗಿ ಕಾಣಿಸಿಕೊಂಡಿದೆ. ಇದು ಉದ್ದ ಮತ್ತು ಬಾಗಿದ ಮಸೂದೆಗಳನ್ನು ಹೊಂದಿದೆ. ಗಂಡು ಹಳದಿ ಹಸಿರು ಬಿಲ್ ಮತ್ತು ಕಡುಗೆಂಪು ಕಣ್ಣುಗಳೊಂದಿಗೆ ಕಪ್ಪು ಬಣ್ಣದಿಂದ ಹೊಳೆಯುತ್ತದೆ. ಅದಕ್ಕೆ ಸಣ್ಣ ರೆಕ್ಕೆಗಳು ಆದರೆ ದೀರ್ಘ ಬಾಲವಿದೆ. ಸ್ತ್ರೀಯು ಗಾಢವಾಗಿ ಕಂದು ಬಣ್ಣದ್ದಾಗಿರುತ್ತದೆ. ಹೆಣ್ಣು ಹಿಮಕರಡಿ ಮತ್ತು ಕೆಂಪು ಕಣ್ಣುಗಳು ಕಾಣಿಸಿಕೊಳ್ಳುವಲ್ಲಿ ವಿಭಿನ್ನವಾಗಿದೆ. ಟೈರ್ ಗಾಢ ಬೂದು ಮತ್ತು ಸ್ವಲ್ಪ ಬಿಳಿ ಬಣ್ಣದಲ್ಲಿವೆ. ಕಿರೀಟವು ಗಾಢ ಕಂದು ಮತ್ತು ಮಸೂದೆಯು ತಿಳಿ ಹಸಿರು ಬಣ್ಣದ್ದಾಗಿದೆ. ಹೆಣ್ಣು ಗಂಡಿಗಿಂತ ಸ್ವಲ್ಪ ಚಿಕ್ಕದಾಗಿದೆ. ಅವರ ಹೆಚ್ಚಾಗಿ ಭಾರತದ ಪ್ರತಿಯೊಂದು ಭಾಗದಲ್ಲಿ ಕಂಡು ಬರುತ್ತದೆ. ಬೆಟ್ಲಾ ರಾಷ್ಟ್ರೀಯ ಉದ್ಯಾನವನ, ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ, ಸುಲ್ತಾನ್ಪುರ್ ಪಕ್ಷಿಧಾಮ,

ಪೆಂಚ್ ರಾಷ್ಟ್ರೀಯ ಉದ್ಯಾನವನ ಮತ್ತು ಬರ್ವಾಲಾ ಪಕ್ಷಿ ಧಾಮದಲ್ಲಿ ಇವುಗಳನ್ನು ಕಾಣಬಹುದು.

ಕೋಗಿಲೆ ಎತ್ತರದ ಕಾಡುಗಳು, ಉಪನಗರದ ಪ್ರದೇಶಗಳು ತೆರೆದ ಮೂರ್ಯಾಂಡ್ಗಳನ್ನು, ಉಷ್ಣವಲಯದ ಮಳೆಕಾಡುಗಳಿಗೆ ಮರುಭೂಮಿಗೆ ಆದ್ಯತೆ ನೀಡುತ್ತದೆ. ಕೋಗಿಲೆಗಳು ಮಾಂಸಾಹಾರಿಯಾಗುತ್ತದೆ. ಅದು ಹಣ್ಣುಗಳು, ಕೀಟಗಳು, ಮರಿಹುಳುಗಳು, ಹಲ್ಲಿಗಳು, ಸಣ್ಣ ಹಾವುಗಳು ಮತ್ತು ಸಸ್ತನಿಗಳನ್ನು ತಿನ್ನುತ್ತದೆ. ಅವರು ಮರಗಳ ಮೇಲಾವರಣದಲ್ಲಿ ತಿನ್ನುತ್ತದೆ. ಇದರ ಸಂತಾನೋತ್ಪತ್ತಿಯು ಸೆಪ್ಟೆಂಬರ್ ನಿಂದ ಫೆಬ್ರವರಿ ವರೆಗೆ ಇರುತ್ತದೆ.

ಕಾಗೆ

ಸೃಜನಾ ಯು.
ಪ್ರಥಮ ಬಿ.ಎಸ್ಸಿ.

ಕಾ.ಕಾ.ಕಾ. ಅಂತ ಸದ್ದು ಮಾಡ್ತ ನಮ್ಮ ಮನೆ ಹತ್ತಿರ ಅತಿ ಹೆಚ್ಚಾಗಿ ಬರುತ್ತಿದ್ದ ಹಕ್ಕಿ ಅಂದ್ರೆ ಕಾಗೆ. ಬೇರೆ ರೀತಿಯ ಹಕ್ಕಿಗಳು ಬಂದಿದ್ದು ತುಂಬಾ ಕಡಿಮೆ. ಕೆಲವು ಹಕ್ಕಿಗಳು ಬರುತ್ತಿದ್ದರೂ ಅವುಗಳ ಹೆಸರೆ ನಂಗೆ ಗೊತ್ತಿರಲಿಲ್ಲ. ಅಲ್ದೇ ಒಂದ್ ದಿನ ಬಂದದು ಮರುದಿನ ಬರ್ತಾ ಬರುತ್ತಿರಲಿಲ್ಲ. ಕನ್ನಡ ಮ್ಯಾಮ್ ನಿಮ್ಮ ಮನೆ ಹತ್ತಿರ ಬರುವ ವಿಶೇಷ ಹಕ್ಕಿ ಬಗ್ಗೆ ಬರ್‌ಕೊಂಡು ಬನ್ನಿ ಅಂತ ಹೇಳಿದ್ರು, ನಾನು ಮೂರ್ನಾಲ್ಕು ದಿನ ನೋಡ್ದೆ. ಕೊನೆಗೆ ನನಗೆ ಸಿಕ್ಕಿದ ಹಕ್ಕಿ ಅಂದ್ರೆ ದೇಹದ ಎಲ್ಲ ಕಡೆ ದಟ್ಟ ಕಪ್ಪಾಗಿ ಇರುವ ಹೊತ್ತು ಗೊತ್ತಿಲ್ಲದೆ ಬಂದು ತನ್ನ ಕರ್ಕಶ ಧ್ವನಿಯಿಂದ ನಾನ್ ಇಲ್ಲಿ ಇದ್ದೇನೆ ಅಂತ ಹೇಳುತ್ತಿದ್ದ ಕಾಗೆ.

ಹಾ ಕಾಗೆನಾ ಅನ್ನಬೇಡಿ. ಅದ್ರ ಬಗ್ಗೆ ತಿಳಿದುಕೊಳ್ಳಲು ತುಂಬಾ ಇದೆ. ಅದು ಉಂಟಲ್ಲ ಭಾರಿ ಚುರ್ಕ್ ಹಕ್ಕಿ ಮರ್ರೆ. ಬಹುಶಃ ನಾವು ಮಾಂಸಾಹಾರಿ ಅದ್‌ರಿಂದ ಅಮ್ಮ ಮೀನು ಕೊಯ್ಯಲಿಕ್ಕೆ ಹೋದಗ ಬೆಕ್ಕು, ನಾಯಿ ಜೊತೆಗೆ ಈ ಕಾಗೇನು ಚೂರು ಹೆದರಿಕೆ ಇಲ್ದೇ ಮೀನಿನ ತಲೆನೋ, ಬೀಲದ ಸಣ್ಣ್ ಭಾಗನೋ ಸಿಕ್ಕ ಬೇಕಂತ ಬೆಕ್ಕು ನಾಯಿಯೊಟ್ಟಿಗೆ ಸ್ಪರ್ಧೆಗೆ ಇರುತ್ತಿತ್ತು.

ಅದೇನೋ ಒಂದೆ ತಿಂತಿರಲಿಲ್ಲ. ತನ್ನದು ಸಂತಾನನೇ ಕರಿತಿತ್ತು. ಅವೆಲ್ಲ ಒಟ್ಟಿಗೆ ಬಂದ್ರೆ ನನ್ನ ಅಮ್ಮ ನನ್ನನ್ನು ಕರ್‌ದು ಕಾಗೆ ಓಡಿಸುವ ಕೆಲಸ ನಂಗೆ ಕೊಡ್ತಿದ್ರು.

ಆದ್ರೂ ಜನ ಕಾಗೇನೂ ಒಂದು ಸಾಮಾನ್ಯ ಅಂತ ನೋಡ್ದೆ ಅದಕ್ಕೊಂದು ವಿಶೇಷ ರೀತಿಯ ಸಂಬಂಧಾನೆ ಕಲ್ಪನೆಯನ್ನೇ ಕಟ್ಟಿದ್ದಾರೆ. ಕಾಗೆ ಅಪ್ಪಿತಪ್ಪಿ ನಮ್ಮನ್ನು ಮುಟ್ಟಿದರೆ ನಾವು ಸ್ನಾನಮಾಡಿ ದೇವರಿಗೆ ದೀಪ ಇಡ್ಬೇಕು. ಅಲ್ದೇ ಸತ್ತೋದ ಪೂರ್ವಜರು ಕಾಗೆ ರೂಪದಲ್ಲಿ ಬಂದು ಪಿಂಡ ತಿಂದೋಗ್ತಾರೆ ಅಂತಾರೆ. ಏನೇ ಇರ್‌ಲಿ ನಾನೊಂದಿನ ಬಟ್ಟೆ ಒಗಿತಿರುವಾಗ ಬಾಲ್ದಿಗೆ ನೀರು ಹಾಕುವಾಗ ಒಂದು ಕಾಗೆ ಬಾಲ್ದಿಯಲ್ಲಿರುವ ನೀರು ಕುಡಿತಿತ್ತು ನನ್ನ ನೋಡಿಯೂ ಅಲ್ಲೇ ಕೂತಿದೆ. ನಂಗೆ ಹೆದರಿಕೆ ಆಯ್ತು. ಇನ್ನು ಹತ್ರ ಹೋದ್ರೆ ಕಾಗೆ ನೋಡ್ತಾನೆ ಇದೆ. ಮೊನ್ನೆಯಷ್ಟೇ ಚಿಕ್ಕಮ್ಮ ಹೇಳಿದ್ರು, ಸತ್ತೋದವರು ಕಾಗೆ ರೂಪದಲ್ಲಿ ಬಂದು ಕರೀತಾರೆ ಅಂತಿದ್ರು, ಅದು ನೆನಪಾದ ಕೂಡ್ಲೆ ಸೀದಾ ಮನೆಯೊಳಗೆ ಓಡಿಬಂದೆ. ನಂತರ ಹೊರಗೆ ಬಂದು ನೋಡಿದ್ರೆ ಕಾಗೆನೇ ಇಲ್ಲ.

ನಂತರ ಅಮ್ಮ ಮನೆಗೆ ಬಂದ್ಮೇಲೆ ಕಾಗೆ ವಿಷಯ ಹೇಳಿದೆ. ಅಮ್ಮ ಹೇಳಿದ ವಿಷಯ ಕೇಳಿ ನಗೋದು ಮತ್ತು ನಾನು ಭಯಪಟ್ಟದು ಎನಿಸಿ ಸಿಟ್ಟು ಬಂತು. ವಿಷಯ ಏನಂದ್ರೆ ಆ ಕಾಗೆ ಕಾಲು ಸರಿ ಇರಲಿಲ್ಲ. ಒಂದು ಕಾಲು ಮುರಿದಿದೆ. ಹಾಗಾಗಿ ಅದು ಯಾರನ್ನೂ ಕಂಡು ಬೇಗ ಓಡಲ್ಲ. ಅಲ್ದೇ ಅದು ನಮ್ಮನೇ ಮಾಡಿನ ಮೇಲೆನೇ ಇರುತ್ತಿತ್ತು ಅಂತ. ಅಲ್ಲೀತನಕ ನಂಗೆ ವಿಷ್ಯನೇ ಗೊತ್ತಿರ್ಲಿಲ್ಲ. ಯಾವಾಗ ಹಕ್ಕಿ ಬಗ್ಗೆ ಏನಾದ್ರು ಬರೀಬೇಕು ಅಂತ ಮ್ಯಾಮ್ ಹೇಳಿದ್ರಲ್ಲ. ಆಗಲೇ ನಾನು ಮನೆಸುತ್ತ ಯಾವ ಹಕ್ಕಿ ಬರ್ತದೆ ಅಂತ ಒಳಗಣ್ಣು ತೆರೆದು ನೋಡಲು ಶುರುಮಾಡಿದ್ದು. ಆಮೇಲೆ ನೋಡಿದ್ರೆ ಈ ಕಾಲ್‌ಮುರ್ದ ಕಾಗೆ ನಮ್ಮನೆ ಮೇಲಿಂದ ದಿನ ಹಾರಿ ಕೆಳಗೆ ಬಂದು ನೀರು ಕುಡಿಯುವುದು, ಅನ್ನ ತಿನ್ನುವುದು ನೋಡಿದೆ. ಒಟ್ನಲ್ಲಿ ಈ ಕಾಗೆ ಪುರಾಣ ಹೇಳಿದಷ್ಟು ಮುಗಿಯುವುದಿಲ್ಲ. ಆದರೂ ವಿದ್ಯಾರ್ಥಿಗಳಾದ ನಾವು ಕೇವಲ ಆಟ, ಪಾಠ ಅಲ್ಲದೇ ಸ್ವಲ್ಪ ಸುತ್ತಮುತ್ತಲ ಪರಿಸರದಲ್ಲಿರುವ ಗಿಡ, ಮರ, ಪ್ರಾಣಿ, ಪಕ್ಷಿಗಳನ್ನು ಗಮನಿಸುವ ಆರೈಕೆ ಮಾಡುವ ಗುಣ ಬೆಳೆಸಿಕೊಳ್ಳಬೇಕು.

ಕಡವೆ

ವಿದ್ಯಾ
ಪ್ರಥಮ ಬಿ.ಎಸ್ಸಿ.

ಕಡವೆ ಭಾರತ ಮತ್ತು ಆಗ್ನೇಯ ಏಷ್ಯಾದ ದೇಶಗಳಲ್ಲಿ ವಾಸವಾಗಿರುವ ಜಿಂಕೆ. ಇಂಗ್ಲೀಷ್ ಭಾಷೆಯಲ್ಲಿ ಇದಕ್ಕೆ ಸಂಬಾರ್ ಎಂದು ಹೆಸರಿದೆ. ಹಿಮಾಲಯದ ತಪ್ಪಲಿನಿಂದ ಆರಂಭಿಸಿ ಭಾರತದ ಎಲ್ಲಾ ಭಾಗಗಳಲ್ಲೂ ಕಡವೆಗಳು ಕಾಣಿಸುತ್ತವೆ. ಶ್ರೀಲಂಕಾ, ಮ್ಯಾನ್‌ಮಾರ್, ಥಾಯ್ಲೆಂಡ್, ಇಂಡೋನೇಷಿಯಾ, ಮಲೇಶಿಯಾ, ದಕ್ಷಿಣ ಚೀನಾ ಮತ್ತು ತೈವಾನ್ ದೇಶಗಳಲ್ಲೂ ಕಡವೆ ವಾಸವಾಗಿವೆ. 40ರಿಂದ 68 ಇಂಚು ಎತ್ತರ ಮತ್ತು ಸುಮಾರು 540 ಕಿಲೋ ಭಾರವಾಗಿರುತ್ತದೆ. ಗಂಡು ಜಿಂಕೆಗಳಿಗೆ ಉದ್ದ ಕೊಂಬುಗಳು ಇರುತ್ತದೆ. ಪೂರ್ಣ ಬೆಳೆದ ಕೊಂಬುಗಳು ಸುಮಾರು 43 ಇಂಚು ಉದ್ದವಾಗಿರುತ್ತದೆ. ಕಡವೆಗಳ ಕುತ್ತಿಗೆಯ ಹಿಂಭಾಗದಲ್ಲಿ ದಪ್ಪ ಕೂದಲು ಬೆಳೆಯುತ್ತದೆ. ಗಂಡು ಕಡವೆಗಳ ಕೂದಲು ಉದ್ದವಾಗಿರುತ್ತದೆ. ಕಡವೆಗಳು ಸಾಮಾನ್ಯವಾಗಿ ನೀರಿರುವ ಜಾಗದ ಬಳಿ ತಿರುಗಾಡುತ್ತದೆ. ಹಿಮಾಲಯ ಪ್ರದೇಶದಲ್ಲಿ ಇವು ಸಮುದ್ರ ಮಟ್ಟದಿಂದ 12,000 ಅಡಿ ಎತ್ತರದ ಜಾಗಗಳಲ್ಲೂ ಕಾಣಿಸುತ್ತದೆ. ಗಂಡು ಕಡವೆಗಳು ಸಾಮಾನ್ಯವಾಗಿ ಒಂಟಿಯಾಗಿ ತಿರುಗಾಡುತ್ತವೆ. ಹೆಣ್ಣು ಕಡವೆಗಳು ಗುಂಪಿನಲ್ಲಿರುತ್ತವೆ.

ಹುಲ್ಲು ಚಿಗುರುಗಳು, ಜಲಸಸ್ಯಗಳು ಹಣ್ಣುಗಳು ಇದರ ಆಹಾರ, ಅಗತ್ಯ ಬಿದ್ದರೆ ಕಡವೆ ಗಿಡಗಂಟಿಗಳ ಎಲೆಗಳನ್ನು ತಿನ್ನುತ್ತದೆ. ಹುಲಿ, ಚಿರತೆ ಮತ್ತು ಮೊಸಳೆ ಇದರ ವೈರಿ. ಗರ್ಭಿಣಿ–ಕಡವೆ ಎಂಟು ತಿಂಗಳಲ್ಲಿ ಒಂದು ಮರಿಗೆ ಜನ್ಮ ನೀಡುತ್ತದೆ. ಮರಿ ಸುಮಾರು 5ರಿಂದ 8 ಕಿಲೋ ಭಾರವಾಗಿರುತ್ತದೆ. ಒಂದು ತಿಂಗಳಲ್ಲಿ ಮರಿ ಕಡವೆ ಹುಲ್ಲು ಮೇಯಲು ಆರಂಭಿಸುತ್ತದೆ.

ವಾಲ್ಲಬಿ

ಬಿಂದಿಯಾ
ಪ್ರಥಮ ಬಿ.ಎಸ್ಸಿ.

ಆಸ್ಟ್ರೇಲಿಯಾದ ಕೆಲವು ಪ್ರಾಣಿಗಳಿಗೆ ಬೆನ್ನ ಹಿಂದೆ ಅಥವಾ ಹೊಟ್ಟೆಯ ಭಾಗದಲ್ಲಿ ಚೀಲಗಳಿರುತ್ತದೆ. ಈ ಪ್ರಾಣಿಗಳು ಅರ್ಧ ಬೆಳೆದ ಮರಿಗಳನ್ನು ಹೆತ್ತು ಚೀಲದೊಳಗೆ ಇರಿಸಿ ಸಾಕಿ ಬೆಳೆಸುತ್ತದೆ. ಕಾಂಗರೂ, ಕೋಆಲಾ, ವಾಲ್ಲಬಿ, ಓಪೋಸ್ಸವ್, ಪೋಸ್ಸವ್, ದೂಂಬಾಟ್ ಮತ್ತು ಟಾಸ್ಮೇನಿಯನ್ ಡೆವಿಲ್ ಈ ಜಾತಿಗೆ ಸೇರಿದ ಪ್ರಾಣಿಗಳು.

ಮಾಕ್ರೋಪಸ್ ಎಂಬ ಗುಂಪಿಗೆ ಸೇರಿದ ಚುರುಕು ವಾಲ್ಲಬಿಗಳು ಕಾಂಗರೂಗಳನ್ನು ಹೋಲುತ್ತದೆ. ವಾಲ್ಲಬಿ ಸಸ್ಯಾಹಾರಿ ಪ್ರಾಣಿ ಹುಲ್ಲು ತರಕಾರಿ, ಎಲೆಗಳು ಇವುಗಳ ಆಹಾರ. ಹೆಚ್ಚಾಗಿ ಕಾಡು, ಬೆಟ್ಟಗುಡ್ಡಗಳಲ್ಲಿ ಇವುಗಳ ವಾಸ. ವಾಲ್ಲಬಿಯ ಮುಂಗಾಲುಗಳು ಚಿಕ್ಕವು. ಹಿಂಗಾಲುಗಳು ಬಲವಾಗಿದ್ದು, ವೇಗವಾಗಿ ಓಡಲು, ಎತ್ತರಕ್ಕೆ ನೆಗೆಯಲು ಸಹಾಯ ಮಾಡುತ್ತದೆ. ಶತ್ರುಗಳಿಗೆ ಒದೆಯಲೂ ಈ ಕಾಲುಗಳು ಸಹಾಯವಾಗುತ್ತದೆ. ವಾಲ್ಲಬಿಯ ಬಾಲ ಬಲಶಾಲಿಯಾಗಿದ್ದು ಓಡುವಾಗ ಸಮತೋಲನ ಕಾಯ್ದುಕೊಳ್ಳಲು ನೆರವಾಗುತ್ತದೆ. ವಾಲ್ಲಬಿಗಳು ಹೆಚ್ಚಾಗಿ ಹಗಲಿಡೀ ಮಲಗಿದ್ದು ಸಂಜೆ ಅಥವಾ ರಾತ್ರಿ ವೇಳೆ ಆಹಾರ ಹುಡುಕಲು ಹೊರಡುತ್ತದೆ.

ತಾಯಿ ವಾಲ್ಲಬಿ ಅರ್ಧ ಬೆಳೆದ ಮರಿಗೆ ಜನ್ಮ ನೀಡುತ್ತದೆ. ಈ ಮರಿ ಒಂದೆರಡು ಇಂಚುಗಳಷ್ಟೇ ಚಿಕ್ಕದಾಗಿರುತ್ತದೆ. ಇದು ಕುರುಡಾಗಿರುತ್ತದೆ. ಇದರ ಮೈಮೇಲೆ ರೋಮಗಳಿರುವುದಿಲ್ಲ. ಇದು ಎಷ್ಟು ಕೋಮಲವಾಗಿರುತ್ತದೆ ಎಂದರೆ ತಾಯಿ ಕೂಡ ಇದನ್ನು ಕೈಯಿಂದ ಮುಟ್ಟುವುದಿಲ್ಲ. ತಾಯಿ ತನ್ನ ಹೊಟ್ಟೆಯ ಭಾಗದ ರೋಮವನ್ನು ನೆಕ್ಕುತ್ತದೆ. ಒದ್ದೆ ರೋಮದ ದಾರಿಯಲ್ಲಿ ತೆವಳಿಕೊಂಡು ಮರಿ ತಾಯಿಯ ಹೊಟ್ಟೆಯ ಮೇಲ್ಭಾಗದ ಚೀಲದೊಳಗೆ ಸೇರಿಕೊಳ್ಳುತ್ತದೆ. ಚೀಲದೊಳಗಿರುವ ಕೆಚ್ಚಲಿನಿಂದ ಹಾಲು ಚೀಪುತ್ತಾ ಮರಿ ಬೆಳೆಯುತ್ತದೆ. ದೊಡ್ಡದಾದ ಬಳಿಕವೇ ಚೀಲ ಬಿಟ್ಟು ಹೊರಗೆ ಬರುತ್ತದೆ.

ENGLISH SECTION

MY VIEWS ON THE INDIAN SYSTEM OF EDUCATION

Gowri Nayak
I B.Com.

Nowadays, education is given a lot of importance by each and every person. All know that it is very important to be educated in this competitive world.

Long ago in India we had the *gurukula* system where students used to live in gurukulas and study *shastras*, archery etc. But now in India we have a formal education system. In the formal system of education, we are asked to learn a prescribed syllabi, notes, and get involved in co-curricular and extra-curricular activities. Students are trained in this type of education system. India, China and some other countries follow the formal education system.

In countries like America and Germany the informal education system is followed. Here the teachers discuss subjects with students and ask for their opinion. There are no notes or class notes. Students are taught to think for themselves about a topic.

As India has comparatively greater human resources, it has to aim at improving the skills of the young generation. It is very important to select the best system that will help improve the skill and knowledge of students.

WHATSAPP AND YOU

Keerthana K P
I B.Sc. (PMCS)

WhatsApp is a cross-platform instant messaging service for smartphones. It was launched in January 2009. It uses the internet to make voice calls and video calls, send text messages, images, videos and documents etc.

Advantages: Some of the great advantages that you get from WhatsApp are – you can easily send messages to any part of the world. All tools provided by WhatsApp are very easy to use. You don't get any advertisement on the display screen. You can share your location, photos and status etc. with your friends. It helps you to be connected with friends every day.

Disadvantages: Some of the disadvantages that you come across in WhatsApp are – you can chat with only those friends who have smartphones supporting this application. You need to have access to internet to send and receive messages. It distracts you from studies. You tend to spend more time on WhatsApp than on any other work.

WhatsApp is killing minds:I want to share a piece of news I heard – A Saudi man divorced his wife because she used to spend all her time on WhatsApp.

